ಮಂಗಳವಾರ, ನವೆಂಬರ್ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 322 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಅವರ ಪರಿಸ್ಥಿತಿ ತಿಳಿಯಲು ಸ್ಕ್ಯಾನ್ ಮಾಡಿ
ಸ್ಟ್ರೋಕ್ ಚಿಕಿತ್ಸೆಗೆ ಮಣಿಪಾಲ್ ಹಾಸ್ಪಿಟಲ್ಸ್ ಸದಾ ಸನ್ನದ್ಧ
MARS 080 2222 1111

ಆಳ-ಅಗಲ ಬಾಹ್ಯಾಕಾಶಕ್ಕೆ ಲಗ್ಗೆ
ಆನೆ ಹಿಡಿಯಲು ಕಾರ್ಯಪಡೆ 7
ಮೋದಿ, ರಾಹುಲ್ ಪ್ರಚಾರ: ರಂಗೇರಿದ ಕಣ 5
ಇಂದು ಕ್ಷೇಮ ಕುಶಲ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,144	18,160	₹54,198 (ಬೆಂಗಳೂರು)	₹62,300 (ಬೆಂಗಳೂರು)	81.79

ಮಂಗಳೂರು ರಿಕ್ಷಾದಲ್ಲಿ ಸ್ಫೋಟ ಪ್ರಕರಣ: ಮೊಹಮ್ಮದ್ ಶಾರಿಕ್ ಆರೋಪಿ

ಕುಕ್ಕರ್ ಬಾಂಬ್‌ಗೆ ಐಎಸ್ ಪ್ರಭಾವ

ಪ್ರಜಾವಾಣಿ ವಾರ್ತೆ

ಮಂಗಳೂರು: ರಿಕ್ಷಾದಲ್ಲಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಮೊಹಮ್ಮದ್ ಶಾರಿಕ್ (24), ನಿಷೇಧಿತ ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರಗಾಮಿ ಸಂಘಟನೆಯಿಂದ ಪ್ರಭಾವಿತನಾಗಿದ್ದ. ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸಲು ಸಿದ್ಧತೆ ನಡೆಸಿದ್ದ ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಇದರ ಜಾಲ ರಾಜ್ಯದ ವಿವಿಧೆಡೆಯೂ ವಿಸ್ತರಿಸಿದ್ದು, ಪೊಲೀಸರು ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ. ಎನ್ಐಎ ತಂಡವೂ ತನಿಖೆ ಚುರುಕುಗೊಳಿಸಿದೆ.

'ಮೈಸೂರು, ತಿ.ನರಸಿಪುರ, ಮಂಗಳೂರು, ಶಿವಮೊಗ್ಗ ಜಿಲ್ಲೆ ಸೇರಿದಂತೆ ಈ ವರೆಗೆ ಏಳು ಕಡೆ ಶೋಧ ನಡೆಸಿದ್ದೇವೆ. ಒಬ್ಬನನ್ನು ಮಂಗಳೂರಿನಲ್ಲಿ, ಇಬ್ಬರನ್ನು ಮೈಸೂರಿನಲ್ಲಿ ವಶಕ್ಕೆ ಪಡೆದಿದ್ದೇವೆ. ಇನ್ನೊಬ್ಬನನ್ನು ಊಟಿಯಲ್ಲಿ ವಶಕ್ಕೆ ಪಡೆದು ಮಂಗಳೂರಿಗೆ ಕರೆತರಲಾಗುತ್ತಿದೆ. ಕೆಲವೊಂದು ಎಲೆಕ್ಟ್ರಾನಿಕ್ ಸಾಧನಗಳನ್ನು ವಶಕ್ಕೆ ಪಡೆದಿದ್ದೇವೆ' ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಕಾನೂನು ಸುವ್ಯವಸ್ಥೆ) ಅಲೋಕ್ ಕುಮಾರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ತಿಳಿಸಿದರು.

'ಪತ್ತೆ ಕಾರ್ಯಾಚರಣೆ ನಡೆಸಲು ಎರಡು ತಂಡ, ಮಾಹಿತಿ ಕಲೆ ಹಾಕಲು, ತನಿಖೆ ನಡೆಸಲು ಹಾಗೂ ಒಂದು ತಂಡ ಕರೆಗಳ ವಿಶ್ಲೇಷಣೆ ನಡೆಸಲು ಮತ್ತು ವಿಧಿ ವಿಜ್ಞಾನಕ್ಕೆ ಸಂಬಂಧಿಸಿದ ಮಾಹಿತಿ ಕ್ರೋಡೀಕರಣಕ್ಕೆ ಡಿಜಿಟಲ್ ತಜ್ಞರ ತಂಡ ಸೇರಿ ಐದು ತಂಡಗಳು ಈ ಪ್ರಕರಣ ಭೇದಿಸಲು ಕೆಲಸ ಮಾಡುತ್ತಿವೆ' ಎಂದರು.

'ಶಾರಿಕ್, ಮಾಝ್ ಮುನೀರ್ ಅಹಮದ್ ಹಾಗೂ ಸೈಯದ್ ಯಾಸೀನ್ ಅವರ ತಂಡ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಕ್ರಿಯವಾಗಿರುವ ಉಗ್ರಗಾಮಿ ಸಂಘಟನೆಯ ಚಟುವಟಿಕೆಗಳಿಂದ ಪ್ರಭಾವಿತರಾಗಿ ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸಿತ್ತು' ಎಂದು ಹೇಳಿದರು.

4ನೇ ಪುಟ ನೋಡಿ

ಮೊಹಮ್ಮದ್ ಶಾರಿಕ್‌ನ ಮೈಸೂರಿನ ಮನೆಯಲ್ಲಿ ಸಿಕ್ಕ ವಸ್ತುಗಳನ್ನು ಎಡಿಜಿಪಿ ಅಲೋಕ್ ಕುಮಾರ್ ಅವರು ಮಂಗಳೂರಿನಲ್ಲಿ ಸೋಮವಾರ ಪರಿಶೀಲನೆ ನಡೆಸಿದರು –ಪ್ರಜಾವಾಣಿ ಚಿತ್ರ

ಯುಎಪಿಎ ಅಡಿ ಬಂಧಿಸಿದ್ದರೂ, ಇಟ್ಟಿಲ್ಲ ನಿಗಾ

ಯುಎಪಿ ಕಾಯ್ದೆಯಡಿ ಬಂಧನಕ್ಕೊಳಗಾಗುವ ಆರೋಪಿಗಳ ಬಗ್ಗೆ ಪೊಲೀಸ್ ಇಲಾಖೆ ಹಾಗೂ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ಹೆಚ್ಚಿನ ನಿಗಾ ಇಡುತ್ತದೆ. ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಶಾರಿಕ್ ನನ್ನು 2020ರಲ್ಲಿ ಯುಎಪಿ ಕಾಯ್ದೆಯಡಿ ಬಂಧಿಸಿದ್ದರೂ ಆತ ಪದೇ ಪದೇ ಭಯೋತ್ಪಾದನಾ ಚಟುವಟಿಕೆಯಲ್ಲಿ ಭಾಗಿಯಾಗಿರುವುದು, ಜಾಮೀನಿನ ಮೇಲೆ ಬಿಡುಗಡೆಗೊಂಡ ಬಳಿಕ ಆತ ನಡೆಸಿದ ಚಟುವಟಿಕೆಗಳ ಬಗ್ಗೆ ಪೊಲೀಸರಿಗೆ ಸುಳಿವು ಸಿಗದಿರುವುದು ಅಚ್ಚರಿಗೆ ಕಾರಣವಾಗಿದೆ.

'ಸಾಮಾನ್ಯವಾಗಿ ಯುಎಪಿ ಕಾಯ್ದೆಯಡಿ ಬಂಧನಕ್ಕೊಳಗಾದವರಿಗೆ ಜಾಮೀನು ನೀಡುವಾಗ ಯಾವ ಷರತ್ತು ವಿಧಿಸಲಾಗುತ್ತದೆ ಎಂಬ ಆಧಾರದಲ್ಲಿ ಅವರ ಚಟುವಟಿಕೆ ಮೇಲೆ ನಿಗಾ ಇಡಲು ಪೊಲೀಸ್ ಇಲಾಖೆ ಅಥವಾ ಎನ್ಐಎ ಕ್ರಮ ಕೈಗೊಳ್ಳುತ್ತದೆ. ಆರೋಪಿಗೆ ಪ್ರತಿ ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಹಾಜರಾಗುವಂತೆ ಸೂಚಿಸಲಾಗಿತ್ತೇ ಎಂದು ಪರಿಶೀಲಿಸಬೇಕು. ಒಂದು ವೇಳೆ ಈ ರೀತಿ ಷರತ್ತು ಹಾಕಿದ್ದರ ಹೊರತಾಗಿಯೂ ಪೊಲೀಸರು ನಿಗಾ ಇಟ್ಟಿಲ್ಲವಾದರೆ ಅದನ್ನು ಲೋಪ ಎಂದೇ ಪರಿಗಣಿಸಬೇಕಾಗುತ್ತದೆ. ಇದಕ್ಕೆ ಕಾರಣವಾದ ಪೊಲಿಸರು ವಿರುದ್ಧವೂ ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ಅಲೋಕ್ ಕುಮಾರ್ ತಿಳಿಸಿದರು.

ಆರೋಪಿ ಶಾರಿಕ್: ದೃಢಪಡಿಸಿದ ಪೊಲೀಸರು

'ನಗರದ ಗರೋಡಿಯಲ್ಲಿ ರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಸಾಗಿಸುತ್ತಿದ್ದಾಗ ನಡೆದ ಸ್ಫೋಟದಲ್ಲಿ ಗಾಯಗೊಂಡು ನಗರದ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವ್ಯಕ್ತಿ ಮೊಹಮ್ಮದ್ ಶಾರಿಕ್ ಎಂಬುದನ್ನು ಆತನ ಕುಟುಂಬದವರು ಖಚಿತಪಡಿಸಿದ್ದಾರೆ' ಎಂದು ಅಲೋಕ್ ಕುಮಾರ್ ತಿಳಿಸಿದರು.

'ಶಾರಿಕ್ ಮಲತಾಯಿ ಶಬಾನಾ, ಸೋದರಿ ಆಹಿಯಾ, ತಾಯಿಯ ತಂಗಿ ಆಸ್ಮಿನ್ ಅವರು ಸೋಮವಾರ ಬೆಳಿಗ್ಗೆ ಆಸ್ಪತ್ರೆಗೆ ಭೇಟಿ ನೀಡಿ ಗುರುತಿಸಿದ್ದಾರೆ. ನಾನೂ ಅವರ ಜೊತೆ ಮಾತನಾಡಿದ್ದೇನೆ' ಎಂದರು.

ಕುಕ್ಕರ್ ಬಾಂಬ್‌ನೊಂದಿಗೆ ಮೊಹಮ್ಮದ್ ಶಾರಿಕ್

ಆರೋಪಿಗಳಿಗೆ ತೀರ್ಥಹಳ್ಳಿಯ ನಂಟು

ಭಯೋತ್ಪಾದನಾ ಕೃತ್ಯದಲ್ಲಿ ನಂಟು ಹೊಂದಿರುವ ಅರಾಫತ್ ಅಲಿ, ಶಾರಿಕ್, ಮಾಜ್ ಮುನೀರ್ ಅಹಮದ್, ಅಬ್ದುಲ್ ಮತೀನ್ ತಾಹ ಎಲ್ಲರೂ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯವರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸೈಯದ್ ಯಾಸಿನ್ ಶಿವಮೊಗ್ಗದ ಸಿದ್ಧೇಶ್ವರ ನಗರದ ನಿವಾಸಿ.

ಶಿವಮೊಗ್ಗ ಗಲಾಟೆ ಬಳಿಕ ತಲೆಮರೆಸಿಕೊಂಡಿದ್ದ

'ಶಾರಿಕ್ 2022ರ ಆ.18ರಂದು ಶಿವಮೊಗ್ಗದಲ್ಲಿ ಗಲಾಟೆ ಆಗಿತ್ತು. ಆ ಪ್ರಕರಣ ಆರೋಪಿ ಜಮೀವುಲ್ಲಾನನ್ನು ಸ್ಥಳೀಯ ಪೊಲೀಸರು ದಸ್ತಗಿರಿ ಮಾಡಿದ್ದರು. ಆಗಲೇ ಎಚ್ಚೆತ್ತುಕೊಂಡಿದ್ದ ಶಾರಿಕ್ ಅಲ್ಲಿಂದ ಕಾಲ್ಕಿತ್ತಿದ್ದ. ತಮಿಳುನಾಡಿನ ಕೊಯಮತ್ತೂರು, ಕೇರಳದ ಹಲವು ಪ್ರದೇಶಗಳಲ್ಲಿ ಸುತ್ತಾಡಿದ್ದ. ಮೈಸೂರಿಗೆ ತೆರಳಿ ಸೆ. 20ರಿಂದ ಅಲ್ಲಿ ವಾಸವಾಗಿದ್ದ. ಪ್ರೇಮರಾಜ್ ಎಂದು ಗುರುತು ಹೇಳಿಕೊಂಡು ಮೈಸೂರಿನ ಲೋಕನಾಯಕ ನಗರದಲ್ಲಿ ಮೋಹನ್ ಕುಮಾರ್ ಅವರ ಮನೆಯಲ್ಲಿ ಬಾಡಿಗೆ ಮನೆ ಪಡೆದಿದ್ದ. ಮೊಬೈಲ್ ದುರಸ್ತಿ ಅಂಗಡಿಯಲ್ಲಿ ಅದೇ ಗುರುತನ್ನು ತೋರಿಸಿ ಕೆಲಸಕ್ಕೆ ಸೇರಿಕೊಂಡಿದ್ದ. ತರಬೇತಿ ಸಂಸ್ಥೆಯಲ್ಲೂ ಕೆಲಸ ಮಾಡುತ್ತಿದ್ದ' ಎಂದು ಅಲೋಕ್ ಕುಮಾರ್ ತಿಳಿಸಿದರು.

ಚಿಲುಮೆಗೆ ಗುರುತಿನ ಚೀಟಿ ಮೂವರು ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಲುಮೆ ಸಂಸ್ಥೆ ಪ್ರತಿನಿಧಿಗಳಿಗೆ ಗುರುತಿನ ಚೀಟಿ ನೀಡಿದ ಇಬ್ಬರು ಕಂದಾಯ ಅಧಿಕಾರಿ ಹಾಗೂ ಒಬ್ಬರು ಉಪ ಕಂದಾಯ ಅಧಿಕಾರಿ ಸೇರಿದಂತೆ ಮೂವರನ್ನು ಬಿಬಿಎಂಪಿ ಮುಖ್ಯ ಆಯುಕ್ತರು ಅಮಾನತು ಮಾಡಿದ್ದಾರೆ.

ಶಿವಾಜಿನಗರದ ಕಂದಾಯ ಅಧಿಕಾರಿ ಸುಹೇಲ್ ಅಹಮದ್, ಮಹದೇವಪುರದ ಕಂದಾಯ ಅಧಿಕಾರಿ ಕೆ. ಚಂದ್ರಶೇಖರ್ ಹಾಗೂ ಚಿಕ್ಕಪೇಟೆಯ ಉಪ ಕಂದಾಯ ಅಧಿಕಾರಿ ವಿ.ಬಿ. ಭೀಮಾಶಂಕರ್ ಅವರು ಮತದಾರರ ನೋಂದಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಅವರನ್ನು ಸೋಮವಾರ (ನ.21) ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ.

ಶಿವಾಜಿನಗರ ಕ್ಷೇತ್ರದಲ್ಲಿ ಚಿಲುಮೆ ಪ್ರತಿನಿಧಿಗಳ ಮನವಿ ಮೇರೆಗೆ ಚಂದ್ರಶೇಖರ್ ಅವರಿಗೆ 14 ಮತಗಟ್ಟೆ ಮಟ್ಟದ ಸಂಯೋಜಕ (ಬಿಎಲ್‌ಸಿ) ಗುರುತಿನ ಚೀಟಿಗಳನ್ನು ಸುಹೇಲ್ ವಿತರಿಸಿದ್ದಾರೆ. ಆದರೆ ಸಂಸ್ಥೆಯವರು ಒಂದು ದಿನವೂ ಕ್ಷೇತ್ರವ್ಯಾಪ್ತಿಯಲ್ಲಿ ಜನಜಾಗೃತಿ ಮೂಡಿಸುವ ಅಥವಾ ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಣೆ ಕಾರ್ಯ, ತಿದ್ದುಪಡಿ, ಸೇರ್ಪಡೆ ಕಾರ್ಯ ಮಾಡಿಲ್ಲ. ಗುರುತಿನ ಚೀಟಿ ಹಿಂದಿರುಗಿಸಿಲ್ಲ. ಚುನಾವಣೆ ಆಯೋಗದ ನಿಯಮ ಉಲ್ಲಂಘಿಸಿ ಖಾಸಗಿ ವ್ಯಕ್ತಿಗಳಿಗೆ ಗುರುತಿನ ಚೀಟಿ ವಿತರಿಸಿರುವುದರಿಂದ ಸುಹೇಲ್ ಅವರನ್ನು ಅಮಾನತುಗೊಳಿಸಲಾಗಿದೆ.

ಮಹದೇವಪುರ ವಿಧಾನಸಭೆ ಕ್ಷೇತ್ರದಲ್ಲಿ ಚಿಲುಮೆ ಸಂಸ್ಥೆಯ ಲೋಕೇಶ್ ಕೆ.ಎಂ. ಅವರಿಗೆ ಮತದಾರರ ನೋಂದಣಾಧಿಕಾರಿ ಮತಗಟ್ಟೆ ಮಟ್ಟದ ಅಧಿಕಾರಿ (ಬಿಎಲ್‌ಒ) ಗುರುತಿನ ಚೀಟಿ ನೀಡಿದ್ದಾರೆ. ಈ ಬಗ್ಗೆ ಜಂಟಿ ಮುಖ್ಯ ಚುನಾವಣಾ ಅಧಿಕಾರಿ ಪತ್ರ ಬರೆದಿದ್ದರು.

5ನೇ ಪುಟ ನೋಡಿ

ತನಿಖೆ ಅಧಿಕಾರ ಸರ್ಕಾರಕ್ಕಿಲ್ಲ: ಆಯೋಗ

ಚುನಾವಣೆಗೆ ಸಂಬಂಧಿಸಿದ ಆರೋಪಗಳು, ಅಕ್ರಮಗಳ ಕುರಿತು ತನಿಖೆಗೆ ಆದೇಶಿಸುವ ಅಧಿಕಾರ ಯಾವುದೇ ಸರ್ಕಾರಕ್ಕೆ ಇರುವುದಿಲ್ಲ ಎಂದು ಕೇಂದ್ರ ಚುನಾವಣಾ ಆಯೋಗ (ಸಿಇಸಿ) ಸ್ಪಷ್ಟಪಡಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಚಿಲುಮೆ ಸಂಸ್ಥೆಯ ಮೂಲಕ ನಡೆದಿರುವ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ 2013ರಿಂದಲೂ ತನಿಖೆ ನಡೆಸುವಂತೆ ಆದೇಶಿಸಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಹೇಳಿಕೆ ನೀಡಿದ್ದರು. ರಾಜ್ಯದಲ್ಲಿ ಸಿಇಸಿ ಪ್ರತಿನಿಧಿಯಾಗಿರುವ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಸೋಮವಾರ ಪತ್ರಿಕಾ ಹೇಳಿಕೆ ಮೂಲಕ ಸ್ಪಷ್ಟನೆ ನೀಡಿದ್ದು, 'ಚುನಾವಣೆಗೆ ಸಂಬಂಧಿಸಿದ ವಿಚಾರಗಳಲ್ಲಿ ತನಿಖೆಗೆ ಆದೇಶಿಸುವ ಅಧಿಕಾರ ಯಾವುದೇ ಸರ್ಕಾರಕ್ಕೂ ಇಲ್ಲ' ಎಂದು ತಿಳಿಸಿದ್ದಾರೆ.

ಖಾಸಗಿ ಸಂಸ್ಥೆಯೊಂದು ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಂಡಿರುವ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾದ ವರದಿ ಆಧರಿಸಿ ತಮ್ಮ ಕಚೇರಿಯು ಗುರುವಾರ (ನವೆಂಬರ್ 17) ತನಿಖೆಗೆ ಆದೇಶಿಸಿತ್ತು. ಅದೇ ದಿನ ಬೆಂಗಳೂರಿನ ಕಾಡುಗೋಡಿ ಮತ್ತು ಹಲಸೂರು ಪೊಲೀಸ್ ಠಾಣೆಗಳಲ್ಲಿ ಎಫ್ಐಆರ್ ದಾಖಲಿಸಲಾಗಿತ್ತು. ತನಿಖೆ ಇನ್ನೂ ನಡೆಯುತ್ತಿದೆ ಎಂದು ಹೇಳಿದ್ದಾರೆ.

5ನೇ ಪುಟ ನೋಡಿ

ಚಿಲುಮೆ ಸಂಸ್ಥಾಪಕ 12 ದಿನ ಪೊಲೀಸ್ ವಶಕ್ಕೆ

ರವಿಕುಮಾರ್

ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಆರೋಪದಡಿ ಬಂಧಿಸಲಾಗಿರುವ 'ಚಿಲುಮೆ' ಸಂಸ್ಥೆಯ ಸಂಸ್ಥಾಪಕ ರವಿಕುಮಾರ್ ಅವರನ್ನು ಹೆಚ್ಚಿನ ವಿಚಾರಣೆಗಾಗಿ 12 ದಿನ ಪೊಲೀಸ್ ವಶಕ್ಕೆ ಒಪ್ಪಿಸಲಾಗಿದೆ.

ಹಲಸೂರು ಗೇಟ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆ ಕೈಗೊಂಡಿರುವ ಪೊಲೀಸರು, ಲಾಲ್‌ಬಾಗ್ ಉದ್ಯಾನ ಬಳಿ ರವಿಕುಮಾರ್ ಅವರನ್ನು ಭಾನುವಾರ ರಾತ್ರಿ ಬಂಧಿಸಿದ್ದರು. ಸೋಮವಾರ ಬೆಳಿಗ್ಗೆ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಪೊಲೀಸರ ಮನವಿ ಮೇರೆಗೆ ಆರೋಪಿಯನ್ನು ಕಸ್ಟಡಿಗೆ ನೀಡಿತು.

5ನೇ ಪುಟ ನೋಡಿ

ಇ-ವಾಣಿಜ್ಯ ವೇದಿಕೆ: ರಿವ್ಯೂಗೆ ನಿಯಮ

ನವದೆಹಲಿ (ಪಿಟಿಐ): ಅಮೆಜಾನ್, ಫ್ಲಿಪ್‌ಕಾರ್ಟ್‌ನಂತಹ ಇ-ವಾಣಿಜ್ಯ ವೇದಿಕೆಗಳು ತಮ್ಮ ಮೂಲಕ ಮಾರಾಟವಾಗುವ ಉತ್ಪನ್ನಗಳಿಗೆ ಹಣ ಕೊಟ್ಟು ಬರೆಸಿರುವ ವಿಮರ್ಶೆಗಳನ್ನು (ರೀವ್ಯೂ) ಗ್ರಾಹಕರಿಗೆ ಸ್ಪಷ್ಟವಾಗಿ, ಸ್ವಯಂಪ್ರೇರಿತವಾಗಿ ತಿಳಿಸಬೇಕಿದೆ. 10

ಇಂಡೋನೇಷ್ಯಾ: ಭೂಕಂಪಕ್ಕೆ 162 ಸಾವು

ಜಕಾರ್ತ(ಎಪಿ): ಇಂಡೋನೇಷ್ಯಾದ ಜಾವಾ ದ್ವೀಪದಲ್ಲಿ ಸೋಮವಾರ ಸಂಭವಿಸಿದ ಪ್ರಬಲ ಭೂಕಂಪದಲ್ಲಿ ಕನಿಷ್ಠ 162 ಮಂದಿ ಮೃತಪಟ್ಟಿದ್ದು, 700ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಭೂಕಂಪದ ತೀವ್ರತೆ ರಿಕ್ಟರ್ ಮಾಪಕದಲ್ಲಿ 5.6ರಷ್ಟು ದಾಖಲಾಗಿದೆ. 11

'ಮುಸ್ಲಿಂ ವಿವಾಹವನ್ನು ಪೋಕ್ಸೊದಿಂದ ಹೊರಗಿಟ್ಟಿಲ್ಲ'

ಕೊಚ್ಚಿ (ಪಿಟಿಐ): 'ವೈಯಕ್ತಿಕ ಕಾನೂನಿನಡಿಯಲ್ಲಿ ನಡೆಯುವ ಮುಸ್ಲಿಂ ವಿವಾಹಗಳನ್ನು ಪೋಕ್ಸೊ ಕಾಯ್ದೆಯಿಂದ ಹೊರಗಿಡಲಾಗದು ಹಾಗೂ ಮದುವೆಯ ಹೆಸರಿನಲ್ಲಿ ಬಾಲಕಿಯೊಂದಿಗೆ ನಡೆಸುವ ಲೈಂಗಿಕ ಕ್ರಿಯೆಯು ಅಪರಾಧವಾಗುತ್ತದೆ' ಎಂದು ಕೇರಳ ಹೈಕೋರ್ಟ್ ಹೇಳಿದೆ.

15 ವರ್ಷದ ಬಾಲಕಿಯನ್ನು ಮದುವೆಯಾಗಿ, ಬಂಧಿತನಾಗಿರುವ 31 ವರ್ಷದ ವ್ಯಕ್ತಿಗೆ ಜಾಮೀನು ನಿರಾಕರಿಸಿರುವ ನ್ಯಾಯಮೂರ್ತಿ ಬೆಚು ಕುರಿಯನ್ ಥಾಮಸ್ ಅವರು, 'ಬಾಲ್ಯವಿವಾಹ ಸಮಾಜಕ್ಕೆ ಅಂಟಿದ ಶಾಪವಾಗಿದೆ. ಮದುವೆಯ ಹೆಸರಿನಲ್ಲಿ ಮಗುವಿನೊಂದಿಗೆ ನಡೆಸುವ ದೈಹಿಕ ಸಂಪರ್ಕವು ಪೋಕ್ಸೊ ಕಾಯ್ದೆಯಡಿ ನಿಷೇಧಿತವಾಗಿದೆ' ಎಂದು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

2023ರಲ್ಲಿ 19 ದಿನ ಸಾರ್ವತ್ರಿಕ ರಜೆ

ಬೆಂಗಳೂರು: 2023ರಲ್ಲಿ ರಾಷ್ಟ್ರೀಯ ಹಬ್ಬಗಳು, ಹಬ್ಬಗಳು, ನೇತಾರರ ಜನ್ಮದಿನಾಚರಣೆ ಸೇರಿದಂತೆ 19 ದಿನ ಸಾರ್ವತ್ರಿಕ ರಜೆ ಘೋಷಿಸಲಾಗಿದೆ. 10

ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆ

ಶಿಕ್ಷಕಿಯಾಗುವ ಕನಸು ಕಿತ್ತುಕೊಂಡ ಮದುವೆ!

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕ ವೃಂದದ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಿದ್ದ ಎರಡು ಸಾವಿರಕ್ಕೂ ಹೆಚ್ಚು ವಿವಾಹಿತ ಮಹಿಳೆಯರ ಉದ್ಯೋಗದ ಕನಸನ್ನು ಶಿಕ್ಷಣ ಇಲಾಖೆ ಕಿತ್ತುಕೊಂಡಿದೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ (6ರಿಂದ 8ನೇ ತರಗತಿ) ಖಾಲಿ ಇರುವ 15 ಸಾವಿರ ಶಿಕ್ಷಕರ ಹುದ್ದೆಗೆ ಇದೇ ವರ್ಷದ ಮಾರ್ಚ್‌ನಲ್ಲಿ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ತಂದೆಯ ಆದಾಯ ಪ್ರಮಾಣ ಪತ್ರ ನೀಡಿದ್ದಾರೆ ಎಂಬ ಕಾರಣಕ್ಕಾಗಿ ಅವರನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಕೈಬಿಡಲಾಗಿದೆ.

'ಜಾತಿ ಮೀಸಲಾತಿ ಅನ್ವಯ ಹುದ್ದೆಗಳಿಗೆ ಆಯ್ಕೆ ಬಯಸುವವರು ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಬೇಕು. ಅವಿವಾಹಿತೆಯರು ತಂದೆಯ ಆದಾಯ, ವಿವಾಹಿತೆಯರು ಗಂಡನ ಆದಾಯ ವಿವರ ಸಲ್ಲಿಸಬೇಕು. ಹಲವು ವಿವಾಹಿತ ಮಹಿಳೆಯರು ತಮ್ಮ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಇದರಿಂದ ಅವರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ' ಎನ್ನುವುದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ ಆರ್.ವಿಶಾಲ್ ಅವರ ವಿವರಣೆ.

ಸ್ಪಷ್ಟ ಮಾಹಿತಿ ಇರಲಿಲ್ಲ: ರಾಜ್ಯ ಸರ್ಕಾರ ಇದೇ ವರ್ಷದ ಮಾರ್ಚ್ 21ರಂದು ಹೊರಡಿಸಿದ್ದ ಅಧಿಸೂಚನೆಯಲ್ಲಿ ಮದುವೆಯಾದ ಮಹಿಳೆಯರು ಗಂಡನ ಆದಾಯ ಪ್ರಮಾಣ ಪತ್ರವನ್ನೇ ಸಲ್ಲಿಸಬೇಕು ಎನ್ನುವ ಕುರಿತು ಯಾವುದೇ ಸ್ಪಷ್ಟ ನಿರ್ದೇಶನ ಇರಲಿಲ್ಲ.

3A ಪುಟ ನೋಡಿ

ಅಂಕಿ-ಅಂಶಗಳು

15,000 ಖಾಲಿ ಹುದ್ದೆಗಳು	1.16 ಲಕ್ಷ ಸಲ್ಲಿಕೆಯಾಗಿದ್ದ ಅರ್ಜಿಗಳು	68,849 ಸಿಇಟಿ ಬರೆದಿದ್ದ ಅಭ್ಯರ್ಥಿಗಳು
22,432 ದಾಖಲೆಗಳ ಪರಿಶೀಲನಾ ಪಟ್ಟಿಯಲ್ಲಿದ್ದವರು	13,363 ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಪಡೆದವರು	2,000 ಅವಕಾಶ ಸಿಗದ ಮಹಿಳೆಯರು

ಕುಗ್ಗಿದ ಅಭ್ಯರ್ಥಿಗಳ ಕೊರತೆ ಅಂತರ

ಸರ್ಕಾರ 15 ಸಾವಿರ ಶಿಕ್ಷಕರ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿತ್ತು. ಸಿಇಟಿ ನಂತರ ಗಣಿತ ವಿಜ್ಞಾನ ಸೇರಿದಂತೆ ಹಲವು ವಿಷಯಗಳಲ್ಲಿ ಇದ್ದ ಖಾಲಿ ಹುದ್ದೆಗಳಿಗಿಂತ ಕಡಿಮೆ ಅಭ್ಯರ್ಥಿಗಳು ಉತ್ತೀರ್ಣರಾಗಿದ್ದರು. 3 ಸಾವಿರಕ್ಕೂ ಹೆಚ್ಚು ಶಿಕ್ಷಕರ ಕೊರತೆ ಬೀಳಬಹುದು ಎಂದು ಶಿಕ್ಷಣ ಸಚಿವರೇ ಹೇಳಿದ್ದರು. ಈಗ ತಾತ್ಕಾಲಿಕ ಪಟ್ಟಿಯಲ್ಲಿ 13,363 ಅಭ್ಯರ್ಥಿಗಳ ಹೆಸರಿದೆ. 1,637 ಹುದ್ದೆಗಳಷ್ಟೇ ಖಾಲಿ ಉಳಿದಿವೆ. 'ಶಿಕ್ಷಕರ ನೇಮಕಾತಿ ಜಿಲ್ಲಾವಾರು ನಡೆದಿದೆ. ಕೆಲವು ಜಿಲ್ಲೆಗಳಲ್ಲಿ ಪ್ರವರ್ಗಗಳಿಗೆ ಮೀಸಲಾದ ಸ್ಥಾನಕ್ಕಿಂತ ಅದೇ ಸಮುದಾಯದ ಹೆಚ್ಚಿನ ಅಭ್ಯರ್ಥಿಗಳು ಆಯ್ಕೆ ಪಟ್ಟಿಯಲ್ಲಿ ಇದ್ದಾರೆ. ಇದು ಸಹ ಅನುಮಾನ ಮೂಡಿಸುತ್ತಿದೆ' ಎನ್ನುವುದು ದಕ್ಷಿಣ ಕನ್ನಡದ ಅಭ್ಯರ್ಥಿಯೊಬ್ಬರ ಆರೋಪ.

ವಿದ್ಯಾರ್ಥಿನಿಯರ 1,200 ಅರೆನಗ್ನ ವಿಡಿಯೊ ಚಿತ್ರೀಕರಿಸಿದ್ದವ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜು ಶೌಚಾಲಯಗಳಲ್ಲಿ ರಹಸ್ಯ ಕ್ಯಾಮೆರಾ ಅಳವಡಿಸಿ ವಿದ್ಯಾರ್ಥಿನಿಯರ ಅರೆನಗ್ನ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸುತ್ತಿದ್ದ ಆರೋಪದಡಿ ಶುಭಂ ಎಂ. ಆಜಾದ್ (21) ಎಂಬುವರ ವಿರುದ್ಧ ಗಿರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಹೊಸಕೆರೆಹಳ್ಳಿ ದ್ವಾರಕನಗರದಲ್ಲಿರುವ ಪಿಇಎಸ್ ಕಾಲೇಜಿನಲ್ಲಿ ಬಿಬಿಎ ಎಲ್‌ಎಲ್‌ಬಿ ಐದನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ಆರೋಪಿ ಶುಭಂ, ಮೂರು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಕಾಲೇಜಿನ ವಿಭಾಗವೊಂದರ ಡೀನ್ ನೀಡಿರುವ ದೂರಿನಡಿ ಶುಭಂ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿದ್ಯಾರ್ಥಿನಿಯರ ಶೌಚಾಲಯಕ್ಕೆ ಹೋಗುತ್ತಿದ್ದ ಆರೋಪಿ, ಯಾರಿಗೂ ಕಾಣದಂತೆ ರಹಸ್ಯ ಕ್ಯಾಮೆರಾ ಅಳವಡಿಸುತ್ತಿದ್ದ. ಶೌಚಾಲಯ ಬಳಸುತ್ತಿದ್ದ ವಿದ್ಯಾರ್ಥಿನಿಯರ ಅರೆನಗ್ನ ಫೋಟೊ ಹಾಗೂವಿಡಿಯೊ ಕ್ಯಾಮೆರಾದಲ್ಲಿ ಸೆರೆಯಾಗುತ್ತಿತ್ತು. ಕೆಲ ದಿನ ಬಿಟ್ಟು ಶೌಚಾಲಯಕ್ಕೆ ಹೋಗುತ್ತಿದ್ದ ಆರೋಪಿ, ಕ್ಯಾಮೆರಾ ತೆಗೆದುಕೊಂಡು ಬರುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

'ಕ್ಯಾಮೆರಾ ಅಳವಡಿಸಲೆಂದು ಆರೋಪಿ ಇತ್ತೀಚೆಗೆ ಶೌಚಾಲಯಕ್ಕೆ ಹೋಗಿದ್ದ. ಇದೇ ವೇಳೆಯಲ್ಲಿ ವಿದ್ಯಾರ್ಥಿನಿಯರು ಆರೋಪಿಯನ್ನು ಕಂಡು ಚೀರಾಡಿದ್ದರು. ಕಾಲೇಜು ಸಿಬ್ಬಂದಿ ಹಿಡಿಯುವಷ್ಟರಲ್ಲೇ ಆರೋಪಿ ಪರಾರಿಯಾಗಿದ್ದ'ಎಂದಿವೆ.

3A ಪುಟ ನೋಡಿ

ಒಳ ಪುಟ
ಭಾರತಕ್ಕೆ ರಸಗೊಬ್ಬರ: ಮುಂಚೂಣಿಗೆ ರಷ್ಯಾ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

E-book today at www.marutisuzuki.com or visit your nearest Maruti Suzuki dealership. | For bulk orders, please contact: shubham.mittal@maruti.co.in

MARUTI SUZUKI AUTHORISED DEALERS: BENGALURU: RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELE, SRINIVASAPURA, HAROHALLI PH: 8884442299 VARUN MOTORS: MALLESHWARAM, HEBBAL, INFANTRY ROAD, RAJANAKUNTE PH: 78991 00200. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI: 95909 90011. KATARIA: KANAKAPURA ROAD, PH: 78990 40000. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and institutional offer (wherever applicable) on selected models/ variants. Above mentioned savings amount is the value of maximum savings on selected models. Terms and conditions apply. Finance scheme details mentioned in the advertisement are at the sole discretion of the financier. Credit at the sole discretion of the Bank. 100% on-road funding is provided by select financiers only. Terms and conditions are subject to change without any prior notice. Offers valid till 30th November, 2022.

ಚನ್ನಪಟ್ಟಣದಿಂದಲೇ ಸ್ಪರ್ಧೆ: ಯೋಗೇಶ್ವರ್

ಚನ್ನಪಟ್ಟಣ: 'ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರದಲ್ಲಿ ಬಿಜೆಪಿಯಿಂದಲೇ ಸ್ಪರ್ಧಿಸುತ್ತೇನೆ. ಇದರಲ್ಲಿ ಯಾವುದೇ ಅನುಮಾನ ಇಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಅವರು ತಾಲ್ಲೂಕಿನ ಹಾರೋಕೊಪ್ಪದಲ್ಲಿ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ನಮಗೆ ದಿನನಿತ್ಯ ಸಿಗುವ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಶಾಸಕರ ಅವಶ್ಯ ಇದೆ ಎಂದು ತಾಲ್ಲೂಕಿನ ಜನರೇ ನೇರವಾಗಿ ಹೇಳುತ್ತಿದ್ದಾರೆ' ಎಂದು ಅವರು ಹೇಳಿದರು.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 34 ಯುಬಿಎಲ್ 2022–23
ದಿನಾಂಕ : 14–11–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಉಗಾರ್ ಖುರ್ದ್, ಚಿಕ್ಕೋಡಿ ರಸ್ತೆ ಮತ್ತು ರಾಯಬಾಗ್‌ನಲ್ಲಿ ಎರಡು ಕೊಠಡಿಗಳನ್ನು ಮತ್ತು ಗೋಕಾಕ ರಸ್ತೆಯಲ್ಲಿ ಒಂದು ಕೊಠಡಿಯನ್ನು ನಿರ್ಮಿಸುವುದರಿಂದ ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯಗಳೊಂದಿಗೆ ಗೂಡ್ಸ್ ಶೆಡ್ ಸೌಕರ್ಯಗಳಿಗೆ ಸುಧಾರಣೆಗಳು.	ರೂ. 78,25,912/–
2	ಹುಬ್ಬಳ್ಳಿ ವಿಭಾಗ : ವಿವಿಧ ನಿಲ್ದಾಣಗಳಲ್ಲಿನ ನಿಲ್ದಾಣ ಕಟ್ಟಡಗಳಲ್ಲಿ ಹಾಲಿ ಇರುವ ಛಾವಣಿಗಳು ಮತ್ತು ಪ್ಲಾಟ್‌ಫಾರಂ ಮೇಲಿನ ಕವರ್‌ಗೆ ಸುಧಾರಣೆಗಳು (ಲೋಂಡಾ, ಘಟಪ್ರಭ, ಕುಡಚಿ, ಡಾಬೊಲಿಮ್, ಕನ್ಸೋಲಿಮ್, ಕಾಲೆಮ್ ಮತ್ತು ಕುಲೆಮ್).	ರೂ. 1,47,03,266/–
3	ಹುಬ್ಬಳ್ಳಿ ವಿಭಾಗ : ಧಾರವಾಡ – ಅಳ್ನಾವರ ಸೆಕ್ಷನ್ : ಹುಬ್ಬಳ್ಳಿ ಯಾರ್ಡ್ – ಶಾರ್ಪ್ ಕರ್ವ್‌ಗಳಲ್ಲಿ ಟ್ರ್ಯಾಕ್ ಆಧಾರಿತ ರೈಲ್ ಲುಬ್ರಿಕೇಟರ್‌ಗಳ ಸ್ಥಾಪನೆ (15 ಸಂಖ್ಯೆಗಳು).	ರೂ. 1,21,19,220/–
4	ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ – ಹುಬ್ಬಳ್ಳಿಯ ಕೇಶ್ವಾಪುರ, ಹಳೇ ಆಸ್ಪತ್ರೆ ಕಾಂಪೌಂಡ್ ಗೋಡೆ ಕಾಲೋನಿ ಮತ್ತು ವೈಬ್ರೆಂಟ್ ಕಾಲೋನಿಯಲ್ಲಿ ಭೂಗತ ಕೊಳಚೆ ನೀರು ಮತ್ತು ಚರಂಡಿ ಮಾರ್ಗಗಳಿಗೆ ಸುಧಾರಣೆಗಳು.	ರೂ. 94,17,945/–
5	ಹುಬ್ಬಳ್ಳಿ ವಿಭಾಗ : ಹಿರಿಯ ವಿಭಾಗೀಯ ಇಂಜಿನಿಯರ್ / ಪೂರ್ವ ವ್ಯಾಪ್ತಿಯಲ್ಲಿ ಬಳ್ಳಾರಿ – ರಾಯದುರ್ಗ ಸೆಕ್ಷನ್‌ನಲ್ಲಿ ಕಿ.ಮೀ. 0/600 ನಿಂದ 53/600 ವರೆಗೆ ಮತ್ತು ಹೊಸಪೇಟೆ – ವ್ಯಾಸ ಕಾಲೋನಿ ಸೆಕ್ಷನ್‌ನ 9.4 ಕಿ.ಮೀ., ಒಟ್ಟು 62.40 ಕಿ.ಮೀ.ಗಳಿಗೆ ಟಿಎಫ್‌ಆರ್ (ಇಆರ್‌ಸಿ ಇಲ್ಲದೆ).	ರೂ. 1,80,44,196/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 13–12–2022 ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಹುಬ್ಬಳ್ಳಿ

ಪಿಯುಬಿ/497/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

ಸರ್ಜಾಪುರ – ಹೆಬ್ಬಾಳ ಮೆಟ್ರೊ ರೈಲು ಮಾರ್ಗ • ಯೋಜನಾ ವೆಚ್ಚ ₹15 ಸಾವಿರ ಕೋಟಿ

'ಎಂಟು ತಿಂಗಳಲ್ಲಿ ಸರ್ವೆ ಪೂರ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಮಾರ್ಗದ ಮೂರನೇ ಹಂತದ ಯೋಜನೆಗೆ ರಾಜ್ಯ ಸರ್ಕಾರದಿಂದ ತಾತ್ವಿಕ ಒಪ್ಪಿಗೆ ದೊರೆತಿದ್ದು, ಸರ್ಜಾಪುರ-ಹೆಬ್ಬಾಳ (3ಎ) ನಡುವಿನ 37 ಕಿ.ಮೀ. ಉದ್ದದ ಮಾರ್ಗಕ್ಕೆ ಇನ್ನೂ ಸರ್ವೆ ಕಾರ್ಯ ಪ್ರಗತಿಯಲ್ಲಿದೆ.

ಅಂದಾಜು ₹15 ಸಾವಿರ ಕೋಟಿ ವೆಚ್ಚದ ಈ ಯೋಜನೆಯನ್ನು 2022–23ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದ್ದರು. ಸರ್ಜಾಪುರ- ಹೆಬ್ಬಾಳ ಮೆಟ್ರೊ ಮಾರ್ಗವು ಅಗರ, ಕೋರಮಂಗಲ, ಡೇರಿ ವೃತ್ತದ ಮೂಲಕ ಹಾದುಹೋಗಲಿದೆ.

ಮೆಟ್ರೊ ಜಾಲಕ್ಕೆ ಮಾಸ್ಟರ್‌ಪ್ಲಾನ್ ರೂಪಿಸುವಾಗಲೇ ಈ ಮಾರ್ಗದ ಪ್ರಸ್ತಾವ ಇತ್ತು. ಕಾರಣಾಂತರಗಳಿಂದ ಅದರ ಅನುಷ್ಠಾನ ಸಾಧ್ಯವಾಗಿರಲಿಲ್ಲ. ನಗರದ ಕೇಂದ್ರ ವಾಣಿಜ್ಯ ಪ್ರದೇಶಗಳಲ್ಲಿನ ಮೆಟ್ರೊ ಜಾಲವನ್ನು ಈ ಮಾರ್ಗ ಮತ್ತಷ್ಟು ಬಲಪಡಿಸಲಿದೆ ಎಂಬುದು ಬಿಎಂಆರ್‌ಸಿಎಲ್ ಅಧಿಕಾರಿಗಳ ನಿರೀಕ್ಷೆ.

ಮೆಟ್ರೊ ರೈಲು

ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವ ಕೆಲಸವನ್ನು ಮುಂಬೈ ಮೂಲದ ಕಂಪನಿಗೆ ವಹಿಸಲಾಗಿದ್ದು, ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಸರ್ವೆ ಪೂರ್ಣಗೊಂಡು ಡಿಪಿಆರ್ ಸಿದ್ಧವಾಗಲು ಇನ್ನೂ ಎಂಟು ತಿಂಗಳು ಬೇಕಾಗಲಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರು ತಿಳಿಸಿದರು.

ಹೆಬ್ಬಾಳದಿಂದ ಕೋರಮಂಗಲ ತನಕ ಸುರಂಗ ಮಾರ್ಗ ಹಾಗೂ ಅಲ್ಲಿಂದ ಸರ್ಜಾಪುರದವರೆಗೆ ಎತ್ತರಿಸಿದ ಮಾರ್ಗ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಐ.ಟಿ ಕಾರಿಡಾರ್‌ನ ಸಂಚಾರ ದಟ್ಟಣೆಯನ್ನು ಈ ಮಾರ್ಗ ಸೀಳಲಿದೆ ಎಂಬ ನಿರೀಕ್ಷೆ ಇದೆ. ಸರ್ವೆ ಕಾರ್ಯ ಮುಗಿದ ಬಳಿಕ ಡಿಪಿಆರ್ ಸಿದ್ಧವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಸಲ್ಲಿಕೆಯಾಗಬೇಕಿದೆ. ಇವೆಲ್ಲವೂ ಪೂರ್ಣಗೊಳ್ಳಲು ಕನಿಷ್ಠ ಇನ್ನೂ ಒಂದು ವರ್ಷ ಕಾಲಾವಕಾಶ ಬೇಕಾಗಲಿದೆ. ಎರಡೂ ಸರ್ಕಾರಗಳಿಂದ ಒಪ್ಪಿಗೆ ದೊರೆತ ಬಳಿಕವೇ ಕಾಮಗಾರಿ ಆರಂಭವಾಗಬೇಕಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಅಪಾರ್ಟ್‌ಮೆಂಟ್ ಬಾಗಿಲಿಗೆ ಬಿಎಂಟಿಸಿ ಬಸ್

ಮೆಟ್ರೊ ರೈಲು ವಿಸ್ತರಿತ ಮಾರ್ಗಗಳ ಕಾಮಗಾರಿ ಚುರುಕಿನಿಂದ ನಡೆಯುತ್ತಿರುವುದು ಒಂದೆಡೆಯಾದರೆ, ಸದ್ಯ ಇರುವ ಮಾರ್ಗಗಳಿಗೆ ಫೀಡರ್ ಬಸ್ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲೂ ಬಿಎಂಆರ್‌ಸಿಎಲ್ ಹಲವು ಕ್ರಮಗಳನ್ನು ಕೈಗೊಂಡಿದೆ. ಮೆಟ್ರೊ ನಿಲ್ದಾಣಗಳಿಂದ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಬಾಗಿಲಿಗೆ ಮಿನಿ ಬಸ್ ಸಂಚಾರ ಆರಂಭಿಸಲು ಸಿದ್ಧತೆ ನಡೆಸಿದೆ.

ಈ ಸಂಬಂಧ ಬಿಎಂಟಿಸಿ ಜತೆ ಪ್ರಾಥಮಿಕ ಹಂತದ ಮಾತುಕತೆ ನಡೆಸಿದೆ. ಮೆಟ್ರೊ ಫೀಡರ್ ಸೇವೆಗಾಗಿಯೇ 90 ಮಿನಿ ಎಲೆಕ್ಟ್ರಿಕ್ ಬಸ್‌ಗಳನ್ನು ಬಿಎಂಟಿಸಿ ಖರೀದಿಸಿದೆ. ಅವುಗಳನ್ನು ಬಳಸಿಕೊಂಡು ಅಪಾರ್ಟ್‌ಮೆಂಟ್‌ಗಳ ಮನೆ ಬಾಗಿಲಿಗೆ ಸೇವೆ ಒದಗಿಸಲು ಎರಡೂ ನಿಗಮಗಳ ಅಧಿಕಾರಿಗಳು ಚಿಂತನೆ ನಡೆಸಿದ್ದಾರೆ.

ವಸಂತನಗರಕ್ಕೆ ಫೀಡರ್ ಬಸ್

ಮೆಟ್ರೊ ರೈಲು ಪ್ರಯಾಣಿಕರ ಅನುಕೂಲಕ್ಕಾಗಿ ಕಬ್ಬನ್ ಉದ್ಯಾನ ಮೆಟ್ರೊ ರೈಲು ನಿಲ್ದಾಣದ ಬಳಿಯಿಂದ ವಸಂತನಗರಕ್ಕೆ ಫೀಡರ್ ಸೇವೆಯನ್ನು ಬಿಎಂಟಿಸಿ ಸೋಮವಾರ ಆರಂಭಿಸಿದೆ.

ಎರಡು ಬಸ್‌ಗಳ ಸೇವೆಯನ್ನು ಆರಂಭಿಸಲಾಗಿದ್ದು, ಕಬ್ಬನ್ ಪಾರ್ಕ್ ಮೆಟ್ರೊ ರೈಲು ನಿಲ್ದಾಣದ ಬಳಿಯಿಂದ ಹೊರಡುವ ಬಸ್‌ಗಳು ಕನ್ನಿಂಗ್‌ಹ್ಯಾಂ ರಸ್ತೆ, ಜೈನ್ ಆಸ್ಪತ್ರೆ, ಸರ್ದಾರ್ ಪಟೇಲ್ ಭವನ, ಗಣೇಶ ದೇವಸ್ಥಾನ, ಮೌಂಟ್ ಕಾರ್ಮೆಲ್ ಕಾಲೇಜು, ಕಲ್ಪನಾ ಸರ್ಕಲ್, ಸೇಂಟ್ ಆ್ಯನ್ಸ್, ಅಲಿ ಅಸ್ಕರ್ ರಸ್ತೆ ಮಾರ್ಗವಾಗಿ ಮತ್ತು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಬಳಿಗೆ ಬರಲಿವೆ ಎಂದು ಬಿಎಂಟಿಸಿ ತಿಳಿಸಿದೆ.

ವಿ.ಎಸ್. ಕೃಷ್ಣಯ್ಯರ್ ಜನ್ಮ ಶತಮಾನೋತ್ಸವ

ಬೆಂಗಳೂರು: ವಿ.ಎಸ್. ಕೃಷ್ಣಯ್ಯರ್ ಜನ್ಮಶತಮಾನೋತ್ಸವ ಆಚರಣಾ ಸಮಿತಿಯಿಂದ ವಿ.ಎಸ್. ಕೃಷ್ಣಯ್ಯರ್ ಅವರ ಜನ್ಮಶತಮಾನೋತ್ಸವವನ್ನು ನ. 24ರಂದು ಗಾಯನ ಸಮಾಜದಲ್ಲಿ ಹಮ್ಮಿಕೊಳ್ಳಲಾಗಿದೆ.

'ಬೆಂಗಳೂರು ನಗರಕ್ಕೆ ಕಾವೇರಿ ನೀರು ಹರಿಸುವ ಪ್ರಥಮ ಹಂತದ ಯೋಜನೆಯ ಅನುಷ್ಠಾನ, ಸರ್ಕಾರಿ ಶಾಲೆ ಮತ್ತು ಆಸ್ಪತ್ರೆಗಳನ್ನು ಉನ್ನತೀಕರಿಸಲು ವಿ.ಎಸ್. ಕೃಷ್ಣಯ್ಯರ್ ಅವರು ಶ್ರಮಿಸಿದ್ದಾರೆ. ಇಂದಿನ ಯುವಕರಿಗೆ ಅವರನ್ನು ಪರಿಚಯಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ' ಎಂದು ಸಮಿತಿಯ ಸಂಚಾಲಕ ಎಚ್. ಸಿ. ಕೃಷ್ಣ ಸೋಮವಾರ ತಿಳಿಸಿದರು

ಕಾರ್ಯಕ್ರಮದಲ್ಲಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸಚಿವ ವಿ. ಸೋಮಣ್ಣ, ಪಿ.ಜಿ.ಆರ್. ಸಿಂಧ್ಯಾ ಭಾಗವಹಿಸಲಿದ್ದಾರೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಪ್ರಶಸ್ತಿಗೆ ಆಹ್ವಾನ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ತನ್ನ 2020ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳಿಗೆ ರಾಜ್ಯದ ಪತ್ರಕರ್ತರಿಂದ ವರದಿ, ಲೇಖನ, ಸುದ್ದಿ, ಛಾಯಾಚಿತ್ರಗಳನ್ನು ಆಹ್ವಾನಿಸಿದೆ.

ಅತ್ಯುತ್ತಮ ಕ್ರೀಡಾ ವರದಿಗೆ ನೀಡುವ ಕೆ.ಎ. ನೆಟ್ಟಕಲ್ಲಪ್ಪ ಪ್ರಶಸ್ತಿ, ವಿಮರ್ಶಾತ್ಮಕ ಲೇಖನಕ್ಕೆ ನೀಡುವ ಖಾದ್ರಿ ಶಾಮಣ್ಣ ಪ್ರಶಸ್ತಿ ಸೇರಿ 21 ವಿವಿಧ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

2020ರ ಜನವರಿಯಿಂದ ಡಿಸೆಂಬರ್ ಒಳಗೆ ಪ್ರಕಟವಾದ ಲೇಖನಗಳನ್ನು ಕಳುಹಿಸಬಹುದು. ಅನುವಾದಿತ ಲೇಖನಗಳಿಗೆ ಅವಕಾಶ ಇಲ್ಲ. ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಸಂಘದ ಪದಾಧಿಕಾರಿಗಳು ಅರ್ಜಿ ಸಲ್ಲಿಸುವಂತಿಲ್ಲ. ವಿದ್ಯುನ್ಮಾನ ಮಾಧ್ಯಮದ ಪ್ರಶಸ್ತಿಗಳಿಗೆ ಕ್ಲಿಪಿಂಗ್, ಸಿ.ಡಿ ಅಥವಾ ಪೆನ್‌ಡ್ರೈವ್, ಸ್ಕ್ರಿಪ್ಟ್ ಕಳುಹಿಸಬೇಕು. ಅರ್ಜಿಗಳನ್ನು ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಕಂದಾಯ ಭವನ, 3ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು-90 ಈ ವಿಳಾಸಕ್ಕೆ ನ.28ರ ಒಳಗೆ ಕಳುಹಿಸಬಹುದು ಎಂದು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಕೋರಿದ್ದಾರೆ.

ಸುದ್ದಿ 2 ನಿಮಿಷ

'ಶಿಕ್ಷಕರಿಗೆ ಕಲಿಕೆಯ ತುಡಿತ ಹೆಚ್ಚಲಿ'

ಬೆಂಗಳೂರು: ಸಿಂಧಿ ಕಾಲೇಜಿನಲ್ಲಿ 'ಎನ್‌ಇಪಿ-2022 ಮತ್ತು ಉನ್ನತ ಶಿಕ್ಷಣದ ಗುಣಮಟ್ಟದ ಮೇಲೆ ಅದರ ಪ್ರಭಾವ – ಶ್ರೇಷ್ಠತೆಯ ಪ್ರಗತಿಪರ ಹೆಜ್ಜೆ' ವಿಷಯ ಕುರಿತು ರಾಷ್ಟ್ರೀಯ ಸಮ್ಮೇಳನ ನಡೆಯಿತು.

ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ಬಿ.ತಿಮ್ಮೇಗೌಡ, 'ಎಲ್ಲಾ ಶಿಕ್ಷಕರು ಕಲಿಯುವ ತುಡಿತ ಹೆಚ್ಚಿಸಿಕೊಳ್ಳಬೇಕು. ಬದಲಾಗುತ್ತಿರುವ ಸನ್ನಿವೇಶಗಳಿಗೆ ಅನುಗುಣವಾಗಿ ಶಿಕ್ಷಕರು ಮನಸ್ಥಿತಿಯನ್ನು ಹೊಸ ತಂತ್ರಜ್ಞಾನದ ಕಡೆಗೆ ತೆರೆದಿಡಬೇಕು' ಎಂದರು.

'ನ್ಯಾಕ್' ಸಲಹೆಗಾರ ಡಾ.ಎಂ.ಎಸ್. ಶ್ಯಾಮ್ ಸುಂದರ್, ಕಾಲೇಜಿನ ನಿರ್ದೇಶಕ ಡಾ.ಬಿ.ಎಸ್. ಶ್ರೀಕಾಂತ, ಮದನ್ ದೌಲ್ತಾನಿ, ಡಾ.ಬಿ.ಕೆ.ಚಂದ್ರನಾಥ್ ಇದ್ದರು.

'ಆವಿಷ್ಕಾರಕ್ಕೆ ವಿದ್ಯಾರ್ಥಿಗಳಿಗೆ ಸಲಹೆ'

ಕೆ.ಆರ್.ಪುರ: ವಿದ್ಯಾರ್ಥಿಗಳು ನೂತನ ಆವಿಷ್ಕಾರ ನಡೆಸಿದರೆ ದೇಶವು ಪ್ರಗತಿ ಹೊಂದಲಿದೆ ಎಂದು ರಾಜ್ಯಸಭೆ ಸದಸ್ಯ ಕೆ.ನಾರಾಯಣ ತಿಳಿಸಿದರು.

ಭೈರತಿ ಸಮೀಪ ಸಿಎಂಆರ್ ಸಮೂಹ ವಿದ್ಯಾಸಂಸ್ಥೆಯ ಏಕ್ಯಾ ಶಿಕ್ಷಣ ಸಂಸ್ಥೆಯಲ್ಲಿ ಸಂಸ್ಥಾಪನಾ ದಿನದ ಅಂಗವಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ₹ 5.7 ಕೋಟಿ ವಿದ್ಯಾರ್ಥಿವೇತನ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಚಿವ ಬಸವರಾಜ್ ಮಾತನಾಡಿ, 'ಕ್ಷೇತ್ರದ ಭೈರತಿಯಲ್ಲಿನ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಯು ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಗುಣಮಟ್ಟದ ವಿದ್ಯಾಭ್ಯಾಸವನ್ನು ನೀಡುತ್ತ ಬರುತ್ತಿರುವುದು ಶ್ಲಾಘನೀಯ' ಎಂದರು.

ಸಿಎಂಆರ್ ಸೇವಾ ಪುರಸ್ಕಾರವನ್ನು ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ರಾಜ್ ಕುಮಾರ್ ಖತ್ರಿ ಅವರಿಗೆ ನೀಡಲಾಯಿತು.

ವಿಧಾನ ಪರಿಷತ್ ಸದಸ್ಯ ಎಚ್.ಎಸ್.ಗೋಪಿನಾಥ್ ರೆಡ್ಡಿ, ಮಾಜಿ ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ, ಸಿಎಂಆರ್ ಜ್ಞಾನಧಾರ ಟ್ರಸ್ಟ್ ಅಧ್ಯಕ್ಷರು ಹಾಗೂ ಸಿಎಂಆರ್ ವಿಶ್ವವಿದ್ಯಾಲಯ ಕುಲಾಧಿಪತಿ ಡಾ.ಸಬಿತಾ ರಾಮಮೂರ್ತಿ, ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಇದ್ದರು.

IN THE HIGH COURT OF KARNATAKA AT BENGALURU
WRIT APPEAL NO. 1078 / 2021 (SC-ST)

(SUBSTITUTED SERVICE OF NOTICE BY WAY OF PAPER PUBLICATION VIDE COURT ORDER DATED 12.10.2022 TO THE RESPONDENT NOS. 7 & 8)

APPELLANT: J. Srinivasa Raju, s/o Sri. J. Satyanarayan Raju, Aged about 55 Years, R / AT No. 24, Manchanahalli, Near Nitte Meenakshi College Bengaluru North A F Station Yelahanka, Bengaluru - 560 063.
By VCO dated 12.10.2022, Smt. Sumana Naganand, Advocate for appellant, Sri. S. Sriranga, for just Law, Advocate for Appellant -Vs-
RESPONDENTS: 1. Y. H. Manjunatha, s/o Late Sri Hanumantha, Aged About 36 Years, No. 322, 8th Cross, Jakkur Layout, Jakkur Post, Bengaluru North Addl. Taluk, Bengaluru - 560 064.
And Others (Sri. Adhinav Anand & Sri. Lingaraj. S. Surapur, Advocates for R1 to R3 (VK filed) VCo dated 16.11.2021, AGA for R4 to R6
TO: RESPONDENT NOS. 7 & 8
7. Smt. Saraswathamma, w/o Late Sri. M. Byrappa, Aged About 53 Years, 4th A Cross, Gowthamagowri Nilaya, Hanumappa Layout,Bengaluru - 560 065
8. Sri. B. Raghuraja, s/o Sri. M. Byrappa, Aged About 38 Years, 4th A Cross, Gowthamagowri Nilaya, Hanumappa Layout, Bengaluru - 560 065.

Whereas a writ Appeal filed by the above named Appellant under Section 4 of Karnataka High Court Act 1961, praying to set aside the order dated 07.12.2020 passed in W. P. No. 29991/2018 as in the copy annexed hereunto, has been regidtered by this court.
Notice is herby given to you to apper in this Court in person or through an advocate or through someone duly authorised by law to act for you in this case on 28.11.2022 at 10:30 A.M. to show cause why the appeal should not be admitted. If you fail so to appear, on the said date or any subsequent date to which the matter may be posted as directed by the Court without any further Notice, the Appeal will be dealt with heard and decided in your absence.
Issued under my hand and the Seal of this court on **Wednesday** the 12th **Day of October 2022**

- By order of the Court
Assistant Registrar

PUBLIC NOTICE

Public are hereby informed that our client intends to purchase the property described in the Schedule hereunder (hereinafter referred to as the Schedule Property) from its owners Mrs. Rathnamala Vijay, daughter of Late Mrs. Jayavanthi and wife of Mr. Vijay Srirangan, Mr. Vivek Vijay, son of Mr. Vijay Srirangam, Mrs. Geethamala Ravindra, daughter of Late Mrs. Jayavanthi and wife of Dr. B. N. Ravindra and Mr. Abhijit Ravindra, son of Mr. Dr. B. N. Ravindra, who have represented to be the joint and absolute owners thereof with uninhibited rights of alienation over the same.
Any person claiming to have any manner of right, title, claim or interest in the Schedule Property is hereby called upon to notify the undersigned with supporting documents thereof within Fourteen (14) days from the date of this notice, after which period, our client shall proceed with the purchase of the Schedule Property on the basis that there are no claims of whatsoever nature with regard to the Schedule Property or any part thereof nor any objections for sale thereof by the said persons in favour of our client.

SCHEDULE
(Description of the Schedule Property)

All that piece and parcel of immovable property bearing Municipal No. 28 (Old No. 525), PID No. 50-44-28, measuring East to West 60 Feet and North to South 70 Feet, totally measuring 4,200 Square Feet, situated at Garuthman Park Road, 1st Main, 2nd Block, Jayanagar, Bengaluru and bounded as follows: **East by :** 2nd Cross Road; **West by** : Private Property; **North by :** Garuthman Park Road; and **South by :** Property bearing No. 524.

Date : November 22nd, 2022 **Bengaluru**

Sd./- Veena T. S., **CrestLaw Partners**
No. 33, Xavier Layout, I Cross, Victoria Road, Bengaluru – 560 047.
Ph: 080 – 4147 3535 / 36 / 37

ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, (ಬೆಂಗಳೂರು ಗ್ರಾಮಾಂತರ), ಜಿಲ್ಲಾ ಪಂಚಾಯತ್, ದೇವನಹಳ್ಳಿ ತಾ.

ಸಂಖ್ಯೆ: ಹಿಸತೋ/ರಾವ/ವಿಸಿ1/19/2022–23 ದಿನಾಂಕ: 15.11.2022

ಟೆಂಡರ್ ಪ್ರಕಟಣೆ

2022–23ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಧೀನದ ಕ್ಷೇತ್ರ ಸಸ್ಯಾಗಾರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆ ಒದಗಿಸಲು ಬಾಹ್ಯ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಆಹ್ವಾನಿಸಿರುವ ಮರು ಇ–ಟೆಂಡರ್‌ನ ಸಂಕ್ಷಿಪ್ತ ವಿವರ. (1) ಇ–ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ : **24.11.2022 ಬೆಳಿಗ್ಗೆ 11:00 ಗಂಟೆಗೆ.** (2) ತಾಂತ್ರಿಕ ಬಿಡ್ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ರಾಜ್ಯ ವಲಯ)ರವರ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಗರೂರು ಮಾದರಿ ಪುಷ್ಪಾಭಿವೃದ್ಧಿ ಕೇಂದ್ರ, ಬೆಂಗಳೂರು–23. ದಿನಾಂಕ: 28.11.2022 ಬೆಳಿಗ್ಗೆ 11:00 ಗಂಟೆಗೆ.** (3) ಆರ್ಥಿಕ ಬಿಡ್ ತೆರೆಯುವ ಸ್ಥಳ ಮತ್ತು ದಿನಾಂಕ: **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ರಾಜ್ಯ ವಲಯ) ರವರ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಗರೂರು ಮಾದರಿ ಪುಷ್ಪಾಭಿವೃದ್ಧಿ ಕೇಂದ್ರ, ಬೆಂಗಳೂರು–23. ಟೆಂಡರ್‌ದಾರರು ಒದಗಿಸುವ ಪೂರ್ವಾಪೇಕ್ಷಿತ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ತಾಂತ್ರಿಕ ಬಿಡ್ ಅನುಮೋದನೆಗೊಂಡ ಯಶಸ್ವಿ ಬಿಡ್‌ದಾರರ ಆರ್ಥಿಕ ಬಿಡ್‌ನ್ನು ಮಾತ್ರ ತೆರೆಯಲಾಗುವುದು. ದಿನಾಂಕ: 30.11.2022 ಬೆಳಿಗ್ಗೆ 11:00 ಗಂಟೆಗೆ.** (4) ಅಂದಾಜು ಮೊತ್ತ : **ರೂ. 48.37 ಲಕ್ಷ** (ಅನುದಾನದ ಲಭ್ಯತೆ ಮೇರೆಗೆ). (5) ಇ–ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ : **ರೂ. 1.20 ಲಕ್ಷ.** (6) ಅಗತ್ಯವಿರುವ ತೋಟಗಾರರ ಸಂಖ್ಯೆ: **22 ಸಂಖ್ಯೆ ತೋಟಗಾರರು** (ಅನುದಾನದ ಲಭ್ಯತತೆ ಮೇರೆಗೆ). (7) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ : **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯ ವಲಯ)ರವರ ಕಛೇರಿ, ತೋಟಗಾರಿಕೆ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಗರೂರು ಮಾದರಿ ಪುಷ್ಪಾಭಿವೃದ್ಧಿ ಕೇಂದ್ರ, ಬೆಂಗಳೂರು–23. ದೂರವಾಣಿ ಸಂಖ್ಯೆ: 080–22860815 E-mail ID : sadhssbangalorerural@gmail.com**

ಸಹಿ/–
ಟೆಂಡರ್ ಆಹ್ವಾನ ಪ್ರಾಧಿಕಾರ ಹಾಗೂ
ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್)
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ಉನಿಕ/ಮಣಿಪಾಲ್/3181/2022–23

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಬಿಎಂಡಿಬಿಎಂಡಬ್ಲ್ಯುಆರ್‌ಹೆಚ್‌ಎಸ್‌ಬಿಸಿ2022 II
ದಿನಾಂಕ : 15-11-2022

ಮುಖ್ಯ ವೈದ್ಯಕೀಯ ಅಧೀಕ್ಷಕರು, ಬೆಂಗಳೂರು ಇವರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ವಿಭಾಗೀಯ ರೈಲ್ವೆ ಆಸ್ಪತ್ರೆ, ಬೆಂಗಳೂರು ಇಲ್ಲಿ ಕೆಎಸ್‌ಪಿಸಿಬಿ / ಸಿಪಿಸಿಬಿ ನಿಯಮಗಳಿಗೆ ಅನುಸಾರವಾಗಿ ಎರಡು ವರ್ಷಗಳ ಅವಧಿಗಾಗಿ ಪ್ರತಿದಿನವೂ ಅಂದಾಜು 10800 ಕೆಜಿ ತೂಕದ ಬಯೋ–ಮೆಡಿಕಲ್ ತ್ಯಾಜ್ಯದ ಸಂಗ್ರಹಣೆ ಮತ್ತು ವಿಲೇವಾರಿ.	ರೂ. 4,86,000/–

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 24–12–2022ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ವೈದ್ಯಕೀಯ ಅಧೀಕ್ಷಕರು, ಬೆಂಗಳೂರು

ಪಿಯುಬಿ/496/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಇಓಐ ಟೆಂಡರ್ ಪ್ರಕಟಣೆ ಸಂ. ಬಿ/ಎಂಡಿ/ಎಲ್‌ಪಿ/ಇಎಂಪಿ/2022
ದಿನಾಂಕ : 15-11-2022

ಮುಖ್ಯ ವೈದ್ಯಕೀಯ ಅಧೀಕ್ಷಕರು, ವಿಭಾಗೀಯ ರೈಲ್ವೆ ಆಸ್ಪತ್ರೆ, ಬೆಂಗಳೂರು ಇವರು ಕೆಳಕಂಡ ವಿಶೇಷ ಡಯಾಗ್ನೊಸ್ಟಿಕ್ ಸೇವೆಗಳನ್ನು ಒದಗಿಸಲು ಡಯಾಗ್ನೊಸ್ಟಿಕ್ ಕೇಂದ್ರಗಳ ಎಂಪ್ಯಾನಲ್‌ಮೆಂಟ್‌ಗಾಗಿ ಮೊಹಾರಾದ ಆಸಕ್ತಿ ವ್ಯಕ್ತಪಡಿಸುವಿಕೆಗಳನ್ನು ಆಹ್ವಾನಿಸಿದ್ದಾರೆ.

ವೆಬ್‌ಸೈಟ್ **www.swr.indianrailways.gov.in** ನಿಂದ ಇಓಐ ದಾಖಲೆಯನ್ನು ಡೌನ್‌ಲೋಡ್ ಮಾಡಬೇಕು.

ವಿವರ : ಕೆಳಗಿನವುಗಳಿಗಾಗಿ ಖಾಸಗಿ ಡಯಾಗ್ನೊಸ್ಟಿಕ್ ಕೇಂದ್ರಗಳು / ಆಸ್ಪತ್ರೆಗಳ ಎಂಪ್ಯಾನಲ್‌ಮೆಂಟ್‌ಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆ.

ಅ) ಸಿಜಿಹೆಚ್‌ಎಸ್ (ಬೆಂಗಳೂರು) ದರಗಳು ಅಥವಾ ಕಡಿಮೆ ದರಗಳಲ್ಲಿ ಎರಡು ವರ್ಷಗಳ ಅವಧಿಗಾಗಿ ರೈಲ್ವೆಗೆ ಅವಶ್ಯವಾದ **ವಿಶೇಷ ಪ್ರಯೋಗಾಲಯ ವೈದ್ಯಕೀಯ ಸೇವೆಗಳು ಮತ್ತು ಇತರ ವಿಶೇಷ ತನಿಖೆಗಳನ್ನು** ಒದಗಿಸುವುದು .

ಆ) ಸಿಜಿಹೆಚ್‌ಎಸ್ (ಬೆಂಗಳೂರು) ದರಗಳು ಅಥವಾ ಕಡಿಮೆ ದರಗಳಲ್ಲಿ ಎರಡು ವರ್ಷಗಳ ಅವಧಿಗಾಗಿ ರೈಲ್ವೆಗೆ ಅವಶ್ಯವಾದ **ರೇಡಿಯೊಲಾಜಿಕಲ್ ಇಮೇಜಿಂಗ್ / ಸಿಟಿ / ಎಂಆರ್‌ಐ / ಪಿಇಟಿ ಸ್ಕ್ಯಾನ್ / ಯುಎಸ್‌ಜಿ ಗಳಂತಹ ತನಿಖೆಗಳನ್ನು** ಒದಗಿಸುವುದು.

ಇಓಐನ್ನು ಮುಖ್ಯ ವೈದ್ಯಕೀಯ ಅಧೀಕ್ಷಕರು, ವಿಭಾಗೀಯ ರೈಲ್ವೆ ಆಸ್ಪತ್ರೆ ಇವರಿಗೆ ಹೆಸರಿಸಿ, ಮುಖ್ಯ ವೈದ್ಯಕೀಯ ಅಧೀಕ್ಷಕರು, ಎಂ ಜಿ ರೈಲ್ವೆ ಕಾಲೋನಿ, ಓಕಳಿಪುರಂ, ಬೆಂಗಳೂರು – 560023 ಇವರ ಕಛೇರಿಗೆ ಸಲ್ಲಿಸಬೇಕು.

ಇಓಐ ಸ್ವೀಕರಿಸಲು ಕೊನೆಯ ದಿನಾಂಕ : **22–12–2022 ರಂದು 11:00 ಗಂಟೆಗಳವರೆಗೆ.** ಇಓಐಯನ್ನು ತೆರೆಯುವ ದಿನಾಂಕ : **22–12–2022 ರಂದು 15.30 ಗಂಟೆಗೆ.**

ಯಾವುದೇ ವಿಚಾರಣೆಗಳು / ಸ್ಪಷ್ಟೀಕರಣಗಳಿಗಾಗಿ 080–22156020 ಗೆ ಸಂಪರ್ಕಿಸಿ ಅಥವಾ **empanelledhospitalrhsbc@gmail.com** ಗೆ ಇ–ಮೇಲ್ ಮಾಡಿ.

ಮೇಲಿನ ಟೆಂಡರ್ ದಾಖಲೆಯಲ್ಲಿ ವಿವರವಾದ ಸೂಚನೆಗಳು ಮತ್ತು ಷರತ್ತುಗಳು ಲಭ್ಯವಿವೆ. ಯಾವುದೇ ಬದಲಾವಣೆಗಳು ಇದ್ದಲ್ಲಿ, ತೆರೆಯುವ ದಿನಾಂಕಕ್ಕೆ ಹತ್ತು ದಿನಗಳ ಮೊದಲು ಮೇಲೆ ತಿಳಿಸಿದ ವೆಬ್‌ಸೈಟ್‌ನಲ್ಲಿ ಮಾಡಲಾಗುತ್ತದೆ ಮತ್ತು ವೆಬ್‌ಸೈಟ್‌ನಲ್ಲಿ ನೋಡಬಹುದು.

ಮುಖ್ಯ ವೈದ್ಯಕೀಯ ಅಧೀಕ್ಷಕರು, ಬೆಂಗಳೂರು

ಪಿಯುಬಿ/495/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿನ್/ಬಿಎನ್‌ಸಿ/108/2022
ದಿನಾಂಕ : 16–11–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬಾಗಲಕೋಟ್ – ಕುಡಚಿ ಹೊಸ ಮಾರ್ಗ ಯೋಜನೆಯಲ್ಲಿ ಲೋಕಾಪುರ (ಹೊರತುಪಡಿಸಿ) ಯಾದವಾಡ್ (ಒಳಗೊಂಡು) ಕಿ.ಮೀ.39/000 ನಿಂದ 60/000 ವರೆಗೆ (21 ಕಿ.ಮೀ) ನಡುವೆ ಎಸ್&ಟಿ ಕಾಮಗಾರಿಗಳು ಮತ್ತು ಸಾಮಾನ್ಯ ವಿದ್ಯುತ್ ಸೇವೆಗಳನ್ನು ಒಳಗೊಂಡಂತೆ ಹೊಸ ಬಿಜಿ ಮಾರ್ಗದ ನಿರ್ಮಾಣ. (ಟೆಂಡರ್ ಉಲ್ಲೇಖ ಸಂ. ಬಿಜಿಕೆ–ಕೆಯುಡಿ–ಇಪಿಸಿ–01)	ರೂ. 357,45,95,779/–
2	ತುಮಕೂರು – ದಾವಣಗೆರೆ ಹೊಸ ಬಿಜಿ ಮಾರ್ಗ ಯೋಜನೆ – ಕಿ.ಮೀ.11/500 ನಿಂದ 25/300 ನಡುವೆ ಬಲ್ಲಾಸ್ಟ್ ಸರಬರಾಜು ಮತ್ತು ಡಂಪಿಂಗ್ ಟ್ರ್ಯಾಕ್ ಲಿಂಕಿಂಗ್ ಮತ್ತು ಇತರ ಸಂಬಂಧಿಸಿದ ಪಿ.ವೇ ಕಾಮಗಾರಿಗಳು, ತಿಮ್ಮರಾಜನಹಳ್ಳಿ ನಿಲ್ದಾಣದಲ್ಲಿ ನಿಲ್ದಾಣ ಕಟ್ಟಡ, ಪ್ಲಾಟ್‌ಫಾರಂ, ಸಬ್‌ವೇ, ಪಿಎಫ್ ಶೆಲ್ಟರ್ ನಿರ್ಮಾಣ ಮತ್ತು ಇತರ ಪ್ರಯಾಣಿಕ ಸೌಕರ್ಯ ಕಾಮಗಾರಿಗಳು, ಕಿ.ಮೀ.24/050 ನಿಂದ 25/500 ನಡುವೆ ರಸ್ತೆ ಮೇಲ್ಸೇತುವೆ / ರಸ್ತೆ ಕೆಳಸೇತುವೆ, ಚಿಕ್ಕ ಸೇತುವೆಗಳ ನಿರ್ಮಾಣ ಮತ್ತು ಅರ್ಥ್‌ವರ್ಕ್ ಫಾರ್ಮೇಶನ್, ಉರುಕೆರೆ – ತಿಮ್ಮರಾಜನಹಳ್ಳಿ ಸೆಕ್ಷನ್ ನಡುವೆ ಕಿ.ಮೀ.11/500 – 24/050 ನಡುವೆ ಭೂಮಿ ಕಾಮಗಾರಿ ಮತ್ತು ಚಿಕ್ಕ ಸೇತುವೆ (ಸಂಯೋಜಿತ ಕಾಮಗಾರಿ ಮತ್ತು ಇ–ರಿವರ್ಸ್ ಹರಾಜು ವಿಧಾನ). (ಟೆಂಡರ್ ಉಲ್ಲೇಖ ಸಂ. ಟಿಕೆ–ಡಿವಿಜಿ–20)	ರೂ. 98,39,19,563/–
3	ತುಮಕೂರು – ರಾಯದುರ್ಗ ಹೊಸ ಮಾರ್ಗ ಯೋಜನೆಯಲ್ಲಿ ಇಪಿಸಿ ವಿಧಾನದಲ್ಲಿ ತುಮಕೂರಿನಿಂದ ಕೊರಟಗೆರೆ (ಒಳಗೊಂಡು) ನಿಲ್ದಾಣಗಳ ನಡುವೆ ರೈಲ್ವೆ ಸಿಗ್ನಲ್ ಟೆಲಿಕಮ್ಯುನಿಕೇಶನ್ ಕಾಮಗಾರಿಗಳು ಮತ್ತು ಸಾಮಾನ್ಯ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡು ಚೈನೇಜ್ 300 ಮತ್ತು ಚೈನೇಜ್ 30500 (ಕಿ.ಮೀ. 30.20) ನಡುವೆ ಹೊಸ ಬಿಜಿ ರೈಲ್ವೆ ಗೇಜ್ ಮಾರ್ಗದ ನಿರ್ಮಾಣ. (ಟೆಂಡರ್ ಉಲ್ಲೇಖ ಸಂ. ಟಿಕೆ–ಕೆಟಿಜಿಇ–ಇಪಿಸಿ–01)	ರೂ. 270,31,70,000/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : ಕ್ರ.ಸಂ.1ಕ್ಕೆ 14–01–2023 ರಂದು 11:00 ಗಂಟೆಗಳವರೆಗೆ ಮತ್ತು ಕ್ರ.ಸಂ.2ಕ್ಕೆ 08–12–2022 ರಂದು 15:00 ಗಂಟೆಗಳವರೆಗೆ ಮತ್ತು ಕ್ರ.ಸಂ.3ಕ್ಕೆ 16–01–2023 ರಂದು 11:00 ಗಂಟೆಗಳವರೆಗೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು (ನಿರ್ಮಾಣ) ಬೆಂಗಳೂರು ದಂಡು

ಪಿಯುಬಿ/499/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

ರಾತ್ರಿ ವೇಳೆ ತಾಪಮಾನ ಮತ್ತಷ್ಟು ಇಳಿಕೆ • ಕನಿಷ್ಠ ತಾಪಮಾನ 14 ಡಿಗ್ರಿ ಸೆಲ್ಸಿಯಸ್ ದಾಖಲು

ರಾಜಧಾನಿಯಲ್ಲಿ ಮೈಕೊರೆಯುವ ಚಳಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಚಳಿ ತೀವ್ರಗೊಂಡಿದೆ. ತಾಪಮಾನ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು, ತಂಪಾದ ವಾತಾವರಣ ಜನರ ಮೈನಡುಗಿಸುವಂತೆ ಮಾಡುತ್ತಿದೆ.

ಬೆಳಿಗ್ಗೆ, ಸಂಜೆ ಹಾಗೂ ರಾತ್ರಿ ವೇಳೆ ಅಲ್ಲದೇ ಮಧ್ಯಾಹ್ನವೂ ಚಳಿ ಇರುತ್ತಿದೆ. ಚಳಿಯಿಂದ ರಕ್ಷಣೆ ಪಡೆಯಲು ಜನರು ಸ್ವೆಟರ್ ಹಾಗೂ ಟೋಪಿಯ ಮೊರೆ ಹೋಗುವ ಸ್ಥಿತಿಯಿದೆ. ಭಾನುವಾರ, ಸೋಮವಾರ ಕೆಲಸ ಮುಗಿಸಿ, ರಾತ್ರಿ ವೇಳೆ ಮನೆಗೆ ತೆರಳುವರಿಗೆ ಚಳಿ ತೀವ್ರವಾಗಿ ಕಾಡಿತು.

'ನಗರದಲ್ಲಿ ಸೋಮವಾರ ಕನಿಷ್ಠ ಉಷ್ಣಾಂಶ 14 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಗರಿಷ್ಠ ಉಷ್ಣಾಂಶ 25 ಡಿಗ್ರಿ ಸೆಲ್ಸಿಯಸ್ ಇತ್ತು. ಇನ್ನೂ ನಾಲ್ಕರಿಂದ ಐದು ದಿನಗಳ ಕಾಲ ಇದೇ ವಾತಾವರಣ ನಗರದಲ್ಲಿ ಇರಲಿದೆ. ಡಿಸೆಂಬರ್‌ನಲ್ಲಿ ಚಳಿಯ ತೀವ್ರತೆ ಮತ್ತಷ್ಟು ಹೆಚ್ಚಲಿದೆ' ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದರು.

ಚಳಿ ತೀವ್ರಗೊಂಡಿರುವ ಕಾರಣಕ್ಕೆ ಜನರು ಬಿಸಿ ಬಿಸಿ ಪಾನೀಯದ ಮೊರೆ ಹೋಗುತ್ತಿದ್ದಾರೆ. ರಾತ್ರಿ ವೇಳೆ ಬಸ್, ರೈಲಿನಲ್ಲಿ ಪ್ರಯಾಣಿಸುವವರಿಗೆ ಚಳಿ ತೀವ್ರವಾಗಿ ಕಾಡುತ್ತಿದೆ.

ಹೊರಗಿನ ತಾಪಮಾನ ಕುಸಿತ, ಮೆಟ್ರೊ ರೈಲಿನಲ್ಲಿ ಎ.ಸಿ ವ್ಯವಸ್ಥೆಯಿಂದಾಗಿ ಮೆಟ್ರೊ ಪ್ರಯಾಣಿಕರಿಗೆ ಚಳಿ ಮೈಕೊರೆಯುವಂತೆ ಮಾಡಿದೆ. ಉದ್ಯಾನಗಳಲ್ಲಿ ವಾಯುವಿಹಾರಿಗಳ ಸಂಖ್ಯೆಯೂ ಕಡಿಮೆಯಾಗಿದೆ. ಬೆಳಿಗ್ಗೆ 8 ಗಂಟೆಯ ತನಕವೂ ಮಂಜು ಮುಸುಕಿದ ವಾತಾವರಣ ಕಂಡುಬರುತ್ತಿದೆ.

ಕಾರ್ಮಿಕರಿಗೆ ತಟ್ಟಿದ ಚಳಿ: ಕೆಲಸ ಅರಸಿ ಉತ್ತರ ಭಾರತ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಿಂದ ನಗರಕ್ಕೆ ಸಾವಿರಾರು ಸಂಖ್ಯೆಯ ಕಾರ್ಮಿಕರು ನಗರಕ್ಕೆ ಬಂದಿದ್ದು, ಪುಟ್ಟ ಗುಡಿಸಲುಗಳಲ್ಲಿ ನೆಲೆಸಿದ್ದಾರೆ. ಅವರಿಗೆ ಚಳಿ ತೀವ್ರವಾಗಿ ಕಾಡುತ್ತಿದೆ. ರಾತ್ರಿ ವೇಳೆ ಕೆಲಸ ಮಾಡುವ ಓಲಾ, ಊಬರ್ ಚಾಲಕರಿಗೂ ಚಳಿಯ ತೀವ್ರತೆ ತಟ್ಟಿದೆ.

'ಸಾಧಾರಣ ಮಳೆ ಸಾಧ್ಯತೆ'

ಮಂಗಳವಾರದಿಂದ ಶುಕ್ರವಾರದ ವರೆಗೆ ನಗರದಲ್ಲಿ ಭಾಗಶಃ ಮೋಡ ಮುಸುಕಿದ ವಾತಾವರಣ ಇರಲಿದ್ದು, ಚದುರಿದಂತೆ ಸಾಧಾರಣ ಮಳೆ ಸುರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಹೆಬ್ಬಾಳದಲ್ಲಿ ಸೋಮವಾರ ದಟ್ಟವಾದ ಮಂಜು ಮುಸುಕಿದ ವಾತಾವರಣ ಕಂಡುಬಂತು – ಪ್ರಜಾವಾಣಿ ಚಿತ್ರ

ಬೆಳಗಾವಿಯಲ್ಲಿ 10.2 ಡಿಗ್ರಿ ತಾಪಮಾನ

ಬೆಳಗಾವಿ: ನಗರದಲ್ಲಿ ಸೋಮವಾರ ಕನಿಷ್ಠ ತಾಪಮಾನ 10.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಪ್ರಸಕ್ತ ವರ್ಷದ ಈವರೆಗಿನ ಅತ್ಯಂತ ಕಡಿಮೆ ತಾಪಮಾನ ಇದಾಗಿದೆ.

ಕಳೆದ ಸೋಮವಾರದಿಂದ (ನ.14) ಭಾನುವಾರದವರೆಗೆ (ನ.20) ಗರಿಷ್ಠ 27ರಿಂದ ಕನಿಷ್ಠ 18ರ ಆಸುಪಾಸಿನಲ್ಲೇ ದಾಖಲಾಗಿದೆ. ಸೋಮವಾರ ಏಕಾಏಕಿ ಕನಿಷ್ಠ ತಾಪಮಾನದಲ್ಲಿ ಕುಸಿತ ಕಂಡಿದೆ.

'ರಸ್ನಾ' ಸಂಸ್ಥಾಪಕ ಖಂಬಾಟಾ ಇನ್ನಿಲ್ಲ



ನವದೆಹಲಿ (ಪಿಟಿಐ): ಜನಪ್ರಿಯ ಪೇಯ ತಯಾರಿಕಾ ಕಂಪನಿ 'ರಸ್ನಾ'ದ ಸಂಸ್ಥಾಪಕ ಅಧ್ಯಕ್ಷ ಅರೀಜ್ ಪಿರೋಜ್‌ಶಾ ಖಂಬಾಟಾ (85) ಅವರು ಅಹಮದಾಬಾದ್‌ನಲ್ಲಿ ಹೃದಯಸ್ತಂಭನದಿಂದ ಮೃತಪಟ್ಟಿದ್ದಾರೆ.

ಅವರು ದೀರ್ಘ ಕಾಲದಿಂದ ಅನಾರೋಗ್ಯಕ್ಕೆ ಈಡಾಗಿದ್ದರು. ಅವರು ಶನಿವಾರ ಮೃತಪಟ್ಟಿದ್ದಾರೆ ಎಂದು ಕಂಪನಿಯು ಸೋಮವಾರ ತಿಳಿಸಿದೆ.

ಖಂಬಾಟಾ ಅವರು ರಸ್ನಾ ಪೇಯದ ಪೊಟ್ಟಣಗಳನ್ನು ಕೈಗೆಟಕುವ ಬೆಲೆಗೆ 1970ರಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದರು. ಆಗ ಮಾರುಕಟ್ಟೆಯಲ್ಲಿ ಇದ್ದ ದುಬಾರಿ ಬೆಲೆಯ ತಂಪು-ಪಾನೀಯಗಳಿಗೆ ಪರ್ಯಾಯವಾಗಿ ಅವರು ರಸ್ನಾ ಪೊಟ್ಟಣವನ್ನು ಮಾರುಕಟ್ಟೆಗೆ ತಂದರು. ರಸ್ನಾ ಪೊಟ್ಟಣಗಳು ದೇಶದ 18 ಲಕ್ಷ ಅಂಗಡಿಗಳಲ್ಲಿ ಸಿಗುತ್ತಿವೆ.

1980 ಹಾಗೂ 1990ರ ದಶಕದಲ್ಲಿ ಜನಪ್ರಿಯವಾಗಿದ್ದ 'ಐ ಲವ್ ಯೂ ರಸ್ನಾ' ಜಾಹೀರಾತು ಜನರ ಮನಸ್ಸಿನಲ್ಲಿ ಈಗಲೂ ಅಚ್ಚೊತ್ತಿದೆ.

ನಗರದ ಬಿಷಪ್ ಕಾಟನ್ ಮಹಿಳಾ ಕಾನೂನು ಕಾಲೇಜಿನಲ್ಲಿ ಇತ್ತೀಚೆಗೆ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಹನಿಯೂರು ಚಂದ್ರೇಗೌಡ, ಪ್ರಾಂಶುಪಾಲರಾದ ಇಂದ್ರಾಣಿ ಕೆ.ಎಸ್. ಇದ್ದರು.

ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವ

ಎಸ್‌.ಟಿ ಮೀಸಲಾತಿಗಾಗಿ ಕುರುಬರ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಸ್‌.ಟಿ ಮೀಸಲಾತಿ ನೀಡಬೇಕು' ಎಂದು ಒತ್ತಾಯಿಸಿ ಕುರುಬ ಸಮುದಾಯದವರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಧಾರವಾಡ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ರಾಯಚೂರು, ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಮಂಡ್ಯ, ಮೈಸೂರು, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಇತರ ಜಿಲ್ಲೆಗಳಿಂದ ಬಂದಿದ್ದ ಸಮುದಾಯದ ಜನರು, 'ಎಸ್‌.ಟಿ ಮೀಸಲಾತಿ ಬೇಕು' ಎಂಬ ಘೋಷಣೆಯುಳ್ಳ ಫಲಕಗಳನ್ನು ಪ್ರದರ್ಶಿಸಿದರು.

ಕುರುಬ ಸಮುದಾಯದ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಹಾಲುಮತ ಮಹಾಸಭಾ ವತಿಯಿಂದ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಹಾಲುಮತ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ರುದ್ರಣ್ಣ ಗುಳಗುಳಿ ಅವರು ಪ್ರತಿಭಟನೆ ನೇತೃತ್ವ ವಹಿಸಿದ್ದರು.

'ಎಸ್‌.ಟಿ (ಪರಿಶಿಷ್ಟ ಪಂಗಡ) ಮೀಸಲಾತಿ ಪಟ್ಟಿಯಲ್ಲಿ ಕುರುಬರಿಗೆ ಸಂಬಂಧಪಟ್ಟ 'ಗೊಂಡ', 'ರಾಜಗೊಂಡ', 'ಜೇನುಕುರುಬ', 'ಕಾಡುಕುರುಬ', 'ಕಾಟ್ಟುನಾಯಕನ್', 'ಕುರುಮನ್ಸ್' ಮತ್ತು ಕ್ರಮ ಸಂಖ್ಯೆ 28ರಲ್ಲಿ 'ಕುರುಬ' ಎಂಬ ಜಾತಿಗಳಿದ್ದರೂ ರಾಜ್ಯವ್ಯಾಪಿ ವಿಸ್ತರಣೆ ಮಾಡಿಲ್ಲ. ಮೀಸಲಾತಿಗೆ ಸಂಬಂಧಪಟ್ಟಂತೆ ರಾಜ್ಯ ಬುಡಕಟ್ಟು ಸಂಶೋಧನಾ ಕೇಂದ್ರ ಅಧ್ಯಯನ ನಡೆಸಿದ್ದು, ಈ ವರದಿಯನ್ನೂ ರಾಜ್ಯ ಸರ್ಕಾರ ಇದುವರೆಗೂ ಅಂಗೀಕರಿಸಿಲ್ಲ. ಇದರಿಂದ ಕುರುಬರಿಗೆ ಅನ್ಯಾಯವಾಗುತ್ತಿದೆ' ಎಂದು ಪ್ರತಿಭಟನಕಾರರು ದೂರಿದರು.

'ಅಧ್ಯಯನ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಅಂಗೀಕರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು' ಎಂದು ಆಗ್ರಹಿಸಿ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಲಾಗಿತ್ತು. ಕನಕ ಜಯಂತಿ ದಿನದಂದು ರಾಜ್ಯ ಸರ್ಕಾರದಿಂದ ಶುಭ ಸುದ್ದಿ ನಿರೀಕ್ಷಿಸಲಾಗಿತ್ತು. ಆದರೆ, ಮುಖ್ಯಮಂತ್ರಿಯವರು ಸಮುದಾಯದ ಜನರಲ್ಲಿ ನಿರಾಶೆ ಮೂಡಿಸಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಎಸ್‌.ಟಿ ಮೀಸಲಾತಿಗಾಗಿ ರಾಜ್ಯವ್ಯಾಪಿ ಪಾದಯಾತ್ರೆ ಸಹ ಮಾಡಲಾಗಿದೆ. ಇಂದು ಸಾಂಕೇತಿಕ ಪ್ರತಿಭಟನೆ ನಡೆಸುತ್ತಿದ್ದೇವೆ. ಮುಖ್ಯಮಂತ್ರಿಯವರು ಇನ್ನಾದರೂ ಎಚ್ಚೆತ್ತುಕೊಂಡು ನಮ್ಮ ಬೇಡಿಕೆ ಈಡೇರಿಸಬೇಕು. ಇಲ್ಲದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

'ಎಸ್‌.ಟಿ ಮೀಸಲಾತಿ ನೀಡಬೇಕು' ಎಂದು ಒತ್ತಾಯಿಸಿ ಕುರುಬ ಸಮುದಾಯದವರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

'ಮುಜುಗರ ತರುವ ಉದ್ದೇಶವಿಲ್ಲ: ಬೇಡಿಕೆ ಈಡೇರಿಸಿ'

'ಎಸ್‌.ಟಿ ಮೀಸಲಾತಿಗೆ ಆಗ್ರಹಿಸಿ ನಿರಂತರವಾಗಿ ಹೋರಾಟ ಮಾಡಲಾಗುತ್ತಿದೆ. ಕುರುಬ ಸಮುದಾಯಕ್ಕೆ ಎಸ್‌.ಟಿ ಮೀಸಲಾತಿ ಕೊಡಿಸುವುದು ನನ್ನ ಜೀವನದ ಗುರಿ' ಎಂದು ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಅವರು, 'ಪ್ರತಿಭಟನೆ ಮೂಲಕ ಶಕ್ತಿ ಪ್ರದರ್ಶನ ಮಾಡಿ, ಸರ್ಕಾರಕ್ಕೆ ಮುಜುಗರ ತರುವ ಹಾಗೂ ಘನತೆ– ಗೌರವ ಕಡಿಮೆ ಮಾಡುವ ಉದ್ದೇಶ ನಮ್ಮದಲ್ಲ. ನಮ್ಮ ನೋವು ಸಂಕಟವನ್ನು ಸರ್ಕಾರಕ್ಕೆ ಹೇಳುತ್ತಿದ್ದೇವೆ. ನಮ್ಮ ಮನವಿ ಆಲಿಸಿ ಬೇಡಿಕೆ ಈಡೇರಿಸಿದರೆ ಸರ್ಕಾರದ ಉಪಕಾರ ಸ್ಮರಿಸುತ್ತೇವೆ' ಎಂದು ತಿಳಿಸಿದರು.

ಮನವಿ ಸ್ವೀಕರಿಸಿದ ಸಚಿವರು: ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಸಚಿವರಾದ ಎನ್. ಮುನಿರತ್ನ ಹಾಗೂ ಗೋವಿಂದ ಕಾರಜೋಳ ಅವರು ಮನವಿ ಸ್ವೀಕರಿಸಿದರು.

ಡಿ.21ರಿಂದ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಡಿ.21ರಿಂದ 27ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯಲ್ಲಿ ನಡೆಯಲಿದ್ದು, 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದಾರೆ' ಎಂದು ಸಂಸ್ಥೆಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ವಾರವಿಡಿ ಸಮ್ಮೇಳನ ನಡೆಯಲಿದೆ. ರಾಜ್ಯದ ಎಲ್ಲೆಡೆಯಿಂದ 40,416 ವಿದ್ಯಾರ್ಥಿಗಳು ಈಗಾಗಲೇ ನೋಂದಣಿ ಮಾಡಿಕೊಂಡಿದ್ದಾರೆ. ಹೊರರಾಜ್ಯದ 8 ಸಾವಿರ, ಮಲೇಷ್ಯಾ, ಶ್ರೀಲಂಕಾ, ಬಾಂಗ್ಲಾದೇಶ, ನೇಪಾಳ, ಥಾಯ್ಲೆಂಡ್, ದಕ್ಷಿಣ ಕೊರಿಯಾ ಸೇರಿ ಹೊರದೇಶಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದಾರೆ ಎಂದರು.

ಮಕ್ಕಳಲ್ಲಿ ಶಿಸ್ತು ಮತ್ತು ಪರಿಸರ ಪ್ರಜ್ಞೆ ಬೆಳೆಸುವಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮಹತ್ವದ ಪಾತ್ರ ವಹಿಸುತ್ತಿದೆ. ಜಾಂಬೂರಿಯು ಪ್ರತಿದಿನ ಬೆಳಿಗ್ಗೆ ಯೋಗ-ಧ್ಯಾನದಿಂದ ಆರಂಭವಾಗಲಿವೆ. ಕರಾವಳಿ ಚಾರಣ, ಅರಣ್ಯ ಚಾರಣ, ಸಾಂಪ್ರದಾಯಿಕ ಕ್ರೀಡೆಗಳು, ಒಂದೇ ಭಾರತ- ಶ್ರೇಷ್ಠ ಭಾರತ ಕಾರ್ಯಕ್ರಮ ಸೇರಿ ಸಂಸ್ಕೃತಿ ವಿನಿಮಯ ಕಾರ್ಯಕ್ರಮಗಳು ನಡೆಯಲಿವೆ. ಪ್ರತಿ ದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳೂ ಆಯೋಜನೆಗೊಂಡಿವೆ. ವಿಜಯ ಪ್ರಕಾಶ್ ಸೇರಿ ಪ್ರಮುಖ ಕಲಾವಿದರಿಂದ ಸಂಗೀತ ಕಾರ್ಯಕ್ರಮಗಳೂ ನಡೆಯಲಿವೆ ಎಂದು ವಿವರಿಸಿದರು.

ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸದಸ್ಯ ವಿದ್ಯಾರ್ಥಿಗಳಿಗಷ್ಟೇ ಅವಕಾಶ ಇದೆ. ರಾಜ್ಯದಲ್ಲಿ 8 ಲಕ್ಷದಷ್ಟು ಸದಸ್ಯರಿದ್ದು, ಅವರಲ್ಲಿ 50 ಸಾವಿರ ವಿದ್ಯಾರ್ಥಿಗಳಿಗೆ ಈ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ಸಿಗುತ್ತಿದೆ. ಇನ್ನೂ ಬೇಡಿಕೆ ಹೆಚ್ಚುತ್ತಿದ್ದು, ವಸತಿ ಸೌಕರ್ಯ ಒದಗಿಸುವುದು ಕಷ್ಟವಾಗುವುದರಿಂದ ನೋಂದಣಿಯನ್ನು ಸ್ಥಗಿತಗೊಳಿಸಲಾಗಿದೆ. ಕೃಷಿ ಮೇಳ, ಪುಸ್ತಕ ಮೇಳ, ವಿಜ್ಞಾನ ಮೇಳ, ಕಲಾ ಮೇಳಗಳು ನಡೆಯಲಿವೆ. 10 ಸಾವಿರ ಶಿಕ್ಷಕರು, 3 ಸಾವಿರ ಕಲಾವಿದರು ಭಾಗವಹಿಸುತ್ತಿದ್ದಾರೆ. ಈ ಸಮ್ಮೇಳನದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಉಪಯುಕ್ತ ತರಬೇತಿ ಇಲ್ಲಿ ದೊರಕಲಿದೆ. ಮುಂದಿನ ದಿನಗಳಲ್ಲಿ ಅವರು ಈ ಸಂಸ್ಥೆಯ ರಾಯಭಾರಿಗಳಾಗಲಿದ್ದಾರೆ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಒಪ್ಪಿಗೆ ಪಡೆದೇ ಕಾರ್ಯಕ್ರಮ ಆಯೋಜಿಸಲಾಗಿದೆ. ಅವರೇ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಧಾನಿ ಅವರಿಗೆ ಪತ್ರ ಬರೆದಿರುವ ಮುಖ್ಯಮಂತ್ರಿ ಅವರನ್ನು ಆಹ್ವಾನಿಸಿದ್ದಾರೆ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿ ಪಕ್ಷಾತೀತವಾಗಿ ಎಲ್ಲಾ ರಾಜಕೀಯ ಪಕ್ಷಗಳ ನಾಯಕರನ್ನೂ ಆಹ್ವಾನಿಸಲಾಗಿದೆ ಎಂದರು.

ಬೆವಿಕಂ BESCOM

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

(CIN-UO4010KA2002SGC030438)

ಪತ್ರಿಕಾ ಪ್ರಕಟಣೆ

ಪೀಣ್ಯ ವಿಭಾಗದ ವ್ಯಾಪ್ತಿಗೆ ಬರುವಂತಹ ಎನ್4, ಎನ್5 ಮತ್ತು ಎನ್7 ಉಪವಿಭಾಗದ ಈ ಕೆಳಕಂಡ ಸರ್ಕಾರಿ ಸ್ವಾಮ್ಯದ ಕಛೇರಿಯ ವ್ಯಾಪ್ತಿಯಲ್ಲಿ ಸಕ್ರಿಯವಾಗಿ ಇರುವ ಸಾರ್ವಜನಿಕ ಕುಡಿಯುವ ನೀರು ಮತ್ತು ಬೀದಿ ದೀಪ ವಿದ್ಯುತ್ ಸರಬರಾಜು ಸ್ಥಾವರಗಳಲ್ಲಿ ಸೆಪ್ಟೆಂಬರ್–2022ರ ಅಂತ್ಯಕ್ಕೆ ಪಾವತಿಸದೇ ಬಾಕಿ ಇರುವ ಮೊತ್ತವನ್ನು ಪಾವತಿ ಮಾಡುವಂತೆ ಹಲವಾರು ಬಾರಿ ಪತ್ರ ವ್ಯವಹಾರ ಮಾಡಲಾಗಿದ್ದರೂ ಸಹ ಸರ್ಕಾರಿ ಸ್ವಾಮ್ಯದ ಕಛೇರಿಯ ವತಿಯಿಂದ ವಿದ್ಯುತ್ ಬಿಲ್ಲು ಪಾವತಿಗೆ ಯಾವುದೇ ಕ್ರಮ ಕೈಗೊಂಡಿಲ್ಲದ ಕಾರಣ, ವಿದ್ಯುತ್ ಸಂಪರ್ಕ ಕಡಿತಗೊಳಿಸುವುದು ಅನಿವಾರ್ಯ ಕ್ರಮವಾಗಿರುತ್ತದೆ. ಆದ್ದರಿಂದ 7 ದಿನಗಳೊಳಗೆ ಬಾಕಿ ಮೊತ್ತವನ್ನು ಪಾವತಿಸಲು ಕೋರಲಾಗಿದೆ. ತಪ್ಪಿದ್ದಲ್ಲಿ ವಿದ್ಯುತ್ ನಿಲುಗಡೆಯಂತಹ ಕ್ರಮಗಳಿಂದ ಸಾರ್ವಜನಿಕರಿಗೆ ಉಂಟಾಗುವಂತಹ ಯಾವುದೇ ರೀತಿಯ ತೊಂದರೆ/ಅನಾನುಕೂಲತೆಗಳಿಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಜವಾಬ್ದಾರಿಯಾಗಿರುವುದಿಲ್ಲ ಎಂಬ ಅಂಶವನ್ನು ಸಾರ್ವಜನಿಕರ ಮಾಹಿತಿಗಾಗಿ ಬೆವಿಕಂ ವತಿಯಿಂದ ಪ್ರಕಟಣೆ ಹೊರಡಿಸಲಾಗಿದೆ.

ಸರ್ಕಾರಿ ಕಛೇರಿವಾರು ಬಾಕಿ ಇರುವ ವಿದ್ಯುಚ್ಛಕ್ತಿ ಕಂದಾಯ ವಿವರಗಳನ್ನು ಈ ಕೆಳಕಂಡ ಕೋಷ್ಠಕದಲ್ಲಿ ವಿವರಿಸಲಾಗಿದೆ.

ಕ್ರ.ಸಂ	ಕಛೇರಿಯ ಹೆಸರು	ವಾರ್ಡ್ ಸಂಖ್ಯೆ	ವಿದ್ಯುತ್ ಬಾಕಿ ಲಕ್ಷ ರೂಗಳಲ್ಲಿ	ವಾರ್ಡ್ ಸಂಖ್ಯೆ	ವಿದ್ಯುತ್ ಬಾಕಿ ಲಕ್ಷ ರೂಗಳಲ್ಲಿ	ವಾರ್ಡ್ ಸಂಖ್ಯೆ	ವಿದ್ಯುತ್ ಬಾಕಿ ಲಕ್ಷ ರೂ. ಗಳಲ್ಲಿ	ಒಟ್ಟು ಲಕ್ಷ ರೂ. ಗಳಲ್ಲಿ
	ಬಿ.ಡಬ್ಲ್ಯೂ ಎಸ್.ಎಸ್.ಬಿ– ಬಿ.ಬಿ.ಎಂ.ಪಿ	41 71 69	32.53 1.17 311.80	12 13 14 15 16 38 39 41	1192.98 492.11 46.53 360.47 23.64 216.61 30.23 1.96	38 42 43 44 67 68 75	162.58 103.72 512.84 176.33 43.71 632.59 196.00	4537.81
			345.50		**2364.53**		**1827.77**	
	ಬಿ.ಡಬ್ಲ್ಯೂ ಎಸ್.ಎಸ್.ಬಿ	41 69 71 73	362.03 202.59 378.69 364.30	12 13 14 15 16 38 39 40 41 39 71 73	167.25 424.16 91.53 309.97 25.43 24.79 873.30 120.32 416.83 13.32 26.38 13.15	38 42 43 44 67 68 75	0.06 46.90 139.29 61.32 20.52 174.37 118.59	4375.10
			1307.61		**2506.42**		**561.10**	
	ಇತರೆ ಸರ್ಕಾರಿ ಕುಡಿಯುವ ನೀರು			13	1.796			1.796
	ತೋಟಗಾರಿಕೆ			15	1.24			1.24
	ಕುಡಿಯುವ ನೀರುನು ಒಟ್ಟು ಮೊತ್ತ		1653.21		4873.99		2388.87	8915.95
	ಬೀದಿ ದೀಪ	38 39 40 41 42 69 70 71 73	0 15.34 16.87 23.72 12.90 49.23 14.12 0.12 9.81	12 13 14 15 16 38 39 40 41 42 69 70 71 73	31.98 21.00 8.02 30.83 3.88 13.27 10.57 14.58 8.28 0.80 13.24 6.78 0.68 4.96	38 42 43 44 67 68 75	5.01 7.83 37.92 12.49 17.30 31.31 19.73	442.54
	ಬೀದಿ ದೀಪ ಒಟ್ಟು ಮೊತ್ತ		**142.08**		**168.87**		**131.59**	**442.54**

ಈ ಪ್ರಕಟಣೆಯ ದಿನಾಂಕದಿಂದ 7 ದಿನಗಳೊಳಗಾಗಿ ಮೇಲ್ಕಾಣಿಸಿದ ಮೊತ್ತವನ್ನು ಸಂಬಂಧಿಸಿದ ಉಪವಿಭಾಗಗಳಲ್ಲಿ ಪಾವತಿಸುವುದು ತಪ್ಪಿದಲ್ಲಿ ವಿದ್ಯುತ್ ಸರಬರಾಜನು ನಿಲುಗಡೆ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912

ಬೆಸ್ಕಾಂ ಮಿತ್ರ Mobile App ಅನ್ನು, ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಪೀಣ್ಯ ವಿಭಾಗ, ಬೆ.ವಿ.ಕಂ., ಬೆಂಗಳೂರು–58.

ಬೆಂಗಳೂರು ವಿ.ವಿ: ಇಂದು ಸ್ವಚ್ಛತಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ನ.22ರಂದು ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರ ತನಕ ಸ್ವಚ್ಛತಾ ಅಭಿಯಾನ ನಡೆಯಲಿದೆ. ಎಲ್ಲ ಶಿಕ್ಷಕ, ಶಿಕ್ಷಕೇತರ ನೌಕರರು, ದಿನಗೂಲಿ, ಹೊರಗುತ್ತಿಗೆ ನೌಕರರು, ಸ್ವಚ್ಛತಾ ಸಿಬ್ಬಂದಿ, ಗೃಹ ರಕ್ಷಕದಳ ಹಾಗೂ ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

SBI The banker to every Indian

Azadi Ka Amrit Mahotsav

ಭಾರತೀಯ ಸ್ಟೇಟ್ ಬ್ಯಾಂಕ್

ಸರ್ಕಾರಿ ವ್ಯವಹಾರ ಘಟಕ
ಸ್ಥಳೀಯ ಪ್ರಧಾನ ಕಛೇರಿ
ಬೆಂಗಳೂರು

ಪಿಂಚಣಿದಾರರಿಗೆ ಜಾಗೃತಿ ಅಭಿಯಾನ

ಕೇಂದ್ರ ಸರ್ಕಾರದ ಪಿಂಚಣಿದಾರರಿಗೆ ಜೀವನ ಪ್ರಮಾಣ ಪತ್ರವನ್ನು ಡಿಜಿಟಲ್ ಮಾಧ್ಯಮದ ಮೂಲಕ ಸಲ್ಲಿಸಲು ಉತ್ತೇಜಿಸುವ ಸಲುವಾಗಿ ಭಾರತ ಸರ್ಕಾರದ ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿಗಳ ಸಚಿವಾಲಯದವರು ರಾಷ್ಟ್ರವ್ಯಾಪಿ ಅಭಿಯಾನವನ್ನು ಪ್ರಾರಂಭಿಸಿದ್ದಾರೆ. ನವೆಂಬರ್ 24 ಮತ್ತು 25, 2022 ರಂದು ಬೆಂಗಳೂರಿನಲ್ಲಿ ಕೇಂದ್ರ ಸರ್ಕಾರದ ಪಿಂಚಣಿದಾರರಿಗೆ ಭಾರತೀಯ ಸ್ಟೇಟ್ ಬ್ಯಾಂಕ್, ಮೈಸೂರು ಬ್ಯಾಂಕ್ ವೃತ್ತ, ಕೆ.ಜಿ. ರಸ್ತೆಯಲ್ಲಿರುವ ಆಡಳಿತ ಕಛೇರಿ ಆವರಣದಲ್ಲಿ ಜಾಗೃತಿ ಅಭಿಯಾನ ನಡೆಸಲಿದ್ದಾರೆ. ಎಲ್ಲಾ ಪಿಂಚಣಿದಾರರು ಡಿಜಿಟಲ್ ಮಾಧ್ಯಮದ ಮೂಲಕ ತಮ್ಮ ಜೀವನ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಕೇಂದ್ರಕ್ಕೆ ಭೇಟಿ ನೀಡಬಹುದು. ಈ ಮೊದಲು ಜೀವನ ಪ್ರಮಾಣ ಪತ್ರಗಳನ್ನು ಭೌತಿಕ ರೂಪದಲ್ಲಿ ಸಲ್ಲಿಸಬೇಕಾಗುತ್ತಿತ್ತು. ಇದು ವಯಸ್ಸಾದ ಪಿಂಚಣಿದಾರರಿಗೆ ವಿಳಂಬಕ್ಕೆ ಕಾರಣವಾಗುತ್ತಲಿತ್ತು. ಈಗ, ಜೀವನ ಪ್ರಮಾಣ ಪತ್ರಗಳನ್ನು ಒಂದು ಬಟನ್ ಕ್ಲಿಕ್ ಮಾಡುವ ಮೂಲಕ ಸಲ್ಲಿಸಬಹುದು. ಈ ಸೌಲಭ್ಯವು ರಾಜ್ಯ ಸರ್ಕಾರದ ಪಿಂಚಣಿದಾರರಿಗೆ ಲಭ್ಯವಿದೆ.

ಅತ್ಯಾಚಾರ ಆರೋಪ: ಆರ್.ಎಲ್. ರಿಷಿ ಬಂಧನ

ಪೋರ್ಟ್ ಬ್ಲೇರ್ (ಪಿಟಿಐ): ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಆಮಿಷವೊಡ್ಡಿ ಯುವತಿಯ ಮೇಲೆ ಅತ್ಯಾಚಾರ ಎಸಗಿದ್ದ ಆರೋಪದಲ್ಲಿ ಅಮಾನತುಗೊಂಡಿದ್ದ ಅಂಡಮಾನ್ ಮತ್ತು ನಿಕೋಬಾರ್‌ನ ಕಾರ್ಮಿಕ ಆಯುಕ್ತ ಆರ್.ಎಲ್.ರಿಷಿ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.



ಪ್ರಸಿದ್ಧ ನಟಿ ಮತ್ತು ಟಿವಿ ಶೋ ನಿರೂಪಕಿಗೆ ಗೌರವ ನಮನ!

ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕಟ್ಟಡ ಉದ್ಘಾಟನೆ

ಅಲ್ಪಸಂಖ್ಯಾತರು ಶಿಕ್ಷಣದಿಂದ ಸಬಲರಾಗಬೇಕು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಶೇಷಾದ್ರಿಪುರದಲ್ಲಿ ನೂತನವಾಗಿ ನಿರ್ಮಿಸಿರುವ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕಟ್ಟಡವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಉದ್ಘಾಟಿಸಿದರು. ಸಂಸದ ಪಿ.ಸಿ. ಮೋಹನ್, ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಶಾಫಿ ಸಅದಿ, ರಾಜ್ಯ ಹಜ್ ಸಮಿತಿ ಅಧ್ಯಕ್ಷ ರವೂಫುದ್ದೀನ್ ಕಚೇರಿವಾಲೆ ಇದ್ದರು

ಬೆಂಗಳೂರು: ಅಲ್ಪಸಂಖ್ಯಾತರು ತಮ್ಮ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಶಿಕ್ಷಣದ ಮೂಲಕವೇ ಸಬಲರಾಗಿ ಬೆಳೆಯಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಶೇಷಾದ್ರಿಪುರದ ಸುಬೇದಾರ ಛತ್ರಂ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ನೂತನ ಕಟ್ಟಡವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, 'ಕೆಲವರು ಅಲ್ಪಸಂಖ್ಯಾತರನ್ನು ದೀರ್ಘ ಕಾಲದಿಂದಲೂ ಕತ್ತಲಲ್ಲಿ ಇರಿಸಿದ್ದಾರೆ. ಅವರು ಹೆಗಲ ಮೇಲೆ ಕೈಹಾಕಿ ಮಾತನಾಡಿದಷ್ಟಕ್ಕೇ ತೃಪ್ತರಾಗಬೇಡಿ. ಮಕ್ಕಳ ಭವಿಷ್ಯದ ಬಗ್ಗೆ ಯೋಚಿಸಿ, ಮುಂದಿನ ಹೆಜ್ಜೆ ಇಡಿ' ಎಂದರು.

'ಅಲ್ಪಸಂಖ್ಯಾತ ಸಮುದಾಯದ ಮಕ್ಕಳು ಶಾಲೆಗೆ ಹೋಗಿ ಶಿಕ್ಷಣ ಪಡೆಯಬೇಕಾದ ವಯಸ್ಸಿನಲ್ಲಿ ಸ್ಪ್ಯಾನರ್ ಹಿಡಿದು ಗ್ಯಾರೇಜ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗೋಧಿ, ಜೋಳ, ರಾಗಿ ಮೂಟೆ ಹೊರುವ ಹಮಾಲಿಗಳಾಗಿ ದುಡಿಯುತ್ತಿದ್ದಾರೆ. ಇತರರಂತೆ ವಿದ್ಯಾವಂತರಾಗಿ ಸ್ವಾಭಿಮಾನದಿಂದ ಬದುಕಬೇಕು. ಸಮಾಜದ ಮುಖ್ಯವಾಹಿನಿಯ ಜತೆ ಸಾಗಬೇಕು' ಎಂದು ಹೇಳಿದರು.

ಇತ್ತೀಚಿನ ವರ್ಷಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ ಹೆಣ್ಣು ಮಕ್ಕಳು ಶಿಕ್ಷಣ ಪಡೆಯಲು ಹೆಚ್ಚು ಆಸಕ್ತಿ ತೋರುತ್ತಿರುವುದು ಸಂತೋಷದ ಬೆಳವಣಿಗೆ. ಅವರಲ್ಲಿನ ಹೆಣ್ಣು ಮಕ್ಕಳು ಬುದ್ಧಿವಂತರಿದ್ದಾರೆ. ಅವಕಾಶ ದೊರಕಿದರೆ ಇತರರಂತೆ ಅವರೂ ಸಾಧಿಸಿ ತೋರಿಸುತ್ತಾರೆ ಎಂದರು.

ಅಲ್ಪಸಂಖ್ಯಾತರ ಮಕ್ಕಳಿಗೆ ಅಬ್ದುಲ್ ಕಲಾಂ ಶಾಲೆಗಳ ಮೂಲಕ ಸಿಬಿಎಸ್‌ಇ ಪಠ್ಯಕ್ರಮದಡಿ ಶಿಕ್ಷಣ ನೀಡುತ್ತಿರುವ ಏಕೈಕ ರಾಜ್ಯ ಕರ್ನಾಟಕ. ಅಲ್ಪಸಂಖ್ಯಾತರ ಚಾಂಪಿಯನ್ನರು ಎಂದು ಹೇಳಿಕೊಳ್ಳುವವರೇ ಸರ್ಕಾರದ ನೇತೃತ್ವ ವಹಿಸಿದ್ದಾಗ ಈ ಸಮುದಾಯದ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಪರಿಹರಿಸಲಿಲ್ಲ. ತಮ್ಮ ಸರ್ಕಾರ 624 ಶಿಕ್ಷಕರನ್ನು ನೇಮಿಸಿದೆ. ಮಕ್ಕಳ ವಿದೇಶಿ ವ್ಯಾಸಂಗ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿಗೆ ನೆರವು ನೀಡುವ ಕಾರ್ಯಕ್ರಮಗಳನ್ನು ಪುನರ್ ಆರಂಭಿಸಿದೆ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ₹ 1,460 ಕೋಟಿ ಮೊತ್ತದ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ ಎಂದು ಹೇಳಿದರು.

ಸಂಸದ ಪಿ.ಸಿ. ಮೋಹನ್, ಶಾಸಕರಾದ ಅರವಿಂದ ಬೆಲ್ಲದ, ರಾಜು ಗೌಡ, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್, ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ, ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಶರವಣ, ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಶಾಫಿ ಸಅದಿ, ರಾಜ್ಯ ಹಜ್ ಸಮಿತಿ ಅಧ್ಯಕ್ಷ ರವೂಫುದ್ದೀನ್ ಕಚೇರಿವಾಲೆ, ವಕ್ಫ್ ಇಲಾಖೆ ಕಾರ್ಯದರ್ಶಿ ಪಿ. ಮಣಿವಣ್ಣನ್, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ನಝೀರ್ ಉಪಸ್ಥಿತರಿದ್ದರು.

'ಅಲ್ಪಸಂಖ್ಯಾತರ ವಿರೋಧಿಯಲ್ಲ'

'ನಮ್ಮ ಸರ್ಕಾರದ ಬಗ್ಗೆ ಬಹಳ ಟೀಕೆ ಮಾಡುತ್ತಾರೆ? ಆದರೆ, ನಮ್ಮ ಹಣಕಾಸು ಇಲಾಖೆ ಕಾರ್ಯದರ್ಶಿ ಹೆಸರು ಜಾಫರ್. ಕೋವಿಡ್ ಅವಧಿಯಲ್ಲಿ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಯಲ್ಲಿದ್ದವರು ಜಾವೇದ್ ಅಖ್ತರ್. ಈಗ ಬೆಂಗಳೂರು ನಗರ ಸಂಚಾರ ನಿರ್ವಹಣೆಗೆ ವಿಶೇಷ ಆಯುಕ್ತರನ್ನಾಗಿ ನೇಮಿಸಿರುವುದು ಸಲೀಂ ಅವರನ್ನು. ನಾವು ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಿದ್ದೇವಾ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

Azadi Ka Amrit Mahotsav

Government of Madhya Pradesh

INVEST MADHYA PRADESH
GLOBAL INVESTORS SUMMIT
11th & 12th JANUARY 2023, INDORE
www.invest.mp.gov.in

MADHYA PRADESH
THE FUTURE READY STATE

Inviting you for an interactive session with Shri Shivraj Singh Chouhan, Chief Minister, Madhya Pradesh, on investment opportunities offered by the state



Narendra Modi
Prime Minister

Date : Thursday, 24th November 2022

Time : 1100 hrs – 1300 hrs

Venue : AURA Hall at Hotel Taj Yeshwantpur, Bengaluru



Shivraj Singh Chouhan
Chief Minister

Register Now
https://forms.gle/6EhzU9gKrQpeF8rg9
Entry by prior registration only.

ORGANISED BY
MPIDC MP INDUSTRIAL DEVELOPMENT CORPORATION LTD.

NATIONAL PARTNER
CII Confederation of Indian Industry

For further information and registration for Global Investors Summit, please write to us at gis.registration@investmp.in or visit us at www.investmp.in

D-11151/22

Released by the Department of Public Relations, M.P.

ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಪ್ರತಿಭಟನೆ

ಹೆಬ್ಬಾಳ ರಸ್ತೆ ವಿಸ್ತರಣೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಹೆಬ್ಬಾಳ ರಸ್ತೆ ವಿಸ್ತರಣೆಗೆ ಆಗ್ರಹಿಸಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಎಸ್ಟೀಮ್ ಮಾಲ್ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು

ಯಲಹಂಕ: ಹೆಬ್ಬಾಳ ರಸ್ತೆ ವಿಸ್ತರಣೆಗೆ ಒತ್ತಾಯಿಸಿ ಬ್ಯಾಟರಾಯನಪುರ, ಹೆಬ್ಬಾಳ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಎಸ್ಟೀಮ್ ಮಾಲ್ ಸಮೀಪ ಸೋಮವಾರ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಕಾರ್ಯಕರ್ತರು ಮತ್ತು ಹಲವು ಬಡಾವಣೆಗಳ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪದಾಧಿಕಾರಿಗಳು ಫಲಕಗಳನ್ನು ಹಿಡಿದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ಕೂಡಲೇ ರಸ್ತೆ ವಿಸ್ತರಣೆ ಕಾಮಗಾರಿ ಆರಂಭಿಸಬೇಕು ಎಂದು ಆಗ್ರಹಿಸಿದರು.

ಶಾಸಕ ಕೃಷ್ಣಬೈರೇಗೌಡ ಮಾತನಾಡಿ, 'ಹೆಬ್ಬಾಳ- ಕೆ.ಆರ್.ಪುರ ಮೇಲ್ಸೇತುವೆ, ಸಿಲ್ಕ್ ಬೋರ್ಡ್, ಗೊರಗುಂಟೆಪಾಳ್ಯ ಜಂಕ್ಷನ್ ಸೇರಿ ಹಲವು ಪ್ರಮುಖ ಸ್ಥಳಗಳಲ್ಲಿ ಸಂಚಾರ ಒತ್ತಡದ ಸಮಸ್ಯೆಯಿಂದ ಜನರು ಹೈರಾಣಾಗಿದ್ದಾರೆ. ಇದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿಗೆ ಅಪಖ್ಯಾತಿ ಬಂದಿದೆ. ಇಲ್ಲಿಗೆ ಬರುವಂತಹ ಕಂಪನಿಗಳು ಹೈದರಾಬಾದ್, ಮದ್ರಾಸ್ ನಗರಗಳಿಗೆ ಹೋಗುತ್ತಿವೆ' ಎಂದರು.

ರಸ್ತೆಗಳಲ್ಲಿ ಗುಂಡಿಗಳು ಬಿದ್ದು, ನೂರಾರು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಎಂದು ದೂರಿದರು.

ಈ ಎಲ್ಲಾ ಸಮಸ್ಯೆಗಳಿಂದ ಬೆಂಗಳೂರಿನ ಮರ್ಯಾದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹರಾಜಾಗುತ್ತಿದ್ದರೂ ಸಹ, ಇಲ್ಲಿನ ಸರ್ಕಾರ ನಿದ್ರಾವಸ್ಥೆಯಲ್ಲಿದೆ. ಕಮಿಷನ್ ರೂಪದಲ್ಲಿ ಶೇ 40ರಷ್ಟು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ದೂರಿದರು.

ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆರಳಬೇಕಾದರೆ ಅರ್ಧಗಂಟೆ ಕಾಲ ಸಂಚಾರದ ಒತ್ತಡದಲ್ಲಿ ಸಿಲುಕಬೇಕು. ಇದರಿಂದ ಕಚೇರಿ, ಶಾಲಾ-ಕಾಲೇಜು, ತುರ್ತು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ತೆರಳಬೇಕಾದ ಆಂಬುಲೆನ್ಸ್, ಕಾರ್ಖಾನೆಗಳಿಗೆ ತೆರಳುವ ಉದ್ಯೋಗಿಗಳು ಸಾಕಷ್ಟು ಸಮಸ್ಯೆ ಎದುರಿಸಬೇಕಾಗಿದೆ ಎಂದು ಹೇಳಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮಾತನಾಡಿ, 'ಮೇಲ್ಸೇತುವೆ ಯಲ್ಲಿ ಸಂಚಾರ ಒತ್ತಡದ ಸಮಸ್ಯೆಯಿಂದ ಈ ಭಾಗದಲ್ಲಿ ನಿತ್ಯ ಸಂಚರಿಸುವ ಲಕ್ಷಾಂತರ ಜನರು ಹಲವಾರು ವರ್ಷಗಳಿಂದ ತೊಂದರೆ ಅನುಭವಿಸುತ್ತಿದ್ದಾರೆ.

ಈ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತುಮಕೂರು ಮೇಲ್ಸೇತುವೆ ಸೇರಿ 15ಕ್ಕೂ ಹೆಚ್ಚು ಮೇಲ್ಸೇತುವೆಗಳನ್ನು ನಿರ್ಮಿಸಲಾಗಿದೆ. ಇಲ್ಲಿ ಉಕ್ಕಿನ ಸೇತುವೆ ನಿರ್ಮಿಸಲು ಮುಂದಾದಾಗ, ಬಿಜೆಪಿಯವರು ನ್ಯಾಯಾಲಯಕ್ಕೆ ಹೋಗಿ ಕಾಮಗಾರಿ ನಿಲ್ಲಿಸಿದ್ದರು. ಈಗ ಜನರು ಸಚಿವರಿಗೆ ಶಾಪ ಹಾಕುತ್ತಿದ್ದಾರೆ. ಕೂಡಲೇ ವಿಸ್ತರಣೆ ಕಾಮಗಾರಿ ಆರಂಭಿಸದಿದ್ದರೆ ಮುಂದಿನ ದಿನಗಳಲ್ಲಿ ರಸ್ತೆಗಿಳಿದು ಹೋರಾಟ ಮಾಡಲಾಗುವುದು' ಎಂದು ಹೇಳಿದರು.

ಇಲ್ಲಿನ ಸಂಚಾರದ ದಟ್ಟಣೆಯಿಂದ ಹೆಬ್ಬಾಳ ಮತ್ತು ಬ್ಯಾಟರಾಯನಪುರ ಕ್ಷೇತ್ರಗಳಿಗೆ ಹೆಚ್ಚಿನ ಸಮಸ್ಯೆಯಾಗುತ್ತಿದೆ. ಸುಮಾರು 7 ವರ್ಷಗಳ ಹಿಂದೆಯೆ ರಸ್ತೆ ವಿಸ್ತರಣೆ ಕಾಮಗಾರಿ ಆರಂಭಿಸಲಾಗಿತ್ತು. ಆದರೆ ಎರಡೂ ಕಡೆ ಕಾಂಗ್ರೆಸ್ ಶಾಸಕರಿರುವುದರಿಂದ ಸರ್ಕಾರ ಕಾಮಗಾರಿ ಸ್ಥಗಿತಗೊಳಿಸಿ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಶಾಸಕ ಬೈರತಿ ಸುರೇಶ್ ದೂರಿದರು.

ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ಬಿಬಿಎಂಪಿ ಮಾಜಿ ಉಪ ಮೇಯರ್ ಎಂ.ಆನಂದ್, ಮಾಜಿ ಸದಸ್ಯರಾದ ಪಿ.ವಿ.ಮಂಜುನಾಥಬಾಬು, ಎಂ. ಆನಂದಕುಮಾರ್, ಅಬ್ದುಲ್ ವಾಜಿದ್, ಮುಖಂಡರಾದ ಎಂ.ಹನುಮಂತೇಗೌಡ, ಎಂ.ಜಯಗೋಪಾಲಗೌಡ, ಎನ್.ಎನ್.ಶ್ರೀನಿವಾಸಯ್ಯ ಹಾಜರಿದ್ದರು.

ಮುಖ್ಯಾಂಶಗಳು

- ಫಲಕಗಳನ್ನು ಹಿಡಿದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ
- 'ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿಗೆ ಅಪಖ್ಯಾತಿ'
- ರಸ್ತೆಗಳ ಗುಂಡಿಗಳಲ್ಲಿ ಬಿದ್ದು ನೂರಾರು ಜನ ಸಾವು: ಕೃಷ್ಣಬೈರೇಗೌಡ ಆರೋಪ

ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು: ರಾಮಲಿಂಗಾರೆಡ್ಡಿ

'ರಸ್ತೆ ಪಕ್ಕದಲ್ಲಿ ಕೂತಿದ್ದೇವೆ. ಶೀಘ್ರದಲ್ಲೇ ರಸ್ತೆ ವಿಸ್ತರಣೆ ಕಾಮಗಾರಿ ಆರಂಭಿಸದಿದ್ದರೆ ರಸ್ತೆಯಲ್ಲಿ ಕೂರುತ್ತೇವೆ. ಬಿಜೆಪಿ ಎಂದರೆ ಬುರುಡೆ ಜನತಾ ಪಕ್ಷ ಎಂದು ಈ ಹಿಂದೆಯೇ ಹೇಳಿದ್ದೇನೆ. ಇವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಸುಳ್ಳು ಹೇಳುವ ಸ್ಪರ್ಧೆ ಏರ್ಪಡಿಸಿದರೆ ಪ್ರಧಾನಿ ನರೇಂದ್ರ ಮೋದಿ ಪ್ರಥಮ, ಅಮಿತ್ ಶಾ ದ್ವಿತೀಯ ಬರುತ್ತಾರೆ. ಈಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೂರನೆಯವರಾಗಿ ಸೇರಿಕೊಳ್ಳುತ್ತಿದ್ದಾರೆ' ಎಂದು ರಾಮಲಿಂಗಾರೆಡ್ಡಿ ವ್ಯಂಗ್ಯವಾಡಿದರು.

ಲಾಲ್‌ಬಾಗ್ ಸಮಸ್ಯೆಗಳಿಗೆ ಜನದನಿ

'ಜನಸ್ಪಂದನ' ನಡೆಸಿ, ಲಾಲ್‌ಬಾಗ್‌ನಲ್ಲಿನ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದೆಂಬ 'ಪ್ರಜಾವಾಣಿ'ಯ ವಿನಂತಿಗೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಅಂತಹ ಜನದನಿಗೆ ಪತ್ರಿಕೆಯು ಈ ಮೂಲಕ ವೇದಿಕೆ ಒದಗಿಸಿದೆ.

ಮಾದರಿ ಉದ್ಯಾನ ಮಾಡಲು ಪಣ ತೊಡಿ

ನಗರದ ಪ್ರತಿಷ್ಠಿತ ಉದ್ಯಾನವಾಗಿದೆ ಲಾಲ್‌ಬಾಗ್. ಇಲ್ಲಿ ಸಾವಿರಾರು ಅಪರೂಪದ ಮರ–ಗಿಡಗಳಿದ್ದು, ವರ್ಷಕ್ಕೆ ಎರಡು ಸಲ ಹೂ ರಾಶಿಯಿಂದ ತುಂಬಿಕೊಳ್ಳುವ ಗಾಜಿನಮನೆ ನೋಡಗರ ಕಣ್ಮನ ಸೆಳೆಯುತ್ತದೆ. ಬ್ಯಾಂಡ್ ಸ್ಟ್ಯಾಂಡ್, ಕೆರೆ, ಕೆರೆಯ ಏರಿ, ಲಕ್ಷಾಂತರ ವಾಯುವಿಹಾರಿಗಳು, ಪ್ರವಾಸಿಗರ ಸ್ವರ್ಗ ಇದು. ಎಚ್.ನರಸಿಂಹಯ್ಯ ಬದುಕಿದಷ್ಟು ದಿನ ಬೆಳಿಗ್ಗೆ ಇಲ್ಲಿಯೇ ನಡಿಗೆ, ಯೋಗ ಮಾಡುತ್ತಿದ್ದರು. ಹಿಂದೆಲ್ಲ ಇಲ್ಲಿ ಚಲನಚಿತ್ರದ ಚಿತ್ರೀಕರಣಕ್ಕೆ ಅವಕಾಶವಿದ್ದಾಗ ಡಾ.ರಾಜ್‌ಕುಮಾರ್, ಉದಯ್‌ಕುಮಾರ್ ಅವರಂತಹ ನಟರನ್ನು ಜನ ಕಣ್ತುಂಬಿಕೊಂಡಿದ್ದರು. ಈ ಉದ್ಯಾನವನ್ನು ಇನ್ನಷ್ಟು ಅಭಿವೃದ್ಧಿಗೊಳಿಸಿ, ರಾಜ್ಯಕ್ಕೆ ಮಾದರಿಯ ಉದ್ಯಾನವನ್ನಾಗಿ ಮಾಡಲು ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು.

ನೊಣವಿನಕೆರೆ ರಾಮಕೃಷ್ಣಯ್ಯ, ಲೇಖಕರು, ಗಿರಿನಗರ

ಪ್ರೇಮಿಗಳ ಅಕ್ರಮ ಚಟುವಟಿಕೆಗೆ ಬ್ರೇಕ್ ಯಾವಾಗ?

ಲಾಲ್‌ಬಾಗ್ ಸಿಲಿಕಾನ್ ಸಿಟಿಯ ಜನರ ನೆಚ್ಚಿನ ತಾಣವಾಗಿದೆ. ರಜಾ ದಿನಗಳಲ್ಲಿ ಈ ಉದ್ಯಾನಕ್ಕೆ ಸಾವಿರಾರು ಜನರು ಭೇಟಿ ನೀಡುತ್ತಾರೆ. ಆದರೆ, ಎಲ್ಲೆಂದರಲ್ಲಿ ಪ್ರೇಮಿಗಳು ಪರಸ್ಪರ ಚುಂಬಿಸುವುದು ಮತ್ತು ರತಿಕ್ರೀಡೆಗಳಲ್ಲಿ ಮೈಮರೆಯುವುದರಿಂದ ಕುಟುಂಬ ಸಮೇತ ಬರುವವರಿಗೆ ಮುಜುಗರವನ್ನುಂಟು ಮಾಡುತ್ತಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ತೋಟಗಾರಿಕೆ ಇಲಾಖೆಯ ಸಚಿವರಾದ ಮುನಿರತ್ನ ಲಾಲ್‌ಬಾಗ್ ಅಭಿವೃದ್ಧಿಗೆ ಗಮನ ಹರಿಸಬೇಕು.

ಬಸವರಾಜ್ ಎಚ್. ಅಪ್ಪಣ್ಣವರ್, ಹೆಬ್ಬಾಳ

ಪಾರ್ಕಿಂಗ್ ಶುಲ್ಕ ವಿನಾಯ್ತಿ ನೀಡಿ

ಲಾಲ್‌ಬಾಗ್‌ನಲ್ಲಿ ಸಸಿ ಖರೀದಿಸುವ ಗ್ರಾಹಕರಿಗೆ ಪ್ರವೇಶ ಮತ್ತು ಪಾರ್ಕಿಂಗ್ ಶುಲ್ಕದಿಂದ ವಿನಾಯಿತಿ ನೀಡಬೇಕು. ಸಸ್ಯಕಾಶಿಯಲ್ಲಿರುವ ವಿಶೇಷ ಸಸ್ಯಸಂಕುಲ ಮತ್ತು ಶತಮಾನ ಕಂಡ ಹಳೆಯ ಮರಗಳ ಬಗ್ಗೆ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಪರಿಚಯಿಸುವ ಕೆಲಸವಾಗಬೇಕು. ಯುವ ಜನರಲ್ಲಿ ಪರಿಸರದ ಬಗ್ಗೆ ಕಾಳಜಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

ಎಲ್.ಸುಮಂತ್, ಮಂಗನಹಳ್ಳಿ

ಪಾದಚಾರಿ ಮಾರ್ಗ ದುರಸ್ತಿಗೊಳಿಸಿ

ಲಾಲ್‌ಬಾಗ್‌ನಲ್ಲಿ ಕಳೆದ 30 ವರ್ಷಗಳಿಂದ ವಾಯುವಿಹಾರ ಮಾಡುತ್ತಿದ್ದೇನೆ. ಬೆಟ್ಟದ ಸುತ್ತಲೂ ಇರುವ ಪಾದಚಾರಿ ಮಾರ್ಗ ದುರಸ್ತಿಯಾಗಿಲ್ಲ. ಇದರ ಇಕ್ಕೆಲಗಳಲ್ಲಿ ಆಲಂಕಾರಿಕ ಪುಷ್ಪಗಳ ಗಿಡಗಳನ್ನು ಬೆಳೆಸಿದರೆ ಈ ರಸ್ತೆಯ ಸೌಂದರ್ಯ ದುಪ್ಪಟ್ಟಾಗುತ್ತದೆ. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಜಲಪಾತದ ಸೊಬಗನ್ನು ಕಣ್ತುಂಬಿಕೊಳ್ಳುವಂತೆ ಕ್ರಮ ಕೈಗೊಳ್ಳಿ. ಬೆಟ್ಟದ ಮೇಲ್ಭಾಗದ ಮೇಲೆ ಐಸ್ ಕ್ಯಾಂಡಿಗಳು, ಜೋಳದ ದಿಂಡುಗಳನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡಬೇಕು.

ಗಾಯತ್ರಿ ದೇವಿ, ಜಯನಗರ

ನಾಯಿಗಳ ಕಾಟಕ್ಕೆ ಕಡಿವಾಣ ಅಗತ್ಯ

ಲಾಲ್‌ಬಾಗ್‌ನಲ್ಲಿ 50 ವರ್ಷಗಳಿಂದ ವಾಯುವಿಹಾರ ಮಾಡುತ್ತಿದ್ದೇನೆ. ಇಲ್ಲಿ ನಾಯಿಗಳ ಕಾಟ ಅಧಿಕವಾಗಿದ್ದು, ಒಮ್ಮೆ ನಾನೂ ಇವುಗಳ ಕಡಿತಕ್ಕೊಳಗಾಗಿ ₹3 ಸಾವಿರ ನೀಡಿ, ಇಂಜೆಕ್ಷನ್ ಹಾಕಿಸಿಕೊಂಡಿದ್ದೇನೆ. ಸಸ್ಯಕಾಶಿಯ ಆಕರ್ಷಕ ತಾಣಗಳಾದ ಚಾಮರಾಜ ಒಡೆಯರ್ ಅವರ ಅಶ್ವಾರೂಢ ಪ್ರತಿಮೆ, ಡಾ.ಎಂ.ಎಚ್. ಮರೀಗೌಡ ಪ್ರತಿಮೆ ಮತ್ತು ಗಾಜಿನ ಮನೆಯು ನಿರ್ವಹಣೆಯಿಲ್ಲದೇ ಸೊರಗುತ್ತಿವೆ. ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯಕ್ಕೆ ಪರದಾಡುವ ಪರಿಸ್ಥಿತಿ ಇದೆ. ಇದಲ್ಲದೆ ಪ್ರೇಮಿಗಳು ಕೆಟ್ಟ ಭಂಗಿಯಲ್ಲಿ ಕೂರುವುದು ಹಿರಿಯರಿಗೆ ಮುಜುಗರ ಉಂಟುಮಾಡುತ್ತಿದೆ.

ಲಕ್ಷ್ಮೀಪತಿ ಮಾವಳ್ಳಿ, ದೊಡ್ಡಮಾವಳ್ಳಿ

ಪ್ರಜಾವಾಣಿ@75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು 'ಪ್ರಜಾವಾಣಿ'ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ಶಿಕ್ಷಕಿಯಾಗುವ ಕನಸು ಕಿತ್ತುಕೊಂಡ ಮದುವೆ!

ಒಂದನೇ ಪುಟದಿಂದ

'ಅಧಿಸೂಚನೆ ಹೊರಡಿಸಿದ ಸಮಯದಲ್ಲೇ ನನ್ನ ಮದುವೆಯಾಗಿತ್ತು. ಎಲ್ಲ ದಾಖಲೆಗಳಲ್ಲಿ ತಂದೆಯ ಹೆಸರು ಇದ್ದ ಕಾರಣ, ಅವರ ಆದಾಯ ಪ್ರಮಾಣಪತ್ರವನ್ನೇ ಸಲ್ಲಿಸಿದ್ದೆ. ದಾಖಲೆಗಳ ಪರಿಶೀಲನೆ ಸಮಯದಲ್ಲೂ ಈ ಕುರಿತು ಯಾವುದೇ ತಕರಾರು ಹೇಳಲಿಲ್ಲ. ಈಗ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರು ಕೈಬಿಟ್ಟಿದ್ದಾರೆ. ನನಗಿಂತ ಕಡಿಮೆ ಅಂಕ ಇರುವವರ ಹೆಸರು ಪಟ್ಟಿಯಲ್ಲಿ ಇದೆ. ಇಂತಹ ಅನ್ಯಾಯ ಒಪ್ಪಲು ಸಾಧ್ಯವಿಲ್ಲ. ಹೀಗಾಗಿ, ಆಕ್ಷೇಪಣೆ ಸಲ್ಲಿಸಿರುವೆ' ಎಂದು ಅಭ್ಯರ್ಥಿ ಚೈತ್ರಾ ಹೇಳಿದರು.

ಮಹಿಳೆ ಇತರೆ ಯಾವುದೇ ಜಾತಿಯ ಪುರುಷನನ್ನು ಮದುವೆಯಾದರೂ, ಜಾತಿ ತಂದೆಯದೆ ಆಗಿರುತ್ತದೆ. ಹಾಗಾಗಿ, ತಂದೆಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಬೇಕಾಗುತ್ತದೆ ಎಂದು ಉದ್ಯೋಗ, ಚುನಾವಣೆ ಉಮೇದುವಾರಿಕೆಗೆ ಸಂಬಂಧಿಸಿದ ಹಲವು ಪ್ರಕರಣಗಳಲ್ಲಿ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳು ತೀರ್ಪು ನೀಡಿವೆ.

ಹಿಂದೆ ನಡೆದ ಶಿಕ್ಷಕರ ನೇಮಕಾತಿಯಲ್ಲೂ ಈ ಸಮಸ್ಯೆ ಇರಲಿಲ್ಲ ಎನ್ನುವುದು ಅವಕಾಶ ವಂಚಿತರಾದ ಅಭ್ಯರ್ಥಿಗಳ ದೂರು.

ಅವಿವಾಹಿತೆ ಎಂದು ನಮೂದಿಸಿದವರಿಗೆ ಅವಕಾಶ: ಅನೇಕ ಮಹಿಳೆಯರು ಮದುವೆಯಾಗಿದ್ದರೂ, ಅರ್ಜಿ ಸಲ್ಲಿಸುವಾಗ ಅವಿವಾಹಿತರು ಎಂದು ನಮೂದಿಸಿದ್ದಾರೆ. ಅಂತಹ ಹಲವರು ತಾತ್ಕಾಲಿಕ ಪಟ್ಟಿಯಲ್ಲಿ ಅವಕಾಶ ಪಡೆದಿದ್ದಾರೆ.

ನೀರಿನ ಸಂಪರ್ಕ: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನೀರಿನ ಸಂಪರ್ಕ ಪಡೆಯಲು ಇಚ್ಛಿಸಿದಲ್ಲಿ ಗ್ರಾಹಕರು 'ಜಲಧಾರೆ ತಂತ್ರಾಂಶ'ದ ಮೂಲಕ ದಾಖಲೆಗಳ ಜೊತೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ದಾಖಲೆಗಳ ತಪಾಸಣೆ ಹಾಗೂ ಸ್ಥಳ ಪರಿಶೀಲನೆ ನಂತರ ಗ್ರಾಹಕರು ಆನ್‌ಲೈನ್ ಮೂಲಕ ಶುಲ್ಕವನ್ನು ಪಾವತಿಸಬೇಕು. ಆನ್‌ಲೈನ್ ಪೇಮೆಂಟ್ ಸೇವೆಗಳಾದ ನೆಟ್ ಬ್ಯಾಂಕಿಂಗ್, ಕ್ರೆಡಿಟ್, ಡೆಬಿಟ್ ಕಾರ್ಡ್, ಯುಪಿಐ ಹಾಗೂ ಯಾವುದೇ ಬ್ಯಾಂಕ್‌ನಲ್ಲಿ ಆರ್‌ಟಿಜಿಎಸ್ ಮೂಲಕ ಶುಲ್ಕ ಪಾವತಿಸಬಹುದಾಗಿದೆ.

ಮಂಡಳಿ ಸಿಬ್ಬಂದಿಗೆ, ಪ್ಲಂಬರ್‌ಗಳಿಗೆ ಹಣ ಪಾವತಿಸದೇ ಆನ್‌ಲೈನ್ ಅಥವಾ ಬ್ಯಾಂಕ್‌ನಲ್ಲೇ ಶುಲ್ಕ ಪಾವತಿಸಬೇಕು. ದೂರವಾಣಿ: 080 22945109 ಹಾಗೂ ಸಹಾಯವಾಣಿ 1916 ಮತ್ತು ವಾಟ್ಸ್‌ಆ್ಯಪ್ 87622 28888 ಸಂಪರ್ಕಿಸಬಹುದು ಎಂದು ಪ್ರಕಟಣೆ ಕೋರಿದೆ.

ವಿದ್ಯಾರ್ಥಿನಿಯರ 1,200 ಅರೆನಗ್ನ ವಿಡಿಯೊ ಚಿತ್ರೀಕರಿಸಿದ್ದವ ಸೆರೆ

ಒಂದನೇ ಪುಟದಿಂದ

'ನಂತರ, ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ಆರೋಪಿ ಶುಭಂ ಎಂಬುದು ಗೊತ್ತಾಗಿತ್ತು' ಎಂದು ಹೇಳಿವೆ.

ಸ್ನೇಹಿತೆಯರ ವಿಡಿಯೊ ಚಿತ್ರೀಕರಣ: 'ಸಹಪಾಠಿಯಾಗಿದ್ದ ಐವರು ಸ್ನೇಹಿತೆಯರ ಜೊತೆ ಆರೋಪಿ ಹೆಚ್ಚು ಕಾಲ ಕಳೆಯುತ್ತಿದ್ದ. ಸ್ನೇಹಿತೆಯರ ಗಮನಕ್ಕೆ ಬಾರದಂತೆ ಅವರ ಅರೆನಗ್ನ ಫೋಟೊ ಹಾಗೂ ವಿಡಿಯೊಗಳನ್ನು ಚಿತ್ರೀಕರಿಸಿಕೊಳ್ಳುತ್ತಿದ್ದ. ಅವುಗಳನ್ನೇ ಸ್ನೇಹಿತರಿಗೆ ಕಳುಹಿಸುತ್ತಿದ್ದ. ಕೆಲ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲೂ ಅಪ್‌ಲೋಡ್ ಮಾಡಿರುವ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕಾಲೇಜಿನ ಎಲ್ಲ ವಿದ್ಯಾರ್ಥಿನಿಯರ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಲು ಮುಂದಾಗಿದ್ದ ಆರೋಪಿ, ಶೌಚಾಲಯದಲ್ಲಿ ಕ್ಯಾಮೆರಾ ಇರಿಸಲಾರಂಭಿಸಿದ್ದ. ಮೂರು ವರ್ಷಗಳಲ್ಲಿ ಹಲವು ವಿದ್ಯಾರ್ಥಿನಿಯರ ಸುಮಾರು 1,200 ಫೋಟೊ ಹಾಗೂ ವಿಡಿಯೊಗಳನ್ನು ಚಿತ್ರೀಕರಿಸಿರುವುದಾಗಿ ಆರೋಪಿಯೇ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಹೇಳಿವೆ.

ಕ್ಷಮಾಪಣಾ ಪತ್ರ ನೀಡಿದ್ದ ಆರೋಪಿ: 'ಅರೆನಗ್ನ ವಿಡಿಯೊ ಚಿತ್ರೀಕರಣ ಮಾಡುವಾಗ ಸಿಕ್ಕಿಬಿದ್ದಿದ್ದ ಆರೋಪಿ ಶುಭಂ, ಕಾಲೇಜಿಗೆ ಕ್ಷಮಾಪಣಾ ಪತ್ರ ಬರೆದುಕೊಟ್ಟಿದ್ದ. ಇದಾದ ನಂತರವೂ ತನ್ನ ಹಳೇ ಚಾಳಿ ಮುಂದುವರಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಯ ಒಂದು ಮೊಬೈಲ್ ಜಪ್ತಿ ಮಾಡಲಾಗಿದ್ದು, ಕೆಲ ಫೋಟೊ ಹಾಗೂ ವಿಡಿಯೊಗಳು ಪತ್ತೆಯಾಗಿದೆ. ಇನ್ನೊಂದು ಮೊಬೈಲ್ ಜಪ್ತಿ ಮಾಡಬೇಕಿದ್ದು, ಅದರಲ್ಲಿ ಮತ್ತಷ್ಟು ವಿದ್ಯಾರ್ಥಿನಿಯರ ಫೋಟೊ ಹಾಗೂ ವಿಡಿಯೊ ಸಂಗ್ರಹವಿರುವ ಮಾಹಿತಿ ಇದೆ' ಎಂದು ಹೇಳಿವೆ.

ಅರ್ಜಿ ಸಲ್ಲಿಕೆ: ಕ್ಷೇತ್ರದ ಗುಟ್ಟು ಬಿಡದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಬಯಸಿ 1,450ಕ್ಕೂ ಹೆಚ್ಚು ಆಕಾಂಕ್ಷಿಗಳು ಅರ್ಜಿ ಪಡೆದುಕೊಂಡಿದ್ದು, ಈ ಪೈಕಿ 1,280ಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಪರವಾಗಿ ಅವರ ಆಪ್ತರು ಅರ್ಜಿ ಸಲ್ಲಿಸಿದರು. ಆದರೆ, ಯಾವ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ ಎಂಬ ಮಾಹಿತಿ ಅರ್ಜಿಯಲ್ಲಿ ಇಲ್ಲ.

ಶಿವಮೊಗ್ಗ ನಗರ ಕ್ಷೇತ್ರಕ್ಕೆ ಅತೀ ಹೆಚ್ಚು 20 ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದಾರೆ. ಬಳ್ಳಾರಿ, ದೇವನಹಳ್ಳಿ ಕ್ಷೇತ್ರಗಳಿಗೆ ತಲಾ 17 ಅರ್ಜಿಗಳು ಸಲ್ಲಿಕೆ ಆಗಿವೆ. ಆದರೆ, ಅರಸೀಕೆರೆ ಕ್ಷೇತ್ರಕ್ಕೆ ಕೇವಲ ಒಂದು ಅರ್ಜಿ ಮಾತ್ರ ಸಲ್ಲಿಕೆ ಆಗಿದೆ. ಅಲ್ಲಿ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗೋವರ್ಧನ್ ಮಾತ್ರ ಆಕಾಂಕ್ಷಿ. ಅರ್ಜಿ ಸಲ್ಲಿಸಿದವರಲ್ಲಿ ನಿವೃತ್ತ ನ್ಯಾಯಾಧೀಶರು, ನಿವೃತ್ತ ಪ್ರಾಂಶುಪಾಲರು, ಉಪನ್ಯಾಸಕರು, ಶಿಕ್ಷಕರು, ವಕೀಲರು, ಉದ್ದಿಮೆದಾರರು, ಕಲಾವಿದರು, ವ್ಯಾಪಾರಿಗಳು ಇದ್ದಾರೆ.

25ರಂದು ಸಭೆ: 'ಪಕ್ಷದಿಂದ ಟಿಕೆಟ್ ಬಯಸಿರುವ ಆಕಾಂಕ್ಷಿಗಳ ಸಭೆ ವರ್ತೂರಿನ ಪ್ರಸ್ಟಿ ವಿಲೇಜ್‌ನಲ್ಲಿ ಇದೇ 25ರಂದು ನಡೆಯಲಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. 'ಸಭೆಯಲ್ಲಿ ಕೆಪಿಸಿಸಿ ಕಾರ್ಯಾ ಧ್ಯಕ್ಷರು, ಎಐಸಿಸಿಯಿಂದ ನೇಮಕಗೊಂಡಿರುವ ರಾಜ್ಯ ಉಸ್ತುವಾರಿ ಕಾರ್ಯದರ್ಶಿಗಳು, ಸಂಸದರು, ಶಾಸಕರು ಭಾಗವಹಿಸಲಿದ್ದಾರೆ. ಆಕಾಂಕ್ಷಿಗಳು ತಮ್ಮ ಕ್ಷೇತ್ರ ವ್ಯಾಪ್ತಿಯ ಪ್ರತಿ ಬೂತ್‌ನ ಎಲ್ಲ ಬೂತ್‌ಮಟ್ಟದ ಏಜೆಂಟುಗಳ ಮಾಹಿತಿಯೊಂದಿಗೆ ಬರಬೇಕು' ಎಂದೂ ಅವರು ಸೂಚನೆ ನೀಡಿದ್ದಾರೆ.

10 ಜಂಕ್ಷನ್ ತ್ವರಿತ ಅಭಿವೃದ್ಧಿಗೆ ಮುಖ್ಯ ಕಾರ್ಯದರ್ಶಿ ಸೂಚನೆ

ಬೆಂಗಳೂರು: ನಗರದ 10 ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ತ್ವರಿತ ಗತಿಯಲ್ಲಿ ಅಭಿವೃದ್ಧಿ ಕಾಮಗಾರಿ ನಡೆಸುವಂತೆ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ನಿರ್ವಹಣೆಗೆ ಸಂಬಂಧಿಸಿದಂತೆ ನಡೆದ ಸಮನ್ವಯ ಸಭೆಯಲ್ಲಿ ಸೋಮವಾರ ಅವರು ಮಾತನಾಡಿದರು.

ಸಿಲ್ಕ್‌ಬೋರ್ಡ್, ಇಬ್ಬಲೂರು, ಜಯದೇವ, ಎಂ.ಎಂ.ಟೆಂಪಲ್ (ಟಿನ್ ಫ್ಯಾಕ್ಟರಿ), ಹೆಬ್ಬಾಳ, ಗೊರಗುಂಟೆಪಾಳ್ಯ, ಸಾರಕ್ಕಿ, ಕೆ.ಎಸ್.ಲೇಔಟ್, ಕಾಡುಬೀಸನಹಳ್ಳಿ ಹಾಗೂ ಬನಶಂಕರಿ ಜಂಕ್ಷನ್‌ಗಳಲ್ಲಿ ಬಾಕಿಯಿರುವ ಕ್ರಮಗಳನ್ನು ಶೀಘ್ರ ಕೈಗೊಳ್ಳಲು ಸೂಚಿಸಿದರು.

ನಗರದ ಮುಖ್ಯ ಹಾಗೂ ಉಪ ಮುಖ್ಯರಸ್ತೆ ಸೇರಿ ವಾರ್ಡ್ ರಸ್ತೆಗಳಲ್ಲಿ ಬಾಕಿಯಿರುವ ಗುಂಡಿಗಳನ್ನು ಶೀಘ್ರ ಮುಚ್ಚಬೇಕು ಎಂದರು.

ಮಳೆ ನೀರು ನಿಂತು ವಾಹನ ಸವಾರರಿಗೆ ಸಮಸ್ಯೆಯಾಗುವ ಸ್ಥಳಗಳನ್ನು ಸಂಚಾರ ಪೊಲೀಸರು ಗುರುತಿಸಿದ್ದು, ಕೆಲ ಸ್ಥಳಗಳಲ್ಲಿ ಕೆಲಸ ಮಾಡಿದ್ದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಇದನ್ನು ಬಗೆಹರಿಸಬೇಕು ಎಂದು ಹೇಳಿದರು.

ರಸ್ತೆಗಳಲ್ಲಿ ಸಮಸ್ಯೆಯಾಗಿರುವ 112 ಮ್ಯಾನ್‌ಹೋಲ್‌ಗಳಲ್ಲಿ ಜಲಮಂಡಳಿ ವತಿಯಿಂದ 53 ಸರಿಪಡಿಸಲಾಗಿದ್ದು, ಬಾಕಿ 59 ಒಳಚರಂಡಿಗಳನ್ನು ಕೂಡಲೇ ಸರಿಪಡಿಸಬೇಕು ಎಂದರು.

ನಗರದ ರಸ್ತೆ ಬದಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ನಿಂತಿರುವ ವಾರಸುದಾರರಿಲ್ಲದ ವಾಹನಗಳನ್ನು ಸಂಚಾರ ಪೊಲೀಸರು ಹಾಗೂ ಪಾಲಿಕೆ ಅಧಿಕಾರಿಗಳು ಸಮನ್ವಯ ಸಾಧಿಸಿ ತೆರವುಗೊಳಿಸಬೇಕು ಎಂದು ತಾಕೀತು ಮಾಡಿದರು.

ಒಳಾಡಳಿತ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಆಡಳಿತಾಧಿಕಾರಿ ರಾಕೇಶ್ ಸಿಂಗ್, ಡಲ್ಟ್ ಆಯುಕ್ತೆ ವಿ.ಮಂಜುಳಾ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಫರ್ವೇಜ್, ಸಂಚಾರ ಪೊಲೀಸ್ ವಿಭಾಗದ ವಿಶೇಷ ಆಯುಕ್ತ ಸಲೀಂ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಇದ್ದರು.

ಚಿತ್ರಾವಳಿ

ನಗರದ ಪ್ರಧಾನ ಅಂಚೆ ಕಚೇರಿಯಲ್ಲಿ ಇತ್ತೀಚೆಗೆ ನಡೆದ 'ಸಂವಿಧಾನ ಹಬ್ಬ' ಕಾರ್ಯಕ್ರಮದಲ್ಲಿ ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಸಂರಕ್ಷಣೆಗಾಗಿ ನೇಮಕಗೊಂಡಿರುವ ಕೆ.ಪಿ.ಅಶ್ವಿನಿ ಅವರ ಭಾವಚಿತ್ರವುಳ್ಳ ವಿಶೇಷ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿ ಸನ್ಮಾನಿಸಲಾಯಿತು. ಪ್ರಧಾನ ಅಂಚೆ ಪಾಲಕ ಎಸ್. ರಾಜೇಂದ್ರಕುಮಾರ್, ಅಂಚೆ ಅಧಿಕಾರಿ ತಾರಾ, ಸಂದೇಶ ಮಹಾದೇವಪ್ಪ ಇದ್ದರು.

ನ್ಯಾಷನಲ್ ಕೆಡೆಟ್ ಕಾರ್ಪ್ಸ್‌ನ (ಎನ್‌ಸಿಸಿ) ಅಮೃತ ಮಹೋತ್ಸವದ ಅಂಗವಾಗಿ ಬಿಎಂಎಸ್ ಮಹಿಳಾ ಕಾಲೇಜು ಮತ್ತು ಆಹ್ವಾಹನ್ ಫೌಂಡೇಷನ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸೋಮವಾರ ಸಸಿ ನೆಡಲಾಯಿತು.

CONNECT ಕ್ಲಾಸಿಫೈಡ್ಸ್

10 Days Exhibition
Grand Flea Market Presents Entry Free!
ಇಂಡಿಯನ್ ಆರ್ಟಿಸನ್ ಬಜಾರ್
INDIAN ARTISAN BAZAAR
Art, Craft & Handlooms Exhibition
Date: 18th Nov to 27th Nov 2022
Timings: 11:00 AM - 7:00 PM
Venue: Karnataka Chitrakala Parishath
Kumara Krupa Road, Bengaluru

Covid19 Safety & Precautions are in place, as per Govt standards.

The Puppet Show Live
Date: 26th Nov 2022
Timing: 5 PM - 6.30 PM

The Djembe Show Live
Date: 27th Nov 2022
Timing: 5 PM - 6.30 PM

Home Decors | Handmade Paintings | Lampshades | Ceramic Pots |Handlooms & Handicrafts | Curtains | Carpets | Mats | Bags | Khadi Kurtas | Silks Saree | Sarees | Designer Kurtis | Bandhani Bedsheets | Designer Jewelry | Handmade Jewelry | Toys | Pots & Much more...
For Details Contact : 6364685716 / 9036658774 Entry Free..!
100+ Shopping Stalls | Live Performance | Much More!

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

BUSINESS

Business Offers

Finance

WANTED BUSINESS Partner Veg Hotel 3 Lakhs Investment Monthly Income 1 Lakhs Contact: 8892501007/ 9606701007

PERSONAL

Change of Name

I, TUMMALA ANURADHA, R/a No.566, F-05 Kalash 10th cross BHCS Layout, Lakkegowdanagar, Bangalore- 560061, have changed my name to THUMMALA ANURADHA vide affidavit dated 11.11.2022 before Notary C.V. Earappa, Bangalore

JC671553X SUB/MT A Eswara Reddy 2ATC, daughter's name Records A. PARMESHWARI to AKKALAREDDY PARAMESHWARI, Notary Harisha G.

JC682272F NB/SUB Ram Raks Pal ASC Centre & College, daughter's name Records PRANSHI GANGWAR to PRIYA GANGWAR, Notary BM Chandrashekar.

NARGUND COLLEGE OF PHYSIOTHERAPY
ADMISSIONS OPEN 2022 - 2023 Intake
For Bachelors in Physiotherapy
Limited Seats Only, Hurry Up!!
Call Now: 7019425622
2nd main, Dattatreyanagar, BSK 3rd stage, Bangalore-85
080 26720604 | 9739867524

I, VIKASH KUMAR JAIN, residing at No. 214, 8th main, 80 feet road, Srinivasanagar, BSK 1st stage Bengaluru- 560050, have changed my name to VIKAS KUMAR JAIN vide affidavit dated 21.11.2022 before Notary Mamatha N.K. Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಆಫ್ರಿಕಾ ಸೇರಿ ವಿವಿಧ ದೇಶಗಳ ಜನರು ಚಿಕಿತ್ಸೆಗಾಗಿ ಭೇಟಿ • ಕೋವಿಡ್‌ನಿಂದಾಗಿ ಹಿನ್ನಡೆ ಅನುಭವಿಸಿದ್ದ ಕ್ಷೇತ್ರ

ಚಿಗಿತುಕೊಂಡ ವೈದ್ಯಕೀಯ ಪ್ರವಾಸೋದ್ಯಮ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ನಿರ್ಬಂಧಗಳಿಂದಾಗಿ ಹಿಮ್ಮುಖ ಚಲಿಸಿದ್ದ ವೈದ್ಯಕೀಯ ಪ್ರವಾಸೋದ್ಯಮ, ಈಗ ಚೇತರಿಕೆಯ ಹಾದಿಗೆ ಮರಳಿದೆ. ಅಗ್ಗದ ಮತ್ತು ಗುಣಮಟ್ಟದ ಚಿಕಿತ್ಸೆಯನ್ನು ಅರಸಿ ವಿದೇಶಿಗರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರಲಾರಂಭಿಸಿದ್ದಾರೆ.

ಐಟಿ-ಬಿಟಿ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಸಿಲಿಕಾನ್ ಸಿಟಿ ಬೆಂಗಳೂರು, ವೈದ್ಯಕೀಯ ಪ್ರವಾಸೋದ್ಯಮದಲ್ಲಿಯೂ ಮುಂಚೂಣಿಯಲ್ಲಿದೆ. ಇಲ್ಲಿನ ವೈದ್ಯಕೀಯ ವ್ಯವಸ್ಥೆ ಹಾಗೂ ನಗರದ ವಾತಾವರಣವು ವಿದೇಶಿಗರನ್ನು ಕೈಬೀಸಿ ಕರೆಯುತ್ತಿದೆ. ಇದರಿಂದಾಗಿ ಆಫ್ರಿಕಾ ಸೇರಿ ವಿವಿಧ ದೇಶಗಳ ಜನರು ಶಸ್ತ್ರಚಿಕಿತ್ಸೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ.

2020ರ ಮಾರ್ಚ್‌ನಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಅಂತರ ರಾಷ್ಟ್ರೀಯ ಪ್ರಯಾಣಕ್ಕೆ ನಿರ್ಬಂಧ ವಿಧಿಸಿದ ಪರಿಣಾಮ, ವಿದೇಶಿಗರು ಚಿಕಿತ್ಸೆಗಾಗಿ ನಗರಕ್ಕೆ ಬರಲು ತೊಡಕುಗಳು ಎದುರಾಗಿದ್ದವು. ಇದರಿಂದಾಗಿ ವೈದ್ಯಕೀಯ ಪ್ರವಾಸೋದ್ಯಮ ಸಂಪೂರ್ಣ ನೆಲಕಚ್ಚಿ, ಆಸ್ಪತ್ರೆಗಳ ವರಮಾನ ಶೇ 30ರಷ್ಟು ಕಡಿತವಾಗಿತ್ತು.

ಕೋವಿಡ್ ಪೂರ್ವದಲ್ಲಿ ಪ್ರತಿವರ್ಷ 50 ಸಾವಿರಕ್ಕೂ ಅಧಿಕ ವಿದೇಶಿಗರು ಚಿಕಿತ್ಸೆಗೆ ಇಲ್ಲಿಗೆ ಬರುತ್ತಿದ್ದರು. ಅವರಲ್ಲಿ ಹೆಚ್ಚಿನವರು ಹೃದಯ ಸಂಬಂಧಿ ಸಮಸ್ಯೆ, ಮೂಳೆ ಮುರಿತ, ಮೂತ್ರಪಿಂಡ ಸಮಸ್ಯೆಯಂತಹ ಕಾಯಿಲೆಗಳಿಗೆ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಇದರಿಂದ ಇಲ್ಲಿನ ಆಸ್ಪತ್ರೆಗಳ ವಾರ್ಷಿಕ ವರಮಾನ ಹೆಚ್ಚಳವಾಗುವುದರ ಜತೆಗೆ ವೈದ್ಯಕೀಯ ಪ್ರವಾಸೋದ್ಯಮ ಕೂಡ ಪ್ರಗತಿ ಕಂಡಿತ್ತು.

ಕೋವಿಡ್ ಮೂರನೇ ಅಲೆಯ ಬಳಿಕ ಪ್ರಕರಣಗಳ ಸಂಖ್ಯೆ ನಿಯಂತ್ರಣಕ್ಕೆ ಬಂದಿದ್ದರಿಂದ ನಿರ್ಬಂಧಗಳನ್ನು ತೆಗೆಯಲಾಗಿದೆ. ಎರಡು ವರ್ಷಗಳ ಬಳಿಕ ಆಸ್ಪತ್ರೆಗಳಲ್ಲಿಯೂ ಶಸ್ತ್ರಚಿಕಿತ್ಸೆಗಳಿಗೆ ಆದ್ಯತೆ ನೀಡಲಾಗಿದೆ. ಇದರಿಂದಾಗಿ ವಿದೇಶದಿಂದ ರೋಗಿಗಳು ಮತ್ತೆ ಬರಲಾರಂಭಿಸಿದ್ದು, ಚಿಕಿತ್ಸೆ ಪಡೆದುಕೊಳ್ಳುತ್ತಿರುವವರಲ್ಲಿ ಹೆಚ್ಚಿನವರು ಆಫ್ರಿಕಾ, ಮಧ್ಯಪೂರ್ವ ದೇಶಗಳು, ಬಾಂಗ್ಲಾದೇಶ, ಅಫ್ಗಾನಿಸ್ತಾನ, ಶ್ರೀಲಂಕಾದವರಾಗಿದ್ದಾರೆ.

400ಕ್ಕೂ ಅಧಿಕ ಆಸ್ಪತ್ರೆಗಳು: ಹೃದಯ ಚಿಕಿತ್ಸೆಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಕ್ಯಾನ್ಸರ್ ಕಾಯಿಲೆಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸೇರಿ ವಿವಿಧ ಸಮಸ್ಯೆ ಹಾಗೂ ಕಾಯಿಲೆಗಳಿಗೆ ಅನುಗುಣವಾಗಿ ಪರಿಣತ ವೈದ್ಯರನ್ನು ಒಳಗೊಂಡ ಸರ್ಕಾರಿ ಸಂಸ್ಥೆಗಳು ಇಲ್ಲಿವೆ. ಅದೇ ರೀತಿ, ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಡಿಯಲ್ಲಿ 400ಕ್ಕೂ ಅಧಿಕ ಆಸ್ಪತ್ರೆಗಳು ನಗರದಲ್ಲಿ ಸೇವೆ ನೀಡುತ್ತಿವೆ.

ಮಣಿಪಾಲ್, ಆಸ್ಟರ್, ಅಪೋಲೊ, ಫೋರ್ಟಿಸ್, ಕೊಲಂಬಿಯಾ ಏಷ್ಯಾ, ನಾರಾಯಣ ಹೆಲ್ತ್ ಸಿಟಿ, ಎಚ್‌.ಸಿ.ಜಿ, ಎಂ.ಎಸ್. ರಾಮಯ್ಯ, ಸಕ್ರಾ ವರ್ಲ್ಡ್, ನಾರಾಯಣ ಹೃದಯಾಲಯ, ನಾರಾಯಣ ನೇತ್ರಾಲಯ ಸೇರಿ ಪ್ರಮುಖ ಖಾಸಗಿ ಆಸ್ಪತ್ರೆಗಳು ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಹೊಂದಿವೆ. ಇದರಿಂದಾಗಿ ಇಲ್ಲಿನ ವೈದ್ಯಕೀಯ ಸಮೂಹವು ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿಗರಿಗೆ ಚಿಕಿತ್ಸೆ ಒದಗಿಸುತ್ತಿವೆ.

ವೈದ್ಯಕೀಯ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಕೆಲ ಏಜೆನ್ಸಿ ಹಾಗೂ ಕಂಪನಿಗಳು ಮಧ್ಯವರ್ತಿಗಳಂತೆ ಕಾರ್ಯನಿರ್ವಹಿಸುತ್ತಿವೆ. ಇವು ವಿವಿಧ ರೀತಿಯ ಪ್ಯಾಕೇಜ್‌ಗಳನ್ನೂ ನೀಡುತ್ತಿದ್ದು, ಚಿಕಿತ್ಸೆಯ ಬಳಿಕ ಪ್ರವಾಸದ ಯೋಜನೆಯನ್ನು ರೂಪಿಸಿಕೊಡುತ್ತಿವೆ. ಇಲ್ಲಿನ ಭೇಟಿಯ ಅವಧಿಯಲ್ಲಿ ವಸತಿ ಸೇರಿ ವಿವಿಧ ಸೌಲಭ್ಯ ಕಲ್ಪಿಸಲಾಗುತ್ತಿದೆ. ಆಯುರ್ವೇದ, ಸಿದ್ಧ, ಯುನಾನಿ, ಪಂಚಕರ್ಮ ಸೇರಿ ವಿವಿಧ ಸಾಂಪ್ರದಾಯಿಕ ಚಿಕಿತ್ಸೆಗಳಿಗೂ ವಿದೇಶಿಗರು ಇಲ್ಲಿಗೆ ಬರುತ್ತಿದ್ದಾರೆ.

ವೈದ್ಯಕೀಯ ಪ್ರವಾಸೋದ್ಯಮ ಬೆಳವಣಿಗೆಗೆ ಕಾರಣಗಳು

- ವಿದೇಶಗಳಿಗೆ ಹೋಲಿಸಿದಲ್ಲಿ ಅಗ್ಗದ ದರದಲ್ಲಿ ಚಿಕಿತ್ಸೆ
- ಅತ್ಯಾಧುನಿಕ ಸೌಲಭ್ಯ ಹೊಂದಿದ ಸರ್ಕಾರಿ ಸಂಸ್ಥೆಗಳು
- ಎಲ್ಲರಿಗೂ ಹೊಂದಾಣಿಕೆಯಾಗುವ ವಾತಾವರಣ
- ಇಂಗ್ಲಿಷ್ ಬಳಕೆಯಿಂದ ಸುಲಭ ಸಂವಹನ
- ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿ ಉತ್ತಮ ಸಾರಿಗೆ ಸಂಪರ್ಕ
- ವೈದ್ಯಕೀಯ ವೀಸಾ ಪಡೆಯುವುದು ಸುಲಭ

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ವೈದ್ಯರು ಶಸ್ತ್ರಚಿಕಿತ್ಸೆ ನಡೆಸುತ್ತಿರುವುದು

ಏನಿದು ವೈದ್ಯಕೀಯ ಪ್ರವಾಸೋದ್ಯಮ?

ಪ್ರವಾಸದ ಜತೆಗೆ ನಿಗದಿತ ಚಿಕಿತ್ಸೆಯನ್ನು ಪಡೆದುಕೊಳ್ಳಲು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ತೆರಳುವುದೇ ವೈದ್ಯಕೀಯ ಪ್ರವಾಸೋದ್ಯಮ. ಈ ಮೊದಲು ಶಸ್ತ್ರಚಿಕಿತ್ಸೆಗಳಿಗೆ ಅಭಿವೃದ್ಧಿ ಹೊಂದುತ್ತಿರುವ ಹಾಗೂ ಹಿಂದುಳಿದ ದೇಶದ ಜನರು ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಗುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ ದೇಶದ ಜನರೂ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಬರುತ್ತಿದ್ದಾರೆ. ಅಗ್ಗದ ದರದಲ್ಲಿ ಗುಣಮಟ್ಟದ ಚಿಕಿತ್ಸೆ, ಉತ್ತಮ ಸಾರಿಗೆ ಸಂಪರ್ಕದಂತಹ ಅಂಶಗಳೇ ಇದಕ್ಕೆ ಕಾರಣ.

ವೈದ್ಯಕೀಯ ಪ್ರವಾಸೋದ್ಯಮ ಚೇತರಿಕೆ ಕಾಣುತ್ತಿದೆ. ಹೃದಯ, ಮಕ್ಕಳ ಚಿಕಿತ್ಸೆಗೆ ಹೆಚ್ಚಾಗಿ ಬರುತ್ತಿದ್ದಾರೆ. ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ಇಲ್ಲಿ ದೊರೆಯುತ್ತದೆ.

ಡಾ.ಸಿ.ಎನ್. ಮಂಜುನಾಥ್,
ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

ನವದೆಹಲಿ, ಮುಂಬೈಗೆ ಹೋಲಿಸಿದರೆ ಇಲ್ಲಿ ಚಿಕಿತ್ಸೆ ಅಗ್ಗ. ಪರಿಣತಿ ಹೊಂದಿದ ವೈದ್ಯರ ಸಮೂಹವನ್ನು ನಗರದ ಆಸ್ಪತ್ರೆಗಳು ಹೊಂದಿವೆ. ಹಾಗಾಗಿ, ವಿದೇಶಿಗರು ಇಲ್ಲಿಗೆ ಚಿಕಿತ್ಸೆಗೆ ಬರುತ್ತಾರೆ.

ಡಾ. ಪ್ರಸನ್ನ ಎಚ್‌.ಎಂ.,
ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ ಅಧ್ಯಕ್ಷ

ಜಾಗತಿಕ ಮನ್ನಣೆ ಪಡೆದ ಸಂಸ್ಥೆಗಳು

ಇಲ್ಲಿನ ಮಣಿಪಾಲ್ ಆಸ್ಪತ್ರೆಗಳಿಗೆ ಪ್ರತಿವರ್ಷ 15 ಸಾವಿರಕ್ಕೂ ಅಧಿಕ ಹಾಗೂ ನಾರಾಯಣ ಹೆಲ್ತ್ ಸಿಟಿಗೆ 10 ಸಾವಿರಕ್ಕೂ ಅಧಿಕ ವಿದೇಶಿಗರು ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಅದೇ ರೀತಿ, ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ವಿದೇಶಿಗರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಯುರೋಪಿನ ಹಾರ್ಟ್ ಜರ್ನಲ್ ಈ ಹಿಂದೆ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 'ವಿಶ್ವದ ಶ್ರೇಷ್ಠ ಹೃದಯ ಕೇಂದ್ರ' ಎಂದು ಬಣ್ಣಿಸಿ, ಅಮೆರಿಕದ ಪ್ರಜೆಯೊಬ್ಬರು 10 ವರ್ಷಗಳ ಹಿಂದೆ ಕೇವಲ ₹ 92 ಚಿಕಿತ್ಸಾ ವೆಚ್ಚ ಪಾವತಿಸಿದ್ದನ್ನು ಉಲ್ಲೇಖಿಸಿತ್ತು. ಕೆಲ ದಿನಗಳ ಹಿಂದಷ್ಟೇ ಸಂಸ್ಥೆಯಲ್ಲಿ ಇಂಡೊನೇಷ್ಯಾದ ಮೂವರು ಮಕ್ಕಳು ಹಾಗೂ ಯುವತಿಯೊಬ್ಬರಿಗೆ ಯಶಸ್ವಿಯಾಗಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಒದಗಿಸುವ ಸಂಬಂಧ ನಗರದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಪೂರ್ವ ಆಫ್ರಿಕಾದ ಬುರುಂಡಿ ದೇಶದ ಜತೆಗೆ 2019ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಬುರುಂಡಿ ದೇಶದ ವಿದೇಶಾಂಗ ಸಚಿವಾಲಯದ ಅಧಿಕಾರಿಗಳನ್ನು ಒಳಗೊಂಡ ನಿಯೋಗ ಸಂಸ್ಥೆಗೆ ಭೇಟಿ ನೀಡಿ, ಇಲ್ಲಿನ ಚಿಕಿತ್ಸೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿತ್ತು. ಒಪ್ಪಂದದ ಪ್ರಕಾರ ವರ್ಷಕ್ಕೆ 300ರಿಂದ 500 ರೋಗಿಗಳನ್ನು ಚಿಕಿತ್ಸೆಗೆ ಕಳುಹಿಸಬೇಕಿತ್ತು. ಆದರೆ, ಕೋವಿಡ್ ಕಾರಣ ಆ ದೇಶದಿಂದ ರೋಗಿಗಳಿಗೆ ಇಲ್ಲಿ ಬರಲು ಸಾಧ್ಯವಾಗಿರಲಿಲ್ಲ. ನೇಪಾಳ ಸೇರಿ ವಿವಿಧ ದೇಶಗಳಿಂದ ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಕಿದ್ವಾಯಿಗೆ ಬರುತ್ತಿದ್ದಾರೆ.

ನಗರದ ಪ್ರಮುಖ ಸರ್ಕಾರಿ ಆರೋಗ್ಯ ಸಂಸ್ಥೆಗಳು

- ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್)
- ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
- ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
- ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ
- ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
- ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ
- ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ
- ಮಿಂಟೋ ನೇತ್ರ ಚಿಕಿತ್ಸಾ ಪ್ರಾದೇಶಿಕ ಸಂಸ್ಥೆ
- ನೆಫ್ರೊ-ಯುರಾಲಜಿ ಸಂಸ್ಥೆ

ಸಂಕ್ಷಿಪ್ತ ಸುದ್ದಿ

ವಾಹನ ಕದ್ದು ಬಿಡಿಭಾಗ ಮಾರಾಟ: ಆರೋಪಿ ಬಂಧನ

ಬೆಂಗಳೂರು: ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿ ಅಬೂಬಕರ್ ಸಿದ್ದಿಕ್ (19) ಎಂಬುವವರನ್ನು ಹೆಣ್ಣೂರು ಪೊಲೀಸರು ಬಂಧಿಸಿದ್ದಾರೆ.

'ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಜೆ.ಜೆ.ಕಾಲೊನಿ ನಿವಾಸಿ ಅಬೂಬಕರ್, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಈತನಿಂದ ₹ 6.07 ಲಕ್ಷ ಮೌಲ್ಯದ 9 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ವಾಹನಗಳ ನೋಂದಣಿ ಫಲಕ ಬದಲಿಸಿ ಮಾರುತ್ತಿದ್ದ. ಕೆಲ ವಾಹನಗಳ ಬಿಡಿಭಾಗಗಳನ್ನೂ ಮಾಡಿ ಹಣ ಸಂಪಾದಿಸುತ್ತಿದ್ದ. ಹೆಣ್ಣೂರು, ಭಾರತಿನಗರ, ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಹೆಚ್ಚು ವಾಹನಗಳನ್ನು ಕದ್ದಿದ್ದ' ಎಂದು ತಿಳಿಸಿದರು.

ಜಾಮೀನು ಅರ್ಜಿ ವಿಚಾರಣೆ

ಚಿತ್ರದುರ್ಗ: ಶಿವಮೂರ್ತಿ ಶರಣರ ವಿರುದ್ಧ ದೂರು ದಾಖಲಿಸುವಂತೆ ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಆರೋಪದಲ್ಲಿ ಬಂಧಿತರಾಗಿರುವ ಮಠದ ಮಾಜಿ ಆಡಳಿತಾಧಿಕಾರಿ ಎಸ್‌.ಕೆ. ಬಸವರಾಜನ್ ಸಲ್ಲಿಸಿದ ಜಾಮೀನು ಅರ್ಜಿಯ ವಿಚಾರಣೆ ಸೋಮವಾರ ನಡೆಯಿತು.

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಆರೋಪಿ ಪರ ವಕೀಲರು ಜಾಮೀನು ಕೋರಿ ವಾದ ಮಂಡಿಸಿದರು. ಪ್ರತಿವಾದಕ್ಕೆ ಕಾಲಾವಕಾಶ ನೀಡಿದ ನ್ಯಾಯಾಧೀಶರು ವಿಚಾರಣೆಯನ್ನು ನ.24ಕ್ಕೆ ಮುಂದೂಡಿದರು.

ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಬಸವರಾಜನ್ ಪತ್ನಿ ಸೌಭಾಗ್ಯ ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ತಕರಾರು ಸಲ್ಲಿಕೆಗೆ ಸರ್ಕಾರಿ ವಕೀಲರಿಗೆ ನ.22ಕ್ಕೆ ಕಾಲಾವಕಾಶ ನೀಡಲಾಗಿದೆ.

ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ

ಬೆಂಗಳೂರು: ಸುಮನಹಳ್ಳಿ ಬಸ್ ತಂಗುದಾಣ ಬಳಿ ಗಾಂಜಾ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಲಗ್ಗೆರೆ ಚೌಡೇಶ್ವರಿನಗರದ ವಿನೋದ್‌ಕುಮಾರ್ ಅಲಿಯಾಸ್ ಸೊಳ್ಳೆ (28) ಹಾಗೂ ಶಂಕರ್ (22) ಬಂಧಿತರು. ಇವರಿಂದ ₹ 90 ಸಾವಿರ ಮೌಲ್ಯದ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಡ್ರಗ್ಸ್ ಪೆಡ್ಲರ್ ವಿನಾಯಕ್ ಅಲಿಯಾಸ್ ಆರ್.ಬೆಟ್ಟು ಹಾಗೂ ಸೆಲ್ವಿಯಮ್ಮ ಎಂಬುವರ ಬಳಿ ಆರೋಪಿಗಳು ಗಾಂಜಾ ಖರೀದಿಸಿ ತರುತ್ತಿದ್ದರು. ಅದನ್ನೇ ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಇತರರಿಗೆ ಮಾರುತ್ತಿದ್ದರು. ತಲೆಮರೆಸಿಕೊಂಡಿರುವ ವಿನಾಯಕ್ ಹಾಗೂ ಸೆಲ್ವಿಯಮ್ಮ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಕಡಲೆಕಾಯಿ ಪರಿಷೆಯಲ್ಲಿ ಜನಸ್ತೋಮ • ರಸ್ತೆತುಂಬೆಲ್ಲಾ ಬಣ್ಣಬಣ್ಣದ ದೀಪದ ಬೆಳಕು

ಕೆಂಪಾಂಬುಧಿ ಕೆರೆಯಲ್ಲಿ ತೆಪ್ಪೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿಯ ಪಾರಂಪರಿಕ ಕಡಲೆಕಾಯಿ ಪರಿಷೆಗೆ ಈ ಬಾರಿ ಕೆಂಪಾಂಬುಧಿ ಕೆರೆಯ ತೆಪ್ಪೋತ್ಸವ ಹೆಚ್ಚಿನ ಮೆರುಗು ನೀಡಿತ್ತು. ಕಾರ್ತೀಕ ಮಾಸ ಕೊನೆಯ ಸೋಮವಾರದ ಸಂಜೆ ಕೆಂಪಾಂಬುಧಿ ಕೆರೆಯಲ್ಲೂ ಜನಸ್ತೋಮ ಕಂಡುಬಂತು.

ಕೆಂಪಾಂಬುಧಿ ಕೆರೆಯಲ್ಲಿ ವೈಭವದ ನಂದಿ ವಿಗ್ರಹವನ್ನು ಹಲವು ಬಗೆಯ ಹೂವು ಮತ್ತು ಬಣ್ಣಬಣ್ಣದ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ತೆಪ್ಪ ಸಂಚರಿಸಿತು. ತೆಪ್ಪೋತ್ಸವ ಸಂಚರಿಸುವ ಸಂದರ್ಭದಲ್ಲಿ ಪೂಜಾ ವಿಧಾನಗಳನ್ನು ಅರ್ಚಕರು ನೆರವೇರಿಸಿದರು. ಶಾಸಕ ರವಿಸುಬ್ರಮಣ್ಯ ಸೇರಿ ಬಿಬಿಎಂಪಿ ಅಧಿಕಾರಿಗಳು ಈ ತೆಪ್ಪದಲ್ಲಿದ್ದರು.

ಕೆಂಪಾಂಬುಧಿ ಕೆರೆಯಲ್ಲಿ 2008ರ ನಂತರ ಈ ಬಾರಿ ತೆಪ್ಪೋತ್ಸವ ನಡೆಯಿತು. ಈ ಹಿಂದೆ ಕೆರೆಯಲ್ಲಿ ಕಲ್ಮಶ ಹೆಚ್ಚಾದ್ದರಿಂದ ತೆಪ್ಪೋತ್ಸವ ನಿಲ್ಲಿಸಲಾಗಿತ್ತು. ಕೆರೆ ಒಂದಷ್ಟು ಸ್ವಚ್ಛಗೊಂಡ ಹಿನ್ನೆಲೆಯಲ್ಲಿ ನಂದಿ ವಿರಾಜಮಾನವಾಗಿದ್ದ ತೆಪ್ಪೋತ್ಸವ ನಡೆಯಿತು.

ಪರಿಷೆಯಲ್ಲಿ ಜನಸ್ತೋಮ: ಕಡಲೆಕಾಯಿ ಪರಿಷೆ ಸೋಮವಾರ ಅತಿ ಹೆಚ್ಚು ಕಳೆಗಟ್ಟಿತ್ತು. ಮುಂಜಾನೆಯಿಂದಲೇ ದೊಡ್ಡ ಬಸವಣ್ಣ ಹಾಗೂ ದೊಡ್ಡ ಗಣಪತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಕಡಲೆಕಾಯಿಯಿಂದ ಅಭಿಷೇಕ ಮಾಡಲಾಯಿತು. ವಿವಿಧ ಹೂವುಗಳಿಂದ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಅತಿ ಹೆಚ್ಚಿನ ಚಳಿ ಕಂಡ ಸೋಮವಾರದ ಬೆಳಿಗ್ಗೆಯಿಂದಲೂ ಬಸವನಗುಡಿಯ ದೇವಸ್ಥಾನಗಳಲ್ಲಿ ಭಕ್ತರು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು. ಬಸವಣ್ಣನಿಗೆ ಕಡಲೆಕಾಯಿ ಭಕ್ತಿ ಸಮರ್ಪಿಸಿದರು. ಬಸವಣ್ಣನಿಗೆ ವಾರ್ಷಿಕವಾಗಿ ಕಡಲೆಕಾಯಿ ನೈವೇದ್ಯ ಮಾಡುವ ಪರಂಪರೆಯನ್ನು ನೆರವೇರಿಸಲಾಯಿತು.

ಬೆಳಿಗ್ಗೆಯಿಂದಲೂ ಬಸವನಗುಡಿ ಮುಖ್ಯರಸ್ತೆ ಜನಜಾತ್ರೆಯಂತಿತ್ತು. ಭಕ್ತರು ಸಾಲುಗಟ್ಟಿ ಪೂಜೆ ಸಲ್ಲಿಸಲು ನಿಂತಿದ್ದರು. ರಸ್ತೆಯ ಮಧ್ಯಭಾಗದಲ್ಲಿ ಭಕ್ತರು ಸಾಗಲೆಂದೇ ವಿಶೇಷ ವ್ಯವಸ್ಥೆ ಮಾಡಲಾಗಿತ್ತು.

ಕಡಲೆಕಾಯಿ ವ್ಯಾಪಾರಕ್ಕೂ ಮುಂಜಾನೆಯೇ ಚಾಲನೆ ದೊರೆತಿತ್ತು. ನಂತರ ಎಲ್ಲ ಬಗೆಯ ಮಳಿಗೆಗಳು ಆರಂಭಗೊಂಡು ವಹಿವಾಟು ಹೆಚ್ಚಾಯಿತು. ಮಧ್ಯಾಹ್ನ ಸರಿದಂತೆ ಜನರ ಆಗಮನವೂ ಹೆಚ್ಚಾಯಿತು. ಹಲವು ಬಗೆಯ ತಿನಿಸುಗಳೊಂದಿಗೆ ಕಡಲೆಕಾಯಿಯನ್ನೂ ಸವಿಯುತ್ತಿದ್ದ ಜನರು, ಮನೆಗೆ ಹಲವು ರೀತಿಯ ಸಾಮಗ್ರಿಗಳನ್ನೂ ಖರೀದಿಸಿದರು.

ಸಂಜೆ ವಿಶೇಷ ಪೂಜೆಯೊಂದಿಗೆ ಮಂಗಳವಾದ್ಯ ಮೊಳಗಿದಾಗ ಹೊರಭಾಗದಲ್ಲಿ ಜನರ ಜೈಕಾರವಿತ್ತು. ಬಸವನಗುಡಿ ಮುಖ್ಯರಸ್ತೆಯಲ್ಲಿ ಬಣ್ಣಬಣ್ಣದ ದೀಪದ ಬೆಳಕಿನಲ್ಲಿ ಹಲವು ರೀತಿಯ ಸಾಮಗ್ರಿಗಳು ಆಕರ್ಷಿಸಿದವು. ಮಕ್ಕಳ ಆಟಿಕೆಗಳು ಬಣ್ಣದ ಬೆಳಕು ಚೆಲ್ಲುತ್ತಾ ಆಗಸದತ್ತ ಚಿಮ್ಮುತ್ತಿದ್ದುದು ನೋಡುಗರ ಮನಸೆಳೆಯುತ್ತಿತ್ತು.

ಕಡಲೆಕಾಯಿ ಪರಿಷೆ ಅಂಗವಾಗಿ ಕೆಂಪಾಂಬುಧಿ ಕೆರೆಯಲ್ಲಿ ನಂದಿ ವಿಗ್ರಹದ ತೆಪ್ಪೋತ್ಸವ ಸೋಮವಾರ ನಡೆಯಿತು (ಎಡಚಿತ್ರ) ಕಡಲೆಕಾಯಿ ಪರಿಷೆಯಲ್ಲಿ ವಿದ್ಯಾರ್ಥಿಗಳ ಸಂಭ್ರಮ – ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

'ಚಿಲುಮೆ: ಅಪಾರ ಆಸ್ತಿ ಗಳಿಕೆ'

ದಾಬಸ್‌ಪೇಟೆ: 'ರವಿಕುಮಾರ್ 'ಚಿಲುಮೆ' ಸಂಸ್ಥೆಯ ಮೂಲಕವೇ ಅಪಾರ ಆಸ್ತಿ ಮಾಡಿದ್ದಾರೆ. ಸಚಿವರೊಬ್ಬರ ಸಹಾಯಕ ಎಂದು ಹೇಳಿಕೊಂಡು ಅವರು ಓಡಾಡುತ್ತಿದ್ದರು' ಎಂದು ಅವರ ಬಗ್ಗೆ ಗೊತ್ತಿರುವವರು ಹೇಳುತ್ತಾರೆ.

ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿ ಕಲ್ಲನಾಯಕನಹಳ್ಳಿ ಗ್ರಾಮದ ರವಿಕುಮಾರ್ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಅಗಳಕುಪ್ಪೆ, ದಾಬಸ್‌ಪೇಟೆಯಲ್ಲಿ ಮುಗಿಸಿ ತುಮಕೂರಿನ ಸಿದ್ದಗಂಗಾ ಮಠದಲ್ಲಿ ಬಿ.ಇಡಿ ಶಿಕ್ಷಣ ಮುಗಿಸಿ ಶಿಕ್ಷಕನಾಗಿ ವೃತ್ತಿ ಆರಂಭಿಸಿದ್ದರು. ಆ ವೇಳೆಗೆ ಉತ್ತರ ಕರ್ನಾಟಕ ಮೂಲದ ವ್ಯಕ್ತಿಯೊಬ್ಬರ ಪರಿಚಯದಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿ ಮಾಹಿತಿ ಸಂಗ್ರಹಿಸುವ ಕೆಲಸ ಮಾಡಲು ಶುರುಮಾಡಿದ್ದರು. 2008-09ರಲ್ಲಿ 'ಚಿಲುಮೆ' ಸಂಸ್ಥೆ ಆರಂಭಿಸಿ ತನ್ನದೇ ಉದ್ದಿಮೆಗೆ ಕೈಹಾಕಿದ್ದರು ಎಂದು ಮೂಲಗಳು ತಿಳಿಸಿವೆ.

ಆರಂಭದಲ್ಲಿ ಚಿಲುಮೆ ಸಂಸ್ಥೆಯ ಕಾರ್ಯ ಚಟುವಟಿಕೆಯನ್ನು ತನ್ನ ಸ್ವಗ್ರಾಮ ಕಲ್ಲನಾಯಕನಹಳ್ಳಿಯಲ್ಲಿ ಪ್ರಾರಂಭಿಸಿ, ನಂತರದ ದಿನಗಳಲ್ಲಿ ದಾಬಸ್‌ಪೇಟೆ, ನೆಲಮಂಗಲ, ಬೆಂಗಳೂರಿನ ಮಲ್ಲೇಶ್ವರಕ್ಕೆ ಕಚೇರಿಯನ್ನು ಸ್ಥಳಾಂತರಿಸಲಾಗಿತ್ತು.

'ಕಲ್ಲನಾಯನಹಳ್ಳಿಯಲ್ಲಿ ಮನೆ, ಅಲ್ಲಿಯೇ ತೋಟದ ಮನೆ, ಚಂದನ ಹೊಸಹಳ್ಳಿಯಲ್ಲಿ ಎರಡು ನಿವೇಶನ, ಯಂಟಗಾನಹಳ್ಳಿಯಲ್ಲಿ 5 ಎಕರೆ ಜಮೀನು, ಅಗಳಕುಪ್ಪೆ ಗ್ರಾಮದಲ್ಲಿ 10 ಗುಂಟೆ ಭೂಮಿ, ಮಲ್ಲೇಶ್ವರ 18ನೇ ಕ್ರಾಸ್‌ನಲ್ಲಿ ಮೂರು ಅಂತಸ್ತಿನ ಬಿಲ್ಡಿಂಗ್, ನೆಲಮಂಗಲದಲ್ಲಿ ಎರಡು ಅಂತಸ್ತಿನ ಬಿಲ್ಡಿಂಗ್ ಸೇರಿ ಹೆಂಡತಿ, ತಾಯಿ ಹಾಗೂ ಸಂಬಂಧಿಕರ ಹೆಸರಿನಲ್ಲೂ ಆಸ್ತಿ ಗಳಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ವಧು ಸಿಗುತ್ತಿಲ್ಲ: ನಿಯಮ ತನ್ನಿ'

ಪ್ರಜಾವಾಣಿ ವಾರ್ತೆ

ಕೋಲಾರ: 'ಜಿಲ್ಲೆಯಲ್ಲಿ ಯುವ ರೈತರಿಗೆ ಮದುವೆ ವಯಸ್ಸು ಮೀರುತ್ತಿದ್ದರೂ ವಧುಗಳು ಸಿಗುತ್ತಿಲ್ಲ. ಇದು ಈ ಭಾಗದ ದೊಡ್ಡ ಸಾಮಾಜಿಕ ಸಮಸ್ಯೆ ಆಗಿದೆ. ಬೇರೆ ಜಿಲ್ಲೆಯ ಅನುಕೂಲಸ್ಥರಿಗೆ ಜಿಲ್ಲೆಯ ಯುವತಿಯರನ್ನು ಮದುವೆ ಮಾಡಿಕೊಡುವುದನ್ನು ನಿಷೇಧಿಸಬೇಕು' ಎಂದು ಅವಿವಾಹಿತ ರೈತರೊಬ್ಬರು ಎಚ್‌.ಡಿ. ಕುಮಾರಸ್ವಾಮಿ ಮುಂದೆ ಬೇಡಿಕೆ ಇಟ್ಟರು.

ಸೋಮವಾರ ಪಂಚರತ್ನ ರಥಯಾತ್ರೆ ವೇಳೆ ಕುಮಾರಸ್ವಾಮಿ ಅವರ ಕೈಗೆ ಪತ್ರ ನೀಡಿದ ತಾಲ್ಲೂಕಿನ ಮುದುವತ್ತಿ ಗ್ರಾಮದ ಯುವಕ ಧನಂಜಯ, 'ಜಿಲ್ಲೆಯ ಯುವಕರಿಗೆ ವಧುಗಳ ಕೊರತೆ ನೀಗಿಸಲು ಜೆಡಿಎಸ್ ಅಧಿಕಾರಕ್ಕೆ ಬಂದ ಮೇಲೆ ನಿಯಮ ಜಾರಿ ಮಾಡಬೇಕು' ಎಂದು ಕೋರಿದರು.

ಜೀವ ಬೆದರಿಕೆ ಒಡ್ಡಿದ್ದಾರೆ: ದೂರು

ಹಣ ಹಂಚಿಕೆ: ಹಾಸ್ಯ ಕಲಾವಿದರ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹಿನಿಯೊಂದರ ರಿಯಾಲಿಟಿ ಶೋನಲ್ಲಿ ಬಂದಿದ್ದ ಹಣ ಹಂಚಿಕೊಳ್ಳುವ ವಿಚಾರವಾಗಿ ಹಾಸ್ಯ ಕಲಾವಿದರ ನಡುವೆ ಗಲಾಟೆ ಆಗಿದ್ದು, ಈ ಪ್ರಕರಣ ಠಾಣೆ ಮೆಟ್ಟಿಲೇರಿದೆ.

'ಕಲಾವಿದೆ ನಯನಾ ನನಗೆ ಜೀವ ಬೆದರಿಕೆಯೊಡ್ಡಿದ್ದಾರೆ. ಅವರನ್ನು ಠಾಣೆಗೆ ಕರೆಯಿಸಿ ಎಚ್ಚರಿಕೆ ನೀಡಿ' ಎಂದು ಕಲಾವಿದ ಸೋಮಶೇಖರ್, ರಾಜರಾಜೇಶ್ವರಿ ನಗರ ಠಾಣೆಗೆ ದೂರು ನೀಡಿದ್ದಾರೆ. ಇದನ್ನು ಸ್ವೀಕರಿಸಿರುವ ಪೊಲೀಸರು, ವಿಚಾರಣೆಗೆ ಬರುವಂತೆ ನಯನಾ ಅವರಿಗೆ ನೋಟಿಸ್ ನೀಡಿದ್ದಾರೆ.

'ರಿಯಾಲಿಟಿ ಶೋನಲ್ಲಿ ಕಲಾವಿದರ ತಂಡಕ್ಕೆ ಬಹುಮಾನ ರೂಪದಲ್ಲಿ ಹಣ ಬಂದಿತ್ತು. ಅದರ ಹಂಚಿಕೆ ವಿಚಾರದಲ್ಲಿ ಗೊಂದಲ ಸೃಷ್ಟಿಯಾಗಿದೆ. ಸೋಮಶೇಖರ್ ತಮ್ಮ ಪರವಾಗಿ ಹೇಳಿಕೆ ನೀಡಿದ್ದಾರೆ. ಆರೋಪಿ ಎನ್ನಲಾದ ನಯನಾ ಅವರ ಹೇಳಿಕೆ ಪಡೆಯಬೇಕಿದೆ. ಬಳಿಕವೇ, ನಿಜಾಂಶ ತಿಳಿಯಲಿದೆ' ಎಂದು ಪೊಲೀಸರು ಹೇಳಿದರು.

ಆಡಿಯೊ ಹರಿದಾಟ: ಸೋಮಶೇಖರ್ ಅವರಿಗೆ ನಯನಾ ಕಳುಹಿಸಿದ್ದ ಆಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ರಿಯಾಲಿಟಿ ಶೋನಿಂದ ಬಂದಿದ್ದ ಹಣವನ್ನು ನಿನ್ನ (ಸೋಮಶೇಖರ್) ಖಾತೆಗೆ ಜಮೆ ಮಾಡಿಸಲಾಗಿತ್ತು. ಆದರೆ, ನೀನು ಸಹ ಕಲಾವಿದರಿಗೆ ಯಾವುದೇ ಹಣ ನೀಡಿಲ್ಲ. ಇದರಿಂದ ಎಲ್ಲ ಕಲಾವಿದರಿಗೆ ತೊಂದರೆ ಆಗಿದೆ. ಎಲ್ಲರಿಗೂ ಹಣ ಕೊಡು. ಇಲ್ಲದಿದ್ದರೆ, ಪರಿಣಾಮ ಎದುರಿಸಬೇಕಾಗುತ್ತದೆ. ಠಾಣೆಗೆ ಹೋಗಿ ದೂರು ನೀಡುತ್ತೇವೆ' ಎಂಬ ಸಂಭಾಷಣೆ ಆಡಿಯೊದಲ್ಲಿದೆ. ಇದೇ ಆಡಿಯೊವನ್ನೇ ಸೋಮಶೇಖರ್, ಪೊಲೀಸರಿಗೆ ನೀಡಿದ್ದಾರೆ.

ರೈತ ಆತ್ಮಹತ್ಯೆಗೆ ಯತ್ನ– ಪರಿಸ್ಥಿತಿ ಗಂಭೀರ

ಮೈಸೂರು: ಸಿಬಿಲ್ ಸ್ಕೋರ್ ಕಡಿಮೆಯಿದೆ ಎಂದು ನೆಪವೊಡ್ಡಿ ಕಬ್ಬು ಬೆಳೆ ಸಾಲ ನಿರಾಕರಿಸಿದ ಬ್ಯಾಂಕ್‌ನ ಅಧಿಕಾರಿಗಳ ವರ್ತನೆಯಿಂದ ರೋಸಿಹೋದ ರೈತ, ಬ್ಯಾಂಕ್‌ನಲ್ಲೇ ವಿಷಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅಸ್ವಸ್ಥಗೊಂಡ ರೈತನನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪರಿಸ್ಥಿತಿ ಗಂಭೀರವಾಗಿದೆ.

ಎಚ್‌.ಡಿ.ಕೋಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದ ನಿಂಗೇಗೌಡ (70) ಆತ್ಮಹತ್ಯೆಗೆ ಯತ್ನಿಸಿದ ರೈತ. 'ಸಿಬಿಲ್ ಸ್ಕೋರ್ ಕಡಿಮೆಯಿದೆ ಎಂದು ಸಾಲ ಕೊಡಲು ಬರುವುದಿಲ್ಲ ಎಂದು ಅರ್ಜಿ ತಿರಸ್ಕರಿಸಿದ್ದರು. ಇದರಿಂದ ತಂದೆ ಆತ್ಮಹತ್ಯೆಗೆ ಯತ್ನಿಸಿದ್ದಾರೆ' ಎಂದು ಅವರ ಮಗ ಮಹಾದೇವು ತಿಳಿಸಿದರು.

ಇಂಡಿಯನ್ ನ್ಯಾಷನಲ್ ಹೈಸ್ಕೂಲ್ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಸಚಿವ ಕೆ. ಗೋಪಾಲಯ್ಯ ಚಾಲನೆ ನೀಡಿದರು. ವೈದ್ಯೆ ಪದ್ಮಿನಿ ಪ್ರಸಾದ್, ಬಿಬಿಎಂಪಿ ಮಾಜಿ ಸದಸ್ಯ ಕೆ.ವಿ. ರಾಜೇಂದ್ರ ಕುಮಾರ್, ಬಿಜೆಪಿ ಮುಖಂಡರಾದ ಹನುಮಂತ ರಾಯಪ್ಪ, ಸುರಭಿ ನಾಗರಾಜ್, ರಘು ನಾಗರಾಜ ಇದ್ದರು.

ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ: ಗೋಪಾಲಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಲೇ ಔಟ್ ವಿಧಾನಸಭಾ ಕ್ಷೇತ್ರದಲ್ಲಿ ಜನರ ಆರೋಗ್ಯ ಮತ್ತು ಮಕ್ಕಳ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಲಾಗಿದ್ದು, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ನಿರಂತರ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

ಮಹಾಲಕ್ಷ್ಮಿ ಎಜುಕೇಶನ್ ಟ್ರಸ್ಟ್ ಮತ್ತು ನಂದಿನಿ ಕನ್ನಡ ಯುವಕರ ಸಂಘದಿಂದ ಕನ್ನಡ ರಾಜ್ಯೋತ್ಸವ ಹಾಗೂ ನಂದಿನಿ ಕನ್ನಡ ಯುವಕರ ಸಂಘದ ಬೆಳ್ಳಿ ಹಬ್ಬದ ಅಂಗವಾಗಿ ಇಂಡಿಯನ್ ನ್ಯಾಷನಲ್ ಹೈಸ್ಕೂಲ್ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ಷೇತ್ರದ ಜನರ ಉತ್ತಮ ಆರೋಗ್ಯಕ್ಕಾಗಿ ಪ್ರತಿ ತಿಂಗಳು ಎರಡು ಬಾರಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಿ ಔಷಧಿಗಳನ್ನು ನೀಡಲಾಗುತ್ತಿದೆ. ಹೆಚ್ಚಿನ ಚಿಕಿತ್ಸೆ ಅಗತ್ಯ ಇರುವವರಿಗೆ ಇತರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಅನುಕೂಲ ಮಾಡಿಕೊಡಲಾಗುತ್ತಿದೆ. ಶಂಕರ್ ನಾಗ್ ಬಸ್ ನಿಲ್ದಾಣದ ಬಳಿ ನೂತನವಾಗಿ ನಿರ್ಮಾಣಗೊಂಡಿರುವ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಹೆರಿಗೆ ಆಸ್ಪತ್ರೆ ಶೀಘ್ರವೇ ಲೋಕಾರ್ಪಣೆಗೊಳ್ಳಲಿದೆ ಎಂದರು.

ಕ್ಷೇತ್ರ ವ್ಯಾಪ್ತಿಯ ಮಧ್ಯಮ ಮತ್ತು ಬಡ ಕುಟುಂಬದ ಪೋಷಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕ್ಷೇತ್ರದ ಮೂರು ಕಡೆ ದೆಹಲಿ ಮಾದರಿಯ ಸರ್ಕಾರಿ ಪಬ್ಲಿಕ್ ಶಾಲೆ ನಿರ್ಮಾಣ ಮಾಡಲಾಗಿದೆ. ಬರುವ ಶೈಕ್ಷಣಿಕ ವರ್ಷದಿಂದ ಈ ಶಾಲೆಗಳಲ್ಲಿ 6 ಸಾವಿರಕ್ಕೂ ಅಧಿಕ ಮಕ್ಕಳಿಗೆ ಪ್ರವೇಶ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಕರ್ನಾಟಕ– ಮಹಾರಾಷ್ಟ್ರ ಗಡಿ: ನಾಳೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ

ಬೆಳಗಾವಿ: ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದ ಕುರಿತು ಮಹಾರಾಷ್ಟ್ರ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಿದ ಅರ್ಜಿಯು ನ.23ಕ್ಕೆ ವಿಚಾರಣೆಗೆ ಬರಲಿದೆ. ಇದು ಅಂತಿಮ ವಿಚಾರಣೆಯಾದ್ದರಿಂದ, ಅಲ್ಲಿನ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರ ನೇತೃತ್ವದಲ್ಲಿ ಸೋಮವಾರ ಉನ್ನತ ಮಟ್ಟದ ಸಮಿತಿ ಸಭೆ ಕೂಡ ನಡೆಯಿತು.

1956ರ ರಾಜ್ಯ ಪುನರ್ ವಿಂಗಡಣಾ ಕಾಯ್ದೆಯನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಸುಪ್ರೀಂಕೋರ್ಟ್ ಮೊರೆ ಹೋಗಿದೆ. 2004ರಲ್ಲಿ ಸಲ್ಲಿಕೆಯಾದ ಅರ್ಜಿಯ ವಿಚಾರಣೆ 18 ವರ್ಷಗಳ ಬಳಿಕ ನಡೆಯಲಿದೆ.

ಮಹಾರಾಷ್ಟ್ರದ ಉನ್ನತ ಶಿಕ್ಷಣ ಸಚಿವ ಚಂದ್ರಕಾಂತ ಪಾಟೀಲ ಹಾಗೂ ಅಬಕಾರಿ ಸಚಿವ ಶಂಭುರಾಜೇ ದೇಸಾಯಿ ಈ ಇಬ್ಬರನ್ನೂ ಗಡಿ ಉಸ್ತುವಾರಿ ಸಚಿವರಾಗಿಯೂ ನಿಯೋಜಿಸಲಾಗಿದೆ. ಬೆಳಗಾವಿ, ಬೀದರ, ಭಾಲ್ಕಿ, ಕಾರವಾರ ಸೇರಿದಂತೆ 865 ಹಳ್ಳಿಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂಬುದು ಅವರ ವಾದ.

ನಗರದಲ್ಲಿ ಇಂದು

ಆರ್‌.ಪಿ. ಸಾಂಬಸದಾಶಿವ ರೆಡ್ಡಿ ಅವರ 'ಡಾ. ರಾಜ್ ಆ 108 ದಿನಗಳು' ಮತ್ತು ಡಾ.ಎಂ.ಎಸ್. ಮಣಿ ಅವರ 'ಸುಡು ಬಯಲು' ಪುಸ್ತಕಗಳ ಬಿಡುಗಡೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಚ್‌.ಎಂ. ರೇವಣ್ಣ, 'ಡಾ. ರಾಜ್ ಆ 108 ದಿನಗಳು' ಪುಸ್ತಕದ ಕುರಿತು: ಎಸ್. ನಾಗಣ್ಣ, ಸುಡು ಬಯಲು ಪುಸ್ತಕದ ಕುರಿತು: ಎಂ. ಸಿದ್ದರಾಜು, ಅತಿಥಿಗಳು: ಎಚ್‌.ಸಿ. ಮಹದೇವಪ್ಪ, ಡಿ. ಉಮಾಪತಿ, ಕಾಂತರಾಜು, ಸದಾಶಿವ ಶೆಣೈ, ಐ.ಎಚ್. ಸಂಗಮದೇವ, ಪದ್ಮಾ ನಾಗರಾಜು, ಆರ್‌.ಎಸ್. ಭರತ್‌ಬಾಬು, ಆಯೋಜನೆ: ಲಾವಣ್ಯ ಪ್ರಕಾಶನ ಮತ್ತು ಐ.ಎಚ್‌.ಎಸ್. ಪ್ರಕಾಶನ, ಸ್ಥಳ: ವಿರೋಧ ಪಕ್ಷದ ನಾಯಕರ ಗೃಹ ಕಚೇರಿ, ಬೆಳಿಗ್ಗೆ 10.30

ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ: ಉದ್ಘಾಟನೆ: ಬಿ.ಎಸ್. ಶ್ರೀಕಂಠ, ಅಧ್ಯಕ್ಷತೆ: ವೂಡೇ.ಪಿ. ಕೃಷ್ಣ, ಉಪಸ್ಥಿತಿ: ಇಂದಿರಾ ಕೃಷ್ಣಪ್ಪ, ಪ್ರಾಸ್ತಾವಿಕ: ಎಸ್. ರಾಮಲಿಂಗೇಶ್ವರ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಇಲಾಖೆ, ಕಸ್ತೂರಬಾ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 10.30

'ನೊಬೆಲ್ ಒಳನೋಟ' ಉಪನ್ಯಾಸಗಳು: ಅತಿಥಿಗಳು: ವೈಶಾಲಿ ಕೆ.ಎಸ್., ಆಯೋಜನೆ ಮತ್ತು ಸ್ಥಳ: ಮೈಸೂರು ಎಜುಕೇಷನ್ ಸೊಸೈಟಿ, ಮಲ್ಲೇಶ್ವರ, ಬೆಳಿಗ್ಗೆ 11

ಕನ್ನಡ ರಾಜ್ಯೋತ್ಸವ ಸಮಾರಂಭ: ಅತಿಥಿಗಳು: ಟಿ. ತಿಮ್ಮೇಶ್, ಅಧ್ಯಕ್ಷತೆ: ನಾಗಹನುಮಯ್ಯ, ಆಯೋಜನೆ ಮತ್ತು ಸ್ಥಳ: ಸಿ.ಎಂ.ಟಿ.ಐ ಕನ್ನಡ ರಾಜ್ಯೋತ್ಸವ ಸಮಿತಿ, ತುಮಕೂರು ರಸ್ತೆ, ಮಧ್ಯಾಹ್ನ 2

ಜಿ.ಎಸ್. ಸಿದ್ದಲಿಂಗಯ್ಯ

ಗೊ.ರು. ಚನ್ನಬಸಪ್ಪ

ವಿದ್ಯಾಶಂಕರ ಪ್ರಶಸ್ತಿ ಹಾಗೂ ಪುರಸ್ಕಾರ ಪ್ರದಾನ ಸಮಾರಂಭ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ನಲ್ಲೂರು ಪ್ರಸಾದ್ ಆರ್‌.ಕೆ., ವಿದ್ಯಾಶಂಕರ ಪ್ರಶಸ್ತಿ ಪ್ರದಾನ: ಗೊ.ರು. ಚನ್ನಬಸಪ್ಪ, ಪುರಸ್ಕೃತರು: ಎಂ.ಜಿ. ನಾಗರಾಜ್, ವಿದ್ಯಾಶಂಕರ ಪುರಸ್ಕಾರ ಪ್ರದಾನ: ಜಿ.ಎಸ್. ಸಿದ್ದಲಿಂಗಯ್ಯ, ಪುರಸ್ಕೃತರು: ಡಿ.ಕೆ. ಚಿತ್ತಯ್ಯ ಪೂಜಾರ್, ಸನ್ಮಾನ: ಬಿ.ಎಸ್. ಪರಮಶಿವಯ್ಯ, ಅಭಿನಂದನಾ ನುಡಿ: ಬಿ. ನಂಜುಂಡಸ್ವಾಮಿ, ನಾಗವೇಂದ್ರಸ್ವಾಮಿ ಚಿದರವಳ್ಳಿ, ಆಯೋಜನೆ: ಡಾ.ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

79ನೇ ವರ್ಷದ ವಿಠ್ಠಲ ಭಜನಾ ಸಪ್ತಾಹ: ಭೂ ಕೈಲಾಸ ಹರಿಕಥೆ: ಶಿವಮಲ್ಲು, ಆಯೋಜನೆ: ಜನತಾ ಜನಾರ್ದನ ವಿಠ್ಠಲ ಸೇವಾ ಮಂಡಲಿ, ರುಕ್ಮಿಣಿ ಪಾಂಡುರಂಗ ಮಂದಿರ, ವಿಠ್ಠಲನಗರ, ಚಾಮರಾಜಪೇಟೆ, ಸಂಜೆ 7.30

ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ • ಆರೋಪಿ ಮನೆಯಲ್ಲಿ ರಾಶಿ ರಾಶಿ ಬೆಂಕಿ ಪೊಟ್ಟಣ

ಅರೆಬರೆ ಜೋಡಣೆಯಿಂದ ತಪ್ಪಿದ ಅನಾಹುತ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಕುಕ್ಕರ್ ಬಾಂಬ್‌ನ ನಟ್ ಬೋಲ್ಟ್ ಹಾಗೂ ಸರ್ಕ್ಯೂಟ್‌ಗಳನ್ನು ಆರೋಪಿಯು ಸರಿಯಾಗಿ ಜೋಡಿಸಿರಲಿಲ್ಲ. ಹಾಗಾಗಿ ಸ್ಫೋಟದ ತೀವ್ರತೆ ಕಡಿಮೆ ಇತ್ತು. ಕುಕ್ಕರ್ ಬಾಂಬ್ ಅನ್ನು ಸರಿಯಾಗಿ ಜೋಡಿಸಿದ್ದರೆ ಆತನೇ ನುಚ್ಚುನೂರಾಗುತ್ತಿದ್ದ. ಇದನ್ನು ರಿಕ್ಷಾದಲ್ಲಿ ಸಾಗಿಸುತ್ತಿದ್ದಾಗ ಅದು ಅರ್ಧಂಬರ್ಧ ಸ್ಫೋಟಗೊಂಡಿದ್ದರಿಂದ ಅನೇಕರ ಪ್ರಾಣ ಹೋಗುವುದು ತಪ್ಪಿತು' ಎಂದು ಎಡಿಜಿಪಿ ಅಲೋಕ್ ಕುಮಾರ್ ಹೇಳಿದರು.

'ಮೊಹಮ್ಮದ್ ಶಾರಿಕ್ ಕುಕ್ಕರ್ ಬಾಂಬ್ ಅನ್ನು ಮೈಸೂರಿನಲ್ಲಿಯೇ ತಯಾರಿಸಿದ್ದಾನೆ. ನಗರದಲ್ಲಿ ಬಾಂಬ್ ಸ್ಫೋಟ ನಡೆಸುವ ಉದ್ದೇಶದಿಂದ ಅದನ್ನು ಬಸ್‌ನಲ್ಲೇ ಮಂಗಳೂರಿಗೆ ಸಾಗಿಸಿದ್ದಾನೆ. ಮೈಸೂರಿನ ಬಾಡಿಗೆ ಮನೆಯಲ್ಲಿ ನಟ್, ಬೋಲ್ಟ್, ಸರ್ಕ್ಯೂಟ್‌ಗಳು, ಬ್ಯಾಟರಿಗಳು, ಆಧಾರ್ ಕಾರ್ಡ್ ಸಿಕ್ಕಿವೆ. 150 ಬೆಂಕಿಪೊಟ್ಟಣಗಳು, ರಂಜಕ, ಗಂಧಕ ಹಾಗೂ ಇತರ ರಾಸಾಯನಿಕಗಳು ಸೇರಿದಂತೆ ಅನೇಕ ಪುರಾವೆಗಳು ಸಿಕ್ಕಿವೆ. ಮಲ್ಟಿ ಫಂಕ್ಷನ್ ಡಿಲೆ ಟೈಮರ್, ಗ್ರೈಂಡರ್, ಮಿಕ್ಸರ್, ಮೆಕ್ಯಾನಿಕಲ್ ಟೈಮರ್, ಆಧಾರ್ ಕಾರ್ಡ್, ಅಲ್ಯೂಮಿನಿಯಂ ಫಾಯಿಲ್, ಸಿಮ್ ಕಾರ್ಡ್‌ಗಳನ್ನೂ ಅಲ್ಲಿ ವಶಪಡಿಸಿಕೊಳ್ಳಲಾಗಿದೆ.

ಆರೋಪಿ ಬಾಂಬ್ ತಯಾರಿಸುತ್ತಿದ್ದ ವಿಷಯ ಮನೆಯ ಮಾಲೀಕ ಮೋಹನ್ ಕುಮಾರ್‌ಗೆ ಗೊತ್ತಿರಲಿಲ್ಲ. ಮನೆಯಲ್ಲಿ ಆಟಿಕೆಯ ಕೋವಿಯೂ ಪತ್ತೆಯಾಗಿದೆ. ಅದನ್ನೇಕೆ ಇಟ್ಟುಕೊಂಡಿದ್ದ ತಿಳಿದಿಲ್ಲ' ಎಂದರು.

'ಆರೋಪಿ ಶಾರಿಕ್ ಬಿ.ಕಾಂ. ಪದವೀಧರ. ಕುಕ್ಕರ್ ಬಾಂಬ್ ತಯಾರಿ ಬಗ್ಗೆ ಸಂಪೂರ್ಣ ಪರಿಣತಿ ಆತನಿಗೆ ಇದ್ದಂತೆ ತೋರುತ್ತಿಲ್ಲ. ಅವನು ಸ್ವತಃ ಮೊಬೈಲ್‌ಗಳ ಕುರಿತು ತರಬೇತಿ ನೀಡುವವ. ಹಾಗಾಗಿ ಆತ ಮೊಬೈಲ್ ನೋಡಿಯೂ ಕಲಿತಿರಬಹುದು. ಅಂದುಕೊಂಡಿದ್ದನ್ನು ಸರಿಯಾಗಿ ಅನುಷ್ಠಾನಗೊಳಿಸಲು ಆತನಿಗೆ ಸಾಧ್ಯವಾಗಿಲ್ಲ' ಎಂದು ಎಡಿಜಿಪಿ ತಿಳಿಸಿದರು.

'ಪಿಎಫ್‌ಐ ನಿಷೇಧ ಮಾಡಿದ್ದಕ್ಕೆ ಪ್ರತೀಕಾರವಾಗಿ ಭಯೋತ್ಪಾದನಾ ಕೃತ್ಯ ನಡೆಸಲಾಗುತ್ತಿದೆ ಎಂದು ಹೇಳಲು ಯಾವುದೇ ಪುರಾವೆಗಳಿಲ್ಲ. ಹೆಚ್ಚಿನ ತನಿಖೆಯ ಬಳಿಕವಷ್ಟೇ ಈ ಬಗ್ಗೆ ಮಾಹಿತಿ ನೀಡಬಹುದು. ನಗರಕ್ಕೆ ಮುಖ್ಯಮಂತ್ರಿ ಭೇಟಿಗೂ ಈ ಘಟನೆಗೂ ಸಂಬಂಧ ಇದ್ದಂತೆ ತೋರುತ್ತಿಲ್ಲ. ಆರೋಪಿ ನ.10ರಂದು ನಗರಕ್ಕೆ ಬಂದು ಹೋಗಿದ್ದ. ಆತ ಬಾಂಬ್ ಇಡಲು ಸ್ಥಳ ನೋಡಿ ಹೋಗಿರಬಹುದು' ಎಂದರು.

'ಸದ್ಯಕ್ಕೆ ಕರ್ನಾಟಕದ ಪೊಲೀಸರೇ ಈ ಪ್ರಕರಣದ ತನಿಖೆ ನಡೆಸುತ್ತಿದ್ದಾರೆ. ಕೇಂದ್ರ ಸರ್ಕಾರ ವಿವಿಧ ತನಿಖಾ ಏಜೆನ್ಸಿಗಳ ನೆರವನ್ನೂ ಪಡೆಯುತ್ತಿದ್ದೇವೆ' ಎಂದು ಅವರು ತಿಳಿಸಿದರು.

ನಾಲ್ವರ ಆಧಾರ್ ದುರ್ಬಳಕೆ

ಶಾರಿಕ್ ಕೇವಲ ಪ್ರೇಮರಾಜ ಹುಟಗಿ ಅವರ ಆಧಾರ್ ಕಾರ್ಡ್ ಮಾತ್ರವಲ್ಲ, ಇನ್ನೂ ಮೂವರ ಗುರುತುಗಳನ್ನೂ ಕದ್ದು ಬಳಕೆ ಮಾಡಿದ್ದ.

ಸುರೇಂದ್ರ ಎಂಬ ವ್ಯಕ್ತಿಯ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಸಿಮ್ ಪಡೆದಿದ್ದ. ಸಂಡೂರಿನ ಅರುಣ್ ಕುಮಾರ್ ಗಾವಳಿ ಎಂಬುವರ ಆಧಾರ್ ಕಾರ್ಡ್ ಅನ್ನು ಕೊಯಮತ್ತೂರಿನಲ್ಲಿ ನೆಲೆಸಲು ನಕಲಿ ಗುರುತನ್ನಾಗಿ ಆರೋಪಿ ದುರ್ಬಳಕೆ ಮಾಡಿಕೊಂಡಿದ್ದ. ಗದಗದ ವ್ಯಕ್ತಿಯೊಬ್ಬರ ಹೆಸರಿನ ಆಧಾರ್ ಕಾರ್ಡ್ ಕದ್ದು ನಕಲಿ ಗುರುತು ಸೃಷ್ಟಿಸಲು ಬಳಸಿಕೊಂಡಿದ್ದ ಎಂದು ಎಡಿಜಿಪಿ ಮಾಹಿತಿ ನೀಡಿದರು.

'ಆಧಾರ್ ಕಳವಾದರೆ ದೂರು ನೀಡಿ'

'ಆಧಾರ್ ಕಾರ್ಡ್ ಕಳವಾಗಿದ್ದರೆ ಅದನ್ನು ಲಘುವಾಗಿ ಪರಿಗಣಿಸಬಾರದು. ಈ ಬಗ್ಗೆ ಸ್ಥಳೀಯ ಪೊಲೀಸರಿಗೆ ತಕ್ಷಣ ದೂರು ನೀಡಬೇಕು. ಅಥವಾ ಇ–ಲಾಸ್ಟ್ ಪೋರ್ಟಲ್‌ನಲ್ಲೂ ದೂರು ನೀಡಬಹುದು. ಕುಕ್ಕರ್ ಬಾಂಬ್ ಸ್ಫೋಟಗೊಂಡ ಸ್ಥಳದಲ್ಲಿ ಪ್ರೇಮರಾಜ ಹುಟಗಿ ಅವರ ಆಧಾರ್ ಕಾರ್ಡ್ ಪತ್ತೆಯಾಗಿತ್ತು. ಒಂದು ವೇಳೆ ನೈಜ ಆರೋಪಿ ಪತ್ತೆಯಾಗದೇ ಇರುತ್ತಿದ್ದರೆ, ಪ್ರೇಮರಾಜ ಅವರನ್ನು ಬಂಧಿಸಬೇಕಾದ ಪ್ರಮೇಯ ಸೃಷ್ಟಿಯಾಗುತ್ತಿತ್ತು. ಇಂತಹ ಪರಿಸ್ಥಿತಿ ನಿರ್ಮಾಣವಾಗಲು ಆಸ್ಪದ ನೀಡಬಾರದು' ಎಂದು ಎಡಿಜಿಪಿ ತಿಳಿಸಿದರು.

ಸ್ಫೋಟಕ್ಕೂ ಮುನ್ನ ಶಿವಮೊಗ್ಗದಲ್ಲಿ ತಾಲೀಮು

ಶಿವಮೊಗ್ಗ: ಮಂಗಳೂರಿನಲ್ಲಿ ಆಟೊದಲ್ಲಿ ನಡೆದ ಬಾಂಬ್ ಸ್ಫೋಟದ ಆರೋಪಿ ಮೊಹಮ್ಮದ್ ಶಾರಿಕ್, ಈ ಮೊದಲು ಶಿವಮೊಗ್ಗ ಸಮೀಪದ ಪುರಲೆಯ ತುಂಗಾ ನದಿ ತೀರದ ನಿರ್ಜನ ಪ್ರದೇಶದಲ್ಲಿ ಪ್ರಾಯೋಗಿಕವಾಗಿ ಬಾಂಬ್ ಸ್ಫೋಟ ನಡೆಸಿದ್ದನು.

ನಿಷೇಧಿತ ಭಯೋತ್ಪಾದಕ ಸಂಘಟನೆ ಐಎಸ್ ಜೊತೆ ನಂಟು ಹೊಂದಿರುವ ಆರೋಪದ ಮೇಲೆ ಸೆಪ್ಟೆಂಬರ್ 20ರಂದು ಇಲ್ಲಿನ ಸಿದ್ದೇಶ್ವರ ನಗರ ನಿವಾಸಿ ಸೈಯದ್ ಯಾಸೀನ್ ಅಲಿಯಾಸ್ ಬೈಲು (21) ಹಾಗೂ ಮಂಗಳೂರಿನ ಮಾಝ್ ಮುನೀರ್ ಅಹಮದ್ (22) ಎಂಬುವವರನ್ನು ಇಲ್ಲಿನ ಗ್ರಾಮೀಣ ಠಾಣೆ ಪೊಲೀಸರು ಬಂಧಿಸಿದ್ದರು.

ಆರೋಪಿಗಳನ್ನು ವಿಚಾರಣೆಗೊಳಪಡಿಸಿದಾಗ ತೀರ್ಥಹಳ್ಳಿಯ ಶಾರಿಕ್ ನೇತೃತ್ವದಲ್ಲಿ ಬಾಂಬ್ ಸಿದ್ಧಪಡಿಸಿ ತುಂಗಾ ನದಿ ತೀರದಲ್ಲಿ ಸ್ಫೋಟಿಸಿದ್ದನ್ನು ಒಪ್ಪಿಕೊಂಡಿದ್ದರು. ನಂತರ ಸ್ಥಳದಲ್ಲಿ ಪೊಲೀಸರು ಸ್ಫೋಟದ ಕುರುಹುಗಳನ್ನು ಸಂಗ್ರಹಿಸಿದ್ದರು. ನಂತರ ಪ್ರಮುಖ ಆರೋಪಿ ಶಾರಿಕ್ ತಲೆಮರೆಸಿಕೊಂಡಿದ್ದನು.

ಆರೋಪಿಗಳು ಟೆಲಿಗ್ರಾಂ ಆ್ಯಪ್ ಮೂಲಕ ಐಎಸ್‌ನ ಅಧಿಕೃತ ಮಾಧ್ಯಮ ಅಲ್– ಹಯತ್‌ನ ಸದಸ್ಯರಾಗಿದ್ದರು. ಎಲೆಕ್ಟ್ರಿಕ್ ಎಂಜಿನಿಯರ್ ಆದ ಸೈಯದ್ ಯಾಸೀನ್ ಬಾಂಬ್ ತಯಾರಿಕೆಯ ಬಗ್ಗೆ ಐಎಸ್ ಮಾಧ್ಯಮದಿಂದಲೇ ಮಾಹಿತಿ ಪಡೆದಿದ್ದ. ಟೈಮರ್ ರಿಲೆ ಸರ್ಕ್ಯೂಟ್ ಆನ್‌ಲೈನ್‌ನಲ್ಲಿ ಖರೀದಿಸಿದ್ದ. 9 ವೋಲ್ಟ್‌ನ 2 ಬ್ಯಾಟರಿ, ಸ್ವಿಚ್, ವೈರ್‌ಗಳು, ಬೆಂಕಿಪೊಟ್ಟಣ ಮತ್ತಿತರ ವಸ್ತುಗಳನ್ನು ಶಿವಮೊಗ್ಗದಲ್ಲಿ ಖರೀದಿಸಿದ್ದರು ಎಂಬುದು ವಿಚಾರಣೆ ವೇಳೆ ಬಯಲಾಗಿತ್ತು.

ಬಾಂಬ್ ತಯಾರಿಗೆ ಅಗತ್ಯ ಹಣವನ್ನು ಶಾರಿಕ್ ಆನ್‌ಲೈನ್ ಮೂಲಕ ಯಾಸೀನ್‌ಗೆ ಕಳುಹಿಸಿದ್ದ. ಆರೋಪಿಗಳು ಪರಸ್ಪರ ಸಂಪರ್ಕಕ್ಕೆ ಟೆಲಿಗ್ರಾಂ, ಇನ್‌ಸ್ಟಾಗ್ರಾಂ, ವೈರ್, ಎಲಿಮೆಂಟ್, ವಿಕ್ಕರ್ ಬಳಸುತ್ತಿದ್ದರು ಎಂದು ಗೊತ್ತಾಗಿತ್ತು.

ತೀರ್ಥಹಳ್ಳಿ ಪಟ್ಟಣದಲ್ಲಿ ಕೋಹಿನೂರ್ ಹೆಸರಿನ ಬಟ್ಟೆ ಅಂಗಡಿ ಶಾರಿಕ್ ಕುಟುಂಬ ಹೊಂದಿದೆ. ತಂದೆ ಅಬ್ದುಲ್ ಮಜೀದ್ ನಿಧನದ ನಂತರ ಶಾರಿಕ್ ಅಂಗಡಿ ನೋಡಿಕೊಳ್ಳುತ್ತಿದ್ದ. ಪಟ್ಟಣದ ಯು.ಆರ್.ಅನಂತಮೂರ್ತಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ, ಜೂನಿಯರ್ ಕಾಲೇಜಿನಲ್ಲಿ ಪಿಯುಸಿ ಮುಗಿಸಿ, ಉಡುಪಿಯ ಎಂಜಿಎಂ ಕಾಲೇಜು ಸೇರಿದ್ದ. ಅಲ್ಲಿ ಪದವಿ ಅರ್ಧಕ್ಕೆ ಮೊಟಕುಗೊಳಿಸಿದ್ದ. ನಂತರ ಮಂಗಳೂರಿನಲ್ಲಿ ಫುಡ್ ಪಾರ್ಸೆಲ್ ಡೆಲಿವರಿ ಕೆಲಸ ಮಾಡುತ್ತಿದ್ದ.

ಶಿವಮೊಗ್ಗದ ಟ್ರಯಲ್ ಬ್ಲಾಸ್ಟ್ ಮತ್ತು ಮಂಗಳೂರು ಸ್ಫೋಟ ಪ್ರಕರಣಕ್ಕೂ ಸಂಬಂಧವಿದೆ. ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಈಗಲೇ ಎಲ್ಲವನ್ನೂ ಹೇಳಲು ಸಾಧ್ಯವಿಲ್ಲ.
ಆರಗ ಜ್ಞಾನೇಂದ್ರ, ಗೃಹ ಸಚಿವ

ಶಾರಿಕ್, ಮತೀನ್ ಓರಗೆಯವರು..

ನಿಷೇಧಿತ 'ಅಲ್ ಹಿಂದ್ ಐಎಸ್' ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಹುಡುಕುತ್ತಿರುವ ಅಬ್ದುಲ್ ಮತೀನ್ ಅಹಮದ್ ತಾಹಾ (26) ಹಾಗೂ ಮೊಹಮ್ಮದ್ ಶಾರಿಕ್ ಓರಗೆಯವರು.

ಅಬ್ದುಲ್ ಮತೀನ್ ತೀರ್ಥಹಳ್ಳಿಯ ಸೊಪ್ಪುಗುಡ್ಡೆ ಮೀನು ಮಾರ್ಕೆಟ್ ರಸ್ತೆ ನಿವಾಸಿ. ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಓದನ್ನು ಮತೀನ್ ಅರ್ಧಕ್ಕೆ ಬಿಟ್ಟಿದ್ದಾನೆ. ಮತೀನ್ ಪತ್ತೆಗೆ ಸುಳಿವು ನೀಡಿದವರಿಗೆ ₹ 3 ಲಕ್ಷ ಬಹುಮಾನ ನೀಡುವುದಾಗಿ ಎನ್‌ಐಎ 2020ರಲ್ಲೇ ಘೋಷಿಸಿದೆ. ಮತೀನ್ ತಂದೆ ಮನ್ಸೂರ್ ಅಹಮದ್ ನಿವೃತ್ತ ಸೈನಿಕರು.

ಸುದ್ದಿ 2 ನಿಮಿಷ

ಮೈಸೂರಿಗೆ ಎನ್‌ಐಎ ತಂಡ

ಮೈಸೂರು: ಮಂಗಳೂರಿನಲ್ಲಿ ನಡೆದ ಕುಕ್ಕರ್ ಬಾಂಬ್ ಸ್ಫೋಟಕ್ಕೆ ಸಂಬಂಧ ಮಾಹಿತಿ ಕಲೆಹಾಕಲು ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಐವರು ಅಧಿಕಾರಿಗಳ ತಂಡವು ಸೋಮವಾರ ಬೆಳಿಗ್ಗೆ ನಗರಕ್ಕೆ ಬಂದಿದೆ.

'ಆರೋಪಿ ತಂಗಿದ್ದ ಜಾಗ, ಆತನಿಗಿದ್ದ ಒಡನಾಟ, ಆತ ಓಡಾಟ ನಡೆಸಿದ ಜಾಗದ ಮಾಹಿತಿ ಪಡೆದಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ. 'ಆರೋಪಿಯು ಇಲ್ಲಿನ ಮೇಟಗಳ್ಳಿಯ ಲೋಕನಾಯಕ ನಗರದಲ್ಲಿ ನಕಲಿ ವಿಳಾಸ ನೀಡಿ, ಬಾಡಿಗೆಗೆ ಮನೆ ಪಡೆದಿದ್ದ. ಅಗ್ರಹಾರದಲ್ಲಿ 'ಮೊಬೈಲ್ ಫೋನ್ ತರಬೇತಿಗಾಗಿ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಈ ಸಂಬಂಧ, ಸ್ಥಳೀಯ ಪೊಲೀಸರ ಜೊತೆಗೂಡಿ, ಆತ ತಂಗಿದ್ದ ಮನೆಯನ್ನು ಸೋಮವಾರ ಮಹಜರ್ ನಡೆಸಲಾಯಿತು. ವಿಧಿವಿಜ್ಞಾನ ತಂಡವು ಪ್ರಮುಖ ಸಾಕ್ಷ್ಯಾಧಾರಗಳನ್ನು ಕಲೆಹಾಕಿದೆ' ಎಂದು ದೃಢಪಡಿಸಿದ್ದಾರೆ.

ಇದರ ಜೊತೆಗೆ, ನಗರದ ಹೊರವಲಯದಲ್ಲಿ ಹೊಸತಾಗಿ ಮನೆ ಬಾಡಿಗೆಗೆ ಪಡೆದಿರುವವರ ಮಾಹಿತಿಗಳನ್ನು ಕಲೆಹಾಕಲು ಪೊಲೀಸರು ಆರಂಭಿಸಿದ್ದಾರೆ. ಈಗಾಗಲೇ ಎಲ್ಲ ಠಾಣಾಧಿಕಾರಿಗಳಿಗೆ ಸೂಚನೆ ರವಾನಿಸಲಾಗಿದ್ದು, ಅಧಿಕಾರಿಗಳು ಬಾಡಿಗೆದಾರರ ದಾಖಲೆಗಳನ್ನು ಪರಿಶೀಲಿಸಿ ಮನೆ ನೀಡುವಂತೆ ಮಾಲೀಕರಿಗೂ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಕಡಿಮೆ ಅವಧಿಗೆ ಕೊಠಡಿ ಬಾಡಿಗೆಗೆ ಪಡೆದಿರುವವರ ಮೇಲೆ ಹೆಚ್ಚಿನ ನಿಗಾ ವಹಿಸಿದ್ದು, ಹೋಟೆಲ್‌ನಲ್ಲಿ ತಂಗುವವರ ಮೇಲೂ ಕಣ್ಗಾವಲಿಟ್ಟು, ಸಿಸಿಟಿವಿ ದೃಶ್ಯಾವಳಿಗಳನ್ನು ಸಂಗ್ರಹಿಸಿಡುವಂತೆ ಸೂಚಿಸಲಾಗಿದೆ. ರೈಲು, ಬಸ್ ನಿಲ್ದಾಣ, ಧಾರ್ಮಿಕ ಕೇಂದ್ರಗಳ ಸುತ್ತಲೂ ಓಡಾಡುವ ಅನುಮಾನಸ್ಪದ ವ್ಯಕ್ತಿಗಳ ಮೇಲೂ ಪೊಲೀಸರು ನಿಗಾ ವಹಿಸಿದ್ದಾರೆ.

ಡೆಸ್ಕ್ ಕೊರತೆ: ಪದವಿ ವಿದ್ಯಾರ್ಥಿಗಳಿಗೆ ಚಾಪೆಯೇ ಗತಿ!

ಕೆಜಿಎಫ್: ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಡೆಸ್ಕ್ ಇಲ್ಲದ ಕಾರಣ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ತರಗತಿಯಲ್ಲಿ ನೆಲದ ಮೇಲೆ ಚಾಪೆ ಹಾಸಿ ಕುಳಿತು ಕುಳಿತು ಪಾಠ ಕೇಳುತ್ತಿದ್ದಾರೆ.

ಕಾಲೇಜಿಗೆ ಸೋಮವಾರ ಕೆಜಿಎಫ್ ಶಾಸಕಿ ಎಂ.ರೂಪಕಲಾ ಭೇಟಿ ನೀಡಿದ ವೇಳೆ ಈ ವಿಷಯ ಬೆಳಕಿಗೆ ಬಂದಿದೆ. ಅಂತಿಮ ವರ್ಷದ ವಿದ್ಯಾರ್ಥಿಗಳು ಚಾಪೆ ಮೇಲೆ ಕುಳಿತು ಪಾಠ ಕೇಳುತ್ತಿರುವುದನ್ನು ಕಂಡ ಅವರು ಕಾಲೇಜು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

'ಬೆಳಿಗ್ಗೆ 9.30ಕ್ಕೆ ಕಾಲೇಜಿಗೆ ಬಂದರೆ ಮಧ್ಯಾಹ್ನ 1.30 ವರೆಗೂ ನಡೆಯುವ ತರಗತಿಗಳನ್ನು ನೆಲದ ಮೇಲೆ ಕುಳಿತು ಕೇಳಬೇಕು. ಜೀನ್ಸ್ ಪ್ಯಾಂಟ್ ಧರಿಸಿದ ವಿದ್ಯಾರ್ಥಿಗಳಿಗೆ ಕೆಳಗೆ ಕುಳಿತುಕೊಳ್ಳಲು ಕಷ್ಟವಾಗುತ್ತಿದೆ. ಆದ್ದರಿಂದ ಹುಡುಗರ ಹಾಜರಾತಿ ಕಡಿಮೆ ಇದೆ' ಎಂದು ವಿದ್ಯಾರ್ಥಿಗಳು ಶಾಸಕರಿಗೆ ಮಾಹಿತಿ ನೀಡಿದರು.

ಶಿಕ್ಷಕನಾಗುವ ಖುಷಿ ಕಸಿದ 'ನಕಲಿ ಆಧಾರ್'

ತುಮಕೂರು: 'ಬಾಲ್ಯದಿಂದಲೂ ಶಿಕ್ಷಕ ಆಗಬೇಕು ಎಂಬ ಆಸೆಯಿತ್ತು. ಈಗ ಅದು ನೆರವೇರುತ್ತಿದ್ದು, ಶಿಕ್ಷಕರ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ನನ್ನ ಹೆಸರಿದೆ. ಆದರೆ, ಭಯೋತ್ಪಾದನೆ ಕೃತ್ಯದಲ್ಲಿ ನನ್ನದೇ ಹೆಸರಿನ ಆಧಾರ್ ಕಾರ್ಡ್ ಪತ್ತೆಯಾಗಿರುವುದು ಭವಿಷ್ಯದ ಬಗ್ಗೆ ಚಿಂತಿಸುವಂತೆ ಮಾಡಿದೆ'.

ಮಂಗಳೂರಿನಲ್ಲಿ ಆಟೊ ರಿಕ್ಷಾದಲ್ಲಿ ಕುಕ್ಕರ್ ಸ್ಫೋಟಗೊಂಡ ಸ್ಥಳದಲ್ಲಿ ದೊರೆತ ತನ್ನ ಹೆಸರಿನಲ್ಲಿರುವ ನಕಲಿ ಆಧಾರ್ ಕಾರ್ಡ್ ಬಗ್ಗೆ ಪ್ರೇಮರಾಜ ಹುಟಗಿ ಆತಂಕದ ಮಾತುಗಳನ್ನಾಡಿದರು. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪರೀಕ್ಷೆಯಲ್ಲಿ ಹಾವೇರಿ ಜಿಲ್ಲೆಯಲ್ಲಿ(ವಿಜ್ಞಾನ ವಿಭಾಗ) ಪರೀಕ್ಷೆ ಬರೆದಿದ್ದರು. ತಾತ್ಕಾಲಿಕ ಆಯ್ಕೆಪಟ್ಟಿ ನ.18ರಂದು ಪ್ರಕಟಗೊಂಡಿದ್ದು, ಅದರಲ್ಲಿ ಪ್ರೇಮರಾಜ ಅವರ ಹೆಸರಿದೆ. ಇಷ್ಟಪಟ್ಟಿದ್ದ ಕೆಲಸ ಸಿಗುತ್ತಿದೆ ಎಂಬ ಖುಷಿಯನ್ನು ಈಗ ಮಸುಕಾಗಿಸಿದೆ.

ಮುಂದೆ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಪೊಲೀಸ್ ದಾಖಲಾತಿ ಪರಿಶೀಲನೆ ವೇಳೆ ಸಮಸ್ಯೆಯಾಗಬಹುದು ಎಂಬ ಭಯ ಕಾಡುತ್ತಿದೆ.

ಪ್ರೇಮರಾಜ 2019ರ ಜೂನ್‌ನಿಂದ ತಾಲ್ಲೂಕಿನ ಹಿರೇಹಳ್ಳಿ ಬಳಿ ರೈಲ್ವೆ ಗೇಟ್‌ಮನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ಮಧ್ಯೆ ಹಲವಾರು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿದ್ದಾರೆ. ಪರೀಕ್ಷೆ ಬರೆಯಲು ತೆರಳುವಾಗ ಎರಡು ಬಾರಿ ಆಧಾರ್ ಕಾರ್ಡ್ ಕಳೆದುಕೊಂಡಿದ್ದರು. ಮಂಗಳೂರಿನಲ್ಲಿ ಪ್ರೇಮರಾಜ ಹೆಸರಿನ ಆಧಾರ್ ಕಾರ್ಡ್ ಪತ್ತೆಯಾಗಿದೆ.

'ಆಧಾರ್ ಕಳೆದುಕೊಂಡ ಬಗ್ಗೆ ಯಾವುದೇ ದೂರು ನೀಡದೆ ಜೆರಾಕ್ಸ್ ಅಂಗಡಿಯಲ್ಲಿ ಮತ್ತೆ ಪಡೆದಿದ್ದೆ. ದಾಖಲಾತಿ ಕಳೆದ ತಕ್ಷಣ ಠಾಣೆಯಲ್ಲಿ ದೂರು ನೀಡಬೇಕು ಎಂಬುವುದು ಇದರಿಂದ ಅರಿವಾಗಿದೆ' ಎಂದು ಪ್ರೇಮರಾಜ ಅವರು ಹೇಳಿದರು.

ಪೊಲೀಸರು ಯಾವ ರೀತಿ ವರದಿ ನೀಡುತ್ತಾರೆ ಎಂಬುದನ್ನು ಆಧರಿಸಿ ನಿರ್ಧಾರ ಕೈಗೊಳ್ಳಲಾಗುತ್ತದೆ.
ಸಿ.ನಂಜಯ್ಯ, ಡಿಡಿಪಿಐ

ಈಗಲೇ ಎಲ್ಲವನ್ನೂ ಹೇಳಲಾಗದು. ತನಿಖೆ ನಂತರ ಗೊತ್ತಾಗುತ್ತದೆ.
ರಾಹುಲ್ ಕುಮಾರ್ ಶಹಪೂರವಾಡ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಚಾಲಕನ ನೆಮ್ಮದಿ ಕಸಿದ 'ಸ್ಫೋಟ'

ಪುರುಷೋತ್ತಮ ಕುಟುಂಬದಲ್ಲಿ ಆತಂಕ • ಸಾಂತ್ವನ, ಪರಿಹಾರದ ಭರವಸೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕುಕ್ಕರ್ ಬಾಂಬ್ ಸ್ಫೋಟದ ಸಂತ್ರಸ್ತ, ಆಟೊ ಚಾಲಕ ಪುರುಷೋತ್ತಮ ಪೂಜಾರಿ ಅವರಿಗೆ ಪರಿಹಾರ ದೊರಕಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು ಎಂದು ಎಡಿಜಿಪಿ ಅಲೋಕ್ ಕುಮಾರ್ ಸೋಮವಾರ ತಿಳಿಸಿದ್ದಾರೆ. ಜನಪ್ರತಿನಿಧಿಗಳು ಭೇಟಿಯಾಗಿ ಸಾಂತ್ವನವನ್ನೂ ಹೇಳಿದ್ದಾರೆ. ಆದರೂ ಪುರುಷೋತ್ತಮ ಅವರ ಮನೆಮಂದಿಯಲ್ಲಿ ಮೂಡಿರುವ ಆತಂಕ ಕಡಿಮೆಯಾಗಿಲ್ಲ.

ಶನಿವಾರ ಸಂಜೆ ನಡೆದ ಸ್ಫೋಟದಲ್ಲಿ ಪುರುಷೋತ್ತಮ ಗಾಯಗೊಂಡ ವಿಷಯ ತಿಳಿದಾಗ ಗಾಬರಿಯಾದ ಕುಟುಂಬದವರು ಘಟನೆ ಭಯೋತ್ಪಾದನಾ ಕೃತ್ಯ ಎಂದು ಭಾನುವಾರ ಸಾಬೀತಾಗುತ್ತಿದ್ದಂತೆ ಇನ್ನಷ್ಟು ಕುಗ್ಗಿಹೋದರು. ಅವರೆಲ್ಲರೂ ಆಸ್ಪತ್ರೆಗೆ ಧಾವಿಸಿರುವುದರಿಂದ ಭಾನುವಾರದಿಂದ ಮನೆಗೆ ಬೀಗ ಹಾಕಲಾಗಿದೆ. ಪತ್ನಿ ಚಿತ್ರ, ಮಕ್ಕಳು ಮೇಘಶ್ರೀ ಮತ್ತು ವಿನ್ಯಶ್ರೀ ಅವರು ಪುರುಷೋತ್ತಮ ಅವರ ಚೇತರಿಕೆಗಾಗಿ ಪ್ರಾರ್ಥಿಸುತ್ತ ಆಸ್ಪತ್ರೆಯ ಆವರಣದಲ್ಲೇ ಕಾಲ ದೂಡುತ್ತಿದ್ದಾರೆ.

ನಗರದ ಉಜ್ಜೋಡಿ–ಗೋರಿಗುಡ್ಡದಲ್ಲಿ ರಾಷ್ಟ್ರೀಯ ಹೆದ್ದಾರಿ 66ರಿಂದ 300 ಮೀಟರ್ ದೂರದಲ್ಲಿದೆ ಪುರುಷೋತ್ತಮ ಅವರ ಮನೆ. ದೊಡ್ಡ ದೊಡ್ಡ ನಿವಾಸಗಳ ನಡುವೆ ಇರುವ ಈ ಮನೆಯಲ್ಲಿ ಭಾರಿ ಸೌಲಭ್ಯಗಳೇನೂ ಇಲ್ಲ. ಪಿತ್ರಾರ್ಜಿತವಾಗಿ ಲಭಿಸಿರುವ ಸಣ್ಣ ಜಾಗದಲ್ಲಿ ಪುರುಷೋತ್ತಮ ಮತ್ತು ಸಹೋದರ, ಗ್ಯಾರೇಜ್ ನಡೆಸುತ್ತಿರುವ ನಾಗೇಶ್ ಒಂದೇ ಕಟ್ಟಡದಲ್ಲಿ ಎರಡು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಪುರುಷೋತ್ತಮ ಅವರದು ಹೆಂಚಿನ ಮನೆ. ತೆಂಗಿನಕಾಯಿ ಮತ್ತು ತೆಂಗಿನ ಮರದ ಗರಿ ಬಿದ್ದು ಹಾನಿಯಾಗಿರುವ ಭಾಗವನ್ನು ದುರಸ್ತಿ ಮಾಡುವುದಕ್ಕೂ ಸಾಧ್ಯವಾಗಿಲ್ಲ.

ಪುರುಷೋತ್ತಮ ಅವರ ಮನೆ
ಪ್ರಜಾವಾಣಿ ಚಿತ್ರ

'ಪುರುಷೋತ್ತಮ ಪೂಜಾರಿ ಅವರು ಭಯೋತ್ಪಾದನಾ ಕೃತ್ಯದ ಸಂತ್ರಸ್ತ. ಈ ಘಟನೆಯಿಂದ ತುಂಬ ನಷ್ಟ ಅನುಭವಿಸಿದ್ದಾರೆ. ಸ್ಫೋಟದಿಂದ ಅವರ ದೇಹದ ಶೇ 25ರಷ್ಟು ಭಾಗ ಸುಟ್ಟು ಹೋಗಿದೆ. ರಿಕ್ಷಾಕ್ಕೂ ಹಾನಿಯಾಗಿದೆ. ಅವರಿಗೆ ಗುಣಮಟ್ಟದ ಚಿಕಿತ್ಸೆಗೆ ಒದಗಿಸುವುದಕ್ಕೂ ಕ್ರಮ ಕೈಗೊಳ್ಳಲಾಗುವುದು. ಪರಿಹಾರ ಕೊಡಿಸುವ ಬಗ್ಗೆ ಜಿಲ್ಲಾಧಿಕಾರಿ ಜೊತೆ ಚರ್ಚಿಸಲಾಗಿದೆ. ಕುಟುಂಬದ ಸದಸ್ಯರ ಜೊತೆಗೂ ಮಾತನಾಡಿದ್ದೇವೆ' ಎಂದು ಅಲೋಕ್ ಕುಮಾರ್ ಹೇಳಿದರು.

ಈ ಮಾತು ಒಂದಿಷ್ಟು ಸಮಾಧಾನ ತಂದಿದ್ದರೂ ಪುರುಷೋತ್ತಮ ಅವರ ಆರೋಗ್ಯ ಸ್ಥಿತಿಯ ಬಗ್ಗೆ ಮನೆಮಂದಿಯ ಆತಂಕ ದೂರವಾಗಲಿಲ್ಲ. ಶನಿವಾರ ಸಂಜೆಯಿಂದ ಅವರೊಂದಿಗೆ ಸರಿಯಾಗಿ ಮಾತನಾಡಿಸಲು ಸಾಧ್ಯವಾಗದೇ ಇರುವುದು ಆತಂಕವನ್ನು ಹೆಚ್ಚಿಸಿದೆ.

'ಯಾರೋ ಮಾಡಿರುವ ಪಾಪದ ಕೃತ್ಯಕ್ಕೆ ಅಣ್ಣನಿಗೆ ಗಾಯಗಳಾಗಿವೆ. ಪ್ರಾಣದಂತೆ ಪ್ರೀತಿಸುತ್ತಿದ್ದ ಆಟೊ ರಿಕ್ಷಾ ಭಾಗಶಃ ಸುಟ್ಟಿದೆ. ಮಂಗಳೂರಿನಲ್ಲಿ ಇಂಥ ಘಟನೆ ಸಂಭವಿಸಿರುವುದು ಅತ್ಯಂತ ಹೇಯಕರ. ಅಧಿಕಾರಿಗಳು ಕೂಲಂಕಷ ತನಿಖೆ ನಡೆಸಿ ಇದಕ್ಕೆ ಕಾರಣರಾದವರಿಗೆ ತಕ್ಕ ಶಿಕ್ಷೆ ಕೊಡಬೇಕು. ಅಣ್ಣನ ಬಗ್ಗೆ ಮತ್ತು ಆತನ ಕುಟುಂಬದ ಬಗ್ಗೆ ಎಲ್ಲರೂ ಗಾಬರಿಗೊಂಡಿದ್ದೇವೆ' ಎಂದು ನಾಗೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಮಗಳಿಗೆ ಮದುವೆ ನಿಶ್ಚಯ: ಪುರುಷೋತ್ತಮ ಅವರ ಹಿರಿಯ ಪುತ್ರಿ ಮೇಘಶ್ರೀ ಮಂಗಳೂರಿನ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಕಿರಿಯ ಪುತ್ರಿ ವಿನ್ಯಶ್ರೀ ವಿದ್ಯಾರ್ಥಿನಿ. ಮೇಘಶ್ರೀ ಅವರಿಗೆ ಮೂಲ್ಕಿಯ ಗಂಡಿನೊಂದಿಗೆ ಮದುವೆ ನಿಶ್ಚಯವಾಗಿದೆ. ಮುಂದಿನ ವರ್ಷದ ಮೇ ತಿಂಗಳಲ್ಲಿ ನಡೆಯಬೇಕಿರುವ ಮದುವೆಯ ಕನಸಿನಲ್ಲಿದ್ದ ಕುಟುಂಬಕ್ಕೆ ಕುಕ್ಕರ್ ಬಾಂಬ್ ಪ್ರಕರಣ ಆಘಾತ ನೀಡಿದೆ.

'ಆಟೊ ಖರೀದಿಸಲು ಮಾಡಿರುವ ಸಾಲ ಮುಗಿಯುತ್ತ ಬಂದಿದೆ. ಮಗಳ ಮದುವೆಯ ಕನಸು ನನಸಾಗಿಸುವುದಕ್ಕಾಗಿ ಶ್ರಮಪಟ್ಟು ದುಡಿಯುತ್ತಿದ್ದರು. ಈಗ ಆರೋಗ್ಯಕ್ಕೂ– ಆಟೊಗೂ ಹಾನಿ ಆಗಿದೆ. ಭವಿಷ್ಯವು ಪ್ರಶ್ನಾರ್ಥಕ ಚಿಹ್ನೆಯಾಗಿ ಉಳಿದಿದೆ. ಸರ್ಕಾರ ನೆರವು ನೀಡಬೇಕು' ಎಂದು ನಾಗೇಶ್ ಕೋರಿದರು.



ಕುಕ್ಕರ್ ಬಾಂಬ್‌ಗೆ ಐಎಸ್ ಪ್ರಭಾವ

ಒಂದನೇ ಪುಟದಿಂದ

ಆರೋಪಿ ಐಎಸ್ ಜೊತೆ ನೇರ ಸಂಪರ್ಕ ಹೊಂದಿದ್ದನೇ ಎಂಬ ಪ್ರಶ್ನೆಗೆ, 'ಜಾಗತಿಕ ಮಟ್ಟದಲ್ಲಿ ಸಕ್ರಿಯವಾಗಿದ್ದ ಸಂಘಟನೆಯಿಂದ ಪ್ರಭಾವಿತರಾಗಿ ಭಯೊತ್ಪಾದನಾ ಕೃತ್ಯದಲ್ಲಿ ತೊಡಗಿದ್ದ ಎಂದಷ್ಟೇ ಸದ್ಯಕ್ಕೆ ಹೇಳಬಹುದು' ಎಂದರು.

ಗೋಡೆಬರೆಹ ಪ್ರಕರಣದ ಜೊತೆ ನಂಟು: ಮಂಗಳೂರು ನಗರದಲ್ಲಿ 2020ರ ನವೆಂಬರ್‌ನಲ್ಲಿ ಲಷ್ಕರ್ ಎ ತಯ್ಯಬಾ ಹಾಗೂ ತಾಲಿಬಾನ್ ಪರವಾಗಿ ಗೋಡೆ ಬರಹ ಪ್ರಕರಣದಲ್ಲೂ ಶಾರಿಕ್ ಮುಖ್ಯ ಆರೋಪಿಯಾಗಿದ್ದ. ಆಗ ಶಾರಿಕ್ ಹಾಗೂ ಮಾಜ್ ಮುನೀರ್ ಅಹಮದ್‌ನನ್ನು ನಗರದ ಪೊಲಿಸರು ಬಂಧಿಸಿದ್ದರು. ಈ ಪ್ರಕರಣದ ಇನ್ನಿಬ್ಬರು ಆರೋಪಿಗಳಾದ ಅಬ್ದುಲ್ ಮತೀನ್ ಹಾಗೂ ಅರಾಫತ್ ಅಲಿ ತಲೆಮರೆಸಿಕೊಂಡಿದ್ದರು.

'ಶಾರಿಕ್, ಮಾಜ್ ಮುನೀರ್ ಅಹಮದ್, ಸೈಯದ್ ಯಾಸಿನ್ (ಶಿವಮೊಗ್ಗ ಪ್ರಕರಣದ ಆರೋಪಿ) ಅವರ ತಂಡವು ಈ ಉಗ್ರಗಾಮಿ ಸಂಘಟನೆಯಿಂದ ಪ್ರೇರಣೆಗೊಂಡು ಭಯೋತ್ಪಾದನಾ ಚಟುವಟಿಕೆಯಲ್ಲಿ ತೊಡಗಿತ್ತು. ಗೋಡೆಬರಹ ಪ್ರಕರಣದಲ್ಲಿ ಮೂರನೇ ಆರೋಪಿಯಾಗಿದ್ದ ತೀರ್ಥಹಳ್ಳಿಯ ಅರಾಫತ್ ಅಲಿ ದುಬೈನಲ್ಲಿ ತಲೆಮರೆಸಿಕೊಂಡಿದ್ದಾನೆ. ಆತನ ಜೊತೆಗೆ ಇವರು ಸಂಪರ್ಕ ಹೊಂದಿದ್ದರು. ಶಾರಿಕ್ ನೇರವಾಗಿ ಅರಾಫತ್ ಕೈಕೆಳಗೆ ಕೆಲಸ ಮಾಡುತ್ತಿದ್ದ. ಅರಾಫತ್‌ಗೂ ತಮಿಳುನಾಡಿನಲ್ಲಿ ಹಿಂದೂ ನಾಯಕದ ಹತ್ಯೆ ಸಂಬಂಧ ಬೆಂಗಳೂರಿನ ಸುದ್ದಗುಂಟೆಪಾಳ್ಯದಲ್ಲಿ 2020ರಲ್ಲಿ ದಾಖಲಾದ ಪ್ರಕರಣದ ಆರೋಪಿ ಅಬ್ದುಲ್ ಮತೀತ್ ತಾಹ ಎಂಬಾತನಿಗೂ ನಂಟು ಇದೆ. ಅಬ್ದುಲ್ ಮತೀನ್ ತಾಹ ವಿರುದ್ಧವೂ ಕಾನೂನುಬಾಹೀರ ಚಟುವಟಿಕೆ ತಡೆ (ಯುಎಪಿ) ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

ಅಬ್ದುಲ್ ಮತೀನ್ ತಾಹ ಮಾರ್ಗದರ್ಶನದಂತೆ ಈ ತಂಡ ಕೆಲಸ ಮಾಡುತ್ತಿದೆ. ಎರಡು ವರ್ಷಗಳಿಂದ ತಲೆಮರೆಸಿಕೊಂಡಿರುವ ಆತನ ಪತ್ತೆಗೆ ನೆರವಾಗುವವರಿಗೆ ಎನ್‌ಐಎ ಬಹುಮಾನವನ್ನೂ ಘೋಷಿಸಿದೆ' ಎಂದು ಅಲೋಕ್ ಕುಮಾರ್ ತಿಳಿಸಿದರು.

'ಭಯೋತ್ಪಾದನಾ ಚಟುವಟಿಕೆ ನಡೆಸಲು ಹಣಕಾಸಿನ ನೆರವನ್ನು ಯಾರು ಪೂರೈಸುತ್ತಿದ್ದಾರೆ. ಅವರಿಗೆ ಆಶ್ರಯ ನೀಡುತ್ತಿರುವವರು ಯಾರು ಎಂಬುದನ್ನು ಪತ್ತೆಹಚ್ಚುವುದಕ್ಕೆ ತನಿಖೆ ವೇಳೆ ಹೆಚ್ಚಿನ ಗಮನ ಹರಿಸುತ್ತೇವೆ. ಆರೋಪಿಗಳಿಗೆ ಉದ್ದೇಶಪೂರ್ವಕವಾಗಿ ಯಾರಾದರೂ ಆಶ್ರಯ ನೀಡಿದ್ದರೆ ಅವರ ವಿರುದ್ಧ ಕ್ರಮಕೈಗೊಳ್ಳುತ್ತೇವೆ' ಎಂದರು.

ಸ್ಫೋಟ: ಆರೋಪಿ ಮಾಹಿತಿ ಸಂಗ್ರಹ

ಬೆಂಗಳೂರು: 'ಮಂಗಳೂರಿನಲ್ಲಿ ಸಂಭವಿಸಿದ ಪ್ರೆಷರ್ ಕುಕ್ಕರ್ ಸ್ಫೋಟದ ಪ್ರಮುಖ ಆರೋಪಿಯ ವೈಯಕ್ತಿಕ ಮಾಹಿತಿಗಳನ್ನು ಪೊಲೀಸರು ಪಡೆದಿದ್ದು, ತನಿಖೆ ಚುರುಕುಗೊಂಡಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯ ಸಂಪರ್ಕ ಯಾವ ಊರುಗಳಲ್ಲಿದೆ ಎಂಬುದರ ಮಾಹಿತಿಯೂ ಲಭಿಸಿದೆ. ಆತನ ನಿಜವಾದ ಹೆಸರು ಹಾಗೂ ಗುರುತು ಪತ್ತೆಯಾದ ನಂತರ, ಆತ ಬೇರೆ ಯಾವ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯಲಿದೆ. ಆ ಜಾಡನ್ನು ಹಿಡಿದು ತನಿಖೆ ನಡೆಯುತ್ತಿದೆ' ಎಂದರು.

'ಆರೋಪಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಆತನ ಕುಟುಂಬ ವರ್ಗದವರು ಆತನನ್ನು ಗುರುತಿಸಿರುವುದು ಪ್ರಮುಖ ಬೆಳವಣಿಗೆ. ಇಲ್ಲಿಯವರೆಗಿನ ಎಲ್ಲ ಮಾಹಿತಿಗಳನ್ನೂ ರಾಷ್ಟ್ರೀಯ ತನಿಖಾ ದಳ ಮತ್ತು ಐಬಿಗೆ ನೀಡಲಾಗಿದೆ. ಇದೇ ರೀತಿಯ ಕೃತ್ಯಗಳು ಬೇರೆ ಕಡೆಯೂ ಮಾಡಿದ್ದಾರೆಯೆ ಎಂಬ ಮಾಹಿತಿಯನ್ನು ತಿಳಿದುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ತನಿಖೆ ಮುಂದುವರೆದಿದೆ. ಹೆಚ್ಚಿನ ಮಾಹಿತಿ ಲಭ್ಯವಾದ ನಂತರ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು' ಎಂದರು. 'ಎಲ್ಲ ಪ್ರಮುಖ ಸ್ಥಳಗಳಲ್ಲಿ ಕಟ್ಟೆಚ್ಚರ ವಹಿಸಲು ಪೊಲೀಸರಿಗೆ ಸೂಚನೆ ನೀಡಲಾಗಿದೆ. ಪೊಲೀಸರು, ಭಯೋತ್ಪಾದಕ ನಿಗ್ರಹ ದಳ, ಆಂತರಿಕ ಸುರಕ್ಷತಾ ವಿಭಾಗಗಳು ಸಂಯೋಜಿಸಿ ಕಾರ್ಯನಿರ್ವಹಿಸಬೇಕು. ತನಿಖೆಯನ್ನು ಚುರುಕುಗೊಳಿಸಿ, ಹಿಂದಿರುವ ಘಾತುಕ ಶಕ್ತಿಗಳನ್ನು ಬಹಿರಂಗಗೊಳಿಸಬೇಕು' ಎಂದು ಬೊಮ್ಮಾಯಿ ಹೇಳಿದರು.

'ರಾಜ್ಯದಲ್ಲಿ ಕಾನೂನು ವ್ಯವಸ್ಥೆ ವಿಫಲವಾಗಿದೆ ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಕಾಂಗ್ರೆಸ್ ಕಾಲದಲ್ಲಿಯೂ ಇಂತಹ ಹಲವಾರು ಘಟನೆಗಳು ಸಂಭವಿಸಿವೆ. ಇದು ರಾಜಕೀಯ ಪ್ರೇರಿತ ಹೇಳಿಕೆ. ಇಂತಹ ಹೇಳಿಕೆಗಳಿಗೆ ಮಹತ್ವ ನೀಡುವುದಿಲ್ಲ' ಎಂದರು.

ಸ್ಫೋಟ: ಬೆಂಗಳೂರಿನಲ್ಲಿದ್ದ ವ್ಯಕ್ತಿ ವಶಕ್ಕೆ

ಬೆಂಗಳೂರು: ಮಂಗಳೂರು ಬಾಂಬ್ ಸ್ಫೋಟ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಎನ್ನಲಾದ ವ್ಯಕ್ತಿಯೊಬ್ಬರನ್ನು ಬೆಂಗಳೂರಿನಲ್ಲಿ ವಶಕ್ಕೆ ಪಡೆದು ಮೈಸೂರಿಗೆ ಕರೆದೊಯ್ಯಲಾಗಿದೆ.

'ಮೈಸೂರು ನಿವಾಸಿಯಾದ ವ್ಯಕ್ತಿ, ಸಂಬಂಧಿಕರೊಬ್ಬರ ನಿಶ್ಚಿತಾರ್ಥ ಕಾರ್ಯಕ್ರಮಕ್ಕಾಗಿ ಬೆಂಗಳೂರಿನ ಕೆ.ಜಿ. ಹಳ್ಳಿ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ಭಾನುವಾರ ಬಂದಿದ್ದ. ಈತನ ಬಗ್ಗೆ ಮಂಗಳೂರು ಪೊಲೀಸರು ಮಾಹಿತಿ ನೀಡಿದ್ದರು. ಎರಡು ಗಂಟೆ ಕಾರ್ಯಾಚರಣೆ ನಡೆಸಿ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಭಾನುವಾರ ರಾತ್ರಿಯೇ ನಗರಕ್ಕೆ ಬಂದಿದ್ದ ಮಂಗಳೂರು ಪೊಲೀಸರ ತಂಡ, ವ್ಯಕ್ತಿಯನ್ನು ತಮ್ಮ ಸುಪರ್ದಿಗೆ ಪಡೆದುಕೊಂಡು ಮೈಸೂರಿಗೆ ಕರೆದೊಯ್ದಿದೆ. ಆತನ ಮನೆಯಲ್ಲಿ ಶೋಧ ನಡೆಸಿರುವ ಬಗ್ಗೆ ಮಾಹಿತಿ ಇದೆ' ಎಂದು ತಿಳಿಸಿದರು.

'ವ್ಯಕ್ತಿಯ ಹೆಸರು ಹಾಗೂ ಆತನ ಹಿನ್ನೆಲೆ ಬಗ್ಗೆ ಮಾಹಿತಿ ಇಲ್ಲ. ಮಂಗಳೂರು ಪೊಲೀಸರ ತನಿಖೆಗೆ ಕೈ ಜೋಡಿಸಲಾಗಿದೆ. ಜೊತೆಗೆ, ವ್ಯಕ್ತಿ ಜೊತೆ ಒಡನಾಟ ಹೊಂದಿದ್ದ ಬೆಂಗಳೂರಿನ ಮೂವರನ್ನು ವಿಚಾರಣೆ ನಡೆಸಿ ಕಳುಹಿಸಲಾಗಿದೆ' ಎಂದೂ ಅಧಿಕಾರಿ ಹೇಳಿದರು.

ಆರೋಪಿ ಜೊತೆ ನಂಟು: 'ಮಂಗಳೂರಿನಲ್ಲಿ ಬಾಂಬ್ ಸ್ಫೋಟಿಸಿರುವ ಆರೋಪಿ ಜೊತೆ ನಂಟು ಹೊಂದಿದ್ದ ಆರೋಪ ವ್ಯಕ್ತಿ ಮೇಲಿದೆ. ಇದಕ್ಕೆ ಸಂಬಂಧಪಟ್ಟ ಪುರಾವೆಗಳಿಗಾಗಿ ಪೊಲೀಸರ ತಂಡ ತನಿಖೆ ಮುಂದುವರಿಸಿದೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಲಂಚದ ಹಣ ಸುಟ್ಟು ಹಾಕಿದ ಪ.ಪಂ ಸದಸ್ಯ

ಶಿವಮೊಗ್ಗ: ಜಿಲ್ಲೆಯ ಸಾಗರ ತಾಲ್ಲೂಕಿನ ಜೋಗ– ಕಾರ್ಗಲ್ ಪಟ್ಟಣ ಪಂಚಾಯಿತಿ ಸದಸ್ಯ ಕೆ.ಸಿ.ಹರೀಶ್ ಅವರು ಕೋಳಿ ಮಾಂಸ ಮಾರಾಟ ಅಂಗಡಿ ತೆರೆಯಲು ಪರವಾನಗಿ ಕೊಡಿಸುವುದಾಗಿ ವ್ಯಕ್ತಿಯೊಬ್ಬರಿಂದ ಪಡೆದ ₹ 50,000 ಲಂಚದ ಹಣವನ್ನು ಸೋಮವಾರ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ ವೇಳೆ ಗ್ಯಾಸ್ ಸ್ಟೋವ್ ಮೇಲೆ ಇಟ್ಟು ಸುಟ್ಟು ಹಾಕಿದ್ದಾರೆ.

ಕೆ.ಸಿ.ಹರೀಶ್

ಜೋಗ ಫಾಲ್ಸ್ ಬಳಿಯ ನಿವಾಸಿ ಕೆ.ಅಹಮದ್ ಅಬ್ದುಲ್ ಅವರು ಕೋಳಿ ಮಾಂಸ ಮಾರಾಟ ಅಂಗಡಿ ತೆರೆಯಲು ಪಟ್ಟಣ ಪಂಚಾಯಿತಿಯಿಂದ ವ್ಯಾಪಾರ ಪರವಾನಗಿಗಾಗಿ (ಟ್ರೇಡ್ ಲೈಸೆನ್ಸ್) ಅರ್ಜಿ ಸಲ್ಲಿಸಿದ್ದರು. ಅವರು ಅಹಮದ್ ಅಬ್ದುಲ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಹರೀಶ್ ಮನೆಗೆ ತೆರಳಿದ್ದ ಅಹಮದ್, ಲಂಚದ ಮೊತ್ತ ₹ 50,000 ಕೊಡುತ್ತಿದ್ದಂತೆಯೇ ಲೋಕಾಯುಕ್ತ ಡಿವೈಎಸ್‌ಪಿ ಎನ್.ಮೃತ್ಯುಂಜಯ ನೇತೃತ್ವದ ತಂಡ ದಾಳಿ ನಡೆಸಿದೆ. ಅದನ್ನು ಗಮನಿಸಿದ ಹರೀಶ್, ತಕ್ಷಣವೇ ಅಡುಗೆ ಮನೆಯತ್ತ ಧಾವಿಸಿ ತಮ್ಮ ಕೈಯಲ್ಲಿದ್ದ ಲಂಚದ ಹಣವನ್ನು ಸ್ಟೋವ್ ಮೇಲೆ ಇಟ್ಟು ಸುಟ್ಟು ಹಾಕಿದ್ದಾರೆ.

ಮೂಡಿಗೆರೆ: ಪ್ರತಿಭಟನಾ ಸ್ಥಳದಲ್ಲಿ ಕುಮಾರಸ್ವಾಮಿ ಅಂಗಿ ಹರಿದ ಪ್ರಕರಣ

ಶಾಸಕರ ಹೇಳಿಕೆ ಅಲ್ಲಗಳೆದ ಪ್ರತ್ಯಕ್ಷದರ್ಶಿಗಳು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮೂಡಿಗೆರೆ ತಾಲ್ಲೂಕಿನ ಹುಲ್ಲೆಮನೆ– ಕುಂದೂರಿನಲ್ಲಿ ಭಾನುವಾರ ಆನೆ ದಾಳಿಯಿಂದ ಸಾವಿಗೀಡಾದ ಶೋಭಾ ಅವರ ಮೃತದೇಹ ಇಟ್ಟು ಗ್ರಾಮಸ್ಥರು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ತಡವಾಗಿ ಬಂದಿದ್ದ ಶಾಸಕ ಎಂ.ಪಿ. ಕುಮಾರಸ್ವಾಮಿ ಅವರ ಅಂಗಿಯನ್ನು ಉದ್ರಿಕ್ತರು ಹರಿದಿಲ್ಲ ಎಂಬುದು ಪ್ರತ್ಯಕ್ಷದರ್ಶಿಗಳ ಅಭಿಪ್ರಾಯ.

ಶಾಸಕ ಕುಮಾರಸ್ವಾಮಿ ಅವರು ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ಹರಿಯಬಿಟ್ಟು 'ಪತಿಭಟನಾ ಸ್ಥಳದಲ್ಲಿ ಹಲ್ಲೆ ನಡೆಸಿ ಅಂಗಿ ಹರಿದರು' ಎಂದು ಆರೋಪಿಸಿರುವುದನ್ನು ಗ್ರಾಮಸ್ಥರು ಅಲ್ಲಗಳೆದರು. ಕುಮಾರಸ್ವಾಮಿ ಅವರು ತಡವಾಗಿ ಸ್ಥಳಕ್ಕೆ ಬಂದಿದ್ದಕ್ಕೆ ಆಕ್ರೋಶ ವ್ಯಕ್ತವಾಯಿತು. ತಳ್ಳಾಟ ನೂಕಾಟವಾಯಿತು. ಕೆಲವರು ಕಲ್ಲು ತೂರಿದರು. ಅವರ ಕಡೆಗೆ ಹೂವಿನ ಹಾರ ಎಸೆದರು. ಕುಮಾರಸ್ವಾಮಿ ಅವರನ್ನು ಪೊಲೀಸರು ಕರೆದೊಯ್ದು ಜೀಪಿನಲ್ಲಿ ಕೂರಿಸಿದರು ಎಂದು ಪ್ರತಿಭಟನಾ ಸ್ಥಳದಲ್ಲಿದ್ದವರು 'ಪ್ರಜಾವಾಣಿ'ಗೆ ತಿಳಿಸಿದರು.

'ಶಾಸಕ ಕುಮಾರಸ್ವಾಮಿ ಅವರನ್ನು ಪೊಲೀಸರೇ ಜೀಪಿಗೆ ಕೂರಿಸಿದರು. ಆಗ ಅವರ ಅಂಗಿ ಚೆನ್ನಾಗಿತ್ತು. ಜೀಪಿಗೆ ಕೂರಿಸಿದ ವಿಡಿಯೊಗಳು ಇವೆ' ಎಂದು ಗ್ರಾಮ ಪಂಚಾಯಿತಿ ಸದಸ್ಯ ಸಂತೋಷ್, ಗ್ರಾಮಸ್ಥ ಅಣ್ಣೇಗೌಡ, ಶಿವಕುಮಾರ್ ತಿಳಿಸಿದರು.

ತಡವಾಗಿ ಬಂದಿದ್ದಕ್ಕೆ ಆಕ್ರೋಶ: 'ಭಾನುವಾರ ಆನೆ ದಾಳಿ ಘಟನೆ ನಡೆದಿದ್ದು ಬೆಳಿಗ್ಗೆ. ಆದರೆ ಶಾಸಕ ಕುಮಾರಸ್ವಾಮಿ ಅವರು ಅಲ್ಲಿಗೆ ಬಂದಿದ್ದು ಸಂಜೆ. ಅವರು ತಡವಾಗಿ ಬಂದಿದ್ದಕ್ಕೆ ಅಲ್ಲಿದ್ದವರು ಆಕ್ರೋಶ ವ್ಯಕ್ತಪಡಿಸಿದರು. ಉದ್ರಿಕ್ತರು ಆಕ್ರೋಶ ವ್ಯಕ್ತಪಡಿಸಿದ್ದಕ್ಕೆ ಶಾಸಕರ ಬಳಿ ಕ್ಷಮೆಯಾಚಿಸಿದ್ದೇನೆ' ಎಂದೂ ಸಂತೋಷ್ ತಿಳಿಸಿದರು.

ಉದ್ಯೋಗಕ್ಕೆ ಮನವಿ: ಮೃತ ಶೋಭಾ ಪತಿ ಸತೀಶ್ 'ಪ್ರಜಾವಾಣಿ'ಯೊಂದಿಗೆ ಮಾತನಾಡಿ, 'ಈ ಭಾಗದಲ್ಲಿ ಆನೆಗಳ ಸ್ಥಳಾಂತರಕ್ಕೆ ಕ್ರಮ ವಹಿಸಬೇಕು. ಗ್ರಾಮ ಪ್ರದೇಶದ ಸುತ್ತ ಬೇಲಿ ನಿರ್ಮಿಸುವಂತೆ ಅರಣ್ಯ ಇಲಾಖೆಯವರಿಗೆ ಮನವಿ ಮಾಡಿದ್ದೇವೆ' ಎಂದು ತಿಳಿಸಿದರು.

'ಪುತ್ರನಿಗೆ ಸರ್ಕಾರಿ ಉದ್ಯೋಗ ಮತ್ತು ₹ 50 ಲಕ್ಷ ಪರಿಹಾರ ನೀಡುವಂತೆ ಕೋರಿದ್ದೇವೆ. ₹ 15 ಲಕ್ಷ ಪರಿಹಾರ ಕೊಡಿಸುವುದಾಗಿ ಶಾಸಕ ಎಂ.ಪಿ.ಕುಮಾರಸ್ವಾಮಿ ಭರವಸೆ ನೀಡಿದ್ದಾರೆ' ಎಂದು ಅವರು ತಿಳಿಸಿದರು.

ಸಾಂತ್ವನ: ಶಾಸಕ ಕುಮಾರಸ್ವಾಮಿ ಪೊಲೀಸ್ ಭದ್ರತೆಯಲ್ಲಿ ಸೋಮವಾರ ಕುಂದೂರಿಗೆ ತೆರಳಿ ಮೃತ ಶೋಭಾ ಅವರ ಪತಿ ಸತೀಶ್, ಪುತ್ರ ಶಶಾಂಕ್‌ಗೆ ಸಾಂತ್ವನ ಹೇಳಿದರು. ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ಅರಣ್ಯ ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂಬ ದೂರಿನ ಮೇರೆಗೆ ಪೊಲೀಸರು ಎಂಟು ಜನರನ್ನು ಬಂಧಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಹುಲ್ಲೆಹಳ್ಳಿ ಕುಂದೂರಿನಲ್ಲಿ ಆನೆ ದಾಳಿಯಲ್ಲಿ ಸಾವಿಗೀಡಾದ ಶೋಭಾ ಅವರ ಮನೆಯಲ್ಲಿ ಕುಟಂಬದವರು (ಪತಿ ಸತೀಶ್, ಪುತ್ರ ಶಶಾಂಕ್) ಪೂಜೆ ಸಲ್ಲಿಸಿದರು

3 ಆನೆಗಳ ಸ್ಥಳಾಂತರಕ್ಕೆ ಅನುಮತಿ

ಆಲ್ದೂರು, ಮೂಡಿಗೆರೆ ವಲಯ ವ್ಯಾಪ್ತಿಯಲ್ಲಿ ಉಪಟಳ ನೀಡುತ್ತಿರುವ ಮೂರು ಕಾಡಾನೆಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಸೆರೆ ಹಿಡಿದು, ಆನೆ ಶಿಬಿರಕ್ಕೆ ಸ್ಥಳಾಂತರಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಆದೇಶಿಸಿದ್ದಾರೆ.

'ಶೋಭಾ ಅವರ ಕುಟುಂಬದವರಿಗೆ ಒಟ್ಟು ₹7.5 ಲಕ್ಷ ಪರಿಹಾರ ನೀಡಲು ಒಪ್ಪಿಕೊಂಡಿದ್ದೇವೆ. ₹ 2ಲಕ್ಷ ಪರಿಹಾರ ನೀಡಿದ್ದು, ಬಾಕಿ ಮೊತ್ತವನ್ನು ಶೀಘ್ರದಲ್ಲಿ ತಲುಪಿಸುತ್ತೇವೆ. ಕಂದೂರು ಭಾಗದಲ್ಲಿ ಬೀಡುಬಿಟ್ಟಿರುವ ಆನೆಗಳನ್ನು ಕಾಡಿಗೆ ಓಡಿಸುವ ಕಾರ್ಯ ಆರಂಭವಾಗಿದೆ. ಆನೆಗಳ ಸೆರೆ ಕಾರ್ಯಾಚರಣೆಯನ್ನು ಶೀಘ್ರದಲ್ಲಿ ಶುರು ಮಾಡುತ್ತೇವೆ' ಎಂದು ಚಿಕ್ಕಮಗಳೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಎಂ.ಸಿ.ಸಿದ್ರಾಮಪ್ಪ ತಿಳಿಸಿದರು.

'ಮಹಿಳೆಯರು ಅಂಗಿ ಹರಿದರು'

ಶಾಸಕ ಎಂ.ಪಿ.ಕುಮಾರಸ್ವಾಮಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಘಟನಾ ಸ್ಥಳಕ್ಕೆ ತೆರಳಿದ್ದಾಗ ಉದ್ರಿಕ್ತರು ದರೋಡೆಕೋರನ ರೀತಿಯಲ್ಲಿ ಅಟ್ಟಿಸಿಕೊಂಡು ಬಂದರು. ಪೊಲೀಸರ ಬಳಿ ವಿಡಿಯೋಗಳು ಇವೆ. ಇಬ್ಬರು ಮಹಿಳೆಯರು ಅಂಗಿ ಹಿಡಿದು ಎಳೆದು ಹರಿದರು' ಎಂದರು.

ಮೋದಿ, ರಾಹುಲ್ ಪ್ರಚಾರ: ರಂಗೇರಿದ ಕಣ

ಗುಜರಾತ್ ವಿಧಾನಸಭೆ ಚುನಾವಣಾ ಪ್ರಚಾರ ಕಣ ರಂಗೇರಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರದಿಂದ ಗುಜರಾತ್‌ನಲ್ಲಿ ಇದ್ದು ವಿವಿಧೆಡೆ ಪ್ರಚಾರ ಮಾಡಿದ್ದಾರೆ. ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಸಚಿವ ನಿತಿನ್ ಗಡ್ಕರಿ ಮತ್ತು ಇತರ ಮುಖಂಡರು ಕೂಡ ಪ್ರಚಾರ ಕಣಕ್ಕೆ ಧುಮುಕಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಭಾರತ್ ಜೋಡೊ' ಯಾತ್ರೆಯಿಂದ ಬಿಡುವು ಪಡೆದುಕೊಂಡು ಗುಜರಾತ್‌ನಲ್ಲಿ ಸೋಮವಾರ ಪ್ರಚಾರ ನಡೆಸಿದ್ದಾರೆ. ಬಿಜೆಪಿ–ಕಾಂಗ್ರೆಸ್ ಮುಖಂಡರ ನಡುವೆ ವಾಕ್ಸಮರವೂ ನಡೆಯುತ್ತಿದೆ

'ಆದಿವಾಸಿಗಳನ್ನು ಅರಣ್ಯದಿಂದ ಹೊರಹಾಕಲು ಬಿಜೆಪಿ ಯತ್ನ'

ಪ್ರಜಾ ಮತ — ಜನತಂತ್ರದ ಹಬ್ಬ 2022

ಮಹುವಾ (ಗುಜರಾತ್) (ಪಿಟಿಐ): ಭಾರತ್ ಜೋಡೊ ಯಾತ್ರೆಯ ಸಂದರ್ಭದಲ್ಲಿ ಭೇಟಿಯಾದ ಜನರಿಂದಾಗಿ ರೈತರು, ಯುವಜನರು ಮತ್ತು ಬುಡಕಟ್ಟು ಜನರ ನೋವು ಅರ್ಥವಾಯಿತು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಅರಣ್ಯವನ್ನು ಕೈಗಾರಿಕೋದ್ಯಮಿಗಳಿಗೆ ನೀಡುವ ಮೂಲಕ ಆದಿವಾಸಿಗಳನ್ನು ನಿರ್ವಸಿತರನ್ನಾಗಿ ಮಾಡುವ ಕುತಂತ್ರವನ್ನು ಬಿಜೆಪಿ ಮಾಡುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ಗುಜರಾತ್ ವಿಧಾನಸಭೆಗೆ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ರಾಹುಲ್ ಅವರು ಸೋಮವಾರ ಪ್ರಚಾರ ನಡೆಸಿದರು.

ಗುಜರಾತ್ ವಿಧಾನಸಭೆ ಚುನಾವಣೆಯ ಮೊದಲ ಪ್ರಚಾರ ಸಭೆಯಲ್ಲಿ ರಾಹುಲ್ ಭಾಗಿಯಾದರು. ಯಾತ್ರೆಯಿಂದ ಬಿಡುವು ಪಡೆದು ಅವರು ಚುನಾವಣಾ ಪ್ರಚಾರ ನಡೆಸಿದ್ದಾರೆ. ಆದಿವಾಸಿಗಳೇ ಈ ದೇಶದ ಮೊದಲ ಮಾಲೀಕರು. ಆದರೆ, ಬಿಜೆಪಿ ಅವರನ್ನು ಕಾಡಿನಿಂದ ಹೊರಗೆ ತರುವುದಕ್ಕಾಗಿ ಕೆಲಸ ಮಾಡುತ್ತಿದೆ. ಅವರ ಮಕ್ಕಳಿಗೆ ಆಧುನಿಕ ಶಿಕ್ಷಣ ದೊರೆಯದಂತೆ ನೋಡಿಕೊಳ್ಳುತ್ತಿದೆ ಎಂದು ರಾಹುಲ್ ಆಪಾದಿಸಿದ್ದಾರೆ.

ಯಾತ್ರೆಯ ಅನುಭವಗಳನ್ನೂ ಪ್ರಚಾರ ಭಾಷಣದ ಸಂದರ್ಭದಲ್ಲಿ ಅವರು ಹಂಚಿಕೊಂಡರು. ರೈತರು, ಯುವಜನರು ಮತ್ತು ಬುಡಕಟ್ಟು ಜನರ ಜೊತೆ ಮಾತನಾಡುವಾಗ ಬೇಸರವೂ ಆಗಿತ್ತು ಎಂಬುದನ್ನು ಅವರು ನೆನಪಿಸಿಕೊಂಡರು.

ತಮ್ಮ ಉತ್ಪನ್ನಗಳಿಗೆ ಸೂಕ್ತವಾದ ಬೆಲೆ ದೊರೆಯುತ್ತಿಲ್ಲ, ಬೆಳೆ ವಿಮೆ ಹಣ ಸಿಗುತ್ತಿಲ್ಲ ಅಥವಾ ತಮ್ಮ ಸಾಲ ಮನ್ನಾ ಆಗುತ್ತಿಲ್ಲ ಎಂದು ರೈತರು ಹೇಳಿದ್ದಾರೆ ಎಂಬುದನ್ನು ರಾಹುಲ್ ಹಂಚಿಕೊಂಡರು. ಯುವಜನರು ನಿರುದ್ಯೋಗಿಗಳಾಗಿಯೇ ಉಳಿದಿದ್ದಾರೆ, ಅವರ ಕನಸುಗಳು ನನಸು ಆಗುತ್ತಿಲ್ಲ ಎಂದರು.

> ಬಿಜೆಪಿ ನಿಮ್ಮನ್ನು ವನವಾಸಿ ಎನ್ನುತ್ತಿದೆ. ಆದರೆ, ನೀವೇ ಭಾರತದ ಮೊದಲ ಮಾಲೀಕರು ಎನ್ನುತ್ತಿಲ್ಲ. ನಿಮ್ಮ ಅರಣ್ಯವನ್ನು ಕೈಗಾರಿಕೋದ್ಯಮಿಗಳಿಗೆ ನೀಡಲು ಬಿಜೆಪಿ ಯತ್ನಿಸುತ್ತಿದೆ.
>
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

'ನೀವು (ಆದಿವಾಸಿಗಳು) ಕಾಡಿನಲ್ಲಿಯೇ ಇರಬೇಕು ಎಂದು ಅವರು ಬಯಸುತ್ತಿದ್ದಾರೆ. ಆದರೆ, ಕಾಡನ್ನು ನಿಮ್ಮಿಂದ ಕಸಿದುಕೊಳ್ಳುತ್ತಾರೆ. ಇದು ಹೀಗೆಯೇ ಮುಂದುವರಿದರೆ, 5ರಿಂದ 10 ವರ್ಷಗಳಲ್ಲಿ ಎಲ್ಲ ಅರಣ್ಯ 2ರಿಂದ 3 ಕೈಗಾರಿಕೋದ್ಯಮಿಗಳ ಕೈಯಲ್ಲಿ ಇರುತ್ತದೆ' ಎಂದು ರಾಹುಲ್ ಹೇಳಿದರು.

ಕಾಂಗ್ರೆಸ್ ಸರ್ಕಾರವು ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ ಬುಡಕಟ್ಟು ಸಮುದಾಯದ ಅನುಕೂಲಕ್ಕಾಗಿ ಜಾರಿಗೆ ತಂದ ಕಾಯ್ದೆಗಳನ್ನು ಬಿಜೆಪಿ ಆಳ್ವಿಕೆ ಇದ್ದ ರಾಜ್ಯಗಳು ಜಾರಿಗೆ ತರಲಿಲ್ಲ ಎಂದು ರಾಹುಲ್ ಆರೋಪಿಸಿದರು.



'ಕಾಂಗ್ರೆಸ್‌ಗೆ ಬುಡಕಟ್ಟು ಜನರ ಅಸ್ತಿತ್ವವೇ ತಿಳಿದಿರಲಿಲ್ಲ'

ಜಂಬುಸರ್, ನವಸಾರಿ (ಗುಜರಾತ್) (ಪಿಟಿಐ): ರಾಮ ಮತ್ತು ಕೃಷ್ಣನ ಕಾಲದಿಂದಲೇ ಬುಡಕಟ್ಟು ಜನರು ಇಲ್ಲಿ ಇದ್ದರೂ ಬಹಳ ಕಾಲದವರೆಗೆ ಈ ಜನರ ಅಸ್ತಿತ್ವವನ್ನೇ ಕಾಂಗ್ರೆಸ್ ಪಕ್ಷವು ಮರೆತಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಆರೋಪಿಸಿದ್ದಾರೆ.

ಬುಡಕಟ್ಟು ಜನರೇ ಅಧಿಕವಾಗಿರುವ ಭರೂಚ್ ಜಿಲ್ಲೆಯ ಜಂಬುಸರ್‌ನಲ್ಲಿ ಬಿಜೆಪಿ ಪರವಾಗಿ ಅವರು ಚುನಾವಣಾ ಪ್ರಚಾರ ನಡೆಸಿದರು.

'ಬುಡಕಟ್ಟು ಜನರು 1857ರ ಸಿಪಾಯಿ ದಂಗೆಯಲ್ಲಿ ಭಾಗಿಯಾಗಿಲ್ಲವೇ? ಈ ದೇಶಕ್ಕಾಗಿ ಅವರು ಏನೆಲ್ಲ ಮಾಡಿಲ್ಲ... ಆದರೆ, ಅವರಿಗೆ ಅಸ್ತಿತ್ವವೇ ಇಲ್ಲ ಎಂಬಂತೆ ಕಾಂಗ್ರೆಸ್ ಪಕ್ಷವು ಇತ್ತು. ಇಲ್ಲದಿದ್ದರೆ, ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿ ಆಗುವವರೆಗೆ ಬುಡಕಟ್ಟು ಜನರಿಗಾಗಿ ಪ್ರತ್ಯೇಕ ಸಚಿವಾಲಯ ಏಕೆ ಇರಲಿಲ್ಲ? ವಾಜಪೇಯಿ ಸರ್ಕಾರವು ಬುಡಕಟ್ಟು ಜನರಿಗಾಗಿ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಿತು. ಅದಕ್ಕಾಗಿ ಪ್ರತ್ಯೇಕ ಅನುದಾನವನ್ನೂ ಒದಗಿಸಿತು. ನಾನು ಬುಡಕಟ್ಟು ದಿರಿಸು ತೊಡುವುದನ್ನು ಕಾಂಗ್ರೆಸ್ ಪಕ್ಷವು ಇಂದಿಗೂ ಗೇಲಿ ಮಾಡುತ್ತಿದೆ' ಎಂದು ಮೋದಿ ಹೇಳಿದರು.

ಬುಡಕಟ್ಟು ದಿರಿಸನ್ನು ಗೇಲಿ ಮಾಡುವ ಮತ್ತು ಬುಡಕಟ್ಟು ಜನರಿಗೆ ಆಗಾಗ ಅವಮಾನ ಮಾಡುವ ಕಾಂಗ್ರೆಸ್ ಪಕ್ಷದಿಂದ ಬುಡಕಟ್ಟು ಜನರ ಪರಿಸ್ಥಿತಿ ಸುಧಾರಣೆ ಆಗುವುದನ್ನು ನಿರೀಕ್ಷಿಸಲಾಗದು ಎಂದು ಮೋದಿ ಅಭಿಪ್ರಾಯಪಟ್ಟರು.

> ಅಧಿಕಾರದಿಂದ ಕಿತ್ತೆಸೆಯಲ್ಪಟ್ಟವರು ಅಧಿಕಾರಕ್ಕಾಗಿ ಪಾದಯಾತ್ರೆ ನಡೆಸುತ್ತಿದ್ದಾರೆ. ಈ ಪಾದಯಾತ್ರೆ ನಡೆಸುತ್ತಿರುವವರಿಗೆ ಗುಜರಾತ್‌ನ ಜನರು ಶಿಕ್ಷೆ ನೀಡಲಿದ್ದಾರೆ
>
> **ನರೇಂದ್ರ ಮೋದಿ,** ಪ್ರಧಾನಿ

ಬಿಜೆಪಿಯನ್ನು ಆಯ್ಕೆ ಮಾಡುವ ಮೂಲಕ ಜನರು ಗುಜರಾತ್ ರಾಜ್ಯವು ಮೊದಲ ಸ್ಥಾನದಲ್ಲಿ ಇರುವಂತೆ ನೋಡಿಕೊಂಡಿದ್ದಾರೆ ಎಂದು ಮೋದಿ ಹೇಳಿದ್ದಾರೆ. ಬರಗಾಲ ಮತ್ತು ಸಮಸ್ಯೆ ಇದ್ದರೂ ಇದು ಸಾಧ್ಯವಾಗಿದೆ ಎಂದರು. ಅವರು ದಕ್ಷಿಣ ಗುಜರಾತ್‌ನ ನವಸಾರಿಯಲ್ಲಿ ಚುನಾವಣಾ ಪ್ರಚಾರ ನಡೆಸಿದರು. ಸತತ ಮೂರನೇ ದಿನವಾದ ಸೋಮವಾರವೂ ಮೋದಿ ಮೂರು ರ‍್ಯಾಲಿಗಳನ್ನು ನಡೆಸಿದ್ದಾರೆ.

'ಈ ಹಿಂದೆ ಗುಜರಾತ್‌ನಲ್ಲಿ ಇದ್ದ ಕಾಂಗ್ರೆಸ್ ಸರ್ಕಾರವು ಮೀನುಗಾರರಿಗಾಗಿ ಏನನ್ನೂ ಮಾಡಿಲ್ಲ. ಆದರೆ, ಬಿಜೆಪಿ ಸರ್ಕಾರವು ಹಲವು ಕೆಲಸಗಳನ್ನು ಮಾಡಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ ಅನ್ನು ಮೀನುಗಾರರಿಗೂ ವಿಸ್ತರಿಸಿದೆ. ನಾವು ಇತ್ತೀಚೆಗೆ ಜಾರಿಗೆ ತಂದ ಡ್ರೋನ್ ನೀತಿಯಿಂದ ಮೀನುಗಾರರಿಗೆ ಅನುಕೂಲ ಇದೆ' ಎಂದು ಮೋದಿ ಹೇಳಿದ್ದಾರೆ.

ವಂಶಾಡಳಿತಕ್ಕೆ ಮಣೆ

ಅಹಮದಾಬಾದ್ (ಪಿಟಿಐ): ವಂಶಾಡಳಿತವು ಭಾರತದ ಪ್ರಜಾಪ್ರಭುತ್ವದ ಪ್ರಮುಖ ಲಕ್ಷಣಗಳಲ್ಲಿ ಒಂದು. ಗುಜರಾತ್ ವಿಧಾನಸಭೆ ಚುನಾವಣೆಯು ಅದಕ್ಕೆ ಹೊರತಲ್ಲ. 182 ಕ್ಷೇತ್ರಗಳ ಪೈಕಿ ಕನಿಷ್ಠ 20 ಕ್ಷೇತ್ರಗಳಲ್ಲಿ ಹಾಲಿ ಅಥವಾ ಮಾಜಿ ಶಾಸಕರ ಮಕ್ಕಳು ಸ್ಪರ್ಧಿಸುತ್ತಿದ್ದಾರೆ.

ವಿರೋಧ ಪಕ್ಷ ಕಾಂಗ್ರೆಸ್ ಇಂತಹ 13 ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದ್ದರೆ, ಆಡಳಿತಾರೂಢ ಬಿಜೆಪಿ ಇಂತಹ ಏಳು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ.

ಗೆಲ್ಲುವ ಸಾಧ್ಯತೆ ಅಥವಾ ಪ್ರಬಲವಾದ ಪರ್ಯಾಯ ಇಲ್ಲದಿರುವ ಕಾರಣಕ್ಕೆ ಪಕ್ಷದ ಮುಖಂಡರ ಮಕ್ಕಳಿಗೇ ಟಿಕೆಟ್ ನೀಡುವ ಅನಿವಾರ್ಯಕ್ಕೆ ಪಕ್ಷಗಳು ಒಳಗಾಗುತ್ತವೆ ಎಂದು ವಿಶ್ಲೇಷಕರು ಹೇಳುತ್ತಾರೆ.

ಆದಿವಾಸಿ ನಾಯಕ ಮತ್ತು ಹತ್ತು ಬಾರಿ ಶಾಸಕರಾಗಿ ಆಯ್ಕೆ ಆಗಿರುವ ಮೋಹನ್‌ಸಿಂಹ ರಾತ್ವ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದರು. ಅದಕ್ಕೆ ಪ್ರತಿಫಲವಾಗಿ ಅವರ ಮಗ ರಾಜೇಂದ್ರ ಸಿಂಹ ರಾತ್ವ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ.

ಸನಂದ್‌ನ ಶಾಸಕ ಕಾನು ಪಟೇಲ್ ಅವರು ಕಾಂಗ್ರೆಸ್‌ನ ಮಾಜಿ ಶಾಸಕ ಕರಣ್‌ಸಿಂಹ ಪಟೇಲ್ ಅವರ ಮಗ. ಕರಣ್ ಸಿಂಗ್ ಅವರು 2017ರಲ್ಲಿ ಬಿಜೆಪಿ ಸೇರಿದರು. ಅವರ ಮಗನಿಗೆ ಬಿಜೆಪಿ ಟಿಕೆಟ್ ಕೊಟ್ಟಿತು.

ಡಣಿಲಿಂಬ್ಡ ಕ್ಷೇತ್ರದ ಕಾಂಗ್ರೆಸ್ ಶಾಸಕ ಶೈಲೇಶ್ ಪರ್ಮಾರ್ ಅವರು ಮಾಜಿ ಶಾಸಕ ಮನುಭಾಯ್ ಪರ್ಮಾರ್ ಅವರ ಮಗ. ಈ ಬಾರಿಯೂ ಪರ್ಮಾರ್ ಅವರಿಗೇ ಕಾಂಗ್ರೆಸ್ ಟಿಕೆಟ್ ನೀಡಿದೆ.

ಮಹೇಂದ್ರ ಸಿಂಹ ವಘೇಲಾ ಅವರು ಗುಜರಾತ್‌ನ ಮಾಜಿ ಮುಖ್ಯಮಂತ್ರಿ ಶಂಕರ್‌ಸಿಂಹ ವಘೇಲಾ ಅವರ ಮಗ. ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಮಹೇಂದ್ರ ಸಿಂಹ ಅವರು ಕಾಂಗ್ರೆಸ್‌ಗೆ ಕಳೆದ ತಿಂಗಳು ಮರಳಿದ್ದಾರೆ. ಅವರಿಗೆ ಟಿಕೆಟ್ ನೀಡಲಾಗಿದೆ.

'ಕೆಲವು ಕುಟುಂಬಗಳು ರಾಜಕೀಯವೇ ತಮ್ಮ ಪರಂಪರೆ ಅಂದುಕೊಂಡಿರುತ್ತವೆ. ಅವರಿಗೆ ತಮ್ಮ ಕ್ಷೇತ್ರದಲ್ಲಿ ಭಾರಿ ಪ್ರಭಾವವೂ ಇರುತ್ತದೆ. ಚುನಾವಣೆಯ ಫಲಿತಾಂಶವನ್ನೇ ಬದಲಿಸುವ ಸಾಮರ್ಥ್ಯವೂ ಅವರಿಗೆ ಇರುತ್ತದೆ. ಇಂತಹ ಅಭ್ಯರ್ಥಿಗಳಿಗೆ ಪರ್ಯಾಯ ಅಭ್ಯರ್ಥಿಗಳೂ ಇರುವುದಿಲ್ಲ. ಇಂತಹವರ ವಿರುದ್ಧ ಸ್ಪರ್ಧಿಸಲು ಪಕ್ಷದಿಂದ ಯಾರೂ ಮುಂದಾಗುವುದಿಲ್ಲ. ಅವರ ಕಾಲಾನಂತರವೂ ಅವರ ಮಕ್ಕಳು ಅಥವಾ ಹೆಂಡತಿಗೇ ಟಿಕೆಟ್ ನೀಡಲಾಗುತ್ತದೆ' ಎಂದು ರಾಜಕೀಯ ವಿಶ್ಲೇಷಕ ರವೀಂದ್ರ ತ್ರಿವೇದಿ ಹೇಳುತ್ತಾರೆ.

ಗುಜರಾತ್: 26ರಿಂದ ಖರ್ಗೆ ಪ್ರಚಾರ

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇದೇ 26ರಿಂದ 28ರವರೆಗೆ ಗುಜರಾತ್‌ನಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಶನಿವಾರ ಅಹಮದಾಬಾದ್‌ನಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗಿಯಾಗಲಿದ್ದಾರೆ.

'ಭಾರತ್ ಜೋಡೊ' ಯಾತ್ರೆಯಲ್ಲಿ 27ರಂದು ಭಾಗಿಯಾಗಲಿರುವ ಅವರು ಅದೇ ದಿನ ಮಧ್ಯಪ್ರದೇಶದ ಇಂದೋರ್‌ನಲ್ಲಿ ಕಾಂಗ್ರೆಸ್ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ. ಸೋಮವಾರ ಗುಜರಾತ್‌ಗೆ ವಾಪಸಾಗಲಿರುವ ಅವರು, ಗಾಂಧಿನಗರದಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ.

ಚಿಲುಮೆಗೆ ಗುರುತಿನ ಚೀಟಿ: ಮೂವರು ಅಮಾನತು

ಒಂದನೇ ಪುಟದಿಂದ...

ಅದರಂತೆ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಲೋಕೇಶ್ ಮೇಲೆ ದೂರು ನೀಡಲಾಗಿತ್ತು. ಖಾಸಗಿ ಮಾಹಿತಿ ಸಂಗ್ರಹಿಸಿರುವ ಬಗ್ಗೆ ತನಿಖೆ ನಡೆಸಲು ಜಿಲ್ಲಾಧಿಕಾರಿ ವರದಿ ನೀಡಿದ್ದಾರೆ. ಈ ಪ್ರಕರಣವು ಮಹದೇವ ಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿ ಯಲ್ಲಿ ನಡೆದಿರುವುದರಿಂದ ಕೆ. ಚಂದ್ರಶೇಖರ್ ಅವರನ್ನು ಅಮಾನತು ಮಾಡಲಾಗಿದೆ.

ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಚಿಲುಮೆ ಸಂಸ್ಥೆಯ ಪ್ರತಿನಿಧಿ ಶಿವಕುಮಾರ್ ಹಾಗೂ ಪುನೀತ್, ಪಾಲಿಕೆ ಸಿಬ್ಬಂದಿಯೊಂದಿಗೆ ಜಾಗೃತಿ ಕಾರ್ಯದಲ್ಲಿ ತೊಡಗಿದ್ದರು. ಅವರೂ ಅನುಮತಿ ಹಾಗೂ ಬಿಎಲ್‌ಸಿ ಗುರುತಿನ ಚೀಟಿ ಕೋರಿದ್ದರು. ಅದನ್ನು ನೀಡಿಲ್ಲ ಎಂದು ಚಿಕ್ಕಪೇಟೆ ಸಹಾಯಕ ಕಂದಾಯ ಅಧಿಕಾರಿ ವರದಿ ನೀಡಿದ್ದಾರೆ.

ಆದರೆ, ಗುರುಬಸ್ಸು, ವಿನಾಯಕ ಎಸ್.ಎಚ್. ಅವರಿಗೆ ಮತದಾರರ ನೋಂದಣಾಧಿಕಾರಿ ಬಿಎಲ್‌ಸಿ ಗುರುತಿನ ಚೀಟಿ ನೀಡಿರುವ ಪುರಾವೆ ಲಭ್ಯವಾಗಿದೆ. ಆದ್ದರಿಂದ ವಿ.ಬಿ. ಭೀಮಾಶಂಕರ್ ಅವರನ್ನು ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತನಿಖೆ ಅಧಿಕಾರ ಸರ್ಕಾರಕ್ಕಿಲ್ಲ: ಆಯೋಗ

ಒಂದನೇ ಪುಟದಿಂದ...

'ಕೇಂದ್ರ ಚುನಾವಣಾ ಆಯೋಗವು ಸ್ವತಂತ್ರ ಸಾಂವಿಧಾನಿಕ ಸಂಸ್ಥೆ. ಪ್ರಜಾಪ್ರತಿನಿಧಿ ಕಾಯ್ದೆ–1950, ಮತದಾರರ ನೋಂದಣಿ ನಿಯಮಗಳು–1960 ಹಾಗೂ ಕೇಂದ್ರ ಚುನಾವಣಾ ಆಯೋಗವು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಆಧರಿಸಿ ಆಯಾ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿಯು ಮತದಾರರ ಪಟ್ಟಿ ಸಿದ್ಧತೆ, ಪ್ರಕಟಣೆ ಮತ್ತು ಪರಿಷ್ಕರಣೆ ಪ್ರಕ್ರಿಯೆ ನಡೆಸುತ್ತಾರೆ. ಈ ಪ್ರಕ್ರಿಯೆಯು ನೇರವಾಗಿ ಕೇಂದ್ರ ಚುನಾವಣಾ ಆಯೋಗದ ಮೇಲುಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣದಲ್ಲಿ ನಡೆಯುತ್ತದೆ' ಎಂದು ಮೀನಾ ತಿಳಿಸಿದ್ದಾರೆ.

ಮತದಾರರ ಪಟ್ಟಿಯ ಸಿದ್ಧತೆ, ನಿರ್ವಹಣೆ ಮತ್ತು ಚುನಾವಣೆ ನಡೆಸುವ ಪ್ರಕ್ರಿಯೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಪಾತ್ರವನ್ನೂ ನಿರ್ವಹಿಸುವುದಿಲ್ಲ. ಈ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಆರೋಪ ಕೇಳಿಬಂದಾಗ, ಅಕ್ರಮಗಳು ನಡೆದರೆ ತನಿಖೆ ನಡೆಸಿ, ಕ್ರಮ ಕೈಗೊಳ್ಳುವ ಸಂಪೂರ್ಣ ಅಧಿಕಾರ ಕೇಂದ್ರ ಚುನಾವಣಾ ಆಯೋಗಕ್ಕೆ ಸೇರಿದೆ ಎಂದು ಹೇಳಿದ್ದಾರೆ.

'ಜಾತಿ, ಧರ್ಮದ ಆಧಾರದಲ್ಲಿ ಕೆಲಸ ಮಾಡುವುದಿಲ್ಲ'

'ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲಿ ಜಾತಿ ಮತ್ತು ಧರ್ಮದ ಆಧಾರದಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಜಾತಿ ಅಥವಾ ಧರ್ಮದ ಆಧಾರದಲ್ಲಿ ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವ ಅಥವಾ ಸೇರಿಸುವ ಪ್ರಮೇಯವೇ ಉದ್ಭವಿಸುವುದಿಲ್ಲ' ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಲ್ಪಸಂಖ್ಯಾತರ ಹೆಸರುಗಳನ್ನು ಗುರುತಿಸಿ, ಕೈಬಿಡಲಾಗಿದೆ ಎಂಬ ಆರೋಪ ಕುರಿತು ಸ್ಪಷ್ಟನೆ ನೀಡಿರುವ ಅವರು, 'ಮೃತ ವ್ಯಕ್ತಿಗಳು, ವಾಸ್ತವ್ಯ ಬದಲಿಸಿದವರು ಹಾಗೂ ಒಂದಕ್ಕಿಂತ ಹೆಚ್ಚು ಕಡೆ ಒಬ್ಬನೇ ಮತದಾರನ ಹೆಸರು ಇರುವುದನ್ನು ತಂತ್ರಾಂಶದ ಮೂಲಕ ಗುರುತಿಸಿ ಪಟ್ಟಿಯಿಂದ ತೆಗೆದುಹಾಕಲಾಗಿದೆ' ಎಂದು ಹೇಳಿದ್ದಾರೆ. 2023ರ ಕರಡು ಮತದಾರರ ಪಟ್ಟಿಯನ್ನು ಇದೇ 11ರಂದು ಪ್ರಕಟಿಸಲಾಗಿದೆ. ನಮೂನೆ–5ರ ಅಡಿಯಲ್ಲಿ ಮತದಾರರ ನೋಂದಣಿ ಅಧಿಕಾರಿಗೆ ಆಕ್ಷೇಪಣೆ ಮತ್ತು ದೂರು ಸಲ್ಲಿಸಲು ಡಿಸೆಂಬರ್ 8ರವರೆಗೂ ಕಾಲಾವಕಾಶ ನೀಡಲಾಗಿದೆ. ಎಲ್ಲ ಮತದಾರರು ಕರಡು ಪಟ್ಟಿಯನ್ನು ಪರಿಶೀಲಿಸಿ ಹೆಸರಿನಲ್ಲಿ ಬದಲಾವಣೆ, ವಿಳಾಸ ಬದಲಾವಣೆ, ಹೆಸರು ಸೇರ್ಪಡೆ ಮತ್ತಿತರ ಪ್ರಕ್ರಿಯೆಗಳಿಗೆ ಅರ್ಜಿ ಸಲ್ಲಿಸಬಹುದು. nvsp.in ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಅಥವಾ ವೋಟರ್ ಹೆಲ್ಪ್‌ಲೈನ್ ಅಪ್ಲಿಕೇಷನ್ ಮೂಲಕ ಅರ್ಜಿ ಸಲ್ಲಿಸಬಹುದು. ಮತದಾರರ ನೋಂದಣಿ ಅಧಿಕಾರಿ ಅಥವಾ ಮತಗಟ್ಟೆ ಹಂತದ ಅಧಿಕಾರಿಗೆ ನೇರವಾಗಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದ್ದಾರೆ.

ಚಿಲುಮೆ ಸಂಸ್ಥಾಪಕ 12 ದಿನ ಪೊಲೀಸರ ವಶಕ್ಕೆ

ಒಂದನೇ ಪುಟದಿಂದ

ಸಂಸ್ಥೆ ಮಾಹಿತಿ ಬಾಯ್ಬಿಟ್ಟ ರವಿ ಕುಮಾರ್: 'ಚಿಲುಮೆ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ ವಿರುದ್ಧ ದೂರು ನೀಡಿದ್ದ ಬಿಬಿಎಂಪಿ ವಿಶೇಷ ಆಯುಕ್ತ (ಆಡಳಿತ ಹಾಗೂ ಚುನಾವಣೆ) ರಂಗಪ್ಪ, ಕೆಲ ದಾಖಲೆಗಳನ್ನು ಒದಗಿಸಿದ್ದಾರೆ. ಅವುಗಳನ್ನು ಮುಂದಿಟ್ಟುಕೊಂಡು ರವಿಕುಮಾರ್ ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಟೇಷನರಿ ಹಾಗೂ ಸ್ವಚ್ಛತಾ ಸಾಮಗ್ರಿ ಪೂರೈಸುತ್ತಿದ್ದ ರವಿಕುಮಾರ್ ಹಾಗೂ ಇತರರು, ಹಲವು ವರ್ಷಗಳ ಹಿಂದೆಯೇ ಬಿಬಿಎಂಪಿ ಅಧಿಕಾರಿಗಳನ್ನು ಪರಿಚಯಿಸಿಕೊಂಡಿದ್ದರು. ಬಿಬಿಎಂಪಿ ಕಚೇರಿಗಳಿಗೆ ಸ್ಟೇಷನರಿ ಹಾಗೂ ಸ್ವಚ್ಛತಾ ಸಾಮಗ್ರಿ ಪೂರೈಸುವ ಗುತ್ತಿಗೆ ಗಿಟ್ಟಿಸಿಕೊಂಡಿದ್ದರು. ಈ ಮೂಲಕ ಚಿಲುಮೆ ಸಂಸ್ಥೆ ಕೆಲಸಗಳು ಆರಂಭವಾಗಿದ್ದವು. ಬಿಬಿಎಂಪಿಯಲ್ಲಿ ಯಾವೆಲ್ಲ ಕೆಲಸಗಳಿಗೆ ಗುತ್ತಿಗೆ ನೀಡಲಾಗುತ್ತದೆ ಎಂಬುದನ್ನು ತಿಳಿದುಕೊಂಡು ಶಾಮಿಯಾನ, ಆಹಾರ ಪೂರೈಕೆ (ಕ್ಯಾಟರಿಂಗ್), ಐಟಿ ಸೇವೆ ಸಹ ಶುರು ಮಾಡಿದ್ದರು' ಎಂದೂ ಮೂಲಗಳು ತಿಳಿಸಿವೆ.

ಚುನಾವಣೆ ಕೆಲಸಗಳ ಮೇಲೂ ಕಣ್ಣು: 'ವಿಧಾನಸಭೆ, ಲೋಕಸಭೆ, ಬಿಬಿಎಂಪಿ ಚುನಾವಣೆ ಕೆಲಸಗಳ ಬಗ್ಗೆಯೂ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದ ರವಿಕುಮಾರ್ ಹಾಗೂ ಇತರರು, ಅಂಥ ಕೆಲಸಗಳನ್ನು ಗುತ್ತಿಗೆ ಪಡೆಯಲು ಮುಂದಾಗಿದ್ದರು. ಇದಕ್ಕೆ ಹಲವು ಅಧಿಕಾರಿಗಳು ಸಹಕಾರ ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚಿಲುಮೆ ಸಂಸ್ಥೆಯಡಿ 'ಚುನಾವಣೆ ನಿರ್ವಹಣೆ' ವಿಭಾಗ ತೆರೆದಿದ್ದ ಆರೋಪಿಗಳು, ಮತ ಎಣಿಕೆ ಕೇಂದ್ರ, ಮಸ್ಟರಿಂಗ್ ಹಾಗೂ ಡಿ–ಮಸ್ಟರಿಂಗ್ ಕೇಂದ್ರಗಳ ಕೆಲಸದ ಗುತ್ತಿಗೆಯನ್ನೂ ತಮ್ಮದಾಗಿಸಿಕೊಳ್ಳುತ್ತಿದ್ದರು. ಈ ಮೂಲಕ ಆರೋಪಿಗಳು, ಚುನಾವಣೆ ಪ್ರಕ್ರಿಯೆಯಲ್ಲಿ ಭಾಗಿಯಾಗಲಾರಂಭಿಸಿದ್ದರು. ನಂತರ, ರಿಯಲ್ ಎಸ್ಟೇಟ್ ಸಹ ಮಾಡಲಾರಂಭಿಸಿದ್ದರು' ಎಂದೂ ತಿಳಿಸಿವೆ.

ಮತ ಪಟ್ಟಿ ಪರಿಷ್ಕರಣೆ: 'ಬಿಬಿಎಂಪಿ ವ್ಯಾಪ್ತಿಯ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಹಾಗೂ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡುವ ಕೆಲಸ ಕೈಗೊಳ್ಳಲು ಚಿಲುಮೆ ಸಂಸ್ಥೆಗೆ ಅನುಮತಿ ನೀಡಲಾಗಿತ್ತು. ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಹಾಗೂ ಮತದಾರರ ನೋಂದಣಾಧಿಕಾರಿ ಸಹಯೋಗದಲ್ಲಿ ಕೆಲಸ ಮಾಡಲು ಷರತ್ತು ವಿಧಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಷರತ್ತು ಉಲ್ಲಂಘಿಸಿದ್ದ ಸಂಸ್ಥೆಯ ಸಿಬ್ಬಂದಿ, ನಕಲಿ ಗುರುತಿನ ಚೀಟಿ ಇಟ್ಟುಕೊಂಡು ಮತದಾರರ ವೈಯಕ್ತಿಕ ಮಾಹಿತಿ ಸಂಗ್ರಹಿಸಿ ಮೊಬೈಲ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದರು. ಹೀಗೆ, ಸಂಗ್ರಹಿಸಿದ ಮಾಹಿತಿಯನ್ನೇ ಅವರು ಹಲವು ರಾಜಕಾರಣಿಗಳಿಗೆ ಮಾರುತ್ತಿದ್ದರು. ಈ ಸಂಗತಿ ಗೊತ್ತಾಗುತ್ತಿದ್ದಂತೆ ಅನುಮತಿ ರದ್ದುಪಡಿಸಿದ್ದ ಬಿಬಿಎಂಪಿ ಅಧಿಕಾರಿಗಳು, ಪೊಲೀಸ್ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೆಲ ಅಧಿಕಾರಿ, ರಾಜಕಾರಣಿಗಳಿಗೆ ಚಿಲುಮೆ ಸಂಸ್ಥೆ ಬೇನಾಮಿ'

'ಸರ್ಕಾರದ ವಿವಿಧ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕೆಲವು ಅಧಿಕಾರಿಗಳು ಹಾಗೂ ವಿವಿಧ ಪಕ್ಷಗಳ ಕೆಲ ರಾಜಕಾರಣಿಗಳು, ಚಿಲುಮೆ ಸಂಸ್ಥೆ ಮೂಲಕ ಬೇನಾಮಿ ವ್ಯವಹಾರ ನಡೆಸುತ್ತಿದ್ದ ಮಾಹಿತಿ ಇದೆ. ಈ ಸಂಬಂಧ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲೋಕೇಶ್, ದಿವ್ಯಾ ಪತ್ತೆಗಾಗಿ ವಿಶೇಷ ತಂಡ'

'ಸಂಸ್ಥೆಯಡಿ ಕೆಲಸ ಮಾಡುತ್ತಿದ್ದ ಕೆ.ಎಂ. ಲೋಕೇಶ್, ದಿವ್ಯಾ ಹಾಗೂ ಇತರೆ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗಾಗಿ ವಿಶೇಷ ತಂಡಗಳು ತನಿಖೆ ಚುರುಕುಗೊಳಿಸಿವೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಕೃತ್ಯಕ್ಕೆ ಸಹಕಾರಿ ಆಗುವ ರೀತಿಯಲ್ಲಿ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದ್ದ ಸಂಜೀವ್ ಶೆಟ್ಟಿ ಅವರನ್ನು ಈಗಾಗಲೇ ಬಂಧಿಸಲಾಗಿದೆ. ಆರೋಪಿ ದಿವ್ಯಾ, ಸಂಸ್ಥೆಯ ಜಾಲತಾಣ ಅಭಿವೃದ್ಧಿಪಡಿಸಿದ್ದರು' ಎಂದೂ ತಿಳಿಸಿವೆ.

'ಹಲವು ಕ್ಷೇತ್ರಗಳಲ್ಲಿ ಸಮೀಕ್ಷೆ'

'ಹುಬ್ಬಳ್ಳಿ, ಕನಕಗಿರಿ, ದಾವಣಗೆರೆ ಹಾಗೂ ಇತರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲೂ ವಿವಿಧ ಸಂಸ್ಥೆಗಳ ಮೂಲಕ ಮತದಾರರ ಸಮೀಕ್ಷೆ ಮಾಡಿಸಿರುವ ಮಾಹಿತಿ ಲಭ್ಯವಾಗಿದೆ. ಈ ಕ್ಷೇತ್ರದ ಮತದಾರರ ಮಾಹಿತಿ ದುರ್ಬಳಕೆ ಆಗಿದೆಯಾ? ಎಂಬುದನ್ನು ತಿಳಿಯಲು ಪ್ರತ್ಯೇಕ ತಂಡ ತನಿಖೆ ಆರಂಭಿಸಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಳಿತಪ್ಪಿದ ಗೂಡ್ಸ್ ರೈಲು ಮೂವರು ಸಾವು

ಜಾಜ್‌ಪುರ (ಪಿಟಿಐ): ಒಡಿಶಾದ ಜಾಜ್‌ಪುರ ಜಿಲ್ಲೆಯ ಕೊರೈ ರೈಲು ನಿಲ್ದಾಣದಲ್ಲಿ ಗೂಡ್ಸ್ ರೈಲೊಂದು ಸೋಮವಾರ ಬೆಳಿಗ್ಗೆ ಹಳಿತಪ್ಪಿ, ನಿಲ್ದಾಣದಲ್ಲಿ ಕಾಯುತ್ತಿದ್ದ ಪ್ರಯಾಣಿಕರ ಮೇಲೆ ಹರಿದ ಪರಿಣಾಮ ಮೂವರು ಮೃತಪಟ್ಟಿದ್ದು, 7 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ದುರಂತವು ಬೆಳಿಗ್ಗೆ 6.44 ಗಂಟೆಗೆ ಸಂಭವಿಸಿದೆ.

'ಯಾರು ಯಾರ ವಿರುದ್ಧ ತನಿಖೆ ನಡೆಸುತ್ತಾರೆ?'

ಮದ್ದೂರು (ಮಂಡ್ಯ): 'ಮತದಾರರ ಪಟ್ಟಿ ಅಕ್ರಮಕ್ಕೆ ಸಂಬಂಧಿಸಿ ನಾವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧವೇ ದೂರು ನೀಡಿದ್ದೇವೆ. ಆದರೆ, ಅವರೇ ಪ್ರಕರಣವನ್ನು ತನಿಖೆಗೆ ವಹಿಸುತ್ತೇವೆ ಎಂದು ಹೇಳಿದ್ದಾರೆ. ಯಾರು ಯಾರ ವಿರುದ್ಧ ತನಿಖೆ ಮಾಡಿಸುತ್ತಾರೆ?' ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವ್ಯಂಗ್ಯವಾಡಿದರು.

ಪಟ್ಟಣದ ಶಿವಪುರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಕ್ರಮವೇ ನಡೆದಿಲ್ಲ ಎಂದು ಮುಖ್ಯಮಂತ್ರಿ ಹೇಳಿಕೆ ನೀಡಿದ ಮೇಲೆ ಸತ್ಯ ಹೇಗೆ ಹೊರ ಬರುತ್ತದೆ ಎಂಬುದನ್ನು ಜನ ಅರ್ಥ ಮಾಡಿಕೊಳ್ಳಬೇಕು' ಎಂದರು.

'ಕಾಂಗ್ರೆಸ್ ದರೋಡೆ ಮಾಡುತ್ತಿದೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಟೀಕೆಗೆ ಪ್ರತಿಕ್ರಿಯಿಸಿದ ಅವರು, 'ನಾವು ವಿರೋಧ ಪಕ್ಷದಲ್ಲಿದ್ದೇವೆ. ಬಿಜೆಪಿಯವರು ಅಧಿಕಾರದಲ್ಲಿದ್ದಾರೆ. ಅವರೇ ಹಗಲು ದರೋಡೆ ನಡೆಸುತ್ತಿದ್ದು, ತಪ್ಪಾಗಿ ಕಾಂಗ್ರೆಸ್ ಎಂದು ಹೇಳಿರಬಹುದು' ಎಂದು ತಿರುಗೇಟು ನೀಡಿದರು. 'ನಮ್ಮ ಮೇಲೆ ಆರೋಪ ಮಾಡುವ ಅವರು ವಿರೋಧ ಪಕ್ಷದಲ್ಲಿದ್ದಾಗ ಏನು ಮಾಡುತ್ತಿದ್ದರು? ಆಗ ಕೊಲೆ ಮಾಡಿದ್ದೇವೆ ಎಂದು ಅವರೂ ಕೊಲೆ ಮಾಡುತ್ತಾರೆಯೇ? ಅವರ ತಪ್ಪುಗಳನ್ನು ಮುಚ್ಚಿಕೊಳ್ಳಲು ನಮ್ಮ ಮೇಲೆ ಆರೋಪ ಮಾಡುತ್ತಾರೆ' ಎಂದರು.

ರಾಮನ ಹಣೆಗೆ ಸೂರ್ಯಕಿರಣ: ವಿವಾದ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಯೋಧ್ಯೆ ರಾಮ ಮಂದಿರದಲ್ಲಿ ಪ್ರತಿಷ್ಠಾಪಿಸಲಾಗುವ ರಾಮನ ಮೂರ್ತಿಯ ಹಣೆಗೆ 2024ರ ರಾಮ ನವಮಿಯಂದು ಸೂರ್ಯನ ಕಿರಣ ಸ್ಪರ್ಶಿಸುವಂತೆ ಮಾಡುವ ಯೋಜನೆಯೊಂದನ್ನು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯು (ಸಿಎಸ್‌ಐಆರ್) ಕೈಗೊಂಡಿದೆ. ಇದು ವಿವಾದಕ್ಕೆ ಎಡೆ ಮಾಡಿದೆ.

ಸಿಎಸ್‌ಐಆರ್–ಸಿಬಿಆರ್‌ಐನ ವಿಜ್ಞಾನಿಗಳನ್ನು ಒಳಗೊಂಡ ತಂಡವು ರಾಮನ ಹಣೆಗೆ ಸೂರ್ಯನ ಕಿರಣ ಹೇಗೆ ಸ್ಪರ್ಶಿಸುತ್ತದೆ ಎಂಬುದನ್ನು ಇತ್ತೀಚೆಗೆ ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಟ್ಟಿದೆ ಎಂದು ಸಿಎಸ್‌ಐಆರ್ ಸೋಮವಾರ ಟ್ವೀಟ್ ಮಾಡಿದೆ. ಇದನ್ನು ಹಲವರು ಟೀಕಿಸಿದ್ದಾರೆ.

'ಸಿಎಸ್‌ಐಆರ್, ಸಾರ್ವಜನಿಕರ ಹಣದಿಂದ ನಡೆಯುತ್ತಿರುವ ಸಂಸ್ಥೆ. ನಮ್ಮ ತೆರಿಗೆ ಹಣವನ್ನು ಈ ಸಂಸ್ಥೆಗಾಗಿ ವಿನಿಯೋಗಿಸಲಾಗುತ್ತದೆ. ಸಂಸ್ಥೆಯು ಇಂತಹ ಯೋಜನೆ ಕೈಗೊಂಡಿರುವುದು ತಲೆ ತಗ್ಗಿಸುವಂತ ಹದ್ದು' ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದೆ ಮಹುವಾ ಮೊಯಿತ್ರಾ ಟ್ವೀಟ್ ಮಾಡಿದ್ದಾರೆ.

'ನನ್ನನ್ನು ಸಂಪರ್ಕಿಸಿದ್ದ ಹಿರಿಯ ವಿಜ್ಞಾನಿಯೊಬ್ಬರು ತಾನು ಭಾರತೀಯ ವಿಜ್ಞಾನಿ ಎಂದು ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ' ಎಂದೂ ಹೇಳಿದ್ದಾರೆ. ಈ ಯೋಜನೆಯಲ್ಲಿ ತೊಡಗಿಕೊಂಡಿರುವ ವಿಜ್ಞಾನಿಗಳ ತಂಡವು ತಮ್ಮ ನಿಲುವು ಸಮರ್ಥಿಸಿಕೊಂಡಿದೆ. ಇದು ಎಂಜಿನಿಯರಿಂಗ್ ವಲಯಕ್ಕೆ ದೊಡ್ಡ ಸವಾಲಾಗಿದೆ ಎಂದೂ ತಂಡ ತಿಳಿಸಿದೆ.

ರೂರ್ಕಿಯಲ್ಲಿರುವ ಕೇಂದ್ರೀಯ ಕಟ್ಟಡ ಸಂಶೋಧನಾ ಸಂಸ್ಥೆ (ಸಿಬಿಆರ್‌ಐ), ಬೆಂಗಳೂರಿನ ಭಾರತೀಯ ಖಭೌತಶಾಸ್ತ್ರ ಸಂಸ್ಥೆ (ಐಐಎ) ಹಾಗೂ ಪುಣೆಯ ಇಂಟರ್ ಯೂನಿವರ್ಸಿಟಿ ಸೆಂಟರ್ ಫಾರ್ ಆಸ್ಟ್ರೋನಮಿ ಆ್ಯಂಡ್ ಆಸ್ಟ್ರೋಫಿಸಿಕ್ಸ್‌ನ ವಿಜ್ಞಾನಿಗಳು ಈ ಯೋಜನೆಯಲ್ಲಿ ತೊಡಗಿಕೊಂಡಿದ್ದಾರೆ. ಇವರು ಖಗೋಳ ಲೆಕ್ಕಾಚಾರ ಮತ್ತು ಆಪ್ಟೋ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸವಾಲುಗಳ ಕುರಿತ ಅಧ್ಯಯನ ಕೈಗೊಂಡಿದ್ದಾರೆ.

'ಇದು ಸವಾಲಿನ ಕೆಲಸ. ಇದಕ್ಕಾಗಿ ನಾವು ಚಂದ್ರನ ಕ್ಯಾಲೆಂಡರ್ ಅನುಸರಿಸಬೇಕಾಗುತ್ತದೆ. ನಿರ್ದಿಷ್ಟ ವರ್ಷದ ನಿಗದಿತ ದಿನದಂದು ಸೂರ್ಯ ಯಾವ ಸ್ಥಾನದಲ್ಲಿ ಇರುತ್ತಾನೆ ಎಂಬುದನ್ನು ಅರಿಯಲು ಸೌರ ಕ್ಯಾಲೆಂಡರ್ ಅನ್ನು ಅವಲೋಕಿಸಬೇಕಾಗುತ್ತದೆ. ಸೂರ್ಯನ ಸ್ಥಾನವನ್ನು ಖಚಿತಪಡಿಸಿಕೊಂಡ ಬಳಿಕ ಅದರ ಕಿರಣಗಳು ಕನ್ನಡಿಗಳ ಮೇಲೆ ಬಿದ್ದು ಅದು ರಾಮನ ಹಣೆ ಮೇಲೆ ಪ್ರತಿಫಲಿಸುವಂತೆ ಮಾಡುವ ಯಾಂತ್ರಿಕ ವ್ಯವಸ್ಥೆಯನ್ನು ಅಳವಡಿಸಬೇಕಾಗುತ್ತದೆ' ಎಂದು ಸಿಎಸ್‌ಐಆರ್‌ನ ಮಾಜಿ ಮಹಾನಿರ್ದೇಶಕ ಶೇಖರ್ ಮಾಂಡೆ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

Advertorial

ಮೌಲ್ಯಯುತ ಬದುಕು, ಶಿಕ್ಷಣಕ್ಕೆ ಮೆರುಗು ನೀಡಿದ ಹೃದಯವಂತ ಶಿಕ್ಷಕಿ ಶ್ರೀಮತಿ. ತಿರುಮಲಮ್ಮ ನವರ 100ನೇ ವರ್ಷದ ಜನ್ಮದಿನದಂದು ಹೃತ್ಪೂರ್ವಕ ನಮನಗಳು.

ಶ್ರೀಮತಿ ತಿರುಮಲಮ್ಮ, ಮಲ್ಲೇಶ್ವರಂ ಶಿಶುವಿಹಾರದ ಒಂದು ಪರ್ಯಾಯ ಪದ, ಬೆಂಗಳೂರು ನಗರ ಮಲ್ಲೇಶ್ವರಂ ಕ್ಷೇತ್ರದ ಒಂದು ಸುಪ್ರಸಿದ್ಧ ಶಾಲೆ. ಅವರು ಈಗ ನಮ್ಮೊಂದಿಗಿಲ್ಲ ನಾವು ಅವರ 100ನೇ ಹುಟ್ಟುಹಬ್ಬವನ್ನು ಇಂದು ಆಚರಿಸುತ್ತಿದ್ದೇವೆ

ಅವರ ಹಿನ್ನೆಲೆಯ ಬಗ್ಗೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಅವರು ಹುಟ್ಟಿದ್ದು 22ನೇ ನವೆಂಬರ್ 1922 ಮೈಸೂರಿನ ಸುಶಿಕ್ಷಿತ, ಧರ್ಮ ಶ್ರದ್ಧೆಯುಳ್ಳ ಉದಾರ ದಂಪತಿಗಳಿಗೆ ಅವರು ಹನ್ನೊಂದು ಮಕ್ಕಳಲ್ಲಿ ಒಬ್ಬರು. ಅವರ ತಂದೆ ಶ್ರೀ ಬಿ.ಕೃಷ್ಣಸ್ವಾಮ್ಯೆಂಗಾರ್ ಅವರು ಕೃಷ್ಣರಾಜಸಾಗರ ಹಾಗು ಸುಂದರ ಉದ್ಯಾನವನ ಮತ್ತು ಮಂಡ್ಯಜಿಲ್ಲೆ ಹುಲಿಕೆರೆ ಸುರಂಗ ನಿರ್ಮಾಣದ ಹೊಣೆ ಹೊತ್ತ ಕಾರ್ಯನಿರ್ವಾಹಕ ವಾಸ್ತುಶಿಲ್ಪಿಗಳಲ್ಲಿ ಒಬ್ಬರು, ಮತ್ತು ತನ್ನ ಯೋಜನೆಗಳನ್ನು ಮುಗಿಸಿದ ತರುವಾಯ ಅವರು ಬೆಂಗಳೂರಿನ ಸರ್.ಎಂ. ವಿಶ್ವೇಶ್ವರಯ್ಯ ಯಂತ್ರ ಶಾಸ್ತ್ರ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದರು.

ಶ್ರೀಮತಿ ತಿರುಮಲಮ್ಮನವರ ತಾಯಿ ಶ್ರೀಮತಿ ಲಕ್ಷ್ಮಮ್ಮನವರು ಹಿಂದೂ ಸನಾತನ ಗ್ರಂಥಗಳಾದ ಮಹಾಕಾವ್ಯಗಳು, ವೇದಗಳು, ಉಪನಿಷತ್ತುಗಳು ಮತ್ತು ಸಂಸ್ಕೃತ ಶ್ಲೋಕಗಳಲ್ಲಿ ಹೆಚ್ಚು ಪರಿಣತರು. ಅವರ ಮಕ್ಕಳೆಲ್ಲರು ವಂಶಪರಂಪರೆಯ ಮರ್ಯಾದಸ್ಥ ಮಹತ್ವಗಳು ಮತ್ತು ಸತ್ವಭರಿತ ಗುಣಮಟ್ಟಗಳನ್ನು ಹೊಂದಿದ್ದರು.

ಹುಲಿಕೆರೆ ಸುರಂಗ ಯೋಜನೆಯ ನಿರ್ಮಾಣಕ್ಕೆ ಅವರ ಕುಟುಂಬ ಅಲ್ಲಿಗೆ ಸ್ಥಳಾಂತರಗೊಂಡಿತು. ಇದು ಒಂದು ಪುಟ್ಟಹಳ್ಳಿ, ತಿರುಮಲಮ್ಮ ನಾಲ್ಕನೆಯ ತರಗತಿಯವರೆಗೆ ಮಾತ್ರ ಶಾಲೆಯಲ್ಲಿ ಓದಿದರು. ಹುಲಿಕೆರೆಯಲ್ಲಿ ಹಿರಿಯ ಪ್ರಾಥಮಿಕ ಶಾಲೆ ಇರಲಿಲ್ಲ. ಆದ್ದರಿಂದ ಅವರು ಮನೆಯಲ್ಲಿಯೇ ಒಂಬತ್ತನೆಯ ತರಗತಿಯ ವರೆಗಿನ ಪಠ್ಯಕ್ರಮಗಳನ್ನು ಪೂರ್ಣಗೊಳಿಸಿದರು. ಕುಟುಂಬ ಬೆಂಗಳೂರಿಗೆ ಸ್ಥಳಾಂತರಗೊಂಡಾಗ ಅವರು ಕಮಲಾಬಾಯಿ ಪ್ರೌಢಶಾಲೆಯಲ್ಲಿ ಹತ್ತನೆಯ ತರಗತಿಗೆ ಸೇರ್ಪಡೆಯಾದರು. ಮತ್ತು ಅದನ್ನು ಸಫಲವಾಗಿ ಪೂರ್ಣಗೊಳಿಸಿದರು.

ಆಗಿನ ದಿನಗಳ ಪದ್ಧತಿಯಂತೆ ಅವರಿಗೆ ಒಬ್ಬ ಒಳ್ಳೆಯ ಸುಶಿಕ್ಷಿತ ವಕೀಲ ಶ್ರೀಮಾನ್ ಕೇಶವ ಅವರೊಂದಿಗೆ ವಿವಾಹವಾಯಿತು. ಅನಂತರ ಅವರ ವಿದ್ಯಾಭ್ಯಾಸ ನಿಲ್ಲಿಸಲಾಯಿತು. ವಿವಾಹದ ನಂತರ 8 ವರ್ಷಗಳೊಳಗೆ ಅವರ ಪುಟ್ಟ ಮಗುವನ್ನು ವಿಧಿಯು ಕಸಿದುಕೊಂಡಿತು, ನಂತರ ಅನಾರೋಗ್ಯದಿಂದ ಅವರ ಯಜಮಾನರು ಕೂಡ ದೈವಾಧೀನರಾದರು.

ಈ ದುರಂತದ ನಂತರ, ಅವರ ಪೋಷಕರು ಅವರ ವಿದ್ಯಾಭ್ಯಾಸವನ್ನು ಮುಂದುವರೆಸಲು ನಿಶ್ಚಯಿಸಿ ಬೆಂಗಳೂರಿನ ಮಹಾರಾಣೀಸ್ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ವಿಜ್ಞಾನ ವಿಭಾಗದಲ್ಲಿ ದಾಖಲಿಸಿದರು ಮತ್ತು ಅಲ್ಲೇ ಬಿ.ಎಸ್.ಸಿ. ಪದವಿಯನ್ನು ಪೂರೈಸಿದರು. ಪದವೀಧರರಾದ ನಂತರ ತಮ್ಮ ಶಿಕ್ಷಕಿಯ ಮೊದಲ ಕಾರ್ಯಾನುಭವನ್ನು ಮಲ್ಲೇಶ್ವರದ ಹಿಮಾಂಶು ಶಿಶುವಿಹಾರ ಶಾಲೆಯಲ್ಲಿ ಆರಂಭಿಸಿದರು. ತಿರುಮಲಮ್ಮ ಮಕ್ಕಳ ಜೊತೆ ಕಾಲಕಳೆಯುವುದನ್ನು ಇಷ್ಟಪಡುತ್ತಿದ್ದರು.

ಅವರ ಮಹದಾಸೆ ಅವರದೇ ಶಾಲೆ ತೆರೆಯ ಬೇಕೆಂಬುದು. ಮೇ 1953ರಲ್ಲಿ ವಾಸ್ತವ ರೂಪ ತಾಳಿದ ಮಲ್ಲೇಶ್ವರಂ ಶಿಶು ವಿಹಾರ, 5ನೇ ಅಡ್ಡ ರಸ್ತೆ, ಮಲ್ಲೇಶ್ವರದಲ್ಲಿ ಸ್ಥಾಪಿತವಾಯಿತು. (ಇಂದು ಶಾಲೆಯ ಮುಖ್ಯದ್ವಾರ 4ನೇ ಅಡ್ಡರಸ್ತೆ ಕಡೆಗೆ, ಹಾಗೂ ಮಲ್ಲೇಶ್ವರಂ ಶಿಶು ವಿಹಾರ ರಸ್ತೆ ಎಂದು ಕರೆಯಲ್ಪಟ್ಟಿದೆ.)

ಅವರ ಆಸೆಯಂತೆ ಅಲ್ಪ ಶುಲ್ಕದ ಜೊತೆಗೆ ದಾಖಲಾತಿಗಾಗಿ ಶಾಲೆಯಲ್ಲಿ ಯಾವ ವಂತಿಗೆಯನ್ನೂ ಸ್ವೀಕರಿಸುತ್ತಿರಲಿಲ್ಲ. ಮೌಲ್ಯಾಧಾರಿತ ಸುಶಿಕ್ಷಿತ ಶಿಕ್ಷಣವನ್ನು ಎಲ್ಲರಿಗೂ ಒದಗಿಸಬೇಕೆಂಬುದೇ ಅವರ ಗುರಿ. ಹತ್ತಿರದ ನಿರ್ಮಾಣ ಹಂತದ ನಿವೇಶನಗಳಿಗೆ ಅವರೇ ಸ್ವತಃ ಭೇಟಿಯಿತ್ತು ಕೂಲಿಯಾಳುಗಳಿಗೆ ಮಕ್ಕಳನ್ನು ಶಾಲೆಗೆ ಸೇರಿಸಿ ಮತ್ತು ವಿದ್ಯಾಭ್ಯಾಸವನ್ನು ನೀಡಿ ಎಂಬ ಸಲಹೆಯನ್ನು ಪೋಷಕರಿಗೆ ಅರಿವನ್ನೂ ಮೂಡಿಸುತ್ತಿದ್ದರು.

ಉದಾಹರಣೆಗೆ ಒಂದು ನಿರ್ಮಾಣ ಹಂತದ ಕಟ್ಟಡದ ಕೂಲಿಯೊಬ್ಬರು ಆಂಧ್ರದಿಂದ ಬಂದವರು ತಮ್ಮ 5 ಜನ ಮಕ್ಕಳನ್ನೂ ಎಂ.ಎಸ್.ವಿ. ಶಾಲೆಗೆ ಸೇರಿಸಿದರು. ಈಗ ಎಲ್ಲರೂ ಪದವೀಧರರು ಮತ್ತು ಒಳ್ಳೆಯ ನೆಲೆಯಲ್ಲಿದ್ದಾರೆ. ಎಂ.ಎಸ್.ವಿ. ಖ್ಯಾತಿ ಬಾಯಿಂದ ಎಲ್ಲೆಡೆ ಹರಡಿ ಶಾಲೆ ನಿಧಾನವಾಗಿ ಬೆಳೆದು ಶಕ್ತಿಯುತವಾಗಿದೆ ಮತ್ತು ಒಳ್ಳೆಯ ಪ್ರಗತಿಹೊಂದಿದೆ.

ನಂತರದ ಹತ್ತು ವರ್ಷಗಳಲ್ಲಿ ತಿರುಮಲಮ್ಮ ತನ್ನ ವಿದ್ಯಾಭ್ಯಾಸವನ್ನು ಮಲ್ಲೇಶ್ವರದ MES ಶಿಕ್ಷಕರ ಕಾಲೇಜಿನಲ್ಲಿ ಮುಂದುವರೆಸಿದರು. ಅವರು BEd ಪದವಿಗೆ ಮೊದಲನೆಯ ವಿದ್ಯಾರ್ಥಿನಿಯಾಗಿ ದಾಖಲಾದರು. ತರುವಾಯ ಮಾಂಟೆಸೊರಿ ಶಿಕ್ಷಣ ವಿಧಾನದಲ್ಲಿ ತರಬೇತಿ ಪಡೆಯಲು ಆಯ್ಕೆಯಾದ ಪ್ರತಿನಿಧಿಗಳಲ್ಲಿ ಒಬ್ಬರಾಗಿ ರಷ್ಯಾಕ್ಕೆ ಭೇಟಿ ನೀಡಿದರು.

ರಷ್ಯಾದಿಂದ ಹಿಂದಿರುಗಿದ ನಂತರ, ಮಾಂಟೆಸೊರಿ ಶಿಕ್ಷಣ ವಿಧಾನವನ್ನು MSV ಯಲ್ಲಿ ಅಳವಡಿಸಿದರು. ಬೇರೆ ಶಾಲೆಗಳಿಗಿಂತ ಭಿನ್ನವಾಗಿ ಈ ಶಾಲೆಯನ್ನು ತಯಾರಿಗೊಳಿಸಿ ಈ ಪದ್ಧತಿಯ ಶಿಕ್ಷಣವನ್ನು ಒದಗಿಸುವಲ್ಲಿ ಮೊದಲನೆಯದಾಗಿ ಕೀರ್ತಿಗಳಿಸಿತು.

ತಮ್ಮ ಶಿಕ್ಷಕಿಯರನ್ನು ಜಾಗೃತವಾಗಿ ಆರಿಸಿಕೊಂಡರು. ಅವರಿಗೆ ಒಳ್ಳೆಯ ಮಾರ್ಗದರ್ಶಕರಾಗಿ ಒಳ್ಳೆಯ ವಾತಾವರಣವನ್ನು ಸೃಷ್ಟಿಸಿಕೊಂಡರು. ಅವರ ಶಿಕ್ಷಕರಿಗೆ ಮಾಂಟೆಸೊರಿ ಶಿಕ್ಷಣದ ತರಬೇತಿಯನ್ನು ಅವರೇ ನೀಡಿದರು. ಅವರು ಕಡಿಮೆವೆಚ್ಚದ ಮತ್ತು ವೆಚ್ಚವೇ ಇಲ್ಲದ ಆಕರ್ಷಕವಾದ ಶೈಕ್ಷಣಿಕ ವಸ್ತುಗಳನ್ನು ತಯಾರಿಸುತ್ತಿದ್ದರು. ಈ ಶೈಕ್ಷಣಿಕ ವಸ್ತುಗಳ ತಯಾರಿಕೆ ಮತ್ತು ಉಪಯೋಗದ ರೀತಿಯನ್ನು ತಮ್ಮ ಶಿಕ್ಷಕಿಯರಿಗೆ ತರಬೇತಿ ನೀಡಿದರು. ಅವರ ಸಹಾಯದಿಂದಲೇ ಸರ್ಕಾರಿ ಶಾಲೆ ಮತ್ತು ಅಂಗನವಾಡಿ ಶಾಲೆಯ ಶಿಕ್ಷಕಿಯರಿಗೂ ತರಬೇತಿ ನೀಡಿದರು.

ಕೋಪ, ಅಸಮಾಧಾನ ಅವರಲ್ಲಿ ಇರಲೇ ಇಲ್ಲ. ಯಾವ ವಿದ್ಯಾರ್ಥಿಯಾದರೂ ತಪ್ಪು ಮಾಡಿದರೆ ಅವರನ್ನು ತಮ್ಮ ಕೋಣೆಯಲ್ಲಿ ಕೆಲಕಾಲ ನಿಲ್ಲಿಸಿಕೊಂಡು ನಂತರ ತಪ್ಪಿನ ಕೆಡಕನ್ನು ಹೇಳಿ ಅರ್ಥವಾಗುವಂತೆ ತಿಳಿಹೇಳುತ್ತಿದ್ದರು.

ಶ್ರೀಮತಿ ತಿರುಮಲಮ್ಮನವರು ಒಳ್ಳೆಯ ಮಾನಸಿಕ ಸಲಹಾಗಾರರಾಗಿದ್ದರು. ಕೆಲವೊಂದು ಸಲ ಪೋಷಕರು ಅವರ ವೈಯಕ್ತಿಕ ವಿಚಾರಗಳ ಬಗ್ಗೆಯೂ ಸಲಹೆ ಪಡೆಯುತ್ತಿದ್ದರು. ಕೆಲ ಪೋಷಕರು ಅವರ ಮಕ್ಕಳ ಬಗ್ಗೆ ಶಾಲೆಯ ಮೇಲೆ ಅಸಮಾಧಾನದಿಂದ ಕೂಗಾಡಿದರೆ ತಿರುಮಲಮ್ಮನವರು ಅವರುಗಳನ್ನು ಮಾತನಾಡುವುದಕ್ಕೆ ಬಿಟ್ಟು ನಂತರ ಅವರಿಗೆ ಸರಿಯಾದ ವಿಷಯವನ್ನು ತಿಳಿಸಿ ಸಮಾಧಾನಗೊಳಿಸುತ್ತಿದ್ದರು. ಪೋಷಕರು ಸಮಾಧಾನವಾಗಿ ಕ್ಷಮೆಕೇಳಿ ತಮ್ಮ ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಪ್ರೋತ್ಸಾಹಿಸಿದ್ದರಿಂದ ವಂದನೆಯನ್ನೂ ಹೇಳಿ ಹಿಂದಿರುಗುತ್ತಿದ್ದರು. ತಿರುಮಲಮ್ಮನವರು ಯಾವ ಸಂದರ್ಭದಲ್ಲಿಯೂ ತಾಳ್ಮೆಗೆಡದೆ ಮೃದುಭಾಷಿಯಾಗಿದ್ದರು.

ಅವರು ಶಾಲೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ಶಾಲೆಯ ಪ್ರತಿಕಾರ್ಯಕ್ರಮದಲ್ಲೂ ಮತ್ತು ಸ್ಪರ್ಧೆಗಳಲ್ಲೂ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತಿದ್ದರು. ಪ್ರತಿವರ್ಷವೂ ಎಲ್ಲರನ್ನೂ ಪ್ರವಾಸಕ್ಕೆ ಒಳ್ಳೆಯ ಸ್ಥಳಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಪ್ರತಿವರ್ಷ ಎಲ್ಲಾ ಹಬ್ಬಗಳ ಬಗ್ಗೆ ವಿವರಿಸಿ ಆಚರಿಸುತ್ತಿದ್ದರು. ಶ್ರೀ ಕೃಷ್ಣಜನ್ಮಾಷ್ಟಮಿಯಂದು ಎಲ್ಲರನ್ನೂ ತಮ್ಮ ಮನೆಗೆ ಕರೆಸಿಕೊಂಡು ರುಚಿಯಾದ ತಿನಿಸುಗಳನ್ನು ಕೊಡಿಸುತ್ತಿದ್ದರು. ಶಾಲೆಯವರು ಮತ್ತು ಮನೆಯವರು ಭೇಟಿ ಮಾಡಲು ಇದೊಂದು ವಿಶೇಷ ಸನ್ನಿವೇಶ.

ಶ್ರೀಮತಿ ತಿರುಮಲಮ್ಮನವರು ಎನ್‌ಸಿಇಆರ್‌ಟಿ ಡಿಎಸ್‌ಇಆರ್‌ಟಿ ಶಿಕ್ಷಕರ ತರಬೇತಿ ಕಾರ್ಯಾಗಾರಗಳಲ್ಲಿ ಮತ್ತು ಪಠ್ಯಕ್ರಮ ರಚನೆಗಳಲ್ಲಿ ಸತತವಾಗಿ ತೊಡಗಿಸಿಕೊಂಡಿದ್ದರು. ಆಂಗ್ಲ ಭಾಷೆಯ ತರಬೇತಿ ಪುಸ್ತಕಗಳಲ್ಲಿ ಕೆಲವನ್ನು ಕನ್ನಡ ಭಾಷೆಗೆ ಅನುವಾದಿಸಿದ್ದಾರೆ. ಸುಲಭ ರೀತಿಯಲ್ಲಿ ಕನ್ನಡ ಕಲಿಯಲು ಪುಸ್ತಕಗಳನ್ನು ರಚಿಸಿದ್ದಾರೆ. ಪ್ರಾರಂಭದಲ್ಲಿ ಒತ್ತಕ್ಷರ ವಿಲ್ಲದೇ ಕಲಿಯಬಹುದಾದ ಪುಸ್ತಕಗಳು; ಕಂದಾ ಅಕ್ಷರ ಕಲಿ, ನಮ್ಮಮನೆ, ಕಂದಾ ಓದುವೆಯಾ ಭಾಗ–1 ಒತ್ತಕ್ಷರವಿಲ್ಲದ್ದು, ಕಂದಾ ಓದುವೆಯಾ ಭಾಗ–2 ಒತ್ತಕ್ಷರದ್ದು.

ಇವಲ್ಲದೇ ಅವರು ಬಹಳಷ್ಟು ಮೌಲ್ಯಾಧಾರಿತ ಮತ್ತು ಗಣಿತ ಮತ್ತು ಪದಗಳ ಕಲಿಕೆ ಸುಲಭವಾಗುವಂತೆ ಶಿಶುಗೀತೆಗಳನ್ನು ರಚಿಸಿದ್ದಾರೆ. ಅವರು ರಚಿಸಿರುವ ಕೆಲವು ಮಕ್ಕಳ ಶಿಶುಗೀತೆಗಳು 'ಬಂಗಾರಿ' ಎಂಬ ಹೆಸರಿನಲ್ಲಿ ಸಿಡಿ ಮಾಡಿ ಕೆಲವು ಸರ್ಕಾರಿ ಶಾಲೆಗೆ ಕೊಟ್ಟಿರುತ್ತಾರೆ. ಇವರ ಶಿಶುಗೀತೆಗಳು ಮತ್ತು ಕನ್ನಡ ಕಲಿಯುವ ಪುಸ್ತಕಗಳನ್ನು ಜನಸಾಮಾನ್ಯರು ಮತ್ತು ಗ್ರಾಮೀಣ ಶಾಲೆಗಳಿಗೆ ನವಕರ್ನಾಟಕ ಕಛೇರಿಗೆ ನೀಡಿದ್ದಾರೆ. ಕರ್ನಾಟಕ ಸರ್ಕಾರದ ಶೈಕ್ಷಣಿಕ ವಿಭಾಗದಲ್ಲಿ ತಿರುಮಲಮ್ಮನವರು ಶಾಲೆ ನಡೆಸುವ ರೀತಿ ಮತ್ತು ಶಿಕ್ಷಣದಲ್ಲಿರುವ ಆಸಕ್ತಿಯನ್ನು ಬಹಳಷ್ಟು ಮೆಚ್ಚಿರುತ್ತಾರೆ. ಇದರಿಂದಾಗಿ ಅವರಿಗೆ "ರಾಜ್ಯ ಶಿಕ್ಷಕ ಪ್ರಶಸ್ತಿ"ಯನ್ನು ನೀಡಿದ್ದಾರೆ. ಇದರೊಂದಿಗೆ ಅತ್ತಿಮಬ್ಬೆ ಮತ್ತು ಹಲವಾರು ಪ್ರಶಸ್ತಿಗಳು ಸಂದಿವೆ.

ಈ ಶಾಲೆಯ ವಿಶೇಷತೆ ಎಂದರೆ ಮಕ್ಕಳು ಶಿಕ್ಷಕಿಯರನ್ನು ಅವರ ಹೆಸರು ಹಿಡಿದೇ ಕರೆಯುತ್ತಿದ್ದರು ಸ್ನೇಹಪರತೆ ಬೆಳೆಯಲೆಂದು.

ಈ ಶಾಲೆಯ ಹಿರಿಯ ವಿದ್ಯಾರ್ಥಿಗಳು ಇಂದಿಗೂ ಪ್ರತಿವರ್ಷ ಜನವರಿ ತಿಂಗಳಲ್ಲಿ ಭೇಟಿಯಾಗಿ ಶ್ರೀಮತಿ ತಿರುಮಲಮ್ಮ, ಶಿಕ್ಷಕರು ಅಲ್ಲಿ ಕಲಿತ ಮೌಲ್ಯಗಳು ಮತ್ತು ಅಲ್ಲಿ ಕಲಿತ ಶಿಸ್ತಿನ ಬಗ್ಗೆ ನೆನಪಿಸಿಕೊಳ್ಳುತ್ತಾರೆ.

ಅವರ ಮುಖ್ಯವಾದ ಗುರಿ ಎಲ್ಲಾ ಮಕ್ಕಳಿಗೂ ಒಳ್ಳೆಯ ಶಿಕ್ಷಣ ನೀಡುವುದು. ಹೀಗಾಗಿ ಅವರು ಮಾನಸಿಕ ಅಸ್ವಸ್ಥ ಮತ್ತು ಅಂಗವಿಕಲ ಮಕ್ಕಳಿಗಾಗಿ "ಬಾಲ ಮನೋವಿಕಾಸ ಕೇಂದ್ರ" ಶಾಲೆಯನ್ನು ಸ್ಥಾಪಿಸಿದರು. ಪ್ರಾರಂಭದಲ್ಲಿ ಎಂ.ಎಸ್.ವಿ. ಶಾಲೆಯಲ್ಲಿಯೇ ನಡೆಸಿದರು. ನಂತರ ಮಕ್ಕಳ ಸಂಖ್ಯೆ ಹೆಚ್ಚಾಗಿ ಸ್ಥಳಾವಕಾಶದ ಕೊರತೆಯಾದ್ದರಿಂದ ಪತ್ಯೇಕ ಸ್ಥಳದಲ್ಲಿ ಪ್ರಾರಂಭಿಸಿದರು. ಈಗ ಮಲ್ಲೇಶ್ವರಂ ವೆಸ್ಟ್‌ಪಾರ್ಕ್ ರಸ್ತೆಯಲ್ಲಿದೆ.

ಶ್ರೀಮತಿ ತಿರುಮಲಮ್ಮ ನವರಿಗೆ ಸಂಗೀತ ಮತ್ತು ಕಲೆಯಲ್ಲಿ ಬಹಳ ಆಸಕ್ತಿ. ಅವರು ಬಹಳಷ್ಟು ಪೈಂಟಿಂಗ್‌ಗಳನ್ನು ರಚಿಸಿದ್ದಾರೆ. ಅವರು ವಯಲಿನ್ ನುಡಿಸುವಿಕೆಯಲ್ಲಿ ಪರಿಣಿತರಾಗಿದ್ದರು. ಅವರ ಜರ್ಮನ್ ವಯಲಿನನ್ನು ಶಾಲೆಯ ಶಿಕ್ಷಕಿಯೊಬ್ಬರು ಆಸಕ್ತಿ ತೋರಿಸಿದ್ದರಿಂದ ಅವರಿಗೆಕೊಟ್ಟರು.

ಇವೆಲ್ಲದರ ಜೊತೆಗೆ ಅವರು ಮನೆಯಲ್ಲಿಯೂ ಆಧಾರಸ್ತಂಭವಾಗಿದ್ದರು. ಅವಶ್ಯಕತೆ ಬಿದ್ದಾಗ ಅಡಿಗೆ, ಮನೆಯ ಸ್ವಚ್ಛತೆ, ಶುಶ್ರೂಷೆ ಮಾಡುವುದರಲ್ಲೂ ತೊಡಗಿಸಿಕೊಂಡಿದ್ದರು. ಅವರ ದೇಹಸ್ಥಿತಿ ಕ್ಷೀಣವಾಗಿದ್ದರೂ ಕೊನೆಯವರೆಗೂ ಶಾಲೆಯ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. 2ನೇ ಸೆಪ್ಟಂಬರ್ 2001ರಲ್ಲಿ ಶಾಲೆ ಮತ್ತು ನಮ್ಮೆಲ್ಲರನ್ನೂ ಅಗಲಿದರು.

ಅವರ ಶತಾಬ್ದಿಯ ಸಂದರ್ಭದಲ್ಲಿ ಶಾಲೆಯ ಸಂಸ್ಥಾಪಕರಾದ ತಿರುಮಲಮ್ಮನವರನ್ನು ಸ್ಮರಿಸಿ ಶಾಲೆಯ ಪ್ರಪ್ರಥಮ ವಿದ್ಯಾರ್ಥಿನಿಯಾದ ನನ್ನ ನಮನಗಳು, 2003ರಲ್ಲಿ ಶಾಲೆಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಅವರಿಲ್ಲದಿದ್ದರೂ ನನಗೆ **"ಆದ್ಯಲಕ್ಷ್ಮಿ"** ಎಂಬ ನಾಮಧೇಯವನ್ನು ನೀಡಿ ಸತ್ಕರಿಸಿದ್ದರು.

–ಲಕ್ಷ್ಮಿ ಶ್ರೀಧರನ್

ಅರಳಲಿ ಬಾಲನಂದನ

ಮಕ್ಕಳಿಗೆ ಅನ್ನ-ಆಹಾರದ ಜೊತೆಗೆ ಪ್ರೀತಿ, ವಿಶ್ವಾಸ, ಭರವಸೆ, ನಂಬಿಕೆ, ಆತ್ಮಶ್ರದ್ಧೆ – ಇವುಗಳನ್ನೂ ಪೋಷಕರು ಒದಗಿಸಬೇಕು.

ರಘು ವಿ.

ಮನಸ್ಸು ಎಂಬ ಮಡುವಿಗೆ ಯಾವ ಗಾತ್ರದ ಕಲ್ಲು ಬಿತ್ತೆಂಬುದು ಮುಖ್ಯವಲ್ಲ. ಆದರೆ ಅದು ನೀರನ್ನು ಕದಡಿತು ಎಂಬುದು ಮುಖ್ಯ. ಅದರಲ್ಲೂ ಬೆಳವಣಿಗೆಯ ಹಂತದಲ್ಲಿರುವ ಮನಸ್ಸಿಗೆ ಆಗುವ ಆಘಾತ ಬಹಳ ಪರಿಣಾಮ ಬೀರುತ್ತದೆ. ಮತ್ತೊಂದು ಗಮನೀಯ ಅಂಶ ಇದೆ. ಕಲ್ಲು ಬೀಳದೆ ಅದರಲ್ಲಿ ಮಳೆನೀರು ಬಿದ್ದರೂ ಅದು ಕದಡುತ್ತದೆ. ತುಂಬಿಕೊಳ್ಳಲೆಂದು ಬಿಂದಿಗೆಯನ್ನು ಅದ್ದಿದರೂ ಕೊಳದ ನೀರು ಕಲಮಲಗೊಳ್ಳುತ್ತದೆ. ಅಂದರೆ ಮನೋವ್ಯಾಪಾರದಲ್ಲಿ ಈ ಬಗೆಯ ಕಲಮಲ ಸಹಜ ಎಂದಾಯಿತು. ದೂರದ ಬೆಟ್ಟ ಹೇಗೆ ನುಣ್ಣಗೋ ಹಾಗೇ ದೂರದ ಮಡುವೂ ಶಾಂತ, ತರಂಗರಹಿತ. ಹತ್ತಿರ ಹೋದಾಗಲೇ ಅದರ ಮೇಲ್ಮೈ ನಡುಗುತ್ತಿರುವುದು ಕಾಣುವುದು. ಮನುಷ್ಯರ ಮನಸ್ಸೂ ಅಂತೆಯೇ. ದೂರದಿಂದ ಎಲ್ಲ ಹಸನು. ಆದರೆ ಹತ್ತಿರವಿದ್ದಾಗ ಮಾತ್ರ ತುಮುಲದ ತರಂಗಗಳು ಗೋಚರಿಸುವವು.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ-ಶಿಕ್ಷಕ-ಪೋಷಕರು ಹೇಗೆ ಪರಸ್ಪರ ಪೂರಕರಾಗಿ ನಿಂತು ಸದೃಢ ಮನಸ್ಸನ್ನು, ವ್ಯಕ್ತಿತ್ವವನ್ನು ರೂಪಿಸಲು ಸಾಧ್ಯ ಎಂಬುದನ್ನು ಈ ಲೇಖನದಲ್ಲಿ ಬಿಂಬಿಸುವ ಪ್ರಯತ್ನವನ್ನು ಮಾಡಲಾಗಿದೆ.

ಮನಸ್ಸು ಕಲಮಲಗೊಳ್ಳುತ್ತದೆ ಎಂದ ಮಾತ್ರಕ್ಕೆ ಅದನ್ನು ಹಾಗೇ ಬಿಡಲಾರದು. ಏಕೆಂದರೆ ಮನುಷ್ಯ ಚಿಂತನಾಜೀವಿ. ಕೇವಲ ಕರಣಗಳ ಅನುಭವಕ್ಕೆ ಅವನ ಬದುಕು ಸೀಮಿತವಲ್ಲ. ಹೆಚ್ಚಿನ ಅನುಭವಕ್ಕೆ ಒತ್ತಡಕ್ಕೆ ಅವನು ತನ್ನನ್ನು ತಾನು ಒಪ್ಪಿಸಿಕೊಂಡಾಗ ಅವನಿಂದ ಮಹತ್ತರವಾದದ್ದು ಘಟಿಸುತ್ತದೆ. ಶಿಕ್ಷಣದ ಒಂದು ಮುಖ್ಯ ಉದ್ದೇಶವೇ ಸಮಾಜಪೂರಕ ವ್ಯಕ್ತಿಗಳನ್ನು ರೂಪಿಸುವುದು. ‘ರೂಪಿಸು’ ಎಂಬ ಪದದಲ್ಲೇ ತಿದ್ದು ಎಂಬ ಅರ್ಥ ಧ್ವನಿತವಾಗುತ್ತಿದೆ. ತಿದ್ದಬೇಕಾದರೆ ಕೊಂಚ ಒತ್ತಡವನ್ನು ಹಾಕಬೇಕು. ಜೇಡಿಮಣ್ಣನ್ನು ತಿಗರಿಯ ಮೇಲಿಟ್ಟು ತಿರುಗಿಸಿ, ಅದನ್ನು ಒತ್ತಿ ಆಕಾರಕ್ಕೆ ತಂದು ತಟ್ಟಿ ಒಣಗಿಸಿ ಆವುಗೆಯ ಬೆಂಕಿ, ಕಾವು ಕೊಟ್ಟ ಮೇಲೆ ತಾನೇ ಮಡಕೆಯಾಗುವುದು? ಇಲ್ಲವಾದರೆ ಮಣ್ಣು ಮಣ್ಣಾಗಿಯೇ ಉಳಿದುಬಿಡುತ್ತದೆ. ಶಿಕ್ಷಣ ವ್ಯವಸ್ಥೆಯ ತಿಗರಿಯ ಮೇಲೆ ಮಕ್ಕಳನ್ನು ಇರಿಸಿ ಅವರ ಆಲೋಚನೆಗಳಿಗೊಂದು ಆಕಾರ ಕೊಟ್ಟು ಪ್ರಾಯೋಗಿಕ ಅಂಶಗಳಲ್ಲಿ ಬೇಯಿಸಿ ಹದಗೊಳಿಸಿದಾಗಲೇ ಅವನು ಸಮಾಜೋಪಯೋಗಿ ವ್ಯಕ್ತಿಯಾಗುವುದು. ಹೀಗಾಗಿ ಒತ್ತಡ ಹಾಕುವುದು ತಪ್ಪು ಎನ್ನಲಾಗದು. ಶಿಸ್ತಿಲ್ಲದ, ಶಿಸ್ತು ಕಲಿಸದ ಶಿಕ್ಷಣ ಶಿಕ್ಷಣವೇ ಅಲ್ಲ. ಶಿಸ್ತಿಗೆ, ದಂಡನೆಗೆ ಒಳಗಾಗದೆ ಶಾಲಾ ಕಲಿಕೆ ಪೂರೈಸಿದವರು ಯಾರಿದ್ದಾರೆ?

ಶಿಸ್ತಿನ ನೆಪದಲ್ಲಿ ಮಕ್ಕಳನ್ನು ಸುಸ್ತು ಮಾಡುವುದು ತಪ್ಪೇ. ಕೊಂಚ ಮಟ್ಟಿಗಿನ ಬಿಗಿ ಇಲ್ಲದಿದ್ದರೆ ಕಲಿಕೆಯಾಗದು. ಎಲ್ಲ ಮಕ್ಕಳಿಗೂ ಕಲಿಕೆ ಎಂಬುದು ಇಷ್ಟವಾಗದ ಅನುಭವ. ಆದರೆ ಒಮ್ಮೆ ಓದಿನ ರುಚಿ ಹತ್ತಿಬಿಟ್ಟರೆ, ಅಂತಹ ವಿದ್ಯಾರ್ಥಿಯನ್ನು ತಡೆಯಲು ಯಾರಿಂದಲೂ ಸಾಧ್ಯವಾಗದು. ಮಕ್ಕಳಿಗೂ ಮನಸ್ಸಿದೆ, ಅವರಿಗೂ ಗೌರವವಿದೆ, ಕಾನೂನಿನ ಚೌಕಟ್ಟಿನಲ್ಲಿ ಅವರಿಗೂ ಹಕ್ಕಿದೆ ಎಂಬುದನ್ನು ಮರೆಯಲಾಗದು. ಅದರಲ್ಲೂ ಅವರ ಸಮಾನವರ್ಗದವರ ಮುಂದೆ ಅಪಮಾನವಾದರೆ ಅವರು ಸಹಿಸರು. ಹೀಗಾಗಿ ತರಗತಿಯಲ್ಲಿ ಮಾತನಾಡುವಾಗ ಶಿಕ್ಷಕ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಮಕ್ಕಳು ಹೊರನೋಟಕ್ಕೆ ದೃಢವಾಗಿ ಕಂಡರೂ ಅವರೊಳಗೊಂದು ದುರ್ಬಲತೆಯೂ ಇರಬಹುದು. ಮಕ್ಕಳು ತಪ್ಪು ಮಾಡಿದಾಗ ಗದರಿಸುವುದೇ ಆದರೆ ಅವರನ್ನು ಶಿಕ್ಷಕರ ಕೊಠಡಿಗೆ ಕರೆದು ಎಚ್ಚರಿಸುವುದು ಒಳಿತು. ತರಗತಿಯಲ್ಲಿ ವಿದ್ಯಾರ್ಥಿಯ ಒಳ್ಳೆಗುಣಗಳನ್ನು ಎಲ್ಲರ ಮುಂದೆ ಶ್ಲಾಘಿಸಬೇಕು. ಮಕ್ಕಳಲ್ಲಿ ಶಿಕ್ಷಕನಾದವನು ನಿರ್ವ್ಯಾಜಪ್ರೀತಿಯನ್ನು ಹೊಂದಿರಬೇಕು. ತಮ್ಮಿಷ್ಟದ ಶಿಕ್ಷಕ ದಂಡಿಸಿದರೂ ಬೈದರೂ ಮಕ್ಕಳು ತಡೆದುಕೊಳ್ಳುತ್ತಾರೆ. ಮೊದಲಿಗೆ ಮಕ್ಕಳ ಪ್ರೀತಿ ಗೌರವಗಳನ್ನು ಗಳಿಸಿದರೆ, ಅವರನ್ನು ಕೊಂಚ ದಂಡಿಸಿದರೂ ಅವರು ಅದನ್ನು ಅರಗಿಸಿಕೊಂಡು ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಾರೆ. ಹಿಂದಿನ ಕಾಲದಂತೆ ಈಗ ಮನೆ ತುಂಬ ಮಕ್ಕಳಿರುವುದಿಲ್ಲ. ಒಬ್ಬರೋ ಇಬ್ಬರೋ ಇರುತ್ತಾರೆ. ಆದುದರಿಂದ ಅವರಿಗೆ ಜೋಪಾನವಾಗಿ ವಿದ್ಯೆ ಕಲಿಸಿ ಕಳಿಸಿಕೊಡಬೇಕು. ಮಕ್ಕಳ ಮನಸ್ಸನ್ನು ಹೆಚ್ಚಿನ ಚಟುವಟಿಕೆಗಳಲ್ಲಿ ತೊಡಗಿಸಿದಾಗ ಅವರಲ್ಲಿ ಕ್ರಿಯಾಶೀಲತೆ ಹೆಚ್ಚಿ ಮನಸ್ಸು ಖಾಲಿಯಾಗಿರುವುದು ನಕಾರಾತ್ಮಕ ಆಲೋಚನೆ ಮಾಡುವುದು ತಪ್ಪುತ್ತದೆ. ಪಠ್ಯೇತರ ಚಟುವಟಿಕೆಗಳು ಇರುವುದೇ ಇದಕ್ಕಾಗಿ. ಶಾಲೆಯ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಎಲ್ಲ ಮಕ್ಕಳೂ ಭಾಗವಹಿಸುವಂತೆ ಶಿಕ್ಷಕರು ಗಮನಿಸಿಕೊಳ್ಳಬೇಕು. ಅಲ್ಲಿಯ ಸೋಲು-ಗೆಲುವುಗಳು, ನೋವು-ಅಪಮಾನಗಳು ಮಕ್ಕಳನ್ನು ಗಟ್ಟಿಗೊಳಿಸುತ್ತವೆ.

ಸವಾಲುಗಳು

ಹೊಸ ಜಗತ್ತಿನ ಸವಾಲುಗಳು ಅನೇಕ. ಅದೆಂತಹ ವೇಗವೆಂದರೆ ಕ್ಷಣದಲ್ಲಿ ಬದುಕನ್ನು ಆಪೋಶನ ತೆಗೆದುಕೊಂಡುಬಿಡುವಷ್ಟು ಆವೇಗ. ಪೋಷಕ-ಶಿಕ್ಷಕರು ಏನಾಗುತ್ತಿದೆ ಎಂದು ಆಲೋಚಿಸುವಷ್ಟರಲ್ಲಿ ಪರಿಸ್ಥಿತಿ ಕೈಮೀರಿ ಹೋಗಿರುವ ಸಂದರ್ಭಗಳೂ ಇವೆ. ಬದುಕಿಗೂ ಸಾವಿಗೂ ನಡುವೆ ಒಂದು ಸೂಕ್ಷ್ಮ ಗೆರೆ ಇದೆ. ದುರ್ಬಲ ಕ್ಷಣವೊಂದರಲ್ಲಿ ಮಕ್ಕಳು ಅದನ್ನು ಅಳಿಸದಂತೆ ನಾವು ಎಚ್ಚರ ವಹಿಸಬೇಕು. ಮಾಧ್ಯಮಗಳು, ಅದರಲ್ಲೂ ಮುಖ್ಯವಾಗಿ ಸಾಮಾಜಿಕ ಜಾಲತಾಣಗಳು ನಮ್ಮನ್ನು ವ್ಯಾಪಿಸಿಕೊಳ್ಳುತ್ತಿವೆ. ಅದರಲ್ಲಿ ಲಘುಬಿಗಿಯಿರದೆ ಅತಿಯಾಗಿ ತೊಡಗಿಕೊಂಡರೆ ಮನಸ್ಸಿನ ದೌರ್ಬಲ್ಯ ಹೆಚ್ಚುತ್ತದೆ ಎಂದು ಮನೋವೈದ್ಯರು ತಿಳಿಸಿದ್ದಾರೆ. ಹಾಗೆಂದು ಮಕ್ಕಳ ಕೈಯಿಂದ ಫೋನು ಕಿತ್ತುಕೊಳ್ಳುವುದು ಪರಿಹಾರವಲ್ಲ. ಅದಕ್ಕಿಂತ ಉತ್ತಮವಾದ ಹವ್ಯಾಸವನ್ನು ಅವರಲ್ಲಿ ಬೆಳೆಸಬೇಕು.

ವಿದ್ಯಾರ್ಥಿಗಳ ಮಾನಸಿಕ ಶಕ್ತಿಯ ಮೇಲೆ ಪರಿಣಾಮ ಬೀರುವುದು ಮನೆಯ ವಾತಾವರಣ; ಮುಖ್ಯವಾಗಿ ತಂದೆ-ತಾಯಿಯರ ವರ್ತನೆಗಳು. ಮಗುವಿಗೆ ಅಭದ್ರತೆ ಕಾಡದಂತೆ ದಂಪತಿಗಳು ಮನೆಯಲ್ಲಿ ವರ್ತಿಸಬೇಕು. ಅವರೇ ಬಡಿದಾಡುತ್ತಿದ್ದರೆ, ಅಥವಾ ಇಬ್ಬರಲ್ಲಿ ಒಬ್ಬರೋ ಅಥವಾ ಇಬ್ಬರೋ ವ್ಯಸನಿಗಳಾಗಿದ್ದರೆ, ಅದು ಮಗುವಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಸದಾ ಟಿವಿ ಹಾಕಿರುವುದು, ಮನೆಯಲ್ಲಿ ಅಸಭ್ಯ ಪದ, ಬೈಗುಳ ಬಳಸುವುದು, ಅಶ್ಲೀಲ ಸಂಭಾಷಣೆಯನ್ನು ನಡೆಸುವುದು ಮಾಡಬಾರದು. ಆರೋಗ್ಯಕಾರಿ ಚಟುವಟಿಕೆಗಳನ್ನು ಮಕ್ಕಳಿಗೆ ಕಲಿಸಬೇಕು. ಹೆಣ್ಣಾಗಲಿ ಗಂಡಾಗಲೀ, ಮನೆಗೆಲಸವನ್ನೂ ಕಲಿಸಬೇಕು. ಮನೆಯಲ್ಲಿ ಯಾರೂ ಅಮುಖ್ಯರಲ್ಲ ಎಂಬ ಭಾವ ಮಕ್ಕಳಲ್ಲಿ ಗಟ್ಟಿಯಾಗಬೇಕು. ಆಗ ಸಹಜವಾಗಿಯೇ ಅವರಲ್ಲಿ ಜವಾಬ್ದಾರಿ ಮೂಡುತ್ತದೆ.

ಮಕ್ಕಳು ಶಾಲೆಯಲ್ಲಿ ಕಳೆಯುವ ಸಮಯಕ್ಕಿಂತ ಹೆಚ್ಚಿನ ಸಮಯವನ್ನು ಮನೆಯಲ್ಲಿ ಕಳೆಯುತ್ತಾರೆ. ಆದುದರಿಂದ ಮಕ್ಕಳ ಮನಸ್ಸು ರೂಪುಗೊಳ್ಳುವುದು ಹೆಚ್ಚಾಗಿ ಮನೆಯ ವಾತಾವರಣದಲ್ಲಿ. ಮಕ್ಕಳಿಗೆ ಅನ್ನ-ಆಹಾರದ ಜೊತೆಗೆ ಪ್ರೀತಿ, ವಿಶ್ವಾಸ, ಭರವಸೆ, ನಂಬಿಕೆ, ಆತ್ಮಶ್ರದ್ಧೆ – ಇವುಗಳನ್ನೂ ಪೋಷಕರು ಒದಗಿಸಬೇಕು. ಆಗ ಮಕ್ಕಳು ಗಟ್ಟಿಯಾಗಿ, ಶಾಲೆಯಷ್ಟೇ ಅಲ್ಲದೆ ಹೊರಜಗತ್ತಿನ ಯಾವುದೇ ಒತ್ತಡಗಳನ್ನು ತಡೆದುಕೊಳ್ಳಲು ಸಾಧ್ಯವಾಗುತ್ತದೆ. ಮನೆಯವರೆಲ್ಲ ಒಟ್ಟಾಗಿ ಪ್ರವಾಸ ಕೈಗೊಳ್ಳುವುದು, ಎಲ್ಲರೂ ಸೇರಿ ಆಟವಾಡುವುದು, ಸಂಗೀತ–ಸಾಹಿತ್ಯ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು. ಮಕ್ಕಳು ಗೆದ್ದಾಗ ಸಂಭ್ರಮಿಸುವಂತೆ, ಅವರ ಸೋಲನ್ನೂ ಖುಷಿಯಿಂದಲೇ ಒಪ್ಪಿಕೊಳ್ಳಬೇಕು. ಸೋಲುವುದು ಅಪಮಾನವಲ್ಲ – ಎಂದು ಮಕ್ಕಳು ತಿಳಿಯಬೇಕು. ಮುಖ್ಯವಾಗಿ ಮಕ್ಕಳ ಪೂರ್ಣ ವಿಶ್ವಾಸವನ್ನು ಪೋಷಕರು ಗಳಿಸಬೇಕು. ಪೂರ್ಣ ವಿಶ್ವಾಸ ಇರದಿದ್ದರೆ ಅವರು ತಮ್ಮನ್ನು ತಾವು ತೆರೆದುಕೊಳ್ಳುವುದಿಲ್ಲ, ತಮ್ಮೊಳಗಿನದನ್ನು ತೋಡಿಕೊಳ್ಳುವುದೂ ಇಲ್ಲ. ಯಾವುದೇ ಸಂದರ್ಭದಲ್ಲೂ ಮಗು ತನ್ನ ಪೋಷಕರಲ್ಲಿ ಅನಿಸಿಕೆಯನ್ನು ಹಂಚಿಕೊಳ್ಳುವ ಮುಕ್ತ ಅವಕಾಶ ಇರಬೇಕು. ಇಡೀ ಜಗತ್ತು ಎದುರಾದರೂ ಪೋಷಕರು ನನ್ನೊಂದಿಗೆ ಇರುತ್ತಾರೆ ಎಂಬ ನಂಬಿಕೆ ದಟ್ಟವಾಗಿದ್ದಾಗ ಮಕ್ಕಳು ಆತ್ಮವಿಶ್ವಾಸವನ್ನು ಕಳೆದುಕೊಳ್ಳುವುದಿಲ್ಲ. ಮಕ್ಕಳ ಮನಸ್ಸು ಕುಗ್ಗಿದಾಗ ಅದನ್ನು ಗುರುತಿಸಿ ಸಕಾಲದಲ್ಲಿ ಸೂಕ್ತ ನೆರವು ನೀಡಿ ಸುಧಾರಿಸಿಕೊಳ್ಳುವಂತೆ ಮಾಡಬೇಕು. ಬಾಡುವ ಮುನ್ನವೇ ಗಿಡಕ್ಕೆ ನೀರೆರೆವಂತೆ ಶಿಕ್ಷಕರು-ಪೋಷಕರು ಇಂತಹ ಸಂದರ್ಭಗಳಲ್ಲಿ ಎಚ್ಚೆತ್ತು ಕ್ರಮಕೈಗೊಳ್ಳಬೇಕು. ಅರಳಲಿ ಮನೋನಂದನ, ಕ್ಷೇಮವಾಗಿರಲಿ ಬಾಲನಂದನ!

ಚುಮು ಚುಮು ಚಳಿಯಲಿ ನಳನಳಿಸಲಿ ಆರೋಗ್ಯ

ಇದೀಗ ಬೇಗನೆ ಕತ್ತಲೆ ಕವಿಯುವ ಸುದೀರ್ಘ ಇರುಳು. ಹಗಲು ಶೀತಗಾಳಿ, ಬೆಳದಿಂಗಳಿನಂತಹ ಮಂದ ಬಿಸಿಲು. ಕೆರೆ, ಕೊಳ, ಕಾಲುವೆ, ನದಿಗಳಲ್ಲಿ ಮೈ ಥರಗುಟ್ಟಿಸುವ ಹಬೆಯೇಳುವ ಶೀತಲ ಜಲ. ಉತ್ತರದಿಂದ ದಕ್ಷಿಣದೆಡೆಗೆ ಬೀಸುವ ಮೈ ನವಿರೇಳಿಸುವ ಕುಳಿರ್ಗಾಳಿ. ಇಂತಹ ಹೇಮಂತ ಋತುವಿನಲ್ಲಿ ಆರೋಗ್ಯಪಾಲನೆ ಹೇಗೆ?

ಡಾ. ಸತ್ಯನಾರಾಯಣ ಭಟ್ ಪಿ.

‘ಹಸಿವರಿತು ಉಂಬುವುದು ಬಿಸಿನೀರ ಕುಡಿಯುವುದು ಹಸಿವಕ್ಕು ವಿಷಯ ಘನವಕ್ಕು ವೈದ್ಯಂಗೆ ಬೆಸಸಬೇಡೆಂದ ಸರ್ವಜ್ಞ’. ಕನ್ನಡದ ತ್ರಿಪದಿಕಾರ ಬರೆದ ಈ ಸಾಲು ಚಳಿಗಾಲದ ಆರೋಗ್ಯಪಾಲನೆಯ ಸೂತ್ರ.

ಚಳಿಗಾಲದಲ್ಲಿ ಹಸಿವೆ ಹೆಚ್ಚು. ರಾತ್ರಿ ಉದ್ದವಿರುವುದರಿಂದ ಬೆಳ್ಳಂಬೆಳಗ್ಗೇ ಮಿತಿಮೀರುವ ಹೊಟ್ಟೆಯ ಹಸಿವೆ ಸಹಜ. ಆದರೆ ಹಸಿವರಿತು ಉಂಬುವುದು ಲೇಸು. ‘ಮಜ್ಜಿಗೂಟಕೆ ಲೇಸು ಮಜ್ಜನಕೆ ಮಡಿ ಲೇಸು ಕಜ್ಜಾಯ ತುಪ್ಪ ಉಣಲೇಸು’ ಎಂದವನು ಸರ್ವಜ್ಞ ಕವಿ. ಇದು ಸಹ ಹೇಮಂತ ಋತುವಿಗೆ ಸಲ್ಲುವ ಆಹಾರ ಕ್ರಮ. ಚಳಿಗಾಲದ ಚರ್ಮದ ಬಿರುಸುತನವೇ? ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಮಣೆ ಹಾಕಿರಿ. ಸಿಹಿತಿನಿಸು, ಕಜ್ಜಾಯದೂಟ ಧಾರಾಳವಾಗಿ ಸವಿಯಿರಿ. ಸರ್ವಜ್ಞನೆಂದಂತೆ ಮಜ್ಜನದ ಮಡಿ ಸಹ ಚಳಿಗಾಲಕ್ಕೆ ಹೇಳಿ ಮಾಡಿಸಿದ್ದು. ದೀವಳಿಗೆಯಿಂದ ಆರಂಭಗೊಳುವ ಎಣ್ಣೆಸ್ನಾನ ಶರದೃತುವಿಗಷ್ಟೆ ಅಲ್ಲ, ಹೇಮಂತಕ್ಕೆ ಸಹ ಸಲ್ಲುತ್ತದೆ.

ಎಂತಹ ಮಜ್ಜನ ಬೇಕು? ನೆತ್ತಿಗೊತ್ತುವ ಮಾಲೀಶು ಎಳ್ಳು/ ಹರಳು/ ಕೊಬ್ಬರಿ ಎಣ್ಣೆ ಸಹಿತ ತುಪ್ಪದ ಯಮಕ (ಜಂಟಿ) ಸ್ನೇಹ ಒಳಿತು. ಮೈಗೆ ಹಚ್ಚುವ ಯೋಗ್ಯ ತೈಲಗಳು ಹಲವು. ಸಾಸಿವೆ, ಎಳ್ಳು, ಹರಳು, ಕೊಬ್ಬರಿಯೆಣ್ಣೆಯ ಹದವಾದ ಬಿಸಿಯ ಮಾಲೀಶು ಸಲೀಸು. ಅನಂತರ ಹದಬಿಸಿ ನೀರ ಹಂಡೆ, ತಪ್ಪಲೆಯ ಧಾರೆಯ ಜಳಕ. ಕಿರುಗಂಟು, ಬೆರಳುಗಳಿಗೆ ಮಾಲೀಶಿನ ವಿಶೇಷ ಕಾಳಜಿ ಇರಲಿ. ನಿಮಗೆ ತಿಳಿದಿದೆ; ಚಳಿಗಾಲದ ಅನುಭವವು ಒಂದೆರಡಲ್ಲ. ಮೈ ಮನಗಳು ಮುದುಡುವ ಕಾಲವಿದು. ಕೀಲುಗಂಟು, ಗಿಣ್ಣುಗಳು ಬೇಗನೆ ಸೆಟೆದು ಮುರುಟುವ ಅನುಭವ. ಹಾಗಾಗಿ ಪಾದ, ಪಾಣಿಗಳಿಗೆ ಚಳಿಗಾಳಿ ಸೋಕದಂತೆ ಎಚ್ಚರವಿರಲಿ. ಕೈಗವುಸು, ಕಾಲುಚೀಲಗಳ ರಕ್ಷಣೆಯನ್ನು ಪಡೆದುಕೊಳ್ಳಿ.

ಬೇಗನೆ ಮಲಗಿರಿ. ಬೇಗ ಎಚ್ಚರಗೊಳ್ಳಿರಿ. ಕೊಜಾಗರೀವ್ರತ ಮುಗಿದು ಧನುರ್ಮಾಸದ ಸಮಯವಿದು. ಕೋಜಾಗರೀಯ ಶಬ್ದಾರ್ಥವು ‘ಯಾರು ಎಚ್ಚರವಿರುವರು’ ಎಂಬುದು. ಧನುರ್ಮಾಸದ ಬೆಳಗಿನ ಪೂಜೆಗೆ ಕೇವಲ ಧಾರ್ಮಿಕ ಮಾನ್ಯತೆಯಷ್ಟೆ ಅಲ್ಲ; ವೈದ್ಯಕೀಯ ಗ್ರಂಥಾಧಾರಗಳಿವೆ. ಮುಂಜಾವಿನ ಬ್ರಾಹ್ಮೀಮುಹೂರ್ತದ ಎಚ್ಚರದಿಂದ ಕಫ ಸಂಚಯವಾಗದು. ಆಧುನಿಕ ವೈದ್ಯದ ಅಂಕಿ ಅಂಶಗಳನ್ವಯ ನಡಿರುಳಿನ ಹೃದಯಸ್ತಂಭನ ಮತ್ತು ಮೃತ್ಯು ಅತ್ಯಧಿಕವಂತೆ. ರಕ್ತಸಂಚಲನೆಗೆ ಚಳಿಯಿಂದ ಅಡಚಣೆ. ಅತಿ ವೃದ್ಧರು, ರೋಗಿಗಳು ಬಿಟ್ಟರೆ ಉಳಿದವರಿಗೆ ಹಗಲು ನಿದ್ದೆ ಅನಗತ್ಯ. ಕುಳಿತ ಭಂಗಿಯ ನಿದ್ದೆ ಓಕೆ. ಬೀಸುಗಾಳಿಗೆ ಇದಿರು ನಡೆಯುವ, ಓಡುವ ಸಾಹಸ ಖಂಡಿತ ಬೇಡ. ದ್ವಿಚಕ್ರ ವಾಹನ ಚಾಲನೆ ಸಹ ಸಲ್ಲದು.

ಆಯುರ್ವೇದ ಸಂಹಿತೆಗಳನ್ವಯ ಹೇಮಂತ, ಶಿಶಿರದ ದಿನಗಳು ಉಳಿದ ಋತುಗಳಿಗಿಂತ ಕೊಂಚ ನಿರಾಳವಾದವು. ಆರೋಗ್ಯಕ್ಕೆ ಅಪಾಯ ಕಡಿಮೆ. ಇದನ್ನೇ ವಿಸರ್ಗಕಾಲವೆಂದು ಪರಿಗಣಿಸುವರು. ಅಂದರೆ ಸೂರ್ಯ–ಚಂದ್ರರು ಪ್ರಸನ್ನರಾಗಿರುವ ಅನುಕೂಲ ಕಾಲವಿದು. ಅಗ್ನಿಬಲವೂ ಹೆಚ್ಚು. ಆದರೂ ವಿಷಮಾಚರಣೆಯಿಂದ ಕೆಮ್ಮು, ನೆಗಡಿ, ದಮ್ಮು, ಉಬ್ಬಸ, ಮೂತ್ರಸೋಂಕುಗಳ ಕಾಲವಿದು. ನೀರಡಿಕೆ ಕಮ್ಮಿ. ಹಾಗಾಗಿ ನೀರು ಕುಡಿಯುವ ಇಚ್ಛೆಯಾಗದು. ಹಾಗಾಗಿ ಪದೇ ಪದೇ ಮೂತ್ರಸೋಂಕಿಗೆ ಅವಕಾಶ. ಬಿಸಿ ನೀರು ಕುಡಿದರೆ ಕಫಸಂಚಯಕ್ಕೆ ಕಡಿವಾಣ.

ಬೆಳಗಿನ ಆಹಾರ ಚೆನ್ನಾಗಿಯೇ ಇರಲಿ. ನಡು ಮಧ್ಯಾಹ್ನಕ್ಕೆ ರಾಜನಂತೆ ಉಣಬೇಕಂತೆ. ಅಲ್ಪ ಆಹಾರದಿಂದ ತೃಪ್ತಿ ಪಡೆಯೋಣ. ಮಧುರರಸ ಪ್ರಬಲವಾಗಿರುವ ಹಿಟ್ಟಿನ ತಿಂಡಿಗಳಿರಲಿ. ಗೋಧಿ, ಬಾರ್ಲಿ, ಬೆಲ್ಲ, ಎಳ್ಳು ಬಳಸುವ ತಿಂಡಿ ತಿನ್ನಲು ಸಕಾಲವಿದು. ಖರ್ಜೂರ, ಇತರ ಒಣ ಹಣ್ಣುಗಳು, ಉದ್ದು ತಿಂಡಿಗಳ ಸೇವನೆಗೂ ಹೇಮಂತ ಋತು ಸಕಾಲ. ದಾಳಿಂಬೆ, ಮೋಸಂಬಿ, ರಸಬಾಳೆ, ಅನಾನಾಸು, ಪಪಾಯಿಯಂತಹ ಹಣ್ಣು, ಹಣ್ಣುರಸ ಸೇವನೆಗೆ ಸಕಾಲ. ಕಹಿ, ಒಗರಿನ ನೇರಳೆ, ನೆಲ್ಲಿಯ ಸೇವನೆಯಿಂದ ಲಾಭವಿದೆ. ಸಂಜೆಯೂಟ ಶೀಘ್ರ ಮುಗಿಸಿರಿ. ಉಂಡ ಅನಂತರದ ವಿಶ್ರಾಂತಿಯಾಗಲೀ ನಡಿಗೆಯಾಗಲೀ ಬೆಚ್ಚನೆಯ ತಾಣದಲ್ಲಾಗಲಿ. ನೆಲಮಾಳಿಗೆಯ ವಾಸಕ್ಕೆ ಚರಕಸಂಹಿತೆ ಒತ್ತು ನೀಡಿದೆ. ಹಾಸು, ಹೊದಿಕೆಯ ಬಗ್ಗೆ ಬೆಚ್ಚನೆಯ ಎಚ್ಚರಿಕೆ ಮಾತು ಸಹ ಚರಕರದ್ದು. ಉಣ್ಣೆಗಂಬಳಿ, ಕೌದಿ, ಹತ್ತಿ,ರೇಷ್ಮೆ ವಸ್ತ್ರದ ಧಾರಣೆಯ ಪ್ರಸ್ತಾಪವೂ ಸಂಹಿತೆಯದು. ಕಾಲಿಗೆ ಹಾಕುವ ಚಪ್ಪಲಿ ಸಹ ಬೆಚ್ಚನೆಯದಾಗಿರಲಿ. ಅನುಕೂಲವಿದ್ದರೆ ಸಂಜೆಯ ಸೂರ್ಯಸ್ನಾನ ಮಾತ್ರ ಸಾಕು. ಸೂರ್ಯನಮಸ್ಕಾರ ಮಾಡುವಿರಾ? ನಾಲ್ಕಾರು ಬಾರಿ ಮಾಡಬಹುದು. ಗೋಮುಖಾಸನ, ತ್ರಿಕೋಣಾಸನದ ಅಭ್ಯಾಸ ಕೂಡ ಹೇಮಂತಾಚರಣೆಯ ಭಾಗವಾಗಲಿ.

ಶಿಶಿರದ ದಿನಚರಿಯು ಬಹುತೇಕ ಹೇಮಂತದ ಪುನರಾವರ್ತನೆ. ಆದ್ದರಿಂದ ಸಂಕ್ರಾಂತಿ ಪರ್ಯಂತ ನಮ್ಮ ಜೀವನಶೈಲಿ ಇದೇ ತೆರನಾಗಿರಲಿ. ಜಾಣರ ಮಾತಿದೆ. ರೋಗದ ಚಿಕಿತ್ಸೆಗಿಂತ ತಡೆಯ ಹಾದಿ ಸುಗಮ. ಅದನ್ನು ಸದಾಕಾಲ ನೆನಪಿಡೋಣ.

ಕ್ಯಾನ್ಸರ್ ನಂತರ ಮುಂದೇನು?

ಡಾ. ಶ್ರೀನಿವಾಸ ಹರಪನಹಳ್ಳಿ

ಜನರಿಗೆ ಕ್ಯಾನ್ಸರ್(ಅರ್ಬುದ ರೋಗ) ಬಗ್ಗೆ ಹೆಚ್ಚಿನ ಹೆದರಿಕೆ. ಅದಕ್ಕೆ ಕಾರಣವೂ ಇದೆ. ಕ್ಯಾನ್ಸರ್ ಎಲ್ಲ ರೋಗಗಳಂತಲ್ಲ. ಕೆಲವು ಮಾತ್ರೆ, ಚುಚ್ಚುಮದ್ದುಗಳಿಗೆ ಗುಣವಾಗಿಬಿಡುವಂಥ ಕಾಯಿಲೆಯಲ್ಲ ಇದು. ಗೊತ್ತಾಗದಂತೆ ದೇಹದೊಳಗೆ ಸೇರಿಕೊಂಡು ಹಂತಹಂತವಾಗಿ ಪಸರಿಸುತ್ತ ಒಂದು ಅಂಗವನ್ನು, ಕೊನೆಗೆ ದೇಹವನ್ನೇ ತಿಂದು ಹಾಕುವ ಮಾರಕ ರೋಗ ಇದು.

ಒಂದು ಅಂಕಿ-ಅಂಶದ ಪ್ರಕಾರ ಜಗತ್ತಿನಲ್ಲಿ ಸುಮಾರು ಒಂದು ಕೋಟಿ ಜನರು ಪ್ರತಿವರ್ಷ ಕ್ಯಾನ್ಸರ್ ರೋಗದಿಂದ ಮರಣಹೊಂದುತ್ತಿದ್ದಾರೆ. ಭಾರತದಲ್ಲೂ ಕ್ಯಾನ್ಸರ್ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಕ್ಯಾನ್ಸರ್ ಉಂಟಾಗಲು ಅನೇಕ ಕಾರಣಗಳಿವೆ. ಕೆಲವು ವೈರಸ್ಸುಗಳು, ವಾತಾವರಣ ಮತ್ತು ಆಹಾರದಲ್ಲಿರುವ ‘ಕಾರ್ಸಿನೋಜನ್’ ಎಂದು ಕರೆಯಲ್ಪಡುವ ಕ್ಯಾನ್ಸರ್ ಉಂಟುಮಾಡುವ ಕಣಗಳು ಮತ್ತು ಕೆಲಮಟ್ಟಿಗೆ ಆನುವಂಶೀಯತೆ ಕ್ಯಾನ್ಸರ್ ರೋಗಕ್ಕೆ ಕಾರಣವಾಗಬಲ್ಲುವು.

ಇಂದಿನ ಆಧುನಿಕ ಪ್ರಪಂಚದಲ್ಲಿ ಕ್ಯಾನ್ಸರ್ ರೋಗಕ್ಕೆ ಅನೇಕ ವಿಧದ ಚಿಕಿತ್ಸೆಗಳಿವೆ. ಅವುಗಳಲ್ಲಿ ಮೂರು ಪ್ರಮುಖವಾದ ಚಿಕಿತ್ಸೆಗಳೆಂದರೆ ಶಸ್ತ್ರಚಿಕಿತ್ಸೆ, ವಿಕಿರಣಚಿಕಿತ್ಸೆ (ರೇಡಿಯೋಥೆರಪಿ) ಮತ್ತು ಔಷಧಿಚಿಕಿತ್ಸೆ (ಕಿಮೋಥೆರಪಿ)- ಇವು ಕ್ಯಾನ್ಸರ್ ರೋಗವನ್ನು ಭಾಗಶಃ ನಿಯಂತ್ರಿಸುವುದರಿಂದ ಹಿಡಿದು ಸಂಪೂರ್ಣ ನಿರ್ಮೂಲನೆವರೆಗೂ ಪರಿಣಾಮಕಾರಿಯಾಗಿವೆ. ಕೆಲವೊಮ್ಮೆ ಕ್ಯಾನ್ಸರ್ ಮರುಕಳಿಸುವುದೂ ಉಂಟು. ಅಪರೂಪಕ್ಕೆ ಕ್ಯಾನ್ಸರ್ ರೋಗಿಯಲ್ಲಿ ಇನ್ನೊಂದು ಅಂಗದ ಕ್ಯಾನ್ಸರ್ ಕೂಡ ಕಾಣಿಸಿಕೊಳ್ಳುವ ಸಂಭವವಿರುತ್ತದೆ.

ಒಮ್ಮೆ ರೋಗಿಯಲ್ಲಿ ಕ್ಯಾನ್ಸರ್ ಕಾಣಿಸಿಕೊಂಡರೆ ಜೀವನಪೂರ್ತಿ ಅದರ ಮೇಲೆ ನಿಗಾ ಇಡಬೇಕಾಗುತ್ತದೆ. ಇದರರ್ಥ ಜೀವನವಿಡೀ ರೋಗಿಗಳು ಚಿಂತೆಯಲ್ಲಿ ಕೊರಗಬೇಕು ಅಂತ ಅಲ್ಲ! ಅವರ ಜೀವನದಲ್ಲಿ ಕ್ಯಾನ್ಸರ್ ಮರುಕಳಿಸದಂತೆ ನೋಡಿಕೊಳ್ಳುವುದು ಮತ್ತು ಅಕಸ್ಮಾತ್ ಮರುಕಳಿಸಿದರೆ ಆರಂಭಿಕ ಹಂತದಲ್ಲೇ ಸೂಕ್ತ ಚಿಕಿತ್ಸೆ ಕೊಡಿಸಿ ಅವರು ಮತ್ತೆ ಸಹಜವಾಗಿ ಬದುಕುವಂತೆ ನೋಡಿಕೊಳ್ಳುವುದೇ ಈ ನಿಗಾ ಇಡುವುದರ ಮುಖ್ಯ ಉದ್ದೇಶ. ಆದ್ದರಿಂದ ಕ್ಯಾನ್ಸರ್ ರೋಗಿಗಳು ಚಿಕಿತ್ಸೆಯಿಂದ ಗುಣಮುಖರಾದ ನಂತರ ಯಾವ ರೀತಿ ಮುಂದೆ ಕಾಳಜಿ ವಹಿಸಬೇಕು, ಯಾವ ಚಿಕಿತ್ಸೆಗೂ ಬಗ್ಗದೆ ಕ್ಯಾನ್ಸರ್ ರೋಗ ಉಲ್ಬಣಾವಸ್ಥೆಗೆ ತಲುಪಿದಾಗ ಏನಾಗುತ್ತದೆ ಎನ್ನುವುದನ್ನು ಕೊಂಚ ತಿಳಿದುಕೊಳ್ಳೋಣ.

ಕೆಲವು ಕ್ಯಾನ್ಸರ್ ರೋಗಗಳಿಗೆ ಮೇಲೆ ತಿಳಿಸಿದಂತೆ ಮೂರೂ ವಿಧದ ಚಿಕಿತ್ಸೆಗಳ ಅವಶ್ಯವಿರುತ್ತದೆ. ಅಲ್ಲದೆ ಈ ಚಿಕಿತ್ಸೆಗಳು ಸಂಪೂರ್ಣವಾಗಬೇಕಾದರೆ ಸುಮಾರು 6-9 ತಿಂಗಳು ಸಮಯ ಕೂಡ ಬೇಕಾಗುತ್ತದೆ. ಜೊತೆಗೆ ಚಿಕಿತ್ಸೆಯ ಪಾರ್ಶ್ವಪರಿಣಾಮಗಳಿಂದ ದೇಹ ಕೂಡ ಜರ್ಜರಿತವಾಗಿರುತ್ತದೆ. ಈ ಎಲ್ಲ ಕಾರಣಗಳಿಂದ ರೋಗಿಗಳು ನಿಃಶಕ್ತರಾಗುವುದು ಸಹಜ. ಆದ್ದರಿಂದ ರೋಗಿಯ ಆಹಾರದ ಬಗ್ಗೆ ಹೆಚ್ಚು ಗಮನ ನೀಡುವುದು ಈ ಹಂತದಲ್ಲಿ ಬಹುಮುಖ್ಯ. ಸತ್ವಯುತವಾದ ಪ್ರೊಟೀನ್‌ಯುಕ್ತ ಆಹಾರ ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಜೊತೆಗೆ ಮಾಂಸಖಂಡಗಳು ಸದೃಢವಾಗಿ ರೋಗಿಯು ಮೊದಲಿನಂತೆ ಸಕ್ರಿಯವಾಗಿ ಓಡಾಡಲು ಸಹಕಾರಿಯಾಗುತ್ತದೆ.

ಆರಂಭದಲ್ಲಿ ರೋಗನಿರೋಧಕಶಕ್ತಿ ನಶಿಸಿರುವುದರಿಂದ ರೋಗಿಯನ್ನು ಹೆಚ್ಚು ಜನಸಂದಣಿಯಲ್ಲಿ ಅಥವಾ ಇನ್ಯಾವುದೇ ಕಾಯಿಲೆ ಇರುವ ವ್ಯಕ್ತಿಗಳ ಸಂಪರ್ಕದಲ್ಲಿ ಇರದಂತೆ ನೋಡಿಕೊಳ್ಳಬೇಕು. ರೋಗಿಯ ಕೋಣೆಯನ್ನು ಮತ್ತು ಬಟ್ಟೆಬರೆಗಳನ್ನು ಶುಚಿಯಾಗಿಟ್ಟು ಯಾವುದೇ ಸೋಂಕು ತಗುಲದಂತೆ ನೋಡಿಕೊಳ್ಳಬೇಕು. ಕಾಲಕಾಲಕ್ಕೆ ವೈದ್ಯರನ್ನು ಸಂಪರ್ಕಿಸಿ ಅವರ ಸೂಚನೆಗಳನ್ನು ಪಾಲಿಸುತ್ತಾ ರೋಗಿಯು ಗುಣಹೊಂದುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಕೆಲವು ವರ್ಷಗಳ ನಂತರ ರೋಗ ಮರುಕಳಿಸುವ ಸಾಧ್ಯತೆಗಳು ಕಡಿಮೆಯಾಗಿರುತ್ತವೆಯಾದರೂ ವರ್ಷಕ್ಕೆ ಒಂದೆರಡು ಬಾರಿ ತಜ್ಞವೈದ್ಯರನ್ನು ಭೇಟಿಮಾಡಿ ರೋಗಿಯ ದೇಹಸ್ಥಿತಿಯ ಬಗ್ಗೆ ಸಮಾಲೋಚಿಸುವುದು ಒಳ್ಳೆಯದು. ಈ ಹಂತದಲ್ಲಿ ಬಹುತೇಕ ರೋಗಿಗಳು ಆರೋಗ್ಯವಂತರಾಗಿ ಸಾಮಾನ್ಯ ಜನರಂತೆ ತಮ್ಮ ಜೀವನವನ್ನು ಸಾಗಿಸುತ್ತಿರುತ್ತಾರೆ. ಆದರೆ ಕೆಲವು ರೋಗಿಗಳು ಇವರಷ್ಟು ಅದೃಷ್ಟಶಾಲಿಗಳಲ್ಲ. ಕೆಲವರ್ಷಗಳ ನಂತರ ಇವರಲ್ಲಿ ಕ್ಯಾನ್ಸರ್ ಕಾಣಿಸದಿದ್ದರೂ ಕ್ಯಾನ್ಸರ್ ಚಿಕಿತ್ಸೆ

ಇವರನ್ನು ತುಂಬ ನಿತ್ರಾಣ ಮಾಡಿಬಿಟ್ಟಿರುತ್ತದೆ. ಉದಾಹರಣೆಗೆ, ಗಂಟಲು ಅಥವಾ ಶ್ವಾಸಕೋಶದ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಕೆಲವರು ಉಸಿರಾಟದ ತೊಂದರೆಯಿಂದ ಬಳಲುತ್ತಿರುತ್ತಾರೆ. ಅವರಿಗೆ ಆಮ್ಲಜನಕದ ನಳಿಕೆಯ ಅಥವಾ ಕೃತಕ ಧ್ವನಿಪೆಟ್ಟಿಗೆಯ ಅವಶ್ಯಕತೆ ಇರುತ್ತದೆ. ಅದೇ ರೀತಿ ಬಾಯಿ, ದವಡೆ ಅಥವಾ ಹೊಟ್ಟೆಯಲ್ಲಿನ ಅಂಗಗಳ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರು ಆಹಾರ ಪಚನಕ್ರಿಯೆಯಲ್ಲಿ ತೊಂದರೆ ಅನುಭವಿಸುತ್ತಿರುತ್ತಾರೆ. ಅವರಿಗೆ ಕೊಳವೆಯ ಮೂಲಕ ಆಹಾರ ನೀಡಬೇಕಾಗುತ್ತದೆ. ಮಲವಿಸರ್ಜನೆ ಕೂಡ ಕಷ್ಟವಾಗಿ ‘ಕೊಲೊಸ್ಟೊಮಿ’ (ಹೊಟ್ಟೆಗೆ ಒಂದು ರಂಧ್ರ ಮಾಡಿ ಕರುಳಿನ ಮೂಲಕ ಮಲವಿಸರ್ಜಿಸುವುದು) ಚೀಲವನ್ನೇ ಅವಲಂಬಿಸಬೇಕಾಗುತ್ತದೆ. ಇವರು ಮೊದಲಿನ ಗುಂಪಿನ ರೋಗಿಗಳ ತರಹ ಸ್ವಚ್ಛಂದವಾಗಿ ಓಡಾಡಿಕೊಂಡಿರಲು ಸಾಧ್ಯವಿಲ್ಲದಿದ್ದರೂ ಸೂಕ್ತ ಪೋಷಣೆಯ ಮೂಲಕ ಇವರೂ ಉತ್ತಮ ಜೀವನವನ್ನು ನಡೆಸಬಹುದು.

ಇನ್ನು ಮೂರನೆಯ ಗುಂಪಿನ ರೋಗಿಗಳಲ್ಲಿ ಅಲ್ಪ ಸ್ವಲ್ಪ ಉಳಿದ ಕ್ಯಾನ್ಸರ್, ಮತ್ತೆ ಮರುಕಳಿಸಿ ರೋಗಿಗೆ ನೋವು, ರಕ್ತಸ್ರಾವ, ಉಸಿರಾಟದ ತೊಂದರೆ, ಪಚನಕ್ರಿಯೆ, ಮಲವಿಸರ್ಜನೆಯ ತೊಂದರೆಗಳು ಹೆಚ್ಚಾಗುತ್ತಲೇ ಹೋಗುತ್ತವೆ. ಕೆಲವೊಮ್ಮೆ ರೋಗ ಉಲ್ಬಣಾವಸ್ಥೆ ತಲುಪಿದ ನಂತರವೇ ಪತ್ತೆಯಾಗಿ ಚಿಕಿತ್ಸೆಯ ಎಲ್ಲ ದ್ವಾರಗಳು ಮುಚ್ಚಿಬಿಟ್ಟಿರುತ್ತವೆ. ಇವರ ನರಳಾಟವಂತೂ ಹೇಳತೀರದು. ಇಲ್ಲಿ ಕ್ಯಾನ್ಸರ್ ಚಿಕಿತ್ಸೆಗಿಂತ ಹೆಚ್ಚಾಗಿ ಮೇಲಿನ ತೊಂದರೆಗಳಿಗೇ ಕೊಂಚಮಟ್ಟಿಗಾದರೂ ಚಿಕಿತ್ಸೆ ನೀಡಲು ಪ್ರಯತ್ನಿಸುತ್ತಾರೆ.

ಈ ಎರಡು ಮತ್ತು ಮೂರನೆಯ ಗುಂಪಿನ ರೋಗಿಗಳನ್ನು ನೋಡಿಕೊಳ್ಳಲು ನೋವು ಮತ್ತು ಉಪಶಮನಕಾರಿ ಚಿಕಿತ್ಸಾಘಟಕಗಳಿರುತ್ತವೆ. ಇವು ದೊಡ್ಡ ಆಸ್ಪತ್ರೆಗಳಷ್ಟು ಸೌಲಭ್ಯಗಳನ್ನು ಹೊಂದಿರದಿದ್ದರೂ ನುರಿತ ದಾದಿಯರು, ಸಾಮಾಜಿಕ ಆರೋಗ್ಯಕಾರ್ಯಕರ್ತೆಯರು ಮತ್ತು ನೋವುನಿವಾರಣಾ ತಜ್ಞರ ಸಹಾಯದಿಂದ ರೋಗಿಗಳಿಗೆ ಗುಣಮಟ್ಟದ ಸೇವೆಯನ್ನು ನೀಡುತ್ತವೆ. ಇತರ ಅದೃಷ್ಟಶಾಲಿ ಕ್ಯಾನ್ಸರ್ ರೋಗಿಗಳ ಜೊತೆ ಸಮಾಲೋಚನೆಗಳೂ ಇಲ್ಲಿ ನಡೆಯುತ್ತವೆ. ರೋಗಿಯ ಜೀವನದ ಕಡೆಯ ದಿನಗಳ ಆರೈಕೆ ಮಾಡುವ (End of life care) ವ್ಯವಸ್ಥೆಯೂ ಇಲ್ಲಿರುತ್ತದೆ.

ಆ ಕೊನೆಯ 48 ಘಂಟೆಗಳು!

ರೋಗಿಯು ಪ್ರಾಣ ತ್ಯಜಿಸುವ ಮೊದಲಿನ ಕೆಲವು ಘಂಟೆಗಳ ಅವಧಿಯಲ್ಲಿ ರೋಗಿಯು ಹೆಚ್ಚು ಕಡಿಮೆ ಅರೆಪ್ರಜ್ಞಾವಸ್ಥೆಯಲ್ಲಿರುತ್ತಾನೆ. ಎಲ್ಲ ರೀತಿಯ ಚಿಕಿತ್ಸೆಗಳನ್ನು ನಿಲ್ಲಿಸಲಾಗಿರುತ್ತದೆ. ಆಹಾರಸೇವನೆ ಕೂಡ ಇರುವುದಿಲ್ಲ. ಬಹುತೇಕ ಸಂದರ್ಭಗಳಲ್ಲಿ ಈ ಸಮಯವನ್ನು ಮನೆಯಲ್ಲಿಯೇ ಕಳೆಯಲು ಅನುವು ಮಾಡಿಕೊಟ್ಟಿರುತ್ತಾರೆ. ವೈದ್ಯ ಕೂಡ ಇಲ್ಲಿ ರೋಗಿಯ, ಸಂಬಂಧಿಕರ ಹಿತೈಷಿಯಂತೆ ಸ್ಪಂದಿಸುತ್ತಾನೆ. ರೋಗಿಯ ಸಂಬಂಧಿಕರು ತಮ್ಮ ಪ್ರೀತಿಪಾತ್ರರಿಲ್ಲದೇ ಮುಂದಿನ ದಿನಗಳನ್ನು ಕಳೆಯಲು ಮಾನಸಿಕ ಸಿದ್ಧತೆಗೆ ಅಣಿಯಾಗುವ ಸಮಯ ಇದು. ಸಾವಿನಲ್ಲೂ ಕೂಡ ರೋಗಿಯ ಹಿತಾಸಕ್ತಿಯನ್ನು ಕಾಪಾಡಿ ರೋಗಿಯು ಪ್ರಾಣ ತ್ಯಜಿಸುವಾಗ ನೋವಿಲ್ಲದೇ, ನರಳಾಡದಂತೆ ನೋಡಿಕೊಳ್ಳುವುದು ಮತ್ತು ಸಂಬಂಧಿಕರಲ್ಲಿ ಸೇವೆಯ ಸಾರ್ಥಕಭಾವ ಮೂಡಿಸುವುದು ಈ ಅವಧಿಯ ಪ್ರಮುಖ ಉದ್ದೇಶ.



ಸಿ.ಎಂ. ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನ

ಆನೆ ಹಿಡಿಯಲು ಕಾರ್ಯಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೆಗಳ ಹಾವಳಿ ನಿಯಂತ್ರಣಕ್ಕಾಗಿ ಚಿಕ್ಕಮಗಳೂರು, ಹಾಸನ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ ಆನೆ ಕಾರ್ಯಪಡೆಗಳನ್ನು ರಚಿಸಿ ಅರಣ್ಯ ಮತ್ತು ಪರಿಸರ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆನೆಗಳು ಜನವಸತಿ ಪ್ರದೇಶಗಳಿಗೆ ಪ್ರವೇಶಿಸಿ ಹಾನಿ ಮಾಡುತ್ತಿರುವುದನ್ನು ನಿಯಂತ್ರಿಸುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಈ ಆದೇಶ ಹೊರಡಿಸಲಾಗಿದೆ.

ಪ್ರತಿ ಕಾರ್ಯಪಡೆಯಲ್ಲಿ ತಲಾ ಒಬ್ಬ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ, ನಾಲ್ವರು ಉಪ ವಲಯ ಅರಣ್ಯಾಧಿಕಾರಿಗಳು, 8 ಮಂದಿ ಅರಣ್ಯ ರಕ್ಷಕರು ಹಾಗೂ 32 ಹೊರ ಗುತ್ತಿಗೆ ಸಿಬ್ಬಂದಿ ಇರಲಿದ್ದಾರೆ. ಪ್ರತಿ ಜಿಲ್ಲೆಯ ಕಾರ್ಯಪಡೆಗೆ ತಲಾ 1 ಬೊಲೆರೊ ಜೀಪ್ ಹಾಗೂ ಬಾಡಿಗೆ ಆಧಾರದಲ್ಲಿ ಪಡೆದ ಎರಡು ಕ್ಯಾಂಟರ್ ವಾಹನಗಳನ್ನು ಒದಗಿಸುವಂತೆ ಆದೇಶಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕಾರ್ಯಪಡೆಯು ಮೂಡಿಗೆರೆಯಲ್ಲಿ, ಹಾಸನ ಜಿಲ್ಲೆಯ ಕಾರ್ಯಪಡೆಯು ಸಕಲೇಶಪುರದಲ್ಲಿ, ಮೈಸೂರು ಜಿಲ್ಲೆಯ ಕಾರ್ಯಪಡೆಯು ಹುಣಸೂರಿನಲ್ಲಿ, ಕೊಡಗು ಜಿಲ್ಲೆಯ ಕಾರ್ಯಪಡೆಯು ಮಡಿಕೇರಿಯಲ್ಲಿ ಕೇಂದ್ರಸ್ಥಾನ ಹೊಂದಿರಲಿವೆ.

ಕಾರ್ಯಪಡೆಗಳಿಗೆ ಅಗತ್ಯವಿರುವ ವಾಕಿಟಾಕಿ, ಬಂದೂಕು, ಪಟಾಕಿ ಮತ್ತಿತರ ಸಲಕರಣೆ ಒದಗಿಸುವಂತೆಯೂ ಆದೇಶದಲ್ಲಿ ತಿಳಿಸಲಾಗಿದೆ.

ಕಾರ್ಯಪಡೆಯ ತಂಡಗಳು ಆನೆ ಹಾವಳಿ ಇರುವ ಪ್ರದೇಶಗಳಲ್ಲಿ ಗಸ್ತು ತಿರುಗಬೇಕು. ಜನವಸತಿ ಪ್ರದೇಶ, ಕೃಷಿ ಜಮೀನು ಹಾಗೂ ಕಾಫಿ ಎಸ್ಟೇಟ್‌ಗಳಲ್ಲಿ ಆನೆಗಳ ಚಲನವಲನಗಳನ್ನು ಗುರುತಿಸಿ ಅರಣ್ಯಕ್ಕೆ ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಬೇಕು. ಕಾಡಾನೆ ಹಾವಳಿ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಬೇಕು.

ಫೆಬ್ರುವರಿಯೊಳಗೆ 7 ಲಕ್ಷ ಮನೆ ಪೂರ್ಣ: ಸಿಎಂ ಗುರಿ

ಬೆಂಗಳೂರು: 2023ರ ಫೆಬ್ರುವರಿ ಕೊನೆಯೊಳಗೆ 7 ಲಕ್ಷ ಮನೆಗಳನ್ನು ಪೂರ್ಣಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರಿ ನಿಗದಿ ಮಾಡಿದ್ದಾರೆ.

ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ನಡೆದ ವಸತಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಿರ್ಮಾಣದ ವಿವಿಧ ಹಂತಗಳಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಬೇಕು. ಜನವರಿ ಅಂತ್ಯದೊಳಗಾಗಿ ರೂಪರೇಷೆ ಕೈಗೊಳ್ಳಬೇಕು. ಈ ಕಾರ್ಯಕ್ಕೆ ಅಗತ್ಯವಿರುವ ಸಿಬ್ಬಂದಿ ಪೂರೈಕೆಯನ್ನು ಸಿದ್ಧರಿದ್ದೇವೆ. ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಿ ಸಭೆ ನಡೆಸಿ ಸ್ಥಳದಲ್ಲಿಯೇ ಸಮಸ್ಯೆಗಳನ್ನು ಇತ್ಯರ್ಥಗೊಳಿಸಬೇಕು ಎಂದು ಬೊಮ್ಮಾಯಿ ಹೇಳಿದರು.

ಎಲ್ಲಾ ಕೆಡಿಪಿ ಸಭೆಗಳಲ್ಲಿ ವಿವಿಧ ವಸತಿ ಯೋಜನೆಗಳ ಗೃಹ ನಿರ್ಮಾಣ ಪ್ರಮುಖ ವಿಷಯವಾಗಬೇಕು. ಹಿಂದಿನ ವರ್ಷದ ಮನೆಗಳ ಪೈಕಿ 2 ಲಕ್ಷಕ್ಕೂ ಹೆಚ್ಚಿನ ಮನೆಗಳು ಹಾಗೂ ಪ್ರಸಕ್ತ ಸಾಲಿನ 2 ರಿಂದ 3 ಲಕ್ಷ ಮನೆಗಳನ್ನು ಪೂರ್ಣಗೊಳಿಸಬೇಕು. ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ಖಾಸಗಿ ಬ್ಯಾಂಕ್‌ಗಳ ಮುಖ್ಯಸ್ಥರ ಸಭೆ ಕರೆದು ಸಾಲ ನೀಡುವ ನಿಯಮಗಳ ಬಗ್ಗೆ ಚರ್ಚಿಸುವಂತೆಯೂ ಅವರು ಸಲಹೆ ನೀಡಿದರು.

20 ಸಾವಿರ ಮನೆಗಳ ನಿರ್ಮಾಣ ಮಾಡಲು ಅನುದಾನದ ಕೊರತೆ ಆಗದಂತೆ ಕ್ರಮವಹಿಸಲಾಗುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದ ಒಟ್ಟು ₹1,089 ಕೋಟಿ ಲಭ್ಯವಿದೆ. ಫಲಾನುಭವಿಗಳು ನೀಡಬೇಕಿರುವ ಅನುದಾನವನ್ನು ಸರ್ಕಾರವೇ ನೀಡಿ, ಫಲಾನುಭವಿಗಳು ಹಣ ಮರುಪಾವತಿ ಮಾಡುವ ಪದ್ಧತಿ ವಿಧಿಸಿ, ಕಂತಿನ ಮೊತ್ತವನ್ನು ಸರ್ಕಾರಕ್ಕೆ ಮರುಪಾವತಿ ಮಾಡುವಂತೆಯೂ ಬೊಮ್ಮಾಯಿ ಸೂಚಿಸಿದರು. ಸಭೆಯಲ್ಲಿ ವಸತಿ ಸಚಿವ ವಿ.ಸೋಮಣ್ಣ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಇದ್ದರು.

26ರಂದು ಕಡ್ಡಾಯ 'ಸಂವಿಧಾನದ ಪೀಠಿಕೆ' ಓದು

ಬೆಂಗಳೂರು: ಭಾರತ ಸಂವಿಧಾನದ ದಿನವಾದ ನ.26ರಂದು ಬೆಳಿಗ್ಗೆ 11ಕ್ಕೆ ಎಲ್ಲ ವಿದ್ಯಾರ್ಥಿಗಳು ಏಕಕಾಲಕ್ಕೆ ಸಂವಿಧಾನದ ಪೀಠಿಕೆ ಓದಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಭಾರತದ ಸಂವಿಧಾನದಲ್ಲಿ ಪ್ರತಿಪಾದಿಸಿದ ಮೌಲ್ಯಗಳು, ತತ್ವಗಳ ಅರಿವು ಮೂಡಿಸಲು ಇಲಾಖೆ 'ನಿಮ್ಮ ಸಂವಿಧಾನ ಗೊತ್ತೇ' ಕಾರ್ಯಕ್ರಮವನ್ನು ರೂಪಿಸಿದೆ. ಅದರ ಭಾಗವಾಗಿ ಎಲ್ಲ ಅನುದಾನಿತ, ಅನುದಾನರಹಿತ ಹಾಗೂ ಸರ್ಕಾರಿ ಶಾಲೆಗಳಲ್ಲಿ ಸಂವಿಧಾನ ಪೀಠಿಕೆ ಓದಿಸಬೇಕು. ಶಾಲಾ ಆವರಣದಲ್ಲಿ ಪೀಠಿಕೆ ಹಾಗೂ ಮೂಲಭೂತ ಕರ್ತವ್ಯಗಳ ವಿವರಗಳನ್ನು ಪ್ರದರ್ಶಿಸಬೇಕು. ಸಂವಿಧಾನದ ವಿವಿಧ ಅಂಶಗಳ ಕುರಿತು ಚರ್ಚಾ ಸ್ಪರ್ಧೆ, ರಸಪ್ರಶ್ನೆ, ಪ್ರಬಂಧಗಳನ್ನು ಹಮ್ಮಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

'ಸುಪ್ರೀಂ'ನಲ್ಲಿ ಗಡಿ ವಿವಾದ: ಸರ್ವಪಕ್ಷಗಳ ಸಭೆಗೆ ಆಗ್ರಹ

ಬೆಂಗಳೂರು: 'ಬೆಳಗಾವಿ ಗಡಿ ವಿವಾದದ ಕುರಿತು ಮಹಾರಾಷ್ಟ್ರ ಸರ್ಕಾರ ವಿಶೇಷ ಆಸಕ್ತಿ ತೋರಿಸುತ್ತಿರುವುದರಿಂದ ರಾಜ್ಯ ಸರ್ಕಾರ ತಕ್ಷಣ ಸರ್ವಪಕ್ಷಗಳ ಸಭೆ ಕರೆದು, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಬೆಳಗಾವಿ ಗಡಿ ವಿವಾದದ ಬಗ್ಗೆ ಸುಪ್ರೀಂ ಕೋರ್ಟ್ ಇದೇ 23ರಂದು ವಿಚಾರಣೆ ನಡೆಸಲಿದೆ. ಅದನ್ನು ಎದುರಿಸಲು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಭರದ ಸಿದ್ಧತೆ ನಡೆಸಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ತಮ್ಮ ರಾಜ್ಯ ಮಂಡಿಸಬೇಕಾದ ವಾದದ ಬಗ್ಗೆ ಸಮಾಲೋಚನೆ ನಡೆಸಲು ವಿರೋಧ ಪಕ್ಷಗಳ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ಆ ರಾಜ್ಯ ರಚಿಸಿದೆ. ಆ ರಾಜ್ಯ ಗಡಿವಿವಾದವನ್ನು ಎಷ್ಟೊಂದು ಗಂಭೀರವಾಗಿ ಸ್ವೀಕರಿಸಿದೆ ಎನ್ನುವುದಕ್ಕೆ ಇದು ಸಾಕ್ಷಿ' ಎಂದಿದ್ದಾರೆ.

'ನೆಲ-ಜಲ-ಭಾಷೆಯ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿಗೆ ಬದ್ಧವಾಗಿ ರಾಜ್ಯ ಬಿಜೆಪಿ ಸರ್ಕಾರ ಕೈಗೊಳ್ಳುವ ಕ್ರಮಗಳನ್ನು ನಮ್ಮ ಪಕ್ಷ ಬೆಂಬಲಿಸಲಿದೆ. ಸಮಯ ವ್ಯರ್ಥ ಮಾಡದೆ ಮುಖ್ಯಮಂತ್ರಿ ಅವರು ವಿರೋಧ ಪಕ್ಷಗಳ ಸಭೆ ಕರೆದು, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಮಾಡಬೇಕು' ಎಂದರು

ನಿಧನ ವಾರ್ತೆ

ಪದ್ಮಾ ಪಾಂಡುರಂಗ ಬೇಂದ್ರೆ

ಧಾರವಾಡ: ವರಕವಿ ದ.ರಾ.ಬೇಂದ್ರೆ ಅವರ ಸೊಸೆ ಪದ್ಮಾ ಪಾಂಡುರಂಗ ಬೇಂದ್ರೆ (90) ಸೋಮವಾರ ನಿಧನರಾದರು. ಅವರಿಗೆ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮಂಗಳವಾರ ಬೆಳಿಗ್ಗೆ 8ಕ್ಕೆ ನಗರದ ಹೊಸಯಲ್ಲಾಪುರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ.ಸ.ಕುಮಾರ್‌ಗೆ ಹಾಲಭಾವಿ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಪಿ.ಸಂಪತ್ ಕುಮಾರ್

ಸತೀಶ ಪಾಟೀಲ

ಎಫ್.ವಿ.ಚಿಕ್ಕಮಠ

ಲಕ್ಷ್ಮಿ ಮೈಸೂರು

ಧಾರವಾಡ: ಚಿತ್ರಕಲಾ ಶಿಲ್ಪಿ ಡಿ.ವಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಜೀವಮಾನ ಸಾಧನೆಗೆ ನೀಡುವ 'ಕಂಚ ಕಲಾ ತಪಸ್ವಿ' ರಾಷ್ಟ್ರೀಯ ಪ್ರಶಸ್ತಿಯು ಹಿರಿಯ ಕಲಾವಿದ ಬೆಂಗಳೂರಿನ ಪಿ.ಸಂಪತ್ ಕುಮಾರ್ (ಪ.ಸ.ಕುಮಾರ್) ಅವರಿಗೆ ಲಭಿಸಿದೆ.

ಪ್ರಶಸ್ತಿಯು ₹1ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.

'ಕಂಚ ಕಲಾಶ್ರೀ' ರಾಷ್ಟ್ರೀಯ ಪ್ರಶಸ್ತಿಯು ಧಾರವಾಡದ ಎಫ್.ವಿ.ಚಿಕ್ಕಮಠ ಅವರಿಗೆ ಲಭಿಸಿದೆ. ಈ ಪ್ರಶಸ್ತಿಯು ₹50ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. 'ಯುವ ಕಂಚ ಕಲಾಶ್ರೀ' ರಾಷ್ಟ್ರೀಯ ಪ್ರಶಸ್ತಿಯು ಚಿಕ್ಕಮಗಳೂರಿನ ಲಕ್ಷ್ಮೀ ಮೈಸೂರು ಹಾಗೂ ಮುಂಬೈನ ಸತೀಶ ಪಾಟೀಲ ಅವರಿಗೆ ಸಂದಿದೆ. ಈ ಪ್ರಶಸ್ತಿಯು ತಲಾ ₹25ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.

ನ.28ರಂದು ಧಾರವಾಡದ ಸರ್ಕಾರಿ ಕಲಾ ಗ್ಯಾಲರಿಯಲ್ಲಿ ಪ್ರಶಸ್ತಿ ವಿಜೇತರಿಂದ ಚಿತ್ರಕಲಾ ಪ್ರಾತ್ಯಕ್ಷಿಕೆ ಹಾಗೂ ನ.29ರಂದು ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in
ಸಂ: ಕೆಆರ್‌ಡಿಸಿಎಲ್/ಐಎಫ್‌ಬಿ/2022–23/33 ದಿನಾಂಕ: 21.11.2022

ಬಿಡ್‌ಗಳ ಆಹ್ವಾನ (ದ್ವಿಲಕೋಟೆ ಪದ್ಧತಿ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) 1) **ಹಿರೇಕೆರೂರು – ರಾಣೆಬೆನ್ನೂರು ರಸ್ತೆಯಲ್ಲಿ ಹಂಸಭಾವಿ ಹಾಗೂ ಚಿಕ್ಕೇರೂರು ಭಾಗದಲ್ಲಿ ಉಳಿಕೆ ಕಾಮಗಾರಿ ಹಾಗೂ 2) ಮುಂಡರಗಿ – ಹರಪ್ಪನಹಳ್ಳಿ ರಸ್ತೆಯಲ್ಲಿ ಮುಂಡರಗಿ ಪಟ್ಟಣ ಪರಿಮಿತಿಯಲ್ಲಿ ಉಳಿಕೆ ಕಾಮಗಾರಿಗಳಿಗಾಗಿ** ಗುತ್ತಿಗೆದಾರರಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು,** ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **www.eproc.karnataka.gov.in** ವೆಬ್‌ಸೈಟ್ ಮೂಲಕ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ : 07.12.2022ರ 17.30 ಗಂಟೆವರೆಗೆ** ಇರುತ್ತದೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **09.12.2022ರಂದು ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುತ್ತದೆ.**

ಗಮನಿಸಿ : ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಇ–ಪೋರ್ಟಲ್/ಕರಅನಿನಿ ವೆಬ್‌ಸೈಟ್ : http:www.krdcl.in ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/–
ಮುಖ್ಯ ಅಭಿಯಂತರರು
ಕೆಆರ್‌ಡಿಸಿಎಲ್, ಬೆಂಗಳೂರು
DIPR/CP/Yakshi/3187/2022-23

ಕರ್ನಾಟಕ ರಾಜ್ಯ ಉಗ್ರಾಣ ನಿಗಮ
ಉಗ್ರಾಣ ಭವನ, ನಂ.43, ಪ್ರೈಂರೋಸ್ ರಸ್ತೆ, ಬೆಂಗಳೂರು – 560 025.
ದೂರವಾಣಿ: 080–29533679 , ಫ್ಯಾಕ್ಸ್: 080–29533673
ಇ–ಮೇಲ್ : gmcom.kswc@gmail.com ವೆಬ್‌ಸೈಟ್: https://kswc.karnataka.gov.in
ಸಂಖ್ಯೆ:ಕರಾಉನಿ/ವಾಣಿಜ್ಯ–4/ಪ್ರಕಟಣೆ/2557/2022–23 ದಿನಾಂಕ:21.11.2022

ಪ್ರಕಟಣೆ

ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ರಾಜ್ಯದಾದ್ಯಂತ 68 ಕೇಂದ್ರಗಳಲ್ಲಿರುವ 189 ಉಗ್ರಾಣಗಳಲ್ಲಿನ 4,24,401 ಮೆ.ಟನ್ ಸಾಮರ್ಥ್ಯದ 25,46,406 ಚ.ಅಡಿ ವಿಸ್ತೀರ್ಣದ ಉಗ್ರಾಣಗಳು ಆಸಕ್ತರಿಗೆ ಕೃಷಿ ಉತ್ಪನ್ನಗಳು, ಕಚ್ಚಾ/ಸಂಸ್ಕರಿಸಿದ, ಸಾಮಗ್ರಿಗಳು, ಸಿದ್ಧಪಡಿಸಿದ/ ಗ್ರಾಹಕರ/ ಕೈಗಾರಿಕಾ/ಔಷಧಿ ಉತ್ಪನ್ನಗಳ ಸಂಗ್ರಹಣೆಗೆ ನಿಗಧಿತ ಸಂಗ್ರಹಣಾ ಶುಲ್ಕ ಆಧಾರದ ಮೇಲೆ (ಲಾಕ್& ಕೀ) ಅಲ್ಪಾವಧಿ / ದೀರ್ಘಾವಧಿಗೆ ವಹಿಸಿಕೊಡಲು ಲಭ್ಯವಿರುತ್ತವೆ. ಆಸಕ್ತರು **kswc.karnataka.gov.in** ನಲ್ಲಿ ಅಥವಾ ನಿಗಮದ ಉಗ್ರಾಣ ವ್ಯವಸ್ಥಾಪಕರು/ ಪ್ರಾದೇಶಿಕ ವ್ಯವಸ್ಥಾಪಕರನ್ನು ಸಂಪರ್ಕಿಸಿ ಅರ್ಜಿ / ದಾಖಲಾತಿಗಳನ್ನು ಪಡೆದುಕೊಂಡು ಭರ್ತಿಮಾಡಿ ಮುಚ್ಚಿದ ಲಕೋಟೆಯನ್ನು ವ್ಯವಸ್ಥಾಪಕ ನಿರ್ದೇಶಕರಿಗೆ ಮೇಲೆ ತಿಳಿಸಿದ ವಿಳಾಸಕ್ಕೆ ದಿನಾಂಕ: **21.12.2022ರೊಳಗಾಗಿ** ತಲುಪುವಂತೆ ಕಳುಹಿಸಿಕೊಡತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 9741112969, 7760966903, 8277070838 ಅಥವಾಈ ಕಛೇರಿಯನ್ನು, ನಿಗಮದ ಉಗ್ರಾಣ ವ್ಯವಸ್ಥಾಪಕರು/ಪ್ರಾದೇಶಿಕ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು, ಕರಾಉನಿ
ವಾಸಾಸಂಇ/ವಾಪ್ರ/ಜಿಎ/3144/2022–23

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ, ಮುಖ್ಯಸ್ಥರು) ರವರ ಕಛೇರಿ
ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003. ದೂರವಾಣಿ: 080–23346551
ಸಂಖ್ಯೆ: KFD/HOFF/B10(TND)/4/2022-ICT-KFD ದಿನಾಂಕ: 19–11–2022

ಕರ್ನಾಟಕ ಅರಣ್ಯ ಇಲಾಖೆ

ಅರಣ್ಯ ಇಲಾಖೆಗೆ ಅಗತ್ಯವಿರುವ ಆಲ್–ಇನ್–ಒನ್–ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು ಮತ್ತು ಮೈಕ್ರೋಸಾಫ್ಟ್ ಆಫೀಸ್ 2021 ಸ್ಟ್ಯಾಂಡರ್ಡ್ ಲೈಸೆನ್ಸ್‌ಗಳನ್ನು ಸರಬರಾಜು ಮಾಡಲು ಟೆಂಡರ್ ಅಧಿಸೂಚನೆ.

ಕರ್ನಾಟಕ ಅರಣ್ಯ ಇಲಾಖೆಯ ವಿವಿಧ ಕಛೇರಿಗಳಿಗೆ ಅಗತ್ಯವಿರುವ ಆಲ್–ಇನ್–ಒನ್– ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು ಜೊತೆಗೆ ಐದು ವರ್ಷಗಳ ಸಮಗ್ರ ವಾರಂಟಿ ಮತ್ತು ಮೈಕ್ರೋಸಾಫ್ಟ್ ಆಫೀಸ್ 2021 ಸ್ಟ್ಯಾಂಡರ್ಡ್ ಲೈಸನ್ಸ್‌ಗಳನ್ನು ಸರಬರಾಜು ಮಾಡಲು ಮತ್ತು ಸಮಗ್ರ ವಾರಂಟಿ ಒದಗಿಸಲು "ಇ–ಟೆಂಡರ್" ಅಧಿಸೂಚನೆ ಸಂಖ್ಯೆ: FD/2022-23/IND 1999 ಲ್ಲಿ ದಿನಾಂಕ: 19–11–2022 ರಂದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಪ್ರಕಟಿಸಲಾಗಿದ್ದು, ಆಸಕ್ತರಿಂದ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ ಮುಖಾಂತರ ದಿನಾಂಕ: 19–11–2022 ರಿಂದ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09–12–2022ರ ಸಂಜೆ 5.30 ಗಂಟೆಯವರೆಗೆ ಅವಕಾಶವಿರುತ್ತದೆ. ತಾಂತ್ರಿಕ ಬಿಡ್ಡನ್ನು 12–12–2022ರ ಅಪರಾಹ್ನ 3.00 ಗಂಟೆಗೆ ಈ ಕಛೇರಿಯಲ್ಲಿ ತೆರೆಯಲಾಗುವುದು ಮತ್ತು ಆರ್ಥಿಕ ಬಿಡ್ಡನ್ನು 15–12–2022ರ ಬೆಳಿಗ್ಗೆ 11.30 ಅಥವ ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನ ಪೂರ್ಣಗೊಂಡ ನಂತರ ತೆರೆಯಲಾಗುವುದು. ಟೆಂಡರ್ ಅಧಿಸೂಚನೆಯ ಪೂರ್ಣ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮಾಹಿತಿ ಸಂವಹನ ತಂತ್ರಜ್ಞಾನ)
DIPR/CP/VCPL/3185/2022-23

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342 ಇ–ಮೇಲ್: director_bmcri@yahoo.co.in

ಮರು ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿಗೆ ಅಗತ್ಯವಿರುವ ಈ ಕೆಳಕಂಡ ಉಪಕರಣಗಳ ಖರೀದಿಗೆ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ.

1	ಈ ಸಂಸ್ಥೆಯ ಇಎನ್‌ಟಿ ವಿಭಾಗಕ್ಕೆ Modular OT with Laminar Airflow ಸ್ಥಾಪಿಸಲು ಮರು ಇ–ಟೆಂಡರ್ ಆಹ್ವಾನಿಸುವ ಬಗ್ಗೆ.	ಟೆಂಡರ್ ಸಂಖ್ಯೆ: ಬೆಂವೈವಿಸಂಸಂ/ಸರಬ (2)/08/2022–23 ದಿನಾಂಕ: 19.11.2022
2	ಈ ಸಂಸ್ಥೆಯ ರೇಡಿಯಾಲಜಿ ವಿಭಾಗಕ್ಕೆ ದಪ್ಪನೆಯ ಕಾಗದದ ಮೇಲೆ (ಸಿಟಿ ಎಂಆರ್‌ಐ ಮತ್ತು ಕ್ಷ–ಕಿರಣ) ಕ್ಷ–ಕಿರಣ ಮುದ್ರಣಕ್ಕಾಗಿ ಮರು ಇ–ಟೆಂಡರ್ ಆಹ್ವಾನಿಸುವ ಬಗ್ಗೆ.	ಟೆಂಡರ್ ಸಂಖ್ಯೆ: ಬೆಂವೈವಿಸಂಸಂ/ಸರಬ (2)/09/2022–23 ದಿನಾಂಕ: 19.11.2022

1) ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭ ದಿನಾಂಕ: **21–11–2022.** 2) ಪೂರ್ವ ಭಾವಿ ಸಭೆ ದಿನಾಂಕ: **29–11–2022ರಂದು ಪೂರ್ವಾಹ್ನ 11.30 ಗಂಟೆಗೆ.** 3) ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಅಂತಿಮ ದಿನಾಂಕ: **06–12–2022ರಂದು ಅಪರಾಹ್ನ 4.30 ಕ್ಕೂ ಮುಂಚೆ.** 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **08–12–2022ರಂದು ಪೂರ್ವಾಹ್ನ 11.30 ಗಂಟೆಗೆ.**

ಟೆಂಡರ್ ವಿವರಗಳು, ಇ.ಎಂ.ಡಿ ವಿವರಗಳು ಹಾಗೂ ಸಂಬಂಧಿತ ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ ನೋಡಬಹುದು. ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ವೆಬ್‌ಸೈಟ್: **https://www.eproc.karnataka.gov.in** ಆಸಕ್ತ ಟೆಂಡರುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ರಿಜಿಸ್ಟರ್ ಮಾಡಿಕೊಳ್ಳಬೇಕು. ಈ ಬಗ್ಗೆ ವಿವರಗಳನ್ನು ಸದರಿ ವೆಬ್‌ಸೈಟಿನಲ್ಲಿ ವೀಕ್ಷಿಸಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ **ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ಮಹಾವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.**

ಸಹಿ/– ನಿರ್ದೇಶಕರು ಹಾಗೂ ಡೀನ್,
ಬೆಂವೈವಿಸಂಸಂ, ಬೆಂಗಳೂರು.
ವಾಸಾಸಂಇ/ವಾ.ಪ್ರ/3177/ಅಡ್ವರ್ಟೋರ್/2022–23

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ ಬಳ್ಳಾರಿ
ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/3972/2022–23
ದಿನಾಂಕ : 18–11–2022

ಟೆಂಡರ್ ತಿದ್ದುಪಡಿ ಪ್ರಕಟಣೆ

ವಿಷಯ : 5054–(ಯೋಜನೆ)–ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಲೆಕ್ಕಶೀರ್ಷಿಕೆಯ ಅಡಿಯಲ್ಲಿ ಆಹ್ವಾನಿಸಲಾಗಿದ್ದ ಕಾಮಗಾರಿಗಳ ಟೆಂಡರ್ ತಿದ್ದುಪಡಿ ಬಗ್ಗೆ.
ಉಲ್ಲೇಖ : ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/2577/2022–23 ದಿನಾಂಕ 1–9–2022.

ಮೇಲಿನ ಉಲ್ಲೇಖದಲ್ಲಿನ ಈ ಕಛೇರಿ ಟೆಂಡರ್ ಪ್ರಕಟಣೆಯಲ್ಲಿ ಆಹ್ವಾನಿಸಿದ್ದ ಕಾಮಗಾರಿಗಳ ಪೈಕಿ ಈ ಕೆಳಕಾಣಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಇಂಡೆಂಟ್ ಸಂಖ್ಯೆಯಲ್ಲಿ ಬದಲಾವಣೆಯಾಗಿದ್ದು, ಟೆಂಡರ್ ಸಲ್ಲಿಸುವ ಗುತ್ತೇದಾರರು ಇದನ್ನು ಗಮನಿಸಲು ಕೋರಿದೆ. ಇನ್ನುಳಿದ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಬದಲಾವಣೆಗಳಿದ್ದಲ್ಲಿ ಪ್ರತ್ಯೇಕವಾಗಿ ತಿಳಿಯಪಡಿಸಲಾಗುವುದು.
ಈ ಮೊದಲು ಪ್ರಕಟಿಸಲಾದ ಕಾಮಗಾರಿಯ ಇಂಡೆಂಟ್ ಸಂಖ್ಯೆ:KPWD/2022-23/RO/WORK_INDENT154784
ಬದಲಾಯಿತ ಇಂಡೆಂಟ್: KPWD/2022-23/RD/WORK_INDENT 160124

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/645/ಎಂಸಿಎ/2022–23

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಗ್ರಾಹಕ ಉತ್ಪನ್ನಗಳ ವಿಭಾಗ, ನಂ36, ಎಂಎಸ್‌ಐಎಲ್ ಹೌಸ್,
ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–52
ಸಂ: ಎಂಎಸ್‌ಐಎಲ್/ಸಿಪಿಡಿ/006/2022–23/ಕರೆ–2 ದಿ: 22.11.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (2ನೇ ಕರೆ)

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಕರ್ನಾಟಕ ಸರ್ಕಾರದ ಒಂದು ಪ್ರಮುಖ ಅಧೀನ ಸಂಸ್ಥೆಯಾಗಿದ್ದು, ವಿವಿಧ ಉತ್ಪನ್ನಗಳ ಮಾರಾಟ ಮತ್ತು ಸೇವೆಗಳಲ್ಲಿ ನಿರತವಾಗಿದ್ದು, **ಫೈರ್ ಬಾಲ್ ಎಕ್ಸ್ಟಿಂಗ್ವಿಶರ್ ಪೂರೈಕೆಗಾಗಿ** ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಇ–ಟೆಂಡರುಗಳನ್ನು ಆಹ್ವಾನಿಸಿದೆ. ದಸ್ತಾವೇಜುಗಳು ವೆಬ್‌ಸೈಟ್: **https://eproc.karnataka.gov.in** ಇಲ್ಲಿ ದಿನಾಂಕ **22.11.2022 ರಿಂದ** ದೊರೆಯುವವು ಹಾಗೂ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **30.11.2022 ರಂದು ಮಧ್ಯಾಹ್ನ 03.00 ಗಂಟೆವರೆಗೆ.** ಬಿಡ್ ಪೂರ್ವ ಸಭೆ ದಿನಾಂಕ: **25.11.2022, ಬೆಳಿಗ್ಗೆ 11.30 ಗಂಟೆಗೆ.**

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ಸಿಪಿಡಿ)

ನಗರಸಭಾ ಕಾರ್ಯಾಲಯ ಹೊಸಪೇಟೆ.
No: CMC HPT/Day-Nulm/2022-23 Dated: 19-11-2022

ಟೆಂಡರಿಗಾಗಿ ಆಹ್ವಾನ (ಐ.ಎಫ್.ಟಿ.) ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ)

2021–22ನೇ ಸಾಲಿನ ಡೇ–ನಲ್ಮ್ ಅನುದಾನದ ಈ ಕೆಳಗಿನ ಕೆಲಸಕ್ಕಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.govt.in ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:05–12–2022 ಸಂಜೆ 5.00 ಗಂಟೆ ವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06–12–2022 ಸಂಜೆ 5.10 ಗಂಟೆ ನಂತರ(3) ಆರ್ಥಿಕ ಬಿಡ್ ತೆರೆಯುವ ಸ್ಥಳ ಹಾಗೂ ದಿನಾಂಕ:07–12–2022 ನಗರಸಭೆ, ಹೊಸಪೇಟೆ. **1) DMA/2022-23/BD/WORK_INDENT 141895** ಕಾಯ್ದಿರಿಸಿದ ಮೊತ್ತ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):93.50 ಲಕ್ಷ, ಇ.ಎಂ.ಡಿ (90 ದಿನಗಳ ವ್ಯಾಲಿಡಿಟಿ ರೂ.ಗಳಲ್ಲಿ): 187000.00 ಟೆಂಡರ್ ಪ್ರೋಸೆಸ್ಸಿಂಗ್ ಫೀ ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂದನೆಗಳಿಗೆ ನಗರಸಭೆ ಕಾರ್ಯಾಲಯ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ, ಹೊಸಪೇಟೆ. ಸಹಿ/– ಪೌರಾಯುಕ್ತರು ನಗರಸಭೆ, ಹೊಸಪೇಟೆ. ಸಹಿ/– ಅಧ್ಯಕ್ಷರು, ನಗರಸಭೆ, ಹೊಸಪೇಟೆ.
ಡಿಐಪಿಆರ್/ವಿಜಯನಗರ/252/ಎಂಸಿಎ/2022–23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ
ಕ್ರ.ಸಂ:ಬಿಜಿಎಂ:ಡಿಯುಡಿಸಿ:5:ಸಿಆರ್–25:2021–22 ದಿನಾಂಕ:21–11–2022

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯ ಕಾಮಗಾರಿಗಳಿಗಾಗಿ KW-4 ಡಾಕುಮೆಂಟ್ ಉಪಯೋಗಿಸಿ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. **(ರೂ. ಲಕ್ಷಗಳಲ್ಲಿ)**

ಕ್ರ. ಸಂ	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ
1	ಚಿಕ್ಕೋಡಿ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT141625)	391.13	5.87
2	ಚಿಕ್ಕೋಡಿ ಪುರಸಭೆ ವ್ಯಾಪ್ತಿಯಲ್ಲಿ ಸಮುದಾಯ ಭವನ, ತಿನಸು ಮಳಿಗೆಗಳನ್ನು (ಖಾಹು ಕಟ್ಟೆ), ಕಂಪೌಂಡ ಗೋಡೆ, ಸೇತುವೆ & ಸಿಡಿ ನಿರ್ಮಿಸುವುದು, ಉದ್ಯಾನವನ ಮತ್ತು ಸ್ಮಶಾನ ಅಭಿವೃದ್ಧಿಪಡಿಸುವುದು, ಬೀದಿ ದೀಪ ಕಂಬ ಮತ್ತು ಬೀದಿ ದೀಪಗಳನ್ನು ಅಳವಡಿಸುವುದು. (Tender No. DMA/2022-23/OW/WORK_INDENT141637)	199.10	2.99

ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ	09 ತಿಂಗಳು (ಮಳೆಗಾಲ ಹೊರತುಪಡಿಸಿ)
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	21–12–2022ರಂದು 17–00 ಘಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	22–12–2022ರಂದು 17–01 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR/BGM/RO-NO-1227/MCA/2022-23

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ–577 222.
ದೂರವಾಣಿ: 08182–246165, website: www.shimul.coop
ಐಎಫ್‌ಟಿ ನಂ.: ಸಂಖ್ಯೆ:ಶಿದಾಚಿಹಾಒ:ಅಭಿಯಂತರ:ಸಿ.ಕಾ:7297:2022–23 ದಿನಾಂಕ: 21.11.2022

ಟೆಂಡರ್ ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಮಾತ್ರ)

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯಾಪ್ತಿಯಲ್ಲಿನ ಶಿವಮೊಗ್ಗ ಡೇರಿಯ ಶೇಮತಾಂ ಮತ್ತು ಮಾರುಕಟ್ಟೆ ವಿಭಾಗಗಳ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಆಡಳಿತ ಮಂಡಳಿ ಸಭಾಂಗಣ ನಿರ್ಮಾಣ ಮಾಡುವ ಕೆಲಸಗಳು ಹಾಗು ಮತ್ತಿತರ ಸಂಬಂಧಿಸಿದ ಸಿವಿಲ್ ಕಾಮಗಾರಿ ಕೆಲಸಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯ ಅಧಿಕೃತ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕೋಷ್ಟಕದಂತೆ (ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಮಾತ್ರ) ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಗುತ್ತಿಗೆದಾರರು ಟೆಂಡರ್ ಬಿಡ್‌ಗಳನ್ನು ನಿಗದಿತ ಇ.ಎಂ.ಡಿ ಮೊತ್ತದೊಂದಿಗೆ ದಿನಾಂಕ: 06.12.2022ರ ಸಂಜೆ 04.30 ಗಂಟೆಗಳ ಒಳಗಾಗಿ ಇ–ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಛೇರಿ ಮತ್ತು ಅಭಿಯಂತರ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

ಕ್ರ. ಸಂ.	ಕೆಲಸದ ವಿವರ	ಇಂಡೆಟ್ ಸಂಖ್ಯೆ	ಟೆಂಡರ್‌ನ ಅಂದಾಜು ಮೊತ್ತ	ಟೆಂಡರ್‌ನ ಅವಧಿ	ಇ.ಎಂ.ಡಿ. ಮೊತ್ತ	ಗುತ್ತಿಗೆದಾರರ ದರ್ಜೆ
1	ಶಿವಮೊಗ್ಗ ಡೇರಿಯ ಶೇಮತಾಂ ಮತ್ತು ಮಾರುಕಟ್ಟೆ ವಿಭಾಗಗಳ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಆಡಳಿತ ಮಂಡಳಿ ಸಭಾಂಗಣ ನಿರ್ಮಾಣ ಮಾಡುವ ಕೆಲಸಗಳು (ದ್ವಿ ಲಕೋಟೆ)	KMF/2022-23/ BD/ WORK_INDENT 1691	ರೂ. 150 ಲಕ್ಷ	180 ದಿನಗಳು	ರೂ. 2,25,000/–	1ನೇ ದರ್ಜೆ ಮತ್ತು ಮೇಲ್ಪಟ್ಟು

ದಿನಾಂಕ: 21.11.2022
ಸ್ಥಳ: ಮಾಚೇನಹಳ್ಳಿ

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಶಿವಮೊಗ್ಗ ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.
ಸಂಖ್ಯೆ:ಲೋಇ:ಬಾವಿ:ಪಿಬಿ:ಕೆಡಬ್ಲು:2022–23/3396 ದಿನಾಂಕ: 19.11.2022

ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ–1,2,3,4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ ಅಹ್ವಾನಿಸಲಾಗಿದೆ.

ವರ್ಕಇಂಡೆಂಟ್ ನಂ:**ಸಾಮಾನ್ಯ: 159823, 155226, 149959, 154826, 159371, 160162, 133804 ಕಾಲ್–2, 156116 ಕಾಲ್–2, 156118 ಕಾಲ್–2, 156119 ಕಾಲ್–2, 158309, 160892, 160893, 160894, 160895, 160896, 160897, 159046, 161222, 161223, 161224**
ಎಸ್.ಸಿ: 158736
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ **990.00 ಲಕ್ಷ** ಹಾಗೂ ಕನಿಷ್ಠ ಮೊತ್ತ ರೂ. **10.00 ಲಕ್ಷ**ಗಳ ವರೆಗಿನ ಕಾಮಗಾರಿಗಳಿಗೆ ಟೆಂಡರಅಹ್ವಾನಿಸಲಾಗಿದೆ.

ಅ)	ಪ್ರೀಬಿಡ್ ಮಿಟಿಂಗ್	25–11–2022 ರಂದು ಮಧ್ಯಾಹ್ನ 11–30 ಘಂಟೆಯವರೆಗೆ
ಬ)	ಟೆಂಡರಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ:	28–11–2022 ರಂದು ಸಂಜೆ 5–30 ಘಂಟೆಯವರೆಗೆ
ಕ)	ಟೆಂಡರ ಸ್ವೀಕರಿಸುವ ದಿನಾಂಕ:	29–11–2022 ರಂದು ಸಂಜೆ 4–00 ಘಂಟೆಯವರೆಗೆ
ಡ)	ತಾಂತ್ರಿಕ ಬಿಡ್‌ತೆರೆಯುವ ದಿನಾಂಕ:	30–11–2022 ರಂದು ಸಂಜೆ 4.30 ಘಂಟೆಯವರೆಗೆ
ಬ)	ಆರ್ಥಿಕ ಬಿಡ್‌ತೆರೆಯುವ ದಿನಾಂಕ:	01–12–2022. ರಂದು ಸಂಜೆ 4.30 ಘಂಟೆಯವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ.
ವಾ.ಸಾ.ಇ/ಬಾಗಲಕೋಟ/611/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಅಧಿಸೂಚನೆ ಸಂ:15/2022–23/ Corrigendum-1 ದಿನಾಂಕ: 18.11.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಈ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ ಬಿಡ್‌ಡಾಕ್ಯುಮೆಂಟ್ ಕೆ.ಡಬ್ಲ್ಯೂ–3ರ ಷರತ್ತು ಮತ್ತು ನಿಯಮಗಳನ್ವಯ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ ಲೋಕೋಪಯೋಗಿ ಸಿವಿಲ್ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ದಿ:28.11.2022 ರ ಸಂಜೆ4:00 ರ ವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ. 100.00 ಲಕ್ಷಗಳು ಹಾಗೂ ಇ.ಎಂ.ಡಿ ರೂ.200000/–ಗಳಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಗುತ್ತಿಗೆದಾರರ ಅರ್ಹತೆ	ಮೀಸಲಾತಿ ವಿವರ	ಕೊನೆಯ ದಿನಾಂಕ
1.	15/2022–23	01	ಕಾರಿಗೆಂಡಂ ಸಂಖ್ಯೆ–1	3ನೇ ದರ್ಜೆ & ಮೇಲ್ಪಟ್ಟು	-	28.11.2022

ಕಾರ್ಯಪಾಲಕ ಇಂಜನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ದಾವಣಗೆರೆ
ಜೆ.ಹೆಚ್.ಪಟೇಲ್ ಬಡಾವಣೆ, ಶಾಮನೂರು ರಸ್ತೆ, ದಾವಣಗೆರೆ–577004, E-mail: dcpudvg1@gmail.com
ಸಂಖ್ಯೆ: ಜಿಮರಘಧಾ/ಮರ/ಜೆಜೆಬಿ–ಸಿ.ಡಬ್ಲೂಸಿ/2022–23 ದಿನಾಂಕ:18–11–2022

ಅಧಿಸೂಚನೆ

ಕರ್ನಾಟಕ ರಾಜ್ಯದಲ್ಲಿ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2021 ಹಾಗೂ ಮಾದರಿ ನಿಯಮಗಳು 2022ರನ್ವಯ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು/ ಸದಸ್ಯರುಗಳು ಹಾಗೂ ಬಾಲನ್ಯಾಯ ಮಂಡಳಿಗೆ ಸಮಾಜ ಕಾರ್ಯಕರ್ತ ಸದಸ್ಯರುಗಳ ಆಯ್ಕೆ ಸಂಬಂಧ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ, ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು/ ಸದಸ್ಯರುಗಳು ಹಾಗೂ ಬಾಲನ್ಯಾಯ ಮಂಡಳಿಗೆ ಸಮಾಜ ಕಾರ್ಯಕರ್ತ ಸದಸ್ಯರುಗಳ ಆಯ್ಕೆ ಸಂಬಂಧ ಈಗಾಗಲೇ ದಿನಾಂಕ:13.10.2020 ಮತ್ತು 30.01.2021 ಹಾಗೂ 14–07–2022 ರಲ್ಲಿ ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಕೇಂದ್ರ ಸರ್ಕಾರವು ಪ್ರಸ್ತುತ ಜಾರಿಯಲ್ಲಿದ್ದ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಹಾಗೂ ಮಾದರಿ ನಿಯಮಗಳು 2016ಕ್ಕೆ ತಿದ್ದುಪಡಿಗಳನ್ನು ಅಳವಡಿಸಿದ್ದು, ದಿನಾಂಕ:01–09–2022 ರಿಂದ ಅನ್ವಯವಾಗುವಂತೆ ಜಾರಿಗೊಳಿಸಿರುವ ಹಿನ್ನಲೆಯಲ್ಲಿ ಪರಿಷ್ಕೃತ ಕಾಯ್ದೆ ಮತ್ತು ನಿಯಮಗಳನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ. ಈ ಸಂಬಂಧ ಈಗಾಗಲೇ ಹೊರಡಿಸಲಾದ ಅಧಿಸೂಚನೆಯನ್ವಯ ಅರ್ಜಿಗಳನ್ನು ಸಲ್ಲಿಸಿರುವ ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ.

ಹುದ್ದೆಯ ಹೆಸರು	ಅಧಿಕಾರಾವಧಿ	ಅರ್ಹತಾ ಮಾನದಂಡ ಮತ್ತು ವಯೋಮಾನ
ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು/ಸದಸ್ಯರು	3 ವರ್ಷ	ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ)ಕಾಯ್ದೆ, 2021ರ ಸೆಕ್ಷನ್ 27 ಹಾಗೂ ಮಾದರಿ ನಿಯಮಗಳು, 2022ರ ನಿಯಮ 15(3)ರನ್ವಯ: **ಅರ್ಜಿದಾರರು** ಅಧಿಸೂಚನೆ ಹೊರಡಿಸಿದ ಕೊನೆಯ ದಿನಾಂಕಕ್ಕೆ 35 ವರ್ಷ ಮೇಲ್ಪಟ್ಟು ಮತ್ತು 65 ವರ್ಷದೊಳಗಿರತಕ್ಕದ್ದು. ಹಾಗೂ ಮಕ್ಕಳ ಮನಃಶಾಸ್ತ್ರ(ಚೈಲ್ಡ್ ಸೈಕಾಲಜಿ) ಅಥವಾ ಮನೋರೋಗ ಚಿಕಿತ್ಸೆ (ಸೈಕಿಯಾಟ್ರಿ) ಅಥವಾ ಕಾನೂನು ಅಥವಾ ಸಮಾಜ ಕಾರ್ಯ (ಸೋಶಿಯಲ್ ವರ್ಕ್) ಅಥವಾ ಸಮಾಜ ಶಾಸ್ತ್ರ (ಸೋಶಿಯಾಲಜಿ) ಅಥವಾ ಮಾನವ ಆರೋಗ್ಯ ಅಥವಾ ಶಿಕ್ಷಣ ಅಥವಾ ಮಾನವ ಅಭಿವೃದ್ಧಿ (ಹ್ಯೂಮನ್ ಡೆವೆಲಪ್‌ಮೆಂಟ್) ಅಥವಾ ವಿಶೇಷ ಚೇತನ ಮಕ್ಕಳಿಗೆ ಸಂಬಂಧಿಸಿದ ವಿಶೇಷ ಶಿಕ್ಷಣದಲ್ಲಿ (Special education for differntly abled children) ಪದವಿಯನ್ನು ಪಡೆದು ಸಕ್ರಿಯವಾಗಿ ಶಿಕ್ಷಣ, ಆರೋಗ್ಯ, ಅಥವಾ ಕಲ್ಯಾಣ ಕ್ಷೇತ್ರಗಳಲ್ಲಿ ಕನಿಷ್ಟ 7 ವರ್ಷಗಳ ಕಾರ್ಯಾನುಭವವನ್ನು ಹೊಂದಿರತಕ್ಕದ್ದು. **ಅಥವಾ** ಅರ್ಜಿದಾರರು ಮೇಲ್ಕಂಡ ವಿಷಯಗಳಲ್ಲಿ ಪದವಿಯನ್ನು ಹೊಂದಿ ವೃತ್ತಿಪರರಾಗಿರತಕ್ಕದ್ದು.
ಬಾಲನ್ಯಾಯ ಮಂಡಳಿಯ ಸಮಾಜಕಾರ್ಯಕರ್ತ ಸದಸ್ಯರುಗಳು	3 ವರ್ಷಗಳು	ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ)ಕಾಯ್ದೆ, 2021ರ ಸೆಕ್ಷನ್ 4 ಹಾಗೂ ಮಾದರಿ ನಿಯಮಗಳು, 2022ರ ನಿಯಮ 4(3)ರನ್ವಯ: **ಅರ್ಜಿದಾರರು** ಅಧಿಸೂಚನೆ ಹೊರಡಿಸಿದ ಕೊನೆಯ ದಿನಾಂಕಕ್ಕೆ 35 ವರ್ಷ ಮೇಲ್ಪಟ್ಟು ಮತ್ತು 65 ವರ್ಷದೊಳಗಿರತಕ್ಕದ್ದು. ಹಾಗೂ ಮಕ್ಕಳೊಂದಿಗೆ ಶಿಕ್ಷಣ ಆರೋಗ್ಯ, ಅಥವಾ ಕಲ್ಯಾಣ ಕ್ಷೇತ್ರಗಳಲ್ಲಿ ಕನಿಷ್ಟ 7 ವರ್ಷಗಳ ಕಾರ್ಯಾನುಭವವನ್ನು ಹೊಂದಿರತಕ್ಕದ್ದು.ಅಥವಾ ಹಾಗೂ ಮಕ್ಕಳ ಮನಶಾಸ್ತ್ರ(ಚೈಲ್ಡ್ ಸೈಕಾಲಜಿ) ಅಥವಾ ಮನೋರೋಗ ಚಿಕಿತ್ಸೆ (ಸೈಕಿಯಾಟ್ರಿ), ಅಥವಾ ಸಮಾಜಶಾಸ್ತ್ರ (ಸೋಷಿಯಾಲಜಿ), ಅಥವಾ ಕಾನೂನು ಕ್ಷೇತ್ರದಲ್ಲಿ ಪದವಿಯನ್ನು ಹೊಂದಿ ವೃತ್ತಿ ಪರರಾಗಿರತಕ್ಕದ್ದು.

ಅರ್ಜಿಗಳನ್ನು ದಿನಾಂಕ: 18–11–2022 ರಿಂದ 03–12–2022 ರ ಅಪರಾಹ್ನ 5.30 ರೊಳಗೆ ಮುದ್ದಾಂ ಅಥವಾ ನೊಂದಾಯಿತ ಅಂಚೆ (ರಿಜಿಸ್ಟರ್ ಪೋಸ್ಟ್) ಮೂಲಕ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಸದಸ್ಯ ಕಾರ್ಯದರ್ಶಿ, ರಾಜ್ಯ ಮಟ್ಟದ ಆಯ್ಕೆ ಸಮಿತಿ, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ. ಬಿ.ಆರ್‌ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇವರಿಗೆ ಸಲ್ಲಿಸತಕ್ಕದ್ದು: **ವಿಶೇಷ ಸೂಚನೆ:** (1) ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು/ಸದಸ್ಯರುಗಳ ಮತ್ತು ಬಾಲನ್ಯಾಯ ಮಂಡಳಿಗಳ ಸಮಾಜ ಕಾರ್ಯಕರ್ತ ಸದಸ್ಯರುಗಳ ಆಯ್ಕೆಯನ್ನು ಪರಿಷ್ಕೃತ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ)ಕಾಯ್ದೆ, 2021 ಹಾಗೂ ಮಾದರಿ ನಿಯಮಗಳು 2022 ರನ್ವಯ ಆಯ್ಕೆ ಮಾಡಲಾಗುವುದು. (2) ಮಕ್ಕಳ ಕಲ್ಯಾಣ ಸಮಿತಿಯಲ್ಲಿ ಈಗಾಗಲೇ ಮೊದಲನೇ ಅವದಿಗೆ ಸದಸ್ಯರಾಗಿ ಕಾರ್ಯನಿರ್ವಹಿಸಿದಂತಹ ಅಭ್ಯರ್ಥಿಗಳಿಗೂ ಸಹ ಅಧ್ಯಕ್ಷರಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. (3) ಮಕ್ಕಳ ಕಲ್ಯಾಣ ಸಮಿತಿಗಳ ಅಧ್ಯಕ್ಷರು/ಸದಸ್ಯರುಗಳಿಗೆ ಮತ್ತು ಬಾಲನ್ಯಾಯ ಮಂಡಳಿಗಳ ಸಮಾಜ ಕಾರ್ಯಕರ್ತ ಸದಸ್ಯರುಗಳಿಗೆ ನಿಗದಿಪಡಿಸಿರುವ ಅರ್ಜಿ ನಮೂನೆಯು ಜಿಲ್ಲಾ ಮಕ್ಕಳ ರಕ್ಷಣ ಘಟಕ, ಜಿಲ್ಲಾ ಬಾಲಭವನ, ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರು ಇಲ್ಲಿ ಲಭ್ಯವಿರುತ್ತದೆ. ಮತ್ತು ಮಕ್ಕಳ ರಕ್ಷಣಾ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಸಹ ಲಭ್ಯವಿರುತ್ತದೆ. (4) ಅಪೂರ್ಣ ಅರ್ಜಿಗಳು ಅಥವಾ ನಿಗಧಿತ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (5) ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಸದಸ್ಯ ಕಾರ್ಯದರ್ಶಿ, ರಾಜ್ಯ ಮಟ್ಟದ ಆಯ್ಕೆ ಸಮಿತಿ ಇವರು ಯಾವುದೇ ಕಾರಣ ನೀಡದೆ ಅರ್ಜಿಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. (6) ಸಂದರ್ಶನಕ್ಕೆ ಆಯ್ಕೆ ಮಾಡಲಾದ ಅರ್ಜಿದಾರ ಪಟ್ಟಿಯನ್ನು (ಶಾರ್ಟ್ ಲಿಸ್ಟೆಡ್) ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಹಾಗೂ ಸಂದರ್ಶನದ ದಿನಾಂಕವನ್ನು ಮುಂಚಿತವಾಗಿ ತಿಳಿಸಲಾಗುವುದು. (7) ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯದ ದೂರವಾಣಿ ಸಂಖ್ಯೆ: 080–22867383. ಇ–ಮೇಲ್:icps.kar@gmail.com ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ದಾವಣಗೆರೆ ದೂರವಾಣಿ ಸಂಖ್ಯೆ: 9035525959, 9535612807, ಇವರನ್ನು ಸಂಪರ್ಕಿಸತಕ್ಕದ್ದು. ಮಾಹಿತಿಯು ನಿರ್ದೇಶನಾಲಯದ ವೆಬ್‌ಸೈಟ್ www.icps.karnataka.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. (8) ಖಾಸಗಿ ವೆಬ್ ಪೋರ್ಟಲ್/ಕೆರಿಯರ್ ಪೋರ್ಟಲ್ ಅಥವಾ ಇನ್ನಿತರೆ ಯಾವುದೇ ಮಾಧ್ಯಮದಿಂದ ಪ್ರಕಟವಾಗುವ ಮಾಹಿತಿಗಳಿಗೆ ಮಕ್ಕಳ ರಕ್ಷಣಾ ನಿರ್ದೇಶನಾಲಯವು ಜವಾಬ್ದಾರಿಯಾಗಿರುವುದಿಲ್ಲ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ದಾವಣಗೆರೆ.
ವಾಸಾಇ/ದಾವಣಗೆರೆ/621/ಎಂಸಿಎ/2022–23

ಸುಭಾಷಿತ

ನಾನೊಬ್ಬಳೇ ಜಗತ್ತನ್ನು ಬದಲಾಯಿಸಲಾರೆ. ಆದರೆ, ನೀರಿನೆಡೆಗೆ ಕಲ್ಲೆಸೆದು ಹತ್ತಾರು ಅಲೆಗಳನ್ನಂತೂ ಏಳಿಸಬಲ್ಲೆ.

–ಮದರ್ ತೆರೇಸಾ

ಮಲಿನಗೊಂಡಿರುವ ಜಾತಿವಾದಿ ಮನಸ್ಸುಗಳನ್ನು ತೊಳೆಯಬೇಕಿದೆ

ಪರಿಶಿಷ್ಟ ಜಾತಿಯ ಮಹಿಳೆಯೊಬ್ಬರು ನೀರು ಕುಡಿದರೆನ್ನುವ ಕಾರಣಕ್ಕಾಗಿ, ಕಿರು ನೀರು ಸರಬರಾಜು ಟ್ಯಾಂಕ್ ಅನ್ನು ಶುದ್ಧೀಕರಿಸಿರುವ ಅಮಾನವೀಯ ಪ್ರಸಂಗವು ಚಾಮರಾಜನಗರ ಜಿಲ್ಲೆಯ ಹೆಗ್ಗೋಠಾರ ಗ್ರಾಮದಲ್ಲಿ ನಡೆದಿದೆ. ಕುಡಿಯುವ ನೀರಿನ ನೆಪದಲ್ಲಿ ಆಚರಿಸಲಾಗಿರುವ ಈ ಅಸ್ಪೃಶ್ಯತೆಯು ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿರುವ ಜಾತೀಯತೆಗೆ ಹೊಸತೊಂದು ಉದಾಹರಣೆ. ಮದುವೆಗೆ ಬಂದಿದ್ದ ಮಹಿಳೆಯೊಬ್ಬರು, ಮಧ್ಯಾಹ್ನದ ಊಟ ಮುಗಿಸಿ ತೆರಳುವಾಗ ಲಿಂಗಾಯತರ ಬೀದಿಯಲ್ಲಿರುವ ಟ್ಯಾಂಕ್‌ನ ನಲ್ಲಿಯಿಂದ ನೀರು ಕುಡಿದಿದ್ದಾರೆ. ನೀರು ಕುಡಿದವರು ಪರಿಶಿಷ್ಟ ಜಾತಿಗೆ ಸೇರಿದವರೆಂದು ತಿಳಿಯುತ್ತಿದ್ದಂತೆ ಸ್ಥಳೀಯರು ನೀರು ಮೈಲಿಗೆಯಾಯಿತೆಂದು ದೂರಿ, ಮಹಿಳೆಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ ಹಾಗೂ ಜಾತಿನಿಂದನೆ ಮಾಡಿದ್ದಾರೆ. ಗ್ರಾಮದೇವತೆಯ ಗುಜ್ಜುಕೋಲನ್ನು ಮುಟ್ಟಿದ ಬಾಲಕನ ಮೇಲೆ ದೈಹಿಕ ಹಲ್ಲೆ ನಡೆಸಿ, ಅವನ ಕುಟುಂಬಕ್ಕೆ ಬಹಿಷ್ಕಾರದ ಬೆದರಿಕೆ ಒಡ್ಡಿದ ಪ್ರಸಂಗವೊಂದು ಎರಡು ತಿಂಗಳ ಹಿಂದಷ್ಟೇ ಕೋಲಾರ ಜಿಲ್ಲೆಯಿಂದ ವರದಿಯಾಗಿತ್ತು. ಇಂಥ ಪ್ರಕರಣಗಳು ವರದಿಯಾದಾಗ ಸರ್ಕಾರ ನಡೆಸುವ ವಿಚಾರಣೆ ತಾರ್ಕಿಕ ಅಂತ್ಯ ಮುಟ್ಟಿದ ಉದಾಹರಣೆಗಳು ಕಡಿಮೆ. ಜಾತಿ ಮತ್ತು ಅಧಿಕಾರದ ಅನೈತಿಕ ಸಮೀಕರಣದಿಂದಲೂ ಅಸ್ಪೃಶ್ಯತೆಯ ಆಚರಣೆ ನಡೆಯುತ್ತದೆ.

ಅಸ್ಪೃಶ್ಯತೆ ನಿವಾರಣೆ ಸಾಧ್ಯವಾಗದಿದ್ದರೆ, ದೇಶದ ಹಿರಿಮೆಗೆ ಹಾಗೂ ಅಭಿವೃದ್ಧಿ ಮೀಮಾಂಸೆಗೆ ಯಾವ ಅರ್ಥವೂ ಇರದು

ಹೆಗ್ಗೋಠಾರ ಗ್ರಾಮದಲ್ಲಿ ಮಹಿಳೆಯ ಜಾತಿನಿಂದನೆ ಘಟನೆ ನಡೆದ ಮರುದಿನವೇ, ಪರಿಶಿಷ್ಟರು ಮತ್ತು ಹಿಂದುಳಿದ ವರ್ಗದವರಿಗೆ ಸ್ವಾಭಿಮಾನದ ಬದುಕನ್ನು ಕಟ್ಟಿಕೊಡುವ ತನ್ನ ಸಂಕಲ್ಪದ ಬಗ್ಗೆ ರಾಜ್ಯ ಸರ್ಕಾರವು 'ಪರಿಶಿಷ್ಟ ಪಂಗಡದ ಸಮಾವೇಶ'ದಲ್ಲಿ ಹೆಮ್ಮೆಯಿಂದ ಹೇಳಿಕೊಂಡಿದೆ. ಆದರೆ, ಪರಿಶಿಷ್ಟರನ್ನು ಹೀನಾಯವಾಗಿ ಕಾಣುವ ಪ್ರಸಂಗಗಳು ರಾಜ್ಯದ ವಿವಿಧ ಭಾಗಗಳಿಂದ ನಿರಂತರವಾಗಿ ವರದಿಯಾಗುತ್ತಲೇ ಇವೆ. ಪರಿಶಿಷ್ಟರ ಸ್ವಾಭಿಮಾನವನ್ನು ರಕ್ಷಿಸುವ ಬಗ್ಗೆ ಸರ್ಕಾರ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಸಂವಿಧಾನದ ಧರ್ಮನಿರಪೇಕ್ಷ ಸ್ವರೂಪದ ಸಂರಕ್ಷಣೆಗೆ ಸರ್ಕಾರ ಬದ್ಧವಾಗಿದ್ದರೆ ಸಾಕು, ಜಾತಿ ತಾರತಮ್ಯದ ಬಹುತೇಕ ಘಟನೆಗಳಿಗೆ ಕಡಿವಾಣ ಬೀಳುತ್ತದೆ.

ಹೆಗ್ಗೋಠಾರ ಗ್ರಾಮದಲ್ಲಿನ ಅಸ್ಪೃಶ್ಯತೆ ಆಚರಣೆಯು ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದಂತೆ, ಕಂದಾಯ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಅಧಿಕಾರಿಗಳು ಸ್ಥಳಕ್ಕೆ ತೆರಳಿ, ಘಟನೆಯ ಮಾಹಿತಿ ಕಲೆ ಹಾಕಿದ್ದಾರೆ. ಗ್ರಾಮದ ವಿವಿಧ ಬೀದಿಗಳಲ್ಲಿರುವ ಟ್ಯಾಂಕ್‌ಗಳ ನೀರನ್ನು ಪರಿಶಿಷ್ಟ ಜಾತಿಯವರು ಕುಡಿಯುವಂತೆ ಮಾಡಿರುವ ಅಧಿಕಾರಿಗಳು, 'ಅಸ್ಪೃಶ್ಯತೆ ಆಚರಣೆಗೆ ಅವಕಾಶ ನೀಡುವುದಿಲ್ಲ' ಎಂಬ ಸಂದೇಶ ರವಾನಿಸಿದ್ದಾರೆ. ಅಸ್ಪೃಶ್ಯತೆ ಆಚರಣೆ ವಿರುದ್ಧ ಅಧಿಕಾರಿಗಳ ತಕ್ಷಣದ ಪ್ರತಿಕ್ರಿಯೆ ಸ್ವಾಗತಾರ್ಹ. ಆದರೆ, ಅಧಿಕಾರಿಗಳ ಕಣ್ಗಾವಲಿನಲ್ಲಿ ಪರಿಶಿಷ್ಟ ಜಾತಿಯವರು ಸಾರ್ವಜನಿಕ ಕೊಳಾಯಿಗಳಿಂದ ನೀರು ಕುಡಿದ ಮಾತ್ರಕ್ಕೆ ಸಮಸ್ಯೆ ಬಗೆಹರಿಯುವುದಿಲ್ಲ. ಸಮಾಜದಲ್ಲಿನ ಅಸ್ಪೃಶ್ಯತೆ ಆಚರಣೆಗೆ ಹಲವಾರು ಮುಖಗಳಿವೆ. ಕೂದಲು ಕತ್ತರಿಸಲು ನಿರಾಕರಣೆ, ಹೋಟೆಲ್‌ಗಳಲ್ಲಿ ಪ್ರತ್ಯೇಕವಾಗಿ ಊಟ–ಉಪಾಹಾರ ನೀಡುವುದು, ಧಾರ್ಮಿಕ ಆಚರಣೆಯಿಂದ ಕೆಲವು ವರ್ಗಗಳನ್ನು ದೂರವಿಡುವುದು ಇವೆಲ್ಲವೂ ಅಸ್ಪೃಶ್ಯತೆಯ ಆಚರಣೆಯೇ ಆಗಿವೆ. ಇಂಥ ನಡವಳಿಕೆಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವ ಮೂಲಕ, ನಾಗರಿಕ ಸಮಾಜದಲ್ಲಿ ಅಸ್ಪೃಶ್ಯತೆ ಆಚರಣೆಗೆ ಅವಕಾಶವಿಲ್ಲ ಎನ್ನುವುದನ್ನು ಜಾತಿವಾದಿ ಮನಸ್ಸುಗಳಿಗೆ ಸರ್ಕಾರ ಮನವರಿಕೆ ಮಾಡಬೇಕು.

ಭಾರತ ಸ್ವಾತಂತ್ರ್ಯ ಪಡೆದು ಎಪ್ಪತ್ತೈದು ವರ್ಷಗಳಾದ ಬಳಿಕವೂ ಜಾತೀಯತೆಯ ಪ್ರದರ್ಶನ ಎಗ್ಗಿಲ್ಲದೆ ನಡೆಯುತ್ತಿರುವುದು ನಾಚಿಕೆಗೇಡು. ಕುಡಿಯುವ ನೀರಿನ ಮಡಕೆ ಮುಟ್ಟಿದ ಕಾರಣಕ್ಕಾಗಿ ಶಾಲಾ ಶಿಕ್ಷಕನಿಂದ ಪೆಟ್ಟು ತಿಂದು, ಪರಿಶಿಷ್ಟ ಜಾತಿಯ 9 ವರ್ಷದ ಬಾಲಕ ಮೃತಪಟ್ಟ ಪ್ರಕರಣವೊಂದು ಮೂರು ತಿಂಗಳ ಹಿಂದೆ ರಾಜಸ್ಥಾನದಿಂದ ವರದಿಯಾಗಿತ್ತು. ಸಮವಸ್ತ್ರ ಧರಿಸದ ದಲಿತ ವಿದ್ಯಾರ್ಥಿನಿಯ ಮೇಲೆ ಉತ್ತರಪ್ರದೇಶದಲ್ಲಿ ಇತ್ತೀಚೆಗಷ್ಟೇ ಹಲ್ಲೆ ನಡೆದಿತ್ತು. ಈಗ ಚಾಮರಾಜನಗರ ಜಿಲ್ಲೆಯಲ್ಲಿ ಟ್ಯಾಂಕ್‌ನ ನೀರು ಖಾಲಿ ಮಾಡಿ ಗಂಜಲ ಹಾಕಿ ಸ್ವಚ್ಛಗೊಳಿಸಿದ್ದಾರೆ. ದಲಿತ ಹೆಣ್ಣುಮಕ್ಕಳನ್ನು ಗುರಿಯಾಗಿಸಿಕೊಂಡು ಅತ್ಯಾಚಾರಗಳು ನಡೆಯುತ್ತಿವೆ. ಜಾತಿವಾದಿ ಮನಸ್ಸುಗಳು, ದೇಶದ ಧರ್ಮನಿರಪೇಕ್ಷ ಸ್ವರೂಪವನ್ನು ನಿರಂತರವಾಗಿ ಅಪಾಯಕ್ಕೊಡ್ಡುತ್ತಲೇ ಇವೆ. ಪರಿಶಿಷ್ಟ ವರ್ಗದವರು ಮುಟ್ಟಿದ ವಸ್ತುಗಳನ್ನು ಗಂಜಲದ ಮೂಲಕ ಪವಿತ್ರಗೊಳಿಸುವ ಕೆಲಸವನ್ನು ಜಾತಿವಾದಿಗಳು ಮಾಡುತ್ತಲೇ ಇರುತ್ತಾರೆ. ಆದರೆ, ಅವರು ತಮ್ಮ ಮನಸ್ಸುಗಳಲ್ಲಿನ ಜಾತಿಯ ಕಿಲುಬನ್ನು ಮೊದಲು ಸ್ವಚ್ಛಗೊಳಿಸಿಕೊಳ್ಳಬೇಕಾಗಿದೆ. ಸಮಾಜದಲ್ಲಿ ಬೇರು ಬಿಟ್ಟಿರುವ ಜಾತೀಯತೆ ಹಾಗೂ ತರತಮ ಭಾವನೆಗಳನ್ನು ತೊಳೆದುಕೊಳ್ಳುವುದು ಇಂದಿನ ಅಗತ್ಯವಾಗಿದೆ. ಅಸ್ಪೃಶ್ಯತೆ ನಿವಾರಣೆಯ ಪ್ರಯತ್ನಗಳನ್ನು ಕಾನೂನಿನ ಪರಿಣಾಮಕಾರಿ ಅನುಷ್ಠಾನದ ಮೂಲಕ ನಡೆಸುವಂತೆಯೇ, ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳ ಮೂಲಕ ನಿರಂತರ ಜಾರಿಯಲ್ಲಿ ಇರಿಸಬೇಕಾಗಿದೆ. ಅಸ್ಪೃಶ್ಯತೆ ನಿವಾರಣೆ ಸಾಧ್ಯವಾಗದೇ ಹೋದರೆ, ದೇಶದ ಹಿರಿಮೆಗೆ ಹಾಗೂ ಅಭಿವೃದ್ಧಿ ಮೀಮಾಂಸೆಗೆ ಯಾವ ಅರ್ಥವೂ ಇರುವುದಿಲ್ಲ ಎನ್ನುವುದನ್ನು ಜನಪ್ರತಿನಿಧಿಗಳು ಮನಗಾಣಬೇಕು ಹಾಗೂ ಜಾತಿವಾದಿಗಳು ಅರ್ಥ ಮಾಡಿಕೊಳ್ಳಬೇಕು.

ದಿನದ ಟ್ವೀಟ್

ಹಣಕಾಸಿನ ಸ್ವಾತಂತ್ರ್ಯಕ್ಕೆ ಕೀಲಿಕೈ

ನೋವು ಉಣ್ಣದೆ, ತ್ಯಾಗ ಇಲ್ಲದೆ ದೊಡ್ಡದೇನನ್ನೂ ಸಾಧಿಸಲು ಆಗದು. ಈ ಮಾತು ಹಣಕಾಸಿನ ಸ್ವಾತಂತ್ರ್ಯಕ್ಕೂ ಅನ್ವಯವಾಗುತ್ತದೆ. ಬಯಕೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಸಂಯಮ ಕಾಯ್ದುಕೊಳ್ಳುವುದು, ಆದಾಯಕ್ಕಿಂತ ಕಡಿಮೆ ಖರ್ಚು ಮಾಡುವುದು ಹಣಕಾಸಿನ ಸ್ವಾತಂತ್ರ್ಯಕ್ಕೆ ಹೆಬ್ಬಾಗಿಲು ತೆರೆಯುವ ಇರುವ ಕೀಲಿಕೈ.

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ

ನಾನು ಭೇಟಿ ಮಾಡಿದ ಐಎಎಸ್ ಅಧಿಕಾರಿಯೊಬ್ಬರು ಬಹಳ ಆಸಕ್ತಿಕರ ವಿಷಯವೊಂದನ್ನು ಹೇಳಿದರು. ಬಹುಮುಖ ಆಸಕ್ತಿಯ, ವಿದ್ವತ್ತು ಹೊಂದಿದ್ದ ಅಧಿಕಾರಿಗಳ ಕಾಲ ಮುಗಿದಿದೆ. ಈಗಿನ ಐಎಎಸ್ ಅಧಿಕಾರಿಗಳಲ್ಲಿ ಬಹುತೇಕರು ಅವಸರದಲ್ಲಿ ಜ್ಞಾನ ಸಂಪಾದಿಸಿರುವ, ಕೋಚಿಂಗ್ ಸೆಂಟರ್ ಉತ್ಪನ್ನಗಳು.

ಗೌತಮ್ ಮಾಚಯ್ಯ, ಪತ್ರಕರ್ತ

25 ವರ್ಷಗಳ ಹಿಂದೆ

ಶನಿವಾರ, 22-11-1997

• ರಾಜೀವ್ ಹತ್ಯೆಯಲ್ಲಿ ಡಿಎಂಕೆ ನಿರ್ದೋಷಿ: ಕರುಣಾನಿಧಿ ವಾದ

ನವದೆಹಲಿ, ನ. 21 (ಪಿಟಿಐ)– ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಅನಗತ್ಯವಾಗಿ ಡಿಎಂಕೆಯನ್ನು ಸಿಲುಕಿಸಿ ರಾಜಕೀಯ ಲಾಭ ಪಡೆಯಲು ಕಾಂಗ್ರೆಸ್ ಪಕ್ಷ ಪ್ರಯತ್ನಿಸುತ್ತಿದೆ ಎಂದು ಡಿಎಂಕೆ ಅಧ್ಯಕ್ಷ ಮತ್ತು ತಮಿಳುನಾಡಿನ ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರು ಇಂದು ಆಪಾದಿಸಿದರು.

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ರಾಜಕೀಯ ಪಕ್ಷ ಜನಪರ ನೀತಿಯನ್ನು ಮುಂದಿಟ್ಟುಕೊಂಡು ಜನತೆಯ ಬಳಿಗೆ ಹೋಗಬೇಕೇ ಹೊರತು ಇನ್ನೊಂದು ಪಕ್ಷದ ಮೇಲೆ ಆಧಾರರಹಿತ ಆಪಾದನೆಗಳನ್ನು ಹೊರಿಸುವಂಥ 'ಕೀಳು ರಾಜಕೀಯ ತಂತ್ರ'ವನ್ನು ಮುಂದಿಟ್ಟುಕೊಂಡು ಹೋಗುವುದು ಸರಿಯಲ್ಲ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು.

• ಕಾಂಗ್ರೆಸ್ ಬೇಡಿಕೆಗೆ ರಂಗ ತಿರಸ್ಕಾರ

ನವದೆಹಲಿ, ನ. 21– ಡಿಎಂಕೆಯ ಮಂತ್ರಿಗಳನ್ನು ಸಂಪುಟದಿಂದ ಕೈಬಿಡಬೇಕೆಂಬ ಕಾಂಗ್ರೆಸ್ ಪಕ್ಷದ ಬೇಡಿಕೆಯನ್ನು ಸಂಯುಕ್ತ ರಂಗ ತಳ್ಳಿಹಾಕಿದೆ. ಈಗ ಉದ್ಭವಿಸಿರುವ ಬಿಕ್ಕಟ್ಟಿಗೆ ಸೀತಾರಾಂ ಕೇಸರಿ ಅವರ ಜೊತೆ ಚರ್ಚಿಸಿ ಪರಿಹಾರ ಕಂಡುಹಿಡಿಯಲು ಸಂಯುಕ್ತರಂಗದ ಪ್ರಮುಖರ ಸಭೆಯು ಪ್ರಧಾನಿ ಐ.ಕೆ. ಗುಜ್ರಾಲ್ ಅವರಿಗೆ ಇಂದು ಅಧಿಕಾರ ನೀಡಿತು.

ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರು ಸರ್ಕಾರದ ಮುಂದೆ ಮಂಡಿಸಿರುವ ಬೇಡಿಕೆಯ ಬಗ್ಗೆ ಇಂದು ಸಂಯುಕ್ತ ರಂಗದ ಪ್ರಮುಖರ ಸಮಿತಿ ಚರ್ಚಿಸಿ, ಕಾಂಗ್ರೆಸ್ ಬೇಡಿಕೆಯನ್ನು ಸ್ಪಷ್ಟವಾಗಿ ತಿರಸ್ಕರಿಸಿ ಸಂಯುಕ್ತ ರಂಗದಲ್ಲಿ ಏಕತೆಯನ್ನು ಕಾಪಾಡಿಕೊಳ್ಳಲು ನಿರ್ಧರಿಸಿತು.

50 ವರ್ಷಗಳ ಹಿಂದೆ

ಬುಧವಾರ, 22-11-1972

• ಮುಲ್ಕಿ ವಿರುದ್ಧ ಆಂಧ್ರ ಬಂದ್: 3 ಕಡೆ ಗೋಲಿಬಾರ್– 13 ಜನರ ಸಾವು

ಹೈದರಾಬಾದ್, ನ. 21– ಮುಲ್ಕಿ ನಿಯಮಗಳನ್ನು ರದ್ದುಪಡಿಸಬೇಕೆಂದು ಆಗ್ರಹಪಡಿಸಲು ಇಂದು ಬಂದ್ ಆಚರಿಸಿದ ಆಂಧ್ರ ವಲಯದಲ್ಲಿ, ಪೊಲೀಸರು ಚಳವಳಿಕಾರರ ಮೇಲೆ ಗುಂಡು ಹಾರಿಸಿದ ಪರಿಣಾಮವಾಗಿ ಒಟ್ಟು 13 ಮಂದಿ ಮೃತಪಟ್ಟರು.

ಪ್ರಕಾಶಂ ಜಿಲ್ಲೆಯ ಕೇಂದ್ರವಾದ ಓಂಗೋಲ್, ಗುಂಟೂರು ಜಿಲ್ಲೆಯ ತೆನಾಲಿ ಮತ್ತು ಕರ್ನೂಲ್ ಜಿಲ್ಲೆಯ ಆದವಾನಿಯಲ್ಲಿ ಗೋಲಿಬಾರ್ ನಡೆಯಿತು. ಓಂಗೋಲ್‌ನಲ್ಲಿ ಮೂವರು ಮೃತಪಟ್ಟರು, ಒಬ್ಬರು ಗಾಯಗೊಂಡರು. ತೆನಾಲಿಯಲ್ಲಿ ನಾಲ್ವರು ಮತ್ತು ಆದವಾನಿಯಲ್ಲಿ ಐದು ಮಂದಿ ಮೃತಪಟ್ಟರು.

• 10 ಸಾವಿರ ಮಂದಿ ಬಂಗಾಳಿಗಳ ವಿಮೋಚನೆಗೆ ಪಾಕ್ ನಿರ್ಧಾರ

ನವದೆಹಲಿ, ನ. 21– ಬಾಂಗ್ಲಾ ದೇಶದ ವಿಮೋಚನೆಯ ಹೋರಾಟದಿಂದ ಪಾಕಿಸ್ತಾನದಲ್ಲಿ ಬಂಧನದಲ್ಲಿರುವ ಹತ್ತು ಸಾವಿರ ಮಂದಿ ಬಂಗಾಳಿ ಸ್ತ್ರೀಯರು ಮತ್ತು ಮಕ್ಕಳನ್ನು ಸ್ವದೇಶಕ್ಕೆ ಕಳುಹಿಸಿಕೊಡಲು ಪಾಕಿಸ್ತಾನ ಸರ್ಕಾರ ನಿರ್ಧರಿಸಿದೆ ಎಂದು ಅಧಿಕೃತ ವಕ್ತಾರರೊಬ್ಬರು ಇಂದು ರಾವಲ್ಪಿಂಡಿಯಲ್ಲಿ ತಿಳಿಸಿದರು.

ವಾಯುಮಾಲಿನ್ಯದ ಬಗ್ಗೆ ವಿಜ್ಞಾನಿಗಳ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ

ಸೌರವಿದ್ಯುತ್ ಮೇಲೆ ಮಾಲಿನ್ಯದ ಮೋಡ

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

2030ರ ವೇಳೆಗೆ ನಮ್ಮ ದೇಶದ ಒಟ್ಟು ವಿದ್ಯುತ್ ಬೇಡಿಕೆಯ ಶೇ 50 ಭಾಗವನ್ನು ನವೀಕರಿಸಬಹುದಾದ ಶಕ್ತಿಮೂಲಗಳಿಂದ ಪಡೆಯುವ ವಿಶ್ವಾಸವನ್ನು 2021ರ ನವೆಂಬರ್‌ನಲ್ಲಿ ನಡೆದ ಗ್ಲಾಸ್ಗೊ ಶೃಂಗಸಭೆಯಲ್ಲಿ ಪ್ರಧಾನಿ ವ್ಯಕ್ತಪಡಿಸಿದ್ದರು. ಈ ಗುರಿಯನ್ನು ಹಂತ ಹಂತವಾಗಿ ಮುಟ್ಟುವ ಯೋಜನೆಯ ಅಂಗವಾಗಿ, ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ ನವೀಕರಿಸಬಹುದಾದ ಮೂಲಗಳಿಂದ 175 ಗಿಗಾವಾಟ್ ವಿದ್ಯುತ್ತನ್ನು ಉತ್ಪಾದಿಸುವ ಲಕ್ಷ್ಯವನ್ನು ಹೊಂದಲಾಗಿತ್ತು. ಆದರೆ ಇದೀಗ ಈ ಗುರಿ ಮುಟ್ಟುವುದು ಅಸಾಧ್ಯವೆಂಬ ಅಂಶ ಸ್ಪಷ್ಟವಾಗುತ್ತಿದೆ.

ಕೇಂದ್ರ ಸರ್ಕಾರದ ಹೊಸ ಮತ್ತು ನವೀಕರಿಸಬಹುದಾದ ಶಕ್ತಿ ಸಚಿವಾಲಯವು ಪ್ರತೀ ತಿಂಗಳು ತನ್ನ ಅಧಿಕೃತ ಜಾಲತಾಣದಲ್ಲಿ ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ತನ್ನು ಉತ್ಪಾದಿಸುವ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಪ್ರಕಟಿಸುತ್ತದೆ. ಆಗಸ್ಟ್ ತಿಂಗಳ ಅಂತ್ಯದವರೆಗಿನ ಅಂಕಿಅಂಶಗಳನ್ನು ವಿವರವಾಗಿ ವಿಶ್ಲೇಷಿಸಿರುವ ಬ್ರಿಟನ್ ಮೂಲದ 'ಗ್ಲೋಬಲ್ ಎನರ್ಜಿ ಥಿಂಕ್ ಟ್ಯಾಂಕ್- ಎಂಬರ್', 2022ರ ಆಗಸ್ಟ್ ಅಂತ್ಯದ ವೇಳೆಗೆ 116 ಗಿಗಾವಾಟ್‌ಗಳಷ್ಟು ವಿದ್ಯುತ್ತನ್ನು ಈ ಮೂಲಗಳಿಂದ ಉತ್ಪಾದಿಸುವ ಸಾಮರ್ಥ್ಯವನ್ನು ದೇಶದಲ್ಲಿ ಕಲ್ಪಿಸಲಾಗಿದೆ ಎಂಬ ವರದಿಯನ್ನು ನೀಡಿದೆ. ಇದು, ಉದ್ದೇಶಿತ 175 ಗಿಗಾವಾಟ್‌ಗಳ ಶೇ 66ರಷ್ಟು. ಈ 175 ಗಿಗಾವಾಟ್‌ಗಳಲ್ಲಿ, 100 ಗಿಗಾವಾಟ್ ಸೌರಶಕ್ತಿಯಿಂದ, 60 ವಾಯುಶಕ್ತಿ, 10 ಬಯೊಮಾಸ್ ಮತ್ತು ಉಳಿದ 5 ಗಿಗಾವಾಟ್ ಸಣ್ಣ ಜಲವಿದ್ಯುತ್ ಸ್ಥಾವರಗಳಿಂದ ಬರುವ ಅಂದಾಜಿತ್ತು. ಆದರೆ ಆಗಸ್ಟ್ ಅಂತ್ಯದ ವೇಳೆಗೆ ಸೌರಮೂಲದಿಂದ 61 ಗಿಗಾವಾಟ್ ದೊರೆತಿದ್ದು, ಉಳಿದ ನಾಲ್ಕು ತಿಂಗಳಲ್ಲಿ ಗರಿಷ್ಠ 7 ಗಿಗಾವಾಟ್ ಮಾತ್ರ ದೊರೆಯುವ ಸಾಧ್ಯತೆಯಿದೆ. 'ಕೋವಿಡ್ ಸಾಂಕ್ರಾಮಿಕ ತಂದ ಅನಿರೀಕ್ಷಿತ ತೊಂದರೆಗಳು, ಸೌರ, ವಾಯು ವಿದ್ಯುತ್ ಸ್ಥಾವರಗಳ ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳ ಪೂರೈಕೆಯಲ್ಲಿನ ವ್ಯತ್ಯಯಗಳು ಈ ವಿಳಂಬಕ್ಕೆ ಕಾರಣ' ಎಂದು ಲೋಕಸಭೆಯ ಸ್ಥಾಯಿ ಸಮಿತಿಯ ಮುಂದೆ ಇಲಾಖೆಯ ಕಾರ್ಯದರ್ಶಿ ಒಪ್ಪಿಕೊಂಡಿದ್ದಾರೆ.

175 ಗಿಗಾವಾಟ್ ವಿದ್ಯುತ್ತನ್ನು ಉತ್ಪಾದಿಸುವ ಸಾಮರ್ಥ್ಯವನ್ನು 2022ರ ಅಂತ್ಯದೊಳಗಾಗಿ ಕಲ್ಪಿಸುವ ಜವಾಬ್ದಾರಿಯನ್ನು ದೇಶದ ಎಲ್ಲ ರಾಜ್ಯಗಳಿಗೆ ಅವುಗಳ ಸಾಮರ್ಥ್ಯಕ್ಕೆ ಅನುಸಾರವಾಗಿ ವಿತರಿಸಲಾಗಿತ್ತು. ಇದರಲ್ಲಿ ಕರ್ನಾಟಕ, ರಾಜಸ್ಥಾನ, ತೆಲಂಗಾಣ, ಗುಜರಾತ್ ಮತ್ತು ಅಂಡಮಾನ್ ನಿಕೊಬಾರ್ ದ್ವೀಪಗಳು ನಿಗದಿತ ಅವಧಿಗೆ ಮುಂಚಿತವಾಗಿಯೇ ಯಶಸ್ವಿಯಾಗಿ ತಮ್ಮ ಗುರಿಯನ್ನು ಮುಟ್ಟಿವೆ. ಇದಕ್ಕೆ ವಿರುದ್ಧವಾಗಿ ಮಹಾರಾಷ್ಟ್ರ, ಉತ್ತರಪ್ರದೇಶ, ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶವು ಶೇ 1ರಿಂದ 3 ಭಾಗದಷ್ಟು ಗುರಿಯನ್ನು ಮುಟ್ಟಿವೆ. ಈ ವರ್ಷದ ಅಂತ್ಯದಲ್ಲಿ ಗುರಿ ಮುಟ್ಟುವಲ್ಲಿ ಕಂಡುಬರಲಿರುವ ಒಟ್ಟು ಕೊರತೆಯ ಶೇ 61 ಭಾಗಕ್ಕೆ ಈ ನಾಲ್ಕು ರಾಜ್ಯಗಳು ಕಾರಣವಾಗಲಿವೆ. ನವೀಕರಿಸಬಹುದಾದ ಮೂಲಗಳಿಂದ ವಿವಿಧ ರಾಜ್ಯಗಳು ಉತ್ಪಾದಿಸಬೇಕಾದ ವಿದ್ಯುತ್ತಿನ ಪ್ರಮಾಣವನ್ನು ಕೇಂದ್ರ ಸಚಿವಾಲಯ ನಿರ್ಧರಿಸಿ, ಗುರಿಯನ್ನು ನಿಗದಿಪಡಿಸುತ್ತದೆ. ಈ ಕೆಲಸವು ರಾಜ್ಯಗಳ ಸಹಭಾಗಿತ್ವದಲ್ಲಿ, ಹೆಚ್ಚು ಪಾರದರ್ಶಕವಾಗಿ ನಡೆಯಬೇಕೆಂಬುದು ಕೆಲವು ರಾಜ್ಯಗಳ ಕೋರಿಕೆ. ಆದರೆ, ರಾಜ್ಯಗಳಿಗೆ ಗುರಿಯನ್ನು ಮುಟ್ಟಲೇಬೇಕೆಂಬ ಒತ್ತಡ, ಹೊಣೆಗಾರಿಕೆಯೂ ಇರಬೇಕು. ಅದರ ಕೊರತೆಯ ಕಾರಣದಿಂದಾಗಿ ಗುರಿ ತಲುಪಲು ಆಗುತ್ತಿಲ್ಲ.

ನಮ್ಮ ದೇಶ ಉತ್ಪಾದಿಸುತ್ತಿರುವ ಸೌರ ವಿದ್ಯುತ್ತಿನ ಶೇ 70 ಭಾಗಕ್ಕೆ ಅಗತ್ಯವಾದ ಸೌರಕೋಶಗಳನ್ನು ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ. ಈ ವರ್ಷದ ಏಪ್ರಿಲ್ ತಿಂಗಳಿನಿಂದ ಹೀಗೆ ಆಮದು ಮಾಡಿಕೊಳ್ಳುವ ಸೌರಕೋಶಗಳ ಮೇಲೆ ಕಸ್ಟಮ್ಸ್ ಸುಂಕ ವಿಧಿಸಲಾಗಿದೆ. ಇದರಿಂದ ದೀರ್ಘಾವಧಿಯಲ್ಲಿ ಸ್ಥಳೀಯವಾಗಿ ಸೌರಕೋಶಗಳ ಉತ್ಪಾದನೆಗೆ ಪ್ರೋತ್ಸಾಹ ದೊರೆಯುವುದಾದರೂ ಸದ್ಯಕ್ಕಂತೂ ಗುರಿ ಮುಟ್ಟುವಲ್ಲಿನ ವಿಳಂಬಕ್ಕೆ ಕಾರಣವಾಗಿದೆ. 2022ರ ಅಂತ್ಯದ ವೇಳೆಗೆ ನಿಗದಿಯಾಗಿರುವ ಗುರಿಯನ್ನು ಮುಟ್ಟುವುದರಲ್ಲಿ ಸುಮಾರು ಶೇ 30ರಷ್ಟು ಕೊರತೆ ಕಂಡುಬರುವ ಸಾಧ್ಯತೆ ಸ್ಪಷ್ಟವಾಗುತ್ತಿರುವ ಸಮಯದಲ್ಲೇ, ದೇಶದಲ್ಲಿ ಹೆಚ್ಚುತ್ತಿರುವ ವಾಯುಮಾಲಿನ್ಯವು ಸೌರವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಗಮನಾರ್ಹವಾಗಿ ಕುಗ್ಗಿಸಲಿದೆ ಎಂಬ ದೆಹಲಿ ಐಐಟಿಯ ವಿಜ್ಞಾನಿಗಳ ತಂಡದ ಎಚ್ಚರಿಕೆ ಕಳವಳಕಾರಿಯಾಗಿದೆ.

ವಾಯುಮಂಡಲದಲ್ಲಿರುವ 0.01ನಿಂದ 100 ಮೈಕ್ರಾನ್ ಗಾತ್ರದ ಘನಕಣಗಳು, ದೂಳು, ಹೊಗೆ, ಕಾವಳ, ಇಂಗಾಲ ಮತ್ತು ಗಂಧಕದಂಥ ಅಜೈವಿಕ ಪದಾರ್ಥಗಳು ಸೂರ್ಯ ವಿಕಿರಣವನ್ನು ಹೀರಿಕೊಂಡು, ಚೆದುರಿಸಿ ದುರ್ಬಲಗೊಳಿಸುತ್ತವೆ. ಇದರೊಡನೆ ಸೋಲಾರ್ ಪ್ಯಾನೆಲ್‌ಗಳ ಮೇಲೆ ಸಂಗ್ರಹವಾಗುವ ದೂಳು ಫೋಟೊವೋಲ್ಟಾಯಿಕ್ ಕೋಶಗಳ ಸಾಮರ್ಥ್ಯವನ್ನು ಕುಗ್ಗಿಸಿ, ವಿದ್ಯುತ್ ಉತ್ಪಾದನೆಯ ಪ್ರಮಾಣವನ್ನು ಇಳಿಸುತ್ತದೆ. ದೆಹಲಿ ಐಐಟಿಯ 'ಸೆಂಟರ್ ಫಾರ್ ಅಟ್ಮಾಸ್ಫಿಯರಿಕ್ ಸೈನ್ಸಸ್'ನ ಸಂಶೋಧಕರ ತಂಡದ ಮುಖ್ಯ ವಿಜ್ಞಾನಿ ಪ್ರೊಫೆಸರ್ ಸಾಗ್ನಿಕ್ ಡೇ, '2001-2018ರ ನಡುವೆ ವಾಯುಮಾಲಿನ್ಯದ ಕಾರಣದಿಂದಾಗಿ ಶೇ 29ರಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ದೇಶ ಕಳೆದುಕೊಂಡಿದೆ' ಎನ್ನುತ್ತಾರೆ. 2016- 17ರಲ್ಲಿ ದೆಹಲಿಯ ಮೇಲೆ ಕವಿದ ಕಾವಳದಿಂದಾಗಿ ಸೌರವಿದ್ಯುತ್ ಉತ್ಪಾದನೆ ಶೇ 11.5ರಷ್ಟು ಕಡಿಮೆಯಾದದ್ದು ದಾಖಲಾಗಿದೆ. ಇದರ ಅಂದಿನ ಮೌಲ್ಯ ಸುಮಾರು ₹ 140 ಕೋಟಿ. ಇಡೀ ದೇಶವನ್ನು ಪರಿಗಣಿಸಿದಾಗ, ವಾಯುಮಾಲಿನ್ಯದಿಂದ ಪ್ರತಿವರ್ಷ ಕನಿಷ್ಠ ₹ 2,000 ಕೋಟಿ, ಗರಿಷ್ಠ ₹ 7,000 ಕೋಟಿಯಷ್ಟು ಮೌಲ್ಯದ ಸೌರವಿದ್ಯುತ್ ಉತ್ಪಾದನೆ ಸಾಧ್ಯವಾಗುತ್ತಿಲ್ಲ.

ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸಿ, ಮುಂದಿನ ವರ್ಷಗಳಲ್ಲಿ ಸೌರವಿದ್ಯುತ್ ಉತ್ಪಾದನೆಯ ಗುರಿಯನ್ನು ಮುಟ್ಟಲು ಐಐಟಿ ಸಂಶೋಧಕರ ತಂಡವು ಹಲವಾರು ಸಲಹೆಗಳನ್ನು ಸರ್ಕಾರಕ್ಕೆ ನೀಡಿದೆ. ಇವುಗಳಲ್ಲಿ ಮುಖ್ಯವಾದುದು ಗರಿಷ್ಠ ಪ್ರಮಾಣದಲ್ಲಿ ಸೂರ್ಯ ವಿಕಿರಣ ಬೀಳುವಂತೆ ಸೋಲಾರ್ ಪ್ಯಾನೆಲ್‌ಗಳನ್ನು ಓರೆಯಾಗಿ ನಿಲ್ಲಿಸುವುದು. ಈ ರೀತಿಯ ಪ್ಯಾನೆಲ್‌ಗಳ ಮೇಲೆ ದೂಳು ಸಂಗ್ರಹವಾಗುವುದು ಕಡಿಮೆಯಾಗುತ್ತದೆ. ಇದಕ್ಕಿಂತ ಉತ್ತಮ ಪರಿಹಾರವೆಂದರೆ, ಸತತವಾಗಿ ಸೂರ್ಯನತ್ತಲೇ ಮುಖ ಮಾಡುವುದನ್ನು ಸಾಧ್ಯವಾಗಿಸುವ, ಸ್ವಲ್ಪ ಹೆಚ್ಚಿನ ವೆಚ್ಚದ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಪ್ಯಾನೆಲ್‌ಗಳಲ್ಲಿ ಅಳವಡಿಸುವುದು. ಆದರೆ ಈ ಎರಡರಿಂದಲೂ ವಾಯುಮಾಲಿನ್ಯದಿಂದ ಸೂರ್ಯ ವಿಕಿರಣ ದುರ್ಬಲವಾಗುವುದು ತಪ್ಪುವುದಿಲ್ಲ.

ಐಐಟಿ ಸಂಶೋಧಕರ ಅಭಿಪ್ರಾಯದಂತೆ, ಸೌರ ವಿದ್ಯುತ್ ಉತ್ಪಾದನೆ ಹೆಚ್ಚಿಸುವ ಅತ್ಯುತ್ತಮ ಮಾರ್ಗವೆಂದರೆ 2019ರಲ್ಲಿ ಕೇಂದ್ರ ಸರ್ಕಾರ ಪ್ರಾರಂಭಿಸಿದ 'ನ್ಯಾಷನಲ್ ಕ್ಲೀನ್ ಏರ್ ಪ್ರೋಗ್ರಾಮ್' ಅನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವುದು. ಈ ಯೋಜನೆಯ ಮುಖ್ಯ ಉದ್ದೇಶವು 2024ರ ವೇಳೆಗೆ ದೇಶದ 122 ನಗರಗಳ ವಾಯುಮಂಡಲದಲ್ಲಿ 2.5 ಮೈಕ್ರಾನ್ ಗಾತ್ರದ ಕಣರೂಪದ ಮಾಲಿನ್ಯಕಾರಕಗಳ ದಟ್ಟಣೆಯನ್ನು ಘನ ಮೀಟರ್‌ಗೆ 40 ಮೈಕ್ರೊಗ್ರಾಮ್‌ಗಳಿಗೆ ಇಳಿಸುವುದು.

ಕರ್ನಾಟಕದಲ್ಲಿ ಬೆಂಗಳೂರು, ದಾವಣಗೆರೆ ಮತ್ತು ಹುಬ್ಬಳ್ಳಿ-ಧಾರವಾಡ ನಗರಗಳು ಈ ಯೋಜನೆಯಲ್ಲಿವೆ. ಉದಾಹರಣೆಗೆ, ಬೆಂಗಳೂರಿನ 2.5 ಮೈಕ್ರಾನ್ ಗಾತ್ರದ ಮಾಲಿನ್ಯಕಾರಕಗಳ ಸಾರ ಪ್ರತೀ ಘನ ಮೀಟರ್‌ಗೆ 54.7 ಮೈಕ್ರೊಗ್ರಾಮ್. ಇಂಧನದ ಗುಣಮಟ್ಟದ ಏರಿಕೆ, ವಿದ್ಯುತ್‌ಚಾಲಿತ ವಾಹನಗಳ ಬಳಕೆ, ಸಂಚಾರ ದಟ್ಟಣೆಯ ನಿಯಂತ್ರಣ, ಸಾರ್ವಜನಿಕ ಸಂಚಾರ ವಾಹನಗಳ ಬಳಕೆಗೆ ಆದ್ಯತೆ, ವಾಹನಗಳು ಮತ್ತು ಕಾರ್ಖಾನೆಗಳ ಉತ್ಸರ್ಜನೆಯ ನಿರ್ವಹಣೆ, ಮನೆಬಳಕೆಗೆ ಸ್ವಚ್ಛ ಇಂಧನದ ಸರಬರಾಜು, ಸಮರ್ಪಕ ತ್ಯಾಜ್ಯ ನಿರ್ವಹಣೆಯಂಥ ಕ್ರಮಗಳ ಮೂಲಕ ವಾಯುಮಾಲಿನ್ಯವನ್ನು ಕಡಿಮೆ ಮಾಡುವ ಪ್ರಯತ್ನಗಳು ನಡೆದಿವೆ. ಈ ಗುರಿ ಮುಟ್ಟುವುದು ಸಾಧ್ಯವಾದರೆ, ಈಗಿರುವಷ್ಟೇ ಸ್ಥಾಪಿತ ಸೌರವಿದ್ಯುತ್ ಸಾಮರ್ಥ್ಯದಿಂದ ಪ್ರತಿವರ್ಷ 6ರಿಂದ 28 ಟೆರಾವಾಟ್ ಅವರ್‌ಗಳಷ್ಟು ಹೆಚ್ಚಿನ ಸೌರವಿದ್ಯುತ್ ಉತ್ಪಾದಿಸುವುದು ಸಾಧ್ಯವೆಂದು ಸಂಶೋಧಕರು ತಿಳಿಸಿದ್ದಾರೆ. ದೇಶದ ವಿವಿಧ ಭಾಗಗಳಲ್ಲಿ, ಅದರಲ್ಲೂ ಉತ್ತರ ಭಾರತದ ಅನೇಕ ನಗರಗಳಲ್ಲಿ ವಾಯುಮಾಲಿನ್ಯದ ತೀವ್ರತೆ ಹೆಚ್ಚುತ್ತಿರುವ ಸಂದರ್ಭದಲ್ಲಿ, ದೆಹಲಿ ಐಐಟಿ ವಿಜ್ಞಾನಿಗಳು ನೀಡಿರುವ ಈ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಿ, ಕಾರ್ಯೋನ್ಮುಖವಾಗಬೇಕಾದ ತುರ್ತು ಈಗ ಬಂದಿದೆ.

ಚುರುಮುರಿ

ಚಾಟುದೋಷ

• ಲಿಂಗರಾಜು ಡಿ.ಎಸ್.

'**ವೋಟ್** ಅಂದ್ರೇನು ಹೇಳ್ಲಾ?' ಅಂತ ತುರೇಮಣೆ ಕೇಳಿದ್ರು.

'ಐದೊರ್ಸಕ್ಕೊಂದು ಸಾರಿ ನಮ್ಮ ಪ್ರತಿನಿಧಿಗಳನ್ನ ಆಯ್ಕೆ ಮಾಡೋ ಪ್ರಜಾಪ್ರಭುತ್ವದ ತೀರು ಅಲ್ಲುವರಾ?' ಅಂದೆ ನಗ್ತಾ.

'ತಪ್ಪು! ದೇಶದ ಸ್ವತಂತ್ರ ವೋಟರು ತನ್ನ ದೇಶವನ್ನ ನಿರ್ನಾಮ ಮಾಡಲಿಕ್ಕೆ ತಾನೇ ಮುತ್ತಾಳನಾಗೋ ಒಂದು ವಿಧಾನವೇ ವೋಟು' ಅಂದ್ರು. ನನಗೆ ತಲೆಕೆಡ್ತು.

'ಅದೆಂಗೆ?' ಅಂದೆ.

'ಇಲ್ಲಿ ಬಿ ಟೀಂ, ಸಿ ಟೀಂ, ಡಿ ಟೀಮ್ ಅಂತ ಮೂರು ಟೀಮುಗಳು ಅದಾವಲ್ಲ ನಮ್ಮ ಜಲ್ಮ ಜಾಲಾಡಕ್ಕೆ. ನೀನು ವೋಟು ಹಾಕಿದೋನು ಯಾವತ್ತನ್ನ ಗೆದ್ದವ್ನಾ? ಎಲ್ಲಾ ಟೀಮುಗಳಿಗೂ ಅವರದ್ದೇ ಆದ ಮತದಾರರ ದಂಡು, ಅದಕ್ಕೊಬ್ಬ ಸೋದರಮಾವ ಇದ್ದೇ ಇರತರೆ' ಅಂದ್ರು ಸಿಟ್ಟಲ್ಲಿ.

'ಈಗ ಟೀಮುಗಳು ಏನು ಮಾಡ್ತಾ ಅವೆ ಸಾ?' ಅಂತ ವಿಚಾರಿಸಿದೆ.

'ಬಿ-ಸಿ ಟೀಮುಗಳಿಗೆ ವರ್ಸೊಪ್ಪತ್ತೂ ವಿವಾದ ಹುಟ್ಟಾಕದು ಬುಟ್ರೆ ಇನ್ನೇನ್ಲಾ ಕ್ಯಾಮೆ. ಅದು ಬೇಜಾರಾದ್ರೆ ಟೀಮಿಗೆ ಕ್ಯಾಪ್ಟನ್ ನಾನೇ, ನಾನೇ ಅಂತ ಕಚ್ಚಾಡಿಕ್ಯಂಡು, ಬೋದಾಡ್ತಾ ಕಾಲಕಳೀತಾವೆ!' ಅಂದ್ರು.

'ಅಂದ್ರೆ ಅವರಿಗೆಲ್ಲಾ ಟ್ವಿಟ್ಟರು, ಚಾಟು ದೋಷ ಅದೆ ಅಂದಂಗಾಯ್ತು. ಡಿ ಟೀಮು ಹ್ಯಂಗೆ?' ಅಂದೆ.

'ಅವರುದ್ದು ಫ್ಯಾಮಿಲಿ ಟೀಂ ಕಲಾ! ಪ್ಲೇಯರ್ಸ್ ಲಿಸ್ಟ್ ಬಿಡುಗಡೆ ಮಾಡಕ್ಕೂ ಟೀಮಿನ ಜ್ಯೋತಿಷಿಗಳು, ರಾಜ್ಯ ಪಕ್ಷದ ರಾಷ್ಟ್ರ ನಾಯಕರು ಒಪ್ಪಿಗೆ ಕೊಡಬಕು!' ಅಂತ ವಿವರಿಸಿದರು.

'ಅದ್ಸರಿ ಈಗ ಟೀಮುಗಳು ವೋಟರುಗಳನ್ನ ಹ್ಯಂಗೆ ಗುರುತು ಹಿಡೀತವೆ? ಅದಕ್ಕೇನಾದರೂ ಕುರುಡುಪಟ್ಟಿ ರೆಡಿ ಮಾಡಿಕ್ಯಂಡವುರಾ?' ಅಂತಂದೆ.

'ವೋಟರ್ಸ್ ಪಟ್ಟಿ ಹಸ್ತವ್ಯಸ್ತವಾಗಿರದ್ರಿಂದ ಅದುನ್ನ ಸ್ಕ್ರಾಪು ಮಾಡಿ ಕುಲುಮೆಗಾಕಿ ಹೊಸದಾಗಿ ಅದೃಶ್ಯ ಮತದ ದಾರ ತಯಾರಿಸೋ ಹುನ್ನಾರು ನಡೆದದಂತೆ!' ಅಂದ್ರು ತುರೇಮಣೆ.

'ಅಂದ್ರೆ ಇದು ಬೂತುಚೇಷ್ಟೆಯ ಮೊದಲನೇ ಹಂತ ಅಂದಂಗಾಯ್ತು! ಇನ್ನೇನು ಕಾದದೋ ದೇಸಕ್ಕೆ!' ನನಗೆ ಚಿಂತೆ ಶುರುವಾಯ್ತು.

ಸಂಗತ

ಪರೀಕ್ಷೆ, ನಕಲು, ನಿರ್ವಹಣೆ ಸವಾಲು

ಎಡವಿದ ಮಕ್ಕಳನ್ನು ಸಂತೈಸಿ, ತಿಳಿವಳಿಕೆ ನೀಡಿ, ಅವರಿಗೆ ಸೂಕ್ತ ರೀತಿಯಲ್ಲಿ ಆಪ್ತ ಸಮಾಲೋಚನೆ ಮಾಡುವುದು ಸರಿಯಾದ ಕ್ರಮ

• ಡಾ. ಎಚ್.ಬಿ.ಚಂದ್ರಶೇಖರ್

ಈ ಬಾರಿಯ ಮಕ್ಕಳ ದಿನಾಚರಣೆಯ ಹಿಂದಿನ ಕೆಲ ದಿನಗಳಲ್ಲಿ ಬೆಂಗಳೂರಿನಲ್ಲಿ ನಡೆದ ಎರಡು ಪ್ರಕರಣಗಳು ಪೋಷಕರಲ್ಲಿ ತಲ್ಲಣ ಸೃಷ್ಟಿಸಿವೆ. ನವೆಂಬರ್ 8ರಂದು ಒಬ್ಬ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ನಕಲು ಮಾಡುವುದು ಶಿಕ್ಷಕರ ಗಮನಕ್ಕೆ ಬಂದು, ಅವರು ಅವನನ್ನು ತರಗತಿಯಿಂದ ಹೊರಗೆ ಕಳುಹಿಸಿ, ಅರ್ಧ ಗಂಟೆ ಕಾಯಲು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಆ ವಿದ್ಯಾರ್ಥಿಗೆ ಏನು ಅನ್ನಿಸಿತೋ ಏನೋ ಹತ್ತಿರದ ಅಪಾರ್ಟ್‌ಮೆಂಟ್ ಏರಿ ಅಲ್ಲಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಬೆಂಗಳೂರಿನ ದೊಡ್ಡಬಾಣಸವಾಡಿ ಶಾಲೆಯೊಂದರ 10ನೇ ತರಗತಿಯ ಒಬ್ಬ ವಿದ್ಯಾರ್ಥಿನಿಯು ಕಿರುಪರೀಕ್ಷೆಯಲ್ಲಿ ನಕಲು ಮಾಡುವಾಗ ಶಿಕ್ಷಕರಿಗೆ ಸಿಕ್ಕಿಬಿದ್ದಳು. ಶಿಕ್ಷಕರು ಅವಳನ್ನು ಎಲ್ಲರ ಎದುರು ಅವಮಾನಿಸಿದರು. ನೊಂದ ಆ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಳು. ಆಕೆ ಪೋಷಕರಿಗೆ ಬರೆದ ಪತ್ರದಲ್ಲಿ 'ಶಾಲೆಯಲ್ಲಿ ನಡೆದ ಘಟನೆಯನ್ನು ಮರೆಯಲು ಸಾಧ್ಯ ಆಗ್ತಾ ಇಲ್ಲ ಮತ್ತು ಅಪರಾಧಿ ಪ್ರಜ್ಞೆಯಿಂದ ಹೊರಬರಲು ಆಗ್ತಾ ಇಲ್ಲ' ಎಂದು ತಿಳಿಸಿದ್ದಳು.

'ಪರೀಕ್ಷೆ, ಕಿರು ಪರೀಕ್ಷೆಗಳಲ್ಲಿ ನಕಲು ಮಾಡುವುದು ತಪ್ಪು. ಇಂತಹ ವಿದ್ಯಾರ್ಥಿಗಳನ್ನು ಪರೀಕ್ಷಾ ಕೊಠಡಿಯಿಂದ ಡಿಬಾರ್ ಮಾಡಿ ಹೊರಗೆ ಕಳಿಸುವುದು ಶಿಕ್ಷಕರ ತಪ್ಪಲ್ಲ. ಇಷ್ಟು ಚಿಕ್ಕ ವಿಷಯಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವುದು ಸರಿಯಲ್ಲ. ಮಕ್ಕಳನ್ನು ಸರಿಯಾಗಿ ಬೆಳೆಸಬೇಕು' ಎಂಬ ಅಭಿಪ್ರಾಯವನ್ನು ಹೆಚ್ಚಿನವರು ವ್ಯಕ್ತಪಡಿಸುತ್ತಾರೆ. ಈ ವಾದ ಏನಾದರೂ ಇರಲಿ, ಕೆಲವು ಮಕ್ಕಳು ಸೂಕ್ಷ್ಮವಾಗಿ ಇರುತ್ತಾರೆ ಎಂಬುದೂ ಸತ್ಯ. ಮಕ್ಕಳಲ್ಲಿನ ವೈಯಕ್ತಿಕ ಭಿನ್ನತೆಯನ್ನು ನಾವು ಒಪ್ಪಿಕೊಳ್ಳಲೇಬೇಕು.

ಕಿರುಪರೀಕ್ಷೆ ಅಥವಾ ಪರೀಕ್ಷೆಗಳಲ್ಲಿ ಮಕ್ಕಳು ನಕಲು ಮಾಡುವಾಗ ಸಿಕ್ಕಿಹಾಕಿಕೊಂಡರೆ ಅದನ್ನೇ ಒಂದು ಮಹಾ ಅಪರಾಧ ಎಂದು ಬಿಂಬಿಸುವುದು ಸರಿಯಲ್ಲ. ಬೆಳವಣಿಗೆಯ ಹಾದಿಯಲ್ಲಿ ಮಕ್ಕಳು ತಪ್ಪು ಮಾಡುವುದು ಸಹಜ. ಈ ರೀತಿ ಸ್ವಲ್ಪ ಹಾದಿ ತಪ್ಪುವ ಮಕ್ಕಳನ್ನು ಸಂತೈಸಿ, ತಿಳಿವಳಿಕೆ ನೀಡಿ, ಅವರಿಗೆ ಸೂಕ್ತ ರೀತಿಯಲ್ಲಿ ಆಪ್ತ ಸಮಾಲೋಚನೆ ಮಾಡುವುದು ಸರಿಯಾದ ಕ್ರಮವಾಗಿದೆ.

ಸಾಮಾನ್ಯವಾಗಿ ಸ್ನೇಹಿತರು, ಸಹಪಾಠಿಗಳ ಎದುರು ಮಕ್ಕಳಿಗೆ ಅವಮಾನವಾಗುವಂತೆ ನಡೆದುಕೊಳ್ಳಬಾರದು. ಮಕ್ಕಳು ನಕಲು ಮಾಡುವಂತಹ ತಪ್ಪುಗಳನ್ನು ಮಾಡಿದ ಸಂದರ್ಭದಲ್ಲಿ ಖಾಸಗಿಯಾಗಿ ಅವರೊಂದಿಗೆ ಆಪ್ತ ಸಮಾಲೋಚನೆ ಮಾಡಬೇಕು. ಎಲ್ಲರೆದುರು ಅವಮಾನಿತರಾದ ಸನ್ನಿವೇಶದಲ್ಲಿ ಮಕ್ಕಳಲ್ಲಿ ತೀವ್ರವಾದ ಹತಾಶೆ, ನೋವು, ಖಿನ್ನತೆಯ ಭಾವನೆಗಳು ಆವರಿಸಿ, ಮನಸ್ಸು ಜರ್ಜರಿತವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಅವರ ಮಾನಸಿಕ ಸ್ಥಿತಿ ತುಂಬಾ ಸೂಕ್ಷ್ಮವಾಗಿರುತ್ತದೆ.

ಅನಪೇಕ್ಷಿತ ಘಟನೆಗಳು ನಡೆದ ನಂತರದ ಕೆಲವು ಗಂಟೆ ಮಕ್ಕಳು ಒಂಟಿಯಾಗಿ ಇರಲು ಬಿಡದೆ ಶಿಕ್ಷಕರು ಅಥವಾ ಸಿಬ್ಬಂದಿ ಜೊತೆಯಾಗಿದ್ದು ಅವರೊಂದಿಗೆ ಸಮಯ ಕಳೆಯಬೇಕು. ಅವರನ್ನು ಆಪ್ತವಾಗಿ ನಡೆಸಿಕೊಂಡು, ಸೂಕ್ತ ತಿಳಿವಳಿಕೆ ನೀಡಿ, ಸಾಂತ್ವನ ಹೇಳಬೇಕು. ಪೋಷಕರನ್ನು ಶಾಲೆ– ಕಾಲೇಜಿಗೆ ಕರೆಸಿಕೊಂಡು ಅವರಿಗೂ ಮಕ್ಕಳೊಂದಿಗೆ ಯಾವ ರೀತಿಯಲ್ಲಿ ಒಡನಾಡಬೇಕು ಎಂದು ತಿಳಿಸಬೇಕು.

ಚಿಕ್ಕ ವಯಸ್ಸಿನಿಂದ ಪೋಷಕರಿಂದ ಭಾವನಾತ್ಮಕ ಭದ್ರತೆ ದೊರೆಯದ ಮಕ್ಕಳು ಮಾನಸಿಕವಾಗಿ ದುರ್ಬಲರಾಗಿರುವ ಸಂಭವ ಹೆಚ್ಚಾಗಿರುತ್ತದೆ. ಒಂದೆಡೆ, ಪೋಷಕರಿಂದ ಅತಿಯಾದ ಶೈಕ್ಷಣಿಕ ಸಾಧನೆಯ ನಿರೀಕ್ಷೆ, ಇನ್ನೊಂದೆಡೆ, ಶಾಲೆಯಲ್ಲಿ ಶಿಕ್ಷಕರ ನಿರೀಕ್ಷೆಗಳು, ಮತ್ತೊಂದೆಡೆ, ಸಹಪಾಠಿಗಳೊಂದಿಗಿನ ಸ್ಪರ್ಧೆಗಳನ್ನು ಮಕ್ಕಳು ಎದುರಿಸುತ್ತಾರೆ. ಇಂತಹ ಸನ್ನಿವೇಶಗಳು ದುರ್ಬಲ ಮನಸ್ಸಿನ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಮಾನಸಿಕ ಒತ್ತಡವನ್ನು ಸೃಷ್ಟಿಸುತ್ತವೆ.

ವಿದ್ಯಾರ್ಥಿಗಳು ಪರೀಕ್ಷೆ, ಕಿರು ಪರೀಕ್ಷೆಗಳಲ್ಲಿ ನಕಲು ಮಾಡುವುದು, ತರಗತಿಯಲ್ಲಿ ಅಶಿಸ್ತು ತೋರುವಂತಹ ತಪ್ಪುಗಳನ್ನು ಮಾಡಿದಾಗ ಪ್ರಾಂಶುಪಾಲರು, ಶಿಕ್ಷಕರು ಹಾಗೂ ಶಾಲೆಯ ಸಿಬ್ಬಂದಿ ಅವರೊಂದಿಗೆ ಯಾವ ರೀತಿಯಲ್ಲಿ ವರ್ತಿಸಬೇಕು ಎಂಬ ಕುರಿತು ಮಾರ್ಗಸೂಚಿಗಳನ್ನು ರೂಪಿಸುವುದು ಮಕ್ಕಳ ಹಿತದೃಷ್ಟಿಯಿಂದ ಅಗತ್ಯವಾದ ಕ್ರಮ.

ಆನೆಗಳು ತಮ್ಮ ಮರಿಗಳನ್ನು ಪೋಷಣೆ ಮಾಡಿದಂತೆ ಮನುಷ್ಯರೂ ತಮ್ಮ ಮಕ್ಕಳನ್ನು ಪೋಷಣೆ ಮಾಡಬೇಕು ಎಂದು ಹೇಳಲಾಗುತ್ತದೆ. ಇದನ್ನು 'ಎಲಿಫೆಂಟ್ ಪೇರೆಂಟಿಂಗ್' ಎಂದು ಕರೆಯಲಾಗುತ್ತದೆ. ಆನೆಗಳು ತಮ್ಮ ಮರಿಗಳನ್ನು ಬಹಳ ಜತನದಿಂದ ಕಾಪಾಡಿ, ಬೆಳೆಸುತ್ತವೆ. ಆನೆಗಳು ಗರ್ಭದಲ್ಲಿ ಸುಮಾರು ಎರಡು ವರ್ಷ ಮರಿಗಳನ್ನು ಹೊತ್ತು, ಜನನದ ನಂತರ ಅವುಗಳಿಗೆ ಉತ್ತಮ ಆಹಾರ ನೀಡಿ, ಅವಶ್ಯವಾದ ಉಪಯುಕ್ತ ಕೌಶಲಗಳನ್ನು ಕಲಿಸುತ್ತವೆ. ಮರಿಗಳಿಗೆ ಇಡೀ ಹಿಂಡು ಬೆಂಬಲವಾಗಿ ನಿಲ್ಲುತ್ತದೆ. ಮರಿಗಳು ತೊಂದರೆಯಲ್ಲಿದ್ದಾಗ, ತಾಯಿ ಆನೆ ಪ್ರೀತಿಯಿಂದ ನೆರವಿಗೆ ಧಾವಿಸಿ, ಆಸರೆ ನೀಡುತ್ತದೆ. ಮನುಷ್ಯರೂ ಮಕ್ಕಳ ಪಾಲನೆಯ ವಿಷಯದಲ್ಲಿ ಆನೆಗಳನ್ನು ಅನುಸರಿಸಬೇಕು. ಮಕ್ಕಳು ಸಂಕಷ್ಟ, ದುಃಖದಲ್ಲಿದ್ದಾಗ ಭಾವನಾತ್ಮಕ ಬೆಂಬಲ ನೀಡಿ, ಪ್ರೀತಿಯಿಂದ ರಕ್ಷಿಸಬೇಕು.

ತಮ್ಮ ಮಕ್ಕಳು ಶೈಕ್ಷಣಿಕ ಅಥವಾ ಕ್ರೀಡೆಗಳಲ್ಲಿ ತೋರುವ ಸಾಧನೆ, ಸಾಮರ್ಥ್ಯಗಳನ್ನೂ ಪೋಷಕರು ಪ್ರೋತ್ಸಾಹಿಸಬೇಕು. ಪ್ರೀತಿ, ಸಹನೆಯಿಂದ ಭಾವನಾತ್ಮಕವಾಗಿ ಅವರನ್ನು ಬೆಸೆಯಬೇಕು. ಆನೆಯ ಪೋಷಣೆ, ಪಾಲನೆಯ ರೀತಿಯನ್ನು ಪೋಷಕರು ಮತ್ತು ಶಿಕ್ಷಕರು ಅಳವಡಿಸಿಕೊಳ್ಳುವ ಮೂಲಕ ಮಕ್ಕಳನ್ನು ರಕ್ಷಿಸಿಕೊಂಡು, ಅವರನ್ನು ಆಪ್ತವಾಗಿ ಬೆಳೆಸಲು ಕಲಿಯಬೇಕು.

ವಾಚಕರ ವಾಣಿ

ಪ್ರಾಣಿಗಳ ಭಾಷೆಗಷ್ಟೇ ಸ್ಪಂದನ?!

ಪಶ್ಚಿಮ ಬಂಗಾಳದ ಬಂಕುರಾ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರು ಆಧಾರ್ ಕಾರ್ಡ್‌ನಲ್ಲಿ ತಮ್ಮ ಹೆಸರು 'ಕಾಂತಿಕುಮಾರ ದತ್ತಾ' ಬದಲಿಗೆ 'ಕಾಂತಿಕುಮಾರ ಕುತ್ತಾ' ಎಂದು ನಮೂದಾದ ಕಾರಣ, ಬದಲಾಯಿಸಲು ಹೆಣಗಾಡಿದ್ದಾರೆ. ಕೊನೆಗೆ ಅಧಿಕಾರಿಗಳ ಮುಂದೆ ನಾಯಿಯ ಹಾಗೇ ಬೊಗಳುತ್ತ ಗಮನ ಸೆಳೆದದ್ದು ಸಾಮಾಜಿಕ ಜಾಲತಾಣ ಹಾಗೂ ಮುದ್ರಣ ಮಾಧ್ಯಮದಲ್ಲಿ ವರದಿಯಾಗಿದೆ. ನಂತರ, ಆ ವ್ಯಕ್ತಿ ಹೆಸರು ಬದಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಸಹ ತಿಳಿದುಬಂದಿದೆ. ಅಲ್ಲಿಗೆ, ಅಧಿಕಾರಿಗಳು ಮನುಷ್ಯರ ಭಾಷೆಗಿಂತ ಪ್ರಾಣಿಗಳ ಭಾಷೆಗೆ ಸ್ಪಂದಿಸುತ್ತಾರೆ ಎಂದು ತಿಳಿಯಬೇಕೆ?

ವೆಂಕಟೇಶ್ ಮುದಗಲ್, ಕಲಬುರಗಿ

ರಾಸಾಯನಿಕ ಸುರಕ್ಷತೆ: ಇರಲಿ ತರಬೇತಿ

ಕಾರ್ಖಾನೆಗಳಲ್ಲಿ ರಾಸಾಯನಿಕಗಳ ಅಸಮರ್ಪಕ ಸಂಗ್ರಹ ಹಾಗೂ ಬಳಕೆಯ ವಿಧಾನಗಳಿಂದ ಅಪಘಾತಗಳು ಸಂಭವಿಸುತ್ತವೆ. ಆದರೆ ಅಪರೂಪದ ಪ್ರಕರಣವೆಂಬಂತೆ, ಹೈದರಾಬಾದ್‌ನಲ್ಲಿರುವ ಸರ್ಕಾರಿ ಕಾಲೇಜೊಂದರ ಪ್ರಯೋಗಾಲಯದಲ್ಲಿ ರಾಸಾಯನಿಕ ಅನಿಲ ಸೋರಿಕೆಯಾಗಿ ವಿದ್ಯಾರ್ಥಿಗಳು ಅಸ್ವಸ್ಥಗೊಂಡಿರುವುದು (ಪ್ರ.ವಾ., ನ. 18) ದುರದೃಷ್ಟಕರ.

ಸುರಕ್ಷತೆ ದೃಷ್ಟಿಯಿಂದ ರಸಾಯನ ವಿಜ್ಞಾನವು ಉಳಿದ ವಿಷಯಗಳಿಗಿಂತ ಭಿನ್ನವಾಗಿದ್ದು, ರಾಸಾಯನಿಕಗಳ ಸ್ವಭಾವ, ಅವುಗಳ ಸಂಗ್ರಹ, ಬಳಸುವ ವಿಧಾನ, ವಿಲೇವಾರಿ ವಿಧಾನದಂತಹ ವಿಚಾರಗಳ ಬಗ್ಗೆ ಅರಿವು ಹಾಗೂ ತರಬೇತಿ ನೀಡುವುದು ಆದ್ಯತೆಯ ಅಂಶವಾಗಬೇಕು. ಆದರೆ, ಪಠ್ಯಗಳಲ್ಲಿ ಇಂತಹವನ್ನು ಕಲಿಸುವುದಿಲ್ಲ. ಆದ್ದರಿಂದ, ಪದವಿ ಪೂರ್ವ ಪಠ್ಯದಿಂದ ಆರಂಭಿಸಿ ಸ್ನಾತಕೋತ್ತರ ಶೈಕ್ಷಣಿಕ ಪಠ್ಯಕ್ರಮದವರೆಗೂ ರಾಸಾಯನಿಕ ಸುರಕ್ಷತೆಯ ವಿಷಯವನ್ನು ಸೇರಿಸಿದರೆ, ಅಪಾಯಕಾರಿ ರಾಸಾಯನಿಕಗಳಿಂದ ಸಂಭವಿಸಬಹುದಾದ ಅಪಘಾತಗಳು ಹಾಗೂ ಪರಿಸರಕ್ಕೆ ಆಗುವ ಹಾನಿಯನ್ನು ತಪ್ಪಿಸಬಹುದು.

ಡಾ. ಜಿ.ಬೈರೇಗೌಡ, ಬೆಂಗಳೂರು

ಹಳ್ಳಿಗಳಲ್ಲೂ ಅಕ್ರಮ ದಂಧೆ

ಅಕ್ರಮಗಳು ನಗರಗಳಲ್ಲಿಯೇ ನಡೆಯಬೇಕೆಂದಿಲ್ಲ, ಹಳ್ಳಿಗಳಲ್ಲಿಯೂ ಇದೀಗ ಯಥೇಚ್ಛವಾಗಿ ನಡೆಯುತ್ತಿವೆ. ಒಂದನೆಯದಾಗಿ, ಪೆಟ್ರೋಲ್ ಮತ್ತು ಡೀಸೆಲ್ ದಂಧೆ. ಪೆಟ್ರೋಲ್ ಬಂಕ್‌ನಲ್ಲಿ ₹ 102ಕ್ಕೆ ದೊರೆಯುವ ಲೀಟರ್ ಪೆಟ್ರೋಲ್, ಹಳ್ಳಿಗಳ ಡಬ್ಬಿ ಅಂಗಡಿ ಮತ್ತು ದೊಡ್ಡ ಕಿರಾಣಿ ಸ್ಟೋರ್‌ಗಳಲ್ಲಿ ₹ 120ರಿಂದ 130ಕ್ಕೆ ಮಾರಾಟವಾಗುತ್ತಿದೆ. ₹ 89ಕ್ಕೆ ದೊರೆಯುವ ಲೀಟರ್ ಡೀಸೆಲ್ ₹ 100ರಿಂದ 105ರ ತನಕ ಎಗ್ಗಿಲ್ಲದೇ ರಾಜಾರೋಷವಾಗಿ ಮಾರಾಟವಾಗುತ್ತಿದೆ. ಅದೂ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನೂ ತೆಗೆದುಕೊಳ್ಳದೆ.

ಎರಡನೆಯದಾಗಿ, ಮದ್ಯ ದಂಧೆ. ನಗರದಲ್ಲಿ ₹ 150ರಿಂದ 170ಕ್ಕೆ ದೊರೆಯುವ ಬಿಯರ್, ಹಳ್ಳಿಗಳಲ್ಲಿ ₹ 220ರಿಂದ 250ಕ್ಕೆ ಮತ್ತು ಟೆಟ್ರಾ ಪ್ಯಾಕ್‌ನಲ್ಲಿ ₹ 55ರಿಂದ 60ಕ್ಕೆ ದೊರೆಯುವ ಮದ್ಯವು ಹಳ್ಳಿಗಳಲ್ಲಿ ₹ 80ರಿಂದ 100ರ ತನಕ ಮಾರಾಟವಾಗುತ್ತಿವೆ. ಇವೆಲ್ಲ ಸ್ಥಳೀಯ ಆಡಳಿತ ಹಾಗೂ ಪೊಲೀಸರಿಗೆ ಗೊತ್ತಿಲ್ಲವೆಂದಲ್ಲ. ಎಲ್ಲರೂ ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಿದ್ದಾರೆ ಅಷ್ಟೇ. ಆದಷ್ಟು ಬೇಗ ಹಳ್ಳಿಗಳು ಮೊದಲ ರೂಪಕ್ಕೆ ಬರಲಿ. ಹಳ್ಳಿಗಳಲ್ಲಿ ಇಂತಹವಕ್ಕೆಲ್ಲ ಜಾಗ ಇಲ್ಲದಂತಾಗಲಿ.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಶಾಸಕನ ಮೇಲೆ ಹಲ್ಲೆ ವಿಷಾದಕರ

ಮೂಡಿಗೆರೆ ತಾಲ್ಲೂಕಿನಲ್ಲಿ ಕಾಡಾನೆ ದಾಳಿಯಿಂದ ಮೃತಪಟ್ಟ ಮಹಿಳೆಯ ಕುಟುಂಬದವರಿಗೆ ಸಾಂತ್ವನ ಹೇಳಲು ಬಂದ ಶಾಸಕ ಎಂ.ಪಿ.ಕುಮಾರಸ್ವಾಮಿ ಅವರ ಮೇಲೆ ಹಲ್ಲೆ ನಡೆದಿರುವುದು ಖಂಡನೀಯ ಮತ್ತು ಅಮಾನವೀಯ. ನಮ್ಮ ದುಃಖ, ಅಸಹನೆ, ಆಕ್ರೋಶ ಏನೇ ಇದ್ದರೂ ಅದನ್ನು ಕುಳಿತು ಮಾತನಾಡಿ ಬಗೆಹರಿಸಿಕೊಳ್ಳಬೇಕು. ಅಲ್ಲದೆ ಅಸಮಾಧಾನವನ್ನು ಹೊರಹಾಕಲು ಹಲವಾರು ವಿಧಗಳಿವೆ. ಅದುಬಿಟ್ಟು ಕಾನೂನನ್ನು ಕೈಗೆ ತೆಗೆದುಕೊಂಡು, ಅದೂ ಒಬ್ಬ ಶಾಸಕನ ಮೇಲೆ ಹಲ್ಲೆ ನಡೆಸುವುದು ಸರಿಯಲ್ಲ.

ಎಸ್.ನಾಗರಾಜ, ನಾಗೂರ, ಬಾಗಲಕೋಟೆ

ಕಲಾವಿದನಿಗೂ ಇದೆ ಅಭಿವ್ಯಕ್ತಿಯ ಹಕ್ಕು

'ನಾನು ಪಕ್ಕಾ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಭಕ್ತ' ಎಂಬ ಚಿತ್ರನಟ ಅನಂತನಾಗ್ ಅವರ ಹೇಳಿಕೆಯನ್ನು ಸೋಮು ಎಸ್. ಘಟ್ಟ ಅವರು ಆಘಾತಕಾರಿ ಎಂದಿದ್ದಾರೆ (ವಾ.ವಾ., ನ. 21). ಇದರಲ್ಲಿ ಆಘಾತ ಉಂಟಾಗುವಂತಹದ್ದು ಏನಿದೆ ಎಂದೇ ಅರ್ಥವಾಗಲಿಲ್ಲ. ಪ್ರತಿಯೊಬ್ಬ ಪ್ರಜೆಯಂತೆ ಕಲಾವಿದನಿಗೂ ತನ್ನ ನೆಚ್ಚಿನ ನಾಯಕನ ಬಗ್ಗೆ ಹೇಳಿಕೊಳ್ಳುವ ಹಕ್ಕು ಇದ್ದೇ ಇದೆ. ಅವರವರದ್ದೇ ಆದ ಕಾರಣಗಳಿಗಾಗಿ ಪ್ರತಿಯೊಬ್ಬರೂ ಬೇರೆ ಬೇರೆ ನಾಯಕರನ್ನು ಗೌರವಿಸಬಹುದು, ಇಷ್ಟಪಡಬಹುದು. ಅದು ಅವರ ವೈಯಕ್ತಿಕ ವಿಷಯ. ಅವರೆಲ್ಲಾದರೂ ಚಿತ್ರರಂಗದ ಬಗ್ಗೆ ಅದರಲ್ಲೂ ಕನ್ನಡ ಚಿತ್ರರಂಗದ ಬಗ್ಗೆ ಏನಾದರೂ ಅಸಮಂಜಸ ಆಕ್ಷೇಪ ಎತ್ತಿದ್ದರೆ ಆಘಾತ ಎನ್ನಬಹುದಿತ್ತೋ ಏನೋ!

ಬಿ.ಎನ್.ಭರತ್, ಬೆಂಗಳೂರು

ಅಸ್ಪೃಶ್ಯತೆ: ಕಠಿಣ ಶಿಕ್ಷೆಯಾಗಲಿ

ಚಾಮರಾಜನಗರ ತಾಲ್ಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಮಹಿಳೆಯೊಬ್ಬರು ನೀರು ಕುಡಿದರೆಂದು, ಕಿರು ನೀರು ಸರಬರಾಜು ಟ್ಯಾಂಕ್‌ನ ನೀರೆಲ್ಲವನ್ನೂ ಹೊರಕ್ಕೆ ಹರಿಸಿ ಗೋಮೂತ್ರದಿಂದ ಶುದ್ಧೀಕರಿಸಿರುವುದು ಮಾನವ ಕುಲ ತಲೆ ತಗ್ಗಿಸುವಂಥದ್ದು. ಈಗಿನ ವಿಜ್ಞಾನ ಯುಗದಲ್ಲೂ ಇಂತಹ ಆಚರಣೆಗಳು ಜೀವಂತ ಇರುವುದು ಸಮಾಜಕ್ಕೆ ಮಾರಕ. ಇಂತಹ ಆಚರಣೆ ಪ್ರೋತ್ಸಾಹಿಸುವವರಿಗೆ ಸರ್ಕಾರ ಕಠಿಣವಾದ ಶಿಕ್ಷೆ ಕೊಡಬೇಕು ಹಾಗೂ ಅಸ್ಪೃಶ್ಯತೆಯ ವಿರುದ್ಧ ಜಾಗೃತಿ ಕಾರ್ಯಕ್ರಮಗಳನ್ನು ಹೆಚ್ಚಿನ ರೀತಿಯಲ್ಲಿ ಆಯೋಜಿಸಬೇಕು.

ಸಾಗರ್ ದ್ರಾವಿಡ್, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉಪಗ್ರಹ ಉಡ್ಡಯನದಲ್ಲಿ ನವೋದ್ಯಮಗಳ ನೆಗೆತ

ಬಾಹ್ಯಾಕಾಶಕ್ಕೆ ಲಗ್ಗೆ

ಆಕಾಶಕ್ಕೆ ಚಿಮ್ಮಿದ ವಿಕ್ರಮ್

ಪ್ರಜಾವಾಣಿ ವಾರ್ತೆ

ಬಾಹ್ಯಾಕಾಶದಲ್ಲಿ ಖಾಸಗಿ ಸಹಭಾಗಿತ್ವದ ವಿಚಾರ ಬಂದಾಗಲೆಲ್ಲ ಮೊದಲು ನೆನಪಾಗುವ ಹೆಸರು ಎಲಾನ್ ಮಸ್ಕ್ ಮತ್ತು ಅವರು ಬಾಹ್ಯಾಕಾಶಕ್ಕಾಗಿ ಕಟ್ಟಿದ ಸಾಮ್ರಾಜ್ಯ ಸ್ಪೇಸ್‌ಎಕ್ಸ್. ಆದರೆ, ಬಾಹ್ಯಾಕಾಶದಲ್ಲಿ ಆಸಕ್ತವಾಗಿರುವ ಖಾಸಗಿ ಕಂಪನಿಗಳು ಮತ್ತು ನವೋದ್ಯಮಗಳು ಒಂದೆರಡಲ್ಲ. ಜಗತ್ತಿನಾದ್ಯಂತ ಈಗ 10 ಸಾವಿರಕ್ಕೂ ಹೆಚ್ಚು ಬಾಹ್ಯಾಕಾಶ ಕಂಪನಿಗಳಿವೆ. ರಾಕೆಟ್ ಮತ್ತು ಉಪಗ್ರಹಗಳ ತಯಾರಿ, ಉಡ್ಡಯನ, ಸಂಶೋಧನೆ ಮತ್ತು ಅಭಿವೃದ್ಧಿಯಂತಹ ವಿವಿಧ ಕ್ಷೇತ್ರಗಳಲ್ಲಿ ಈ ಕಂಪನಿಗಳು ಕೆಲಸ ಮಾಡುತ್ತಿವೆ.

ಅಮೆರಿಕದಲ್ಲಿ 1980ರ ದಶಕದಲ್ಲಿಯೇ ಬಾಹ್ಯಾಕಾಶ ಕ್ಷೇತ್ರವನ್ನು ಖಾಸಗಿ ವಲಯಕ್ಕೆ ತೆರೆದಿರಿಸಲಾಯಿತು. ಆದರೆ, ಸ್ಪೇಸ್‌ಟೆಕ್, ಬ್ಲೂಒರಿಜಿನ್, ವರ್ಜಿನ್ ಗ್ಯಾಲಾಕ್ಟಿಕ್‌ನಂತಹ ಕಂಪನಿಗಳು 2000ನೇ ದಶಕದಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಸಕ್ರಿಯವಾಗುವವರೆಗೆ ಬಾಹ್ಯಾಕಾಶದಲ್ಲಿ ಖಾಸಗಿ ವಲಯ ಅಷ್ಟೊಂದು ಗಂಭೀರವಾಗಿ ಇರಲಿಲ್ಲ. ಈ ಕಂಪನಿಗಳು ಸಕ್ರಿಯವಾದ ನಂತರದ ದಿನಗಳಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳು ಹುಲುಸಾಗಿ ಬೆಳೆದಿವೆ. 5,500ಕ್ಕೂ ಹೆಚ್ಚು ಖಾಸಗಿ ಕಂಪನಿಗಳು ಅಲ್ಲಿ ಇವೆ. ಬ್ರಿಟನ್‌ನಲ್ಲಿ ಸುಮಾರು 3,000 ಖಾಸಗಿ ಕಂಪನಿಗಳು ಇವೆ. ಭಾರತದಲ್ಲಿ 365 ಕಂಪನಿಗಳು ಇವೆ ಎಂದು ಹೇಳಲಾಗುತ್ತಿದೆ. ನೂರಕ್ಕೂ ಹೆಚ್ಚು ಕಂಪನಿಗಳು ಹೆಚ್ಚು ಸಕ್ರಿಯವಾಗಿವೆ. ಕಂಪನಿಗಳ ಸಂಖ್ಯೆಯಲ್ಲಿ ಭಾರತವು ಜಗತ್ತಿನಲ್ಲಿ ಐದನೇ ಸ್ಥಾನದಲ್ಲಿದೆ.

ಭಾರತದ ಬಾಹ್ಯಾಕಾಶ ಯಾನ 1960ರ ದಶಕದಲ್ಲಿ ಆರಂಭವಾದಾಗ ದೇಶದ ಬಳಿ ಉನ್ನತ ತಂತ್ರಜ್ಞಾನವೇನೂ ಇರಲಿಲ್ಲ. ಆದರೆ, ಇಸ್ರೊ ನೇತೃತ್ವದಲ್ಲಿ ಭಾರತದ ಬಾಹ್ಯಾಕಾಶ ಕ್ಷೇತ್ರವು ಈಗ ಬಲಿಷ್ಠವಾಗಿ ಬೆಳೆದಿದೆ. ಚಂದ್ರ ಮತ್ತು ಮಂಗಳ ಗ್ರಹದ ವರೆಗೆ ಭಾರತ ಈಗ ತಲುಪಿದೆ. ಜಗತ್ತಿನ ಬೇರೆ ಯಾವುದೇ ದೇಶಕ್ಕಿಂತ ಕಡಿಮೆ ವೆಚ್ಚದಲ್ಲಿ ಉಪಗ್ರಹ, ರಾಕೆಟ್ ಅಭಿವೃದ್ಧಿ, ಉಡ್ಡಯನದ ಹೆಗ್ಗಳಿಕೆಯನ್ನೂ ಇಸ್ರೊ ಪಡೆದುಕೊಂಡಿದೆ.

2020ರಲ್ಲಿ ಭಾರತದ ಬಾಹ್ಯಾಕಾಶ ನೀತಿಯಲ್ಲಿ ಪರಿವರ್ತನೆ ತರಲಾಯಿತು. ಖಾಸಗಿ ಕ್ಷೇತ್ರಕ್ಕೂ ಬಾಹ್ಯಾಕಾಶ ಕ್ಷೇತ್ರವನ್ನು ಮುಕ್ತಗೊಳಿಸಲಾಯಿತು. ಧ್ರುವ ಸ್ಪೇಸ್ 2012ರಲ್ಲಿ ಹೈದರಾಬಾದ್‌ನಲ್ಲಿ ಆರಂಭವಾಯಿತು. 2022ರ ನವೆಂಬರ್ 18 ಭಾರತದ ಬಾಹ್ಯಾಕಾಶ ಕ್ಷೇತ್ರವು ಭಿನ್ನ ತಿರುವು ಪಡೆದುಕೊಂಡ ವರ್ಷ. ಹೈದರಾಬಾದ್‌ನ ಸ್ಕೈರೂಟ್ ಏರೋಸ್ಪೇಸ್ ತನ್ನ ಮೊದಲ ರಾಕೆಟ್ ಅನ್ನು ಇಸ್ರೊ ಉಡ್ಡಯನ ಕೇಂದ್ರದಿಂದ ಬಾಹ್ಯಾಕಾಶಕ್ಕೆ ಕಳುಹಿಸಿದೆ. ಮೂರು ಸಣ್ಣ ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ.

ಬಾಹ್ಯಾಕಾಶ ತಂತ್ರಜ್ಞಾನವು ಅತ್ಯಂತ ನುರಿತ ವಿಜ್ಞಾನಿಗಳು, ತಂತ್ರಜ್ಞರು ಅಗತ್ಯವಿರುವ ಕ್ಷೇತ್ರ. ರಾಕೆಟ್ ಮತ್ತು ಉಪಗ್ರಹ ಅಭಿವೃದ್ಧಿಯಲ್ಲಿ ನಿಖರತೆಯು ಬಹಳ ಮುಖ್ಯ. ದೊಡ್ಡ ಮೊತ್ತದ ಹೂಡಿಕೆಯನ್ನೂ ಈ ಕ್ಷೇತ್ರವು ಬೇಡುತ್ತದೆ. ಜೊತೆಗೆ, ಹೂಡಿಕೆಯನ್ನು ವಾಪಸ್ ಪಡೆಯುವ ಯಾವ ಖಾತರಿಯೂ ಇರುವುದಿಲ್ಲ. ಸರ್ಕಾರದ ವತಿಯಿಂದ ಆರ್ಥಿಕ ಭದ್ರತೆ ಅಥವಾ ಹೂಡಿಕೆಗೆ ಭದ್ರತೆ ಕೂಡ ಇಲ್ಲ. ಭಾರತದ ಬಾಹ್ಯಾಕಾಶ ನೀತಿ 2022 ಇನ್ನೂ ಅಂತಿಮಗೊಂಡಿಲ್ಲ. ಬಾಹ್ಯಾಕಾಶದಲ್ಲಿ ಖಾಸಗಿಯವರಿಗೆ ಅವಕಾಶ ಕೊಟ್ಟರೂ ಕಾಯ್ದೆ ಇನ್ನೂ ಸಿದ್ಧವಾಗಿಲ್ಲ. ಇಂತಹ ಅನಿಶ್ಚಿತ ಸ್ಥಿತಿಯಲ್ಲಿಯೂ ಖಾಸಗಿ ಕ್ಷೇತ್ರವು ಅತ್ಯಂತ ಉತ್ಸಾಹದಿಂದಲೇ ಬಾಹ್ಯಾಕಾಶ ಕ್ಷೇತ್ರದಲ್ಲಿ ದಾಪುಗಾಲಿಡುತ್ತಿವೆ. ಹತ್ತಕ್ಕೂ ಹೆಚ್ಚು ಕಂಪನಿಗಳು ತಮ್ಮದೇ ಆದ ಉಡ್ಡಯನ ವಾಹನ ಮತ್ತು ಉಪಗ್ರಹಗಳನ್ನು ಸಿದ್ಧಪಡಿಸಿವೆ ಅಥವಾ ಸಿದ್ಧಪಡಿಸುತ್ತಿವೆ. ಹಲವು ಕಂಪನಿಗಳು ಪ್ರಾಯೋಗಿಕ ಪರೀಕ್ಷೆ ಆರಂಭಿಸಿವೆ.

ಭಾರತದ ಬಾಹ್ಯಾಕಾಶ ನವೋದ್ಯಮಗಳನ್ನು ಇಸ್ರೊ ಕೈಹಿಡಿದು ಮುನ್ನಡೆಸುತ್ತಿದೆ ಎಂಬುದು ವಾಸ್ತವ ಸಂಗತಿ. 100ಕ್ಕೂ ಹೆಚ್ಚು ನವೋದ್ಯಮಗಳು ಇಸ್ರೊ ಜೊತೆಗೆ ಒಪ್ಪಂದ ಮಾಡಿಕೊಂಡಿವೆ. ಈ ನವೋದ್ಯಮಗಳಿಗೆ ಇಸ್ರೊದಿಂದ ಎಲ್ಲ ರೀತಿಯ ನೆರವು ದೊರೆಯುತ್ತಿದೆ. ದೇಶದ ಬಾಹ್ಯಾಕಾಶ ನೀತಿಯು ಅಂತಿಮಗೊಂಡ ಬಳಿಕ, ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ವಲಯದ ಪಾತ್ರ, ಇಸ್ರೊ ಮಾಲೀಕತ್ವದ ಮೂಲಸೌಕರ್ಯಗಳನ್ನು ಖಾಸಗಿ ಕಂಪನಿಗಳು ಹೇಗೆ ಬಳಸಿಕೊಳ್ಳಬಹುದು ಮುಂತಾದ ವಿಚಾರಗಳು ಸ್ಪಷ್ಟ ಆಗಲಿವೆ.



ಸ್ಕೈರೂಟ್ ಸ್ಥಾಪಿಸಿದ ನಾಗಾ ಮತ್ತು ಪವನ್

ದೇಶದ ಪ್ರಮುಖ ನವೋದ್ಯಮಗಳು

ಸ್ಕೈರೂಟ್: ಹೈದರಾಬಾದ್ (2018)

ಭಾರತದ ಅತ್ಯಂತ ಯಶಸ್ವಿ ಬಾಹ್ಯಾಕಾಶ ನವೋದ್ಯಮ ಎಂದು ಸ್ಕೈರೂಟ್ ಹೆಸರಾಗಿದೆ. ದೇಶೀಯವಾಗಿ ರಾಕೆಟ್ ಎಂಜಿನ್‌ಗಳನ್ನು ಅಭಿವೃದ್ಧಿಪಡಿಸಿದ ದೇಶದ ಖಾಸಗಿ ಒಡೆತನದ ಮೊದಲ ಸಂಸ್ಥೆ ಇದಾಗಿದೆ. ಇಸ್ರೊದ ಮಾಜಿ ಉದ್ಯೋಗಿಗಳಾದ ಪವನ್ ಕುಮಾರ್ ಚಂದನ ಮತ್ತು ನಾಗಾ ಭರತ್ ಎಂಬುವವರು ಸ್ಕೈರೂಟ್ ಆರಂಭಿಸಿದರು. ಉಡ್ಡಯನ ವಾಹನಗಳನ್ನು ತಯಾರಿಸುವುದು ಮುಖ್ಯ ಉದ್ದೇಶ. ವಿಕ್ರಮ್ 1, ವಿಕ್ರಮ್ 2 ಹಾಗೂ ವಿಕ್ರಮ್ 3 ಹೆಸರಿನ ಉಡ್ಡಯನ ವಾಹನಗಳನ್ನು ಅಭಿವೃದ್ಧಿಪಡಿಸಿದೆ. ಇದೇ 18ರಂದು ಮೊದಲ ಉಡ್ಡಯನ ಮಾಡುವಲ್ಲಿ ಯಶಸ್ವಿಯಾಗಿದ್ದು, ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಆರಂಭಕ್ಕೆ ಮುನ್ನುಡಿ ಬರೆದಿದೆ.

ಬೆಲ್ಲಾಟ್ರಿಕ್ಸ್ ಏರೋಸ್ಪೇಸ್: ಕೊಯಮತ್ತೂರು (2015)

ರೋಹನ್ ಎಂ. ಗಣಪತಿ ಹಾಗೂ ಯಶಸ್ ಕರಣಂ ಎಂಬುವವರು ಶುರುಮಾಡಿದ ಬೆಲ್ಲಾಟ್ರಿಕ್ಸ್ ಏರೋಸ್ಪೇಸ್ ದೇಶದ ಭರವಸೆಯ ನವೋದ್ಯಮ ಎನಿಸಿಕೊಂಡಿದೆ. ಉಪಗ್ರಹಗಳಿಗೆ ಎಲೆಕ್ಟ್ರಿಕ್ ಪ್ರೊಪಲ್ಷನ್ ವ್ಯವಸ್ಥೆಯನ್ನು ಇದು ಒದಗಿಸುತ್ತಿದೆ. ಅತಿ ಕಡಿಮೆ ಬೆಲೆಯ 'ಚೇತಕ್' ಹೆಸರಿನ ರಾಕೆಟ್ ಅನ್ನು ಸಂಸ್ಥೆ ಅಭಿವೃದ್ಧಿಪಡಿಸುತ್ತಿದ್ದು, ಇದನ್ನು ಮರುಬಳಕೆ ಮಾಡಬಹುದು. ಹೆಚ್ಚು ಕಾರ್ಯಕ್ಷಮತೆಯ ಎಲೆಕ್ಟ್ರಿಕ್ ಸ್ಯಾಟಲೈಟ್ ಪ್ರೊಪಲ್ಷನ್ ವ್ಯವಸ್ಥೆಯನ್ನೂ ಸಂಸ್ಥೆ ಅಭಿವೃದ್ಧಿಪಡಿಸಿದೆ.

ಆಸ್ಟ್ರೋಮ್: ಬೆಂಗಳೂರು (2015)

ವೈರ್‌ಲೆಸ್ ಕ್ಷೇತ್ರಕ್ಕೆ ಸಂಬಂಧಿಸಿದ ಈ ನವೋದ್ಯಮವನ್ನು ನೇಹಾ ಸಟಕ್ ಹಾಗೂ ಪ್ರಸಾದ್ ಎಚ್. ಎಲ್. ಭಟ್ ಎಂಬುವವರು ಸ್ಥಾಪಿಸಿದರು. ಅಗ್ಗದ, ವೇಗದ ಹಾಗೂ ವಿಶ್ವಾಸಾರ್ಹ ಇಂಟರ್ನೆಟ್ ಸಂಪರ್ಕ ಹಾಗೂ ಸಲಕರಣೆಗಳನ್ನು ಮನೆ, ಶಾಲೆ, ಆರೋಗ್ಯ ಕೇಂದ್ರಗಳು ಹಾಗೂ ಉದ್ಯಮಗಳಿಗೆ ಒದಗಿಸುವ ಧ್ಯೇಯವನ್ನು ಇದು ಹೊಂದಿದೆ. ಜಗತ್ತಿನ ಎಲ್ಲ ಜನರಿಗೂ ಸುಲಭವಾಗಿ ಅಂತರ್ಜಾಲ ದೊರೆಯುವಂತೆ ಮಾಡಲು, ಭೂಕಕ್ಷೆಗೆ 198 ಉಪಗ್ರಹಗಳ ಗುಚ್ಛವನ್ನು ಕಳುಹಿಸುವ ಉದ್ದೇಶವನ್ನು ಕಂಪನಿ ಹೊಂದಿದೆ.

ಪಿಕ್ಸೆಲ್: ಬೆಂಗಳೂರು (2018)

ರಕ್ಷಣೆ ಮತ್ತು ಬಾಹ್ಯಾಕಾಶ ಕ್ಷೇತ್ರಗಳನ್ನು ಕೇಂದ್ರೀಕರಿಸಿ ಪಿಕ್ಸೆಲ್ ಎಂಬ ಭರವಸೆಯ ನವೋದ್ಯಮವನ್ನು ಅವೈಸ್ ಅಹಮದ್ ಹಾಗೂ ಕ್ಷಿತಿಜ್ ಖಂಡೇಲ್‌ವಾಲ್ ಅವರು ಹುಟ್ಟುಹಾಕಿದರು. ಸಂಸ್ಥೆ ನಿರ್ಮಿಸಿರುವ 'ಆನಂದ್' ಹೆಸರಿನ ಉಪಗ್ರಹವನ್ನು ಇಸ್ರೊದ ರಾಕೆಟ್ ಇದೇ ಶನಿವಾರ ಹೊತ್ತೊಯ್ದಿದೆ. ಇದೇ ಏಪ್ರಿಲ್‌ನಲ್ಲಿ 'ಶಕುಂತಲಾ' ಎಂಬ ಉಪಗ್ರಹವನ್ನು ಅಮೆರಿಕದ ಸ್ಪೇಸ್‌ಎಕ್ಸ್ ಸಂಸ್ಥೆಯ ರಾಕೆಟ್ ಮೂಲಕ ನಭಕ್ಕೆ ಕಳುಹಿಸಿದ್ದ ಹೆಗ್ಗಳಿಕೆ ಪಿಕ್ಸೆಲ್‌ನದ್ದು.

ಅಗ್ನಿಕುಲ ಕಾಸ್ಮೋಸ್: ಚೆನ್ನೈ (2017)

ಸಣ್ಣ ಉಪಗ್ರಹಗಳನ್ನು ಕಡಿಮೆ ಬೆಲೆಗೆ ಒದಗಿಸುವ ಉದ್ದೇಶದಿಂದ ಅಗ್ನಿಕುಲ ಕಾಸ್ಮೋಸ್ ಎಂಬ ನವೋದ್ಯಮ ಆರಂಭವಾಯಿತು. 200 ಕೆ.ಜಿ ತೂಕವನ್ನು ಹೊತ್ತೊಯ್ಯುವ ಸಣ್ಣ ರಾಕೆಟ್‌ಗಳನ್ನು ಸಂಸ್ಥೆ ತಯಾರಿಸುತ್ತಿದೆ. ರಾಕೆಟ್ ಎಂಜಿನ್ ವಿನ್ಯಾಸ ಮಾಡಲು 3ಡಿ ತಂತ್ರಜ್ಞಾನವನ್ನು ಬಳಸಿಕೊಂಡ ದೇಶದ ಮೊದಲ ನವೋದ್ಯಮ ಎಂಬ ಶ್ರೇಯವೂ ಈ ಸಂಸ್ಥೆಯದ್ದು.

ಕಾವಾ ಸ್ಪೇಸ್: ಮುಂಬೈ (2019)

ಭೂವೀಕ್ಷಣಾ ಉಪಗ್ರಹಗಳನ್ನು ನಿರ್ಮಿಸುವ ದಿಸೆಯಲ್ಲಿ ಶುರುವಾದ ನವೋದ್ಯಮವೇ ಕಾವಾ ಸ್ಪೇಸ್. ಕ್ರಿಸ್ ನಾಯರ್ ಮತ್ತು ಬಾಲಾ ಮನೆನ್ ಎಂಬುವವರು ಈ ಸಂಸ್ಥೆಯನ್ನು ಹುಟ್ಟುಹಾಕಿದರು. ಬಾಹ್ಯಾಕಾಶದಲ್ಲಿ ಮೂಲಸೌಕರ್ಯ ನಿರ್ಮಾಣ ಹಾಗೂ ನಿರ್ವಹಣೆ ಉದ್ದೇಶವನ್ನು ಇದು ಹೊಂದಿದೆ. ಕೃಷಿ, ಹಣಕಾಸು ಕ್ಷೇತ್ರದಲ್ಲಿ ಕೆಲಸ ಮಾಡುವ ಕಂಪನಿಗಳು ಕಾವಾದ ಗ್ರಾಹಕರು.

ಕ್ಲೊವಿಯನ್: ದೆಹಲಿ (2011)

ರಾಘವ್ ಶರ್ಮಾ ಮತ್ತು ಅಂಕಿತ್ ಭಟೇಜಾ ಎಂಬುವವರು ಕ್ಲೊವಿಯನ್ ಎಂಬ ಬಾಹ್ಯಾಕಾಶ ನವೋದ್ಯಮವನ್ನು ಶುರು ಮಾಡಿದರು. ಅಂತರರಾಷ್ಟ್ರೀಯ ಬಾಹ್ಯಾಕಾಶ ಒಕ್ಕೂಟದ (ಐಎಎಫ್) ಸದಸ್ಯತ್ವ ಪಡೆದಿರುವ ಈ ಸಂಸ್ಥೆಯು ಉಪಗ್ರಹ ತಂತ್ರಜ್ಞಾನದ ಬಗ್ಗೆ ಅಪಾರ ಅನುಭವ ಹೊಂದಿರುವ ತಂಡವಿದೆ. 2014ರಲ್ಲಿ ತನ್ನ ಮೊದಲ ಉಪಗ್ರಹ 'ಕ್ಯಾನ್‌ಸ್ಯಾಟ್' ಅನ್ನು ಅಭಿವೃದ್ಧಿಪಡಿಸಿತ್ತು. ಉಪಗ್ರಹ ಬಿಡಿಭಾಗಗಳ ತಯಾರಿಕೆ, ಎತ್ತರಕ್ಕೆ ಹಾರಬಲ್ಲ ಬಲೂನ್‌ಗಳು ಮತ್ತು ಕ್ಯಾನ್‌ಸ್ಯಾಟ್ ಸೌಂಡಿಂಗ್ ರಾಕೆಟ್‌ಗಳ ಅಭಿವೃದ್ಧಿಯಲ್ಲಿ ಸಂಸ್ಥೆ ತೊಡಗಿಸಿಕೊಂಡಿದೆ.

ಅರ್ತ್2ಆರ್ಬಿಟ್: ಬೆಂಗಳೂರು (2007)

ಸುಶ್ಮಿತಾ ಮೊಹಂತಿ ಅವರು 2007ರಲ್ಲಿ ಶುರುಮಾಡಿದ ಮೊದಲ ಖಾಸಗಿ ಬಾಹ್ಯಾಕಾಶ ನವೋದ್ಯಮವೇ ಅರ್ತ್2ಆರ್ಬಿಟ್. ಬಾಹ್ಯಾಕಾಶ ಉಡ್ಡಯನ ಸಲಹೆ ಮತ್ತು ಸೇವೆ ನೀಡುವುದು ಇದರ ಮೂಲ ಉದ್ದೇಶವಾಗಿತ್ತು. ಅಹಮದಾಬಾದ್, ಮುಂಬೈ, ತಿರುವನಂತಪುರಕ್ಕೂ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿತು. ವಿಯೆನ್ನಾ ಹಾಗೂ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಕಚೇರಿ ತೆರೆದಿದೆ.

ಧ್ರುವ ಸ್ಪೇಸ್: ಹೈದರಾಬಾದ್ (2012)

ಸಂಜಯ್ ನೆಕ್ಕಂಟಿ, ಅಭಿಷೇಕ್ ರಾಜು ಮತ್ತು ನಾರಾಯಣ ಪ್ರಸಾದ್ ಎಂಬುವರು ಧ್ರುವ ಸ್ಪೇಸ್ ಎಂಬ ಬಾಹ್ಯಾಕಾಶ ನವೋದ್ಯಮ ಆರಂಭಿಸಿದರು. ಜರ್ಮನಿ ಹಾಗೂ ಸ್ವೀಡನ್‌ನಲ್ಲಿ ಉಪಗ್ರಹ ಹಾಗೂ ಬಾಹ್ಯಾಕಾಶ ಸಲಕರಣೆಗಳ ಬಗ್ಗೆ ಅಧ್ಯಯನ ನಡೆಸಿದ್ದ ಸಂಜಯ್ ಅವರು, ಇದಕ್ಕೂ ಮುನ್ನ ಸ್ಪೇಸ್‌ಟೆಕ್ ಎಂಬ ನವೋದ್ಯಮ ನಡೆಸಿದ್ದ ಅನುಭವ ಹೊಂದಿದ್ದರು. 2005ರಲ್ಲಿ ಉಡಾವಣೆಗೊಂಡಿದ್ದ ಹ್ಯಾಮ್‌ಸ್ಯಾಟ್-1 ಸ್ಯಾಟಲೈಟ್ ನಿರ್ವಹಣೆಗೆ ಇಸ್ರೊ ಜೊತೆ ಒಪ್ಪಂದ ಮಾಡಿಕೊಂಡಿತು.

ಬೃಹತ್ ಕಂಪನಿಗಳ ಪಾಲೂ ಇದೆ

ಆದಿತ್ಯ ಬಿರ್ಲಾ ಒಡೆತನದ ಹಿಂಡಾಲ್ಕೊ–ಅಲ್ಟೆಕ್ ಏರೋಸ್ಪೇಸ್, ಅದಾನಿ ಡಿಫೆನ್ಸ್ ಅಂಡ್ ಏರೋಸ್ಪೇಸ್, ಮಹೀಂದ್ರ ಏರೋಸ್ಪೇಸ್, ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್, ಡಾಸೋ–ರಿಲಯನ್ಸ್ ಏರೋಸ್ಪೇಸ್‌ನಂತಹ ದೊಡ್ಡ ಕಂಪನಿಗಳೂ ಬಾಹ್ಯಾಕಾಶ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿವೆ

ಆಧಾರ: ಬಿಬಿಸಿ, ಫೋರ್ಬ್ಸ್ ಜಾಲತಾಣಗಳು, ಪಿಟಿಐ

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಚಾಮರಾಜನಗರ ತಾಲ್ಲೂಕಿನ ಹೆಗ್ಗೋತಾರ ಗ್ರಾಮದಲ್ಲಿ ಎಸ್.ಸಿ ಮಹಿಳೆ ಟ್ಯಾಂಕ್‌ನಲ್ಲಿ ನೀರು ಕುಡಿದರು ಎನ್ನುವ ಕಾರಣಕ್ಕೆ ಅದನ್ನು ಖಾಲಿ ಮಾಡಿ ಶುದ್ಧೀಕರಿಸಿದ್ದು, ಸಮಾಜದಲ್ಲಿ ಅಸ್ಪೃಶ್ಯತೆ ಇದೆ ಎನ್ನುವುದಕ್ಕೆ ಸಾಕ್ಷ್ಯಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 281

ಸರ್ವರಿಗೂ ಸರ್ವೇಶನ ಅನುಗ್ರಹ

ಶಂಕರ ಅತ್ಯಂತ ಪ್ರಸನ್ನನಾಗಿ ಹೇಳಿದ, 'ಮನ್ಮಥ, ನಿನಗಿಷ್ಟವಾದ ವರವನ್ನು ಕೇಳು' ಎಂದ.

ಮನ್ಮಥ ಮಹದಾನಂದದಿಂದ ಹೇಳಿದ, 'ದೇವದೇವ, ನೀನು ಪ್ರಸನ್ನನಾದುದು ನನಗೆ ಆನಂದವನ್ನು ಉಂಟುಮಾಡಿದೆ. ನಾನು ಮಾಡಿದ ಅಪರಾಧವನ್ನು ಕ್ಷಮಿಸು. ನಿನ್ನ ಭಕ್ತಜನಗಳಿಗೆ ನಿನ್ನ ಪಾದಾರವಿಂದಗಳಲ್ಲಿ ಭಕ್ತಿಯುಂಟಾಗುವಂತೆ ಮಾಡು' ಎಂದು ಪ್ರಾರ್ಥಿಸಿದ.

ಪರಮೇಶ್ವರ ಸಂತುಷ್ಟನಾಗಿ ಮುಗುಳ್ನಗೆಯಿಂದ 'ನಿನ್ನ ಇಷ್ಟದಂತೆಯೇ ಆಗಲಿ. ಈಗ ನೀನು ವಿಷ್ಣುವಿನ ಸಮೀಪಕ್ಕೆ ಹೊರಡು. ಅನಂತರ ಹೊರಗಡೆ ಎಲ್ಲಿ ಬೇಕಾದರೂ ನಿರ್ಭಯನಾಗಿ ಸಂಚರಿಸು' ಎಂದ.

ದೇವತೆಗಳೆಲ್ಲರೂ ಮನ್ಮಥನಿಗೆ ಶುಭಾಶೀರ್ವಾದಗಳನ್ನು ಮಾಡಿ ಹೇಳಿದರು, 'ಮನ್ಮಥ, ನೀನೇ ಧನ್ಯನು. ಯಾರು ನಿನ್ನನ್ನು ಸುಟ್ಟು ಭಸ್ಮಮಾಡಿದ್ದರೋ, ಆ ಶಿವನೇ ನಿನ್ನನ್ನು ಬದುಕಿಸಿರುವನು. ಅವನ ಅನುಗ್ರಹಕ್ಕೆ ನೀನು ಪಾತ್ರನಾಗಿರುವೆ. ಲೋಕದಲ್ಲಿ ಮನುಷ್ಯರು ಸುಖದುಃಖಗಳನ್ನು ಅನುಭವಿಸಲು ಅವರು ಮಾಡಿದ ಪುಣ್ಯಪಾಪಗಳೇ ಕಾರಣವೇ ಹೊರತು, ಬೇರೆ ಏನೂ ಅಲ್ಲ. ರಕ್ಷಣೆ, ವಿವಾಹ, ನಿಷೇಕ ಮುಂತಾದವುಗಳೂ ಪುಣ್ಯವಶದಿಂದ ಪ್ರಾಪ್ತವಾಗುವುವು. ಅದನ್ನು ಯಾರು ತಪ್ಪಿಸಲಾರರು' ಎಂದರು. ದೇವತೆಗಳ ಆಶೀರ್ವಾದ ಪಡೆದ ಮನ್ಮಥ ಪತ್ನಿ ರತಿಯೊಂದಿಗೆ ನಿರ್ಗಮಿಸಿದ.

ಪರಮೇಶ್ವರ ಸಂತೋಷದಿಂದ ಪಾರ್ವತಿಯನ್ನು ತನ್ನ ಎಡಭಾಗದಲ್ಲಿ ಕುಳ್ಳಿರಿಸಿಕೊಂಡು ಮೃಷ್ಟಾನ್ನ ಭೋಜನ ಮಾಡಿದ. ಜನರೆಲ್ಲರೂ ಆನಂದದಿಂದ ಉತ್ಸವವನ್ನು ಆಚರಿಸಿದರು. ಮುನಿಗಳೆಲ್ಲರೂ ವೇದಘೋಷವನ್ನು ಮಾಡಿದರು. ಚತುರ್ವಿಧವಾದ ನೃತ್ಯ, ಗೀತ, ವಾದ್ಯಾದಿಗಳು ಸಹ ಮೊಳಗಿದವು.

ದೇವತೆಗಳೆಲ್ಲರೂ ಶಿವನಿಗೆ ವಂದಿಸಿದರು. ನಂತರ ಪರಶಿವನನ್ನು ವಿಷ್ಣು, ಬ್ರಹ್ಮ, ಇಂದ್ರ ಮೊದಲಾದ ದೇವತೆಗಳು, ಸಿದ್ಧರು, ಋಷಿಗಳು, ನಾಗರುಗಳು ಸ್ತುತಿಸಿದರು. ಈ ಸಂದರ್ಭದಲ್ಲಿ ದೇವತೆಗಳು ಹೇಳಿದರು, 'ಜಗದಾಧಾರಭೂತನಾದ ಪರಶಿವನೇ, ನಿನಗೆ ಜಯವಾಗಲಿ. ನೀನು ಮಹಾದೇವನು, ವಿಶ್ವಂಭರನು, ಕಾಳೀಪತಿಯಾದ ನಿನಗೆ ಜಯವಾಗಲಿ. ಆನಂದದಾಯಕನೇ, ತ್ರ್ಯಂಬಕ, ಸರ್ವೇಶ್ವರ, ಸರ್ವವ್ಯಾಪಕನೂ ಮಾಯಾಪತಿಯೂ ಆಗಿರುವ ನಿನಗೆ ಜಯವಾಗಲಿ. ನೀನು ನಿರ್ಗುಣ, ನಿರ್ವಿಕಾರ, ನಿಷ್ಕಾಮನಾದವನು. ನೀನು ನಿರೂಪನಾದರೂ ಜಗತ್ತಿನ ರಕ್ಷಣೆಗಾಗಿ ರೂಪವನ್ನು ಧರಿಸಿರುವ ಅಖಿಲಾಧಾರನಾದ ಜಗದೀಶ. ಕರುಣಾಕರನಾದ ನೀನು ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವ ಆನಂದರೂಪ. ನೀನು ಮಾಯಾಗುಣಾಕೃತಿ. ದೀನಬಂಧುವೂ ದಯಾನಿಧಿಯೂ ಆದ ನಿನಗೆ ಜಯವಾಗಲಿ. ನೀನು ಅವಿಕಾರ. ವಾಙ್ಮನಸ್ಸುಗಳಿಗೆ ಅಗೋಚರನಾಗಿರುವ ಮಾಯಕಾರ. ನಿರ್ಗುಣ ಸಂಪನ್ನನಾದ ನಿನಗೆ ವಿಕಾರಭಾವಗಳು ಮೂಡುವುದಿಲ್ಲ. ಸದಾ ಸದ್ವಿಚಾರಗಳನ್ನು ಭಕ್ತರಿಗೆ ನೀಡಿ ಅನುಗ್ರಹಿಸುವ ಜಗದ್ರಕ್ಷಕನಾದ ನಿನಗೆ ನಮಸ್ಕಾರಗಳು' ಎಂದು ಶಿವನನ್ನು ವಿಧವಿಧವಾಗಿ ಸ್ತುತಿಸಿದರು.

ದೇವತೆಗಳೆಲ್ಲರೂ ಗಿರಿಜಾಪತಿಯಾದ ಶಂಕರನನ್ನು ಅತ್ಯಂತ ಭಕ್ತಿಯಿಂದ ಸ್ತೋತ್ರಮಾಡಿದ ನಂತರ, ಲೀಲಾಮಾನುಷವಿಗ್ರಹನಾದ ಶಿವನು ದೇವತೆಗಳಿಗೆಲ್ಲರಿಗೂ ಬೇಕಾದ ವರಗಳನ್ನು ಕರುಣಿಸಿದ. ವಿಷ್ಣು, ಬ್ರಹ್ಮ, ಇಂದ್ರ ಮೊದಲಾದ ದೇವತೆಗಳು, ಪರಮೇಶ್ವರನ ಅನುಜ್ಞೆಯನ್ನು ಪಡೆದು ಅತ್ಯಾನಂದಭರಿತರಾಗಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಎರಡನೆಯ ಸಂಹಿತೆಯಾದ ರುದ್ರಸಂಹಿತೆಯಲ್ಲಿ ಬರುವ ಮೂರನೇ ಖಂಡವಾದ ಪಾರ್ವತೀಖಂಡದ ಐವತ್ತೊಂದನೆಯ ಅಧ್ಯಾಯ ಮುಗಿಯಿತು. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಭಾರತ್ ಜೋಡೊ' ಯಾತ್ರೆ ಹಮ್ಮಿಕೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಾಡಿದ್ದಾರೆ ಎನ್ನಲಾದ ಭಾಷಣದ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ಹುಟ್ಟುಹಾಕಿದೆ. 'ನನಗೆ ಅಧಿಕಾರ ಬೇಕು. ಸತ್ಯದ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ನನಗೆ ಕುರ್ಚಿ ಮಾತ್ರ ಮುಖ್ಯ' ಎಂದು ಅವರು ಹೇಳುತ್ತಿದ್ದಾರೆ ಎನ್ನಲಾದ ದೃಶ್ಯವು ಈ ವಿಡಿಯೊದಲ್ಲಿದೆ. ಹಲವು ಜನರು ಈ ವಿಡಿಯೊ ತುಣುಕನ್ನು ಹಂಚಿಕೊಂಡಿದ್ದು, ರಾಹುಲ್ ಮಾತುಗಳನ್ನು ಕೇಳಿ ಎಂದು ಉಲ್ಲೇಖಿಸಿದ್ದಾರೆ.

ರಾಹುಲ್ ಅವರು 2021ರ ಡಿಸೆಂಬರ್ 13ರಂದು ಜೈಪುರದಲ್ಲಿ ನಡೆದ ಸಮಾವೇಶದಲ್ಲಿ ಮಾಡಿದ್ದ ಭಾಷಣದ ವಿಡಿಯೊ ಇದಾಗಿದ್ದು, ಅವರು ಬಿಜೆಪಿಯನ್ನು ಉದ್ದೇಶಿಸಿ ಹೇಳಿದ ಮಾತುಗಳನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು 'ಇಂಡಿಯಾಟುಡೇ' ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. 'ಹಿಂದುತ್ವವಾದಿಗಳಿಗೆ ಏನೇ ಆಗಲಿ ಅಧಿಕಾರವೊಂದೇ ಬೇಕು. ಮಹಾತ್ಮಾ ಗಾಂಧಿ ಅವರು 'ನನಗೆ ಸತ್ಯ ಬೇಕು. ನಾನು ಅದನ್ನು ಬಯಸುತ್ತೇನೆ. ನನಗೆ ಅಧಿಕಾರ ಬೇಕಿಲ್ಲ' ಎಂದು ಹೇಳಿದ್ದರು. ಆದರೆ ಬಿಜೆಪಿಯವರು ಗಾಂಧೀಜಿ ಮಾತಿಗೆ ತದ್ವಿರುದ್ಧವಾಗಿ ಮಾತನಾಡುತ್ತಿದ್ದು, 'ನನಗೆ ಅಧಿಕಾರ ಬೇಕು, ಸತ್ಯದ ಗೊಡವೆ ಬೇಕಿಲ್ಲ' ಎಂದು ಹೇಳುತ್ತಿದ್ದಾರೆ' ಎಂಬುದಾಗಿ ರಾಹುಲ್ ತಮ್ಮ ಭಾಷಣದಲ್ಲಿ ಹೇಳಿದ್ದರು. ಬಿಜೆಪಿಯನ್ನು ಉಲ್ಲೇಖಿಸಿ ಹೇಳಿದ್ದ ಮಾತುಗಳನ್ನು ರಾಹುಲ್ ತಮ್ಮ ಬಗ್ಗೆಯೇ ಆಡಿರುವ ಮಾತು ಎಂಬುದಾಗಿ ತಪ್ಪಾಗಿ ಬಿಂಬಿಸಲಾಗಿದೆ ಎಂದು ತಿಳಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮುಂದೆ ಚಾಚಿದ ಮನಸ್ಸು

ಲೋಚನದ ಸಂಚಾರ ಮುಖದ ಮುಂದಕಪಾರ |
ಗೋಚರಿಪುದೇನದಕೆ ತಲೆಯ ಹಿಂದಣದು? ||
ಪ್ರಾಚೀನ ಹೊರತು ಸ್ವತಂತ್ರ ನೀಂ, ಸಾಂತವದು |
ಚಾಚು ಮುಂದಕೆ ಮನವ- ಮಂಕುತಿಮ್ಮ || 761 |

ಪದ-ಅರ್ಥ: ಲೋಚನದ = ಕಣ್ಣಿನ, ಮುಂದಕಪಾರ = ಮುಂದಕೆ + ಅಪಾರ, ಗೋಚರಿಪುದೇನದಕೆ = ಗೋಚರಿಪುದು(ಕಾಣಿಸುವುದು) + ಏನಕೆ, ಪ್ರಾಚೀನ = ಹಿಂದೆ ಆಗಿ ಹೋದದ್ದು, ಸಾಂತವದು = ಕೊನೆಯಾಗುವುದು.

ವಾಚ್ಯಾರ್ಥ: ಕಣ್ಣಿನ ಸಂಚಾರ ಮುಖದ ಮುಂದೆ ವಿಶಾಲವಾಗಿದೆ. ಅದಕ್ಕೆ ತಲೆಯ ಹಿಂದಿನದು ಕಾಣುತ್ತದೆಯೆ? ಹಿಂದೆ ಆದದ್ದನ್ನು ಮರೆತಾಗ ನೀನು ಸ್ವತಂತ್ರ, ಅದಕ್ಕೊಂದು ಕೊನೆ ಇದೆ. ಮನಸ್ಸನ್ನು ಮುಂದಕ್ಕೆ ಚಾಚು.

ವಿವರಣೆ: ಕಣ್ಣಿನ ಕಾರ್ಯ ಇರುವುದು ಮುಖದ ಮುಂದಕ್ಕೆ ಮಾತ್ರ. ಅದರ ಶಕ್ತಿ ಅಪಾರವಾದದ್ದು. ಯಾವುದನ್ನೂ ಗ್ರಹಿಸಬಲ್ಲದ್ದು. ಆದರೆ ಅದಕ್ಕೊಂದು ಮಿತಿ ಇದೆ. ಮುಂದೆ ಅಷ್ಟೊಂದು ದೊಡ್ಡ ಪ್ರಪಂಚವನ್ನು ಗ್ರಹಿಸುವ ಕಣ್ಣು ತಲೆಯ ಹಿಂದಿನದು ಕಾಣಲಾರದು. ಇದೊಂದು ಸಾಂಕೇತ. ಕಗ್ಗ ಕಣ್ಣಿನ ಬಗ್ಗೆ, ಅದರ ವಿಸ್ತಾರವಾದ ಗ್ರಹಿಕೆಯ ಬಗ್ಗೆ ಮಾತನಾಡಿದರೂ ಅಂತರ್ಯದಲ್ಲಿ ಅದು ನಿನ್ನೆ, ನಾಳೆಗಳ ಬಗ್ಗೆ ಹೇಳುತ್ತಿದೆ. ನಿನ್ನೆ ಎನ್ನುವುದು ಇಂದಿನ ನೆನಪು, ನಾಳೆ ಎನ್ನುವುದು ಇಂದಿನ ಕನಸು. ಮುಖದ ಮುಂದಿರುವುದು ಭವಿಷ್ಯ. ತಲೆಯ ಹಿಂದಿರುವುದು ಭೂತ, ಕಳೆದು ಹೋದದ್ದು. ನಮಗೆ ಸಾಮಾನ್ಯವಾಗಿ ನೆನಪಿನ ಭಾರ ತುಂಬ ದೊಡ್ಡದು. ನಮ್ಮ ದೇಹದ ಪ್ರತಿಯೊಂದು ಜೀವಕಣ ಅಪಾರವಾದ ನೆನಪಿನ ಭಂಡಾರವನ್ನು ಹೊರುತ್ತದೆ. ದೇಹ ಮಾತ್ರವಲ್ಲ, ಅರಿವು ಸಹಾ ನೆನಪುಗಳ ಸಂಗ್ರಹವೇ? ಅಧ್ಯಾತ್ಮಿಕತೆ ಎಂದರೆ ನೆನಪಿನ ಹಳೆಯ ಚಕ್ರದಿಂದ ಬೇರ್ಪಟ್ಟು, ಹೊಸ ಸಾಧ್ಯತೆಯಾಗಿ ಸೃಷ್ಟಿಮಾಡಿಕೊಳ್ಳುವುದು ಮತ್ತು ಪರಿಭ್ರಮಣೆಯನ್ನು ಭೇದಿಸುವುದು. ಅದಕ್ಕೆ ಹಿಂದೆ ನೋಡುವುದು, ಅಂದರೆ ಹಿಂದೆ ಆಗಿಹೋಗಿದ್ದನ್ನು ನೆನೆಯುತ್ತ ಕೂಡ್ರುವುದು ಬೇಡ. ಅದನ್ನೇ ಕಗ್ಗ ಪ್ರಾಚೀನ ಎಂದು ಕರೆಯುತ್ತದೆ. ಪ್ರಾಚೀನವೆಂದರೆ ಹಿಂದಿನದು. ಪ್ರಾಚೀನಕರ್ಮ ನಮ್ಮ ಇಂದಿನ ಬದುಕನ್ನು ಸ್ವಲ್ಪಮಟ್ಟಿಗೆ ಪ್ರಭಾವಿಸಬಹುದು ಎಂದಿಟ್ಟುಕೊಂಡರೂ, ನಮ್ಮ ಮುಂದಿನ ಭವಿಷ್ಯದ ಭದ್ರತೆಗೆ ನಮ್ಮ ಇಂದಿನ ಕರ್ಮ ಕಾರಣವಾಗುತ್ತದೆ. ಹಿಂದಾದಕ್ಕೆಲ್ಲ ಒಂದು ಕೊನೆ ಇದೆ. ಅದು ಕೊನೆಗಾಣಿಸದೆ ನಾಳೆ ದೊರಕದು. ಅದನ್ನು ಕಗ್ಗ ಸ್ವತಂತ್ರತೆಯ ದಾರಿ ಎನ್ನುತ್ತದೆ. ಪ್ರಾಚೀನದಿಂದ ಮುಕ್ತವಾದಾಗ ನಮಗೆ ಬಿಡುಗಡೆ. ಈ ಬಿಡುಗಡೆಗೆ ಮನಸ್ಸನ್ನು ಮುಂದಕ್ಕೆ ಚಾಚಬೇಕು. ಹಿಂದಿನದನ್ನು ಕುರಿತು ಚಿಂತಿಸಿ ಗೋಳಾಡುವುದು ಸಾಕು, ಮನಸ್ಸನ್ನು ಧನಾತ್ಮಕವಾಗಿ ಬೆಳೆಸಿ ಆಶಾವಾದದಿಂದ ಮುಂದಿನ ನಡವಳಿಕೆಯನ್ನು ಸರಿಪಡಿಸಿಕೊಳ್ಳಬೇಕು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ನವೆಂಬರ್ 22, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣತ್ರಯೋದಶಿ ಗಂ. 08-50 ನಕ್ಷತ್ರ: ಸ್ವಾತಿ ಗಂ. 23-12 ಯೋಗ: ಸೌಭಾಗ್ಯ ಗಂ. 18-37
ಕರಣ: ವಣಿಜ ಗಂ. 08-50, ವೃಶ್ಚಿಕ ಮಾಸದ 05 ನೇ ದಿನ.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-36 ಸೂರ್ಯಾಸ್ತ: 05-57
ಮುಸ್ಲಿಂ ದಿನಾಂಕ: 26 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ: 1, 4

ಮೇಷ: ಮೇಲಧಿಕಾರಿಗಳು ನಿಮ್ಮೊಂದಿಗಿದ್ದಾರೆ ಎಂಬ ಭರವಸೆಯಿಂದ ಯಾವ ಕೆಲಸವನ್ನು ಮಾಡದಿರಿ. ವೈಯಕ್ತಿಕವಾಗಿ ನಿಯಮ, ನಿಷ್ಠೆಯಿಂದಿರುವುದು ಉತ್ತಮ. ಯಾವುದೇ ವಿಚಾರದಲ್ಲಿಯಾದರೂ ಸಮಾಲೋಚನೆ ಒಳ್ಳೆಯದು.

ವೃಷಭ: ಎದುರಾಗಿರುವ ಸದ್ಯದ ಸಮಸ್ಯೆಗಳು ಪರಿಹಾರ ಕಾಣಲಿವೆ ಹಾಗೂ ಅದರ ಫಲಿತಾಂಶ ಸಂತಸವನ್ನು ತರಲಿದೆ. ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಬದಲಾವಣೆಯಾಗಬಹುದು. ಆತಂಕದ ಸ್ಥಿತಿಯಾದರೂ ಧೈರ್ಯಗೆಡದಿರಿ.

ಮಿಥುನ: ನಿಮ್ಮ ಜೀವನವನ್ನು ಹಿಂದಿರುಗಿ ನೋಡಿದರೆ ನಿಮ್ಮ ಸಾಧನೆಗಳ ಬಗ್ಗೆ ಹೆಮ್ಮೆ ಎನಿಸುವುದು. ನಿಮ್ಮ ಬಯಕೆಗಳು ಸುಲಭವಾಗಿ ಈಡೇರುವುದು. ಮಕ್ಕಳ ಸಂತೋಷ, ಮನೋರಂಜನೆಗಾಗಿ ಖರ್ಚು ಆಗುವುದು.

ಕರ್ಕಾಟಕ: ಹೀಯಾಳಿಸುವವರೇ, ಅನುಮಾನಿಸುತ್ತಿರುವವರೇ ಸಹಾಯ ಕೋರಿ ಬರಲಿದ್ದಾರೆ. ಅಧ್ಯಾತ್ಮಿಕ ವಿಚಾರಗಳತ್ತ ಮನಸ್ಸು ಹೊರಳುವುದು. ಬಡ್ತಿ ಬೇಕೆನಿಸಿದರೆ ಅಧಿಕಾರಿಗಳನ್ನು ಆಕರ್ಷಿಸಬೇಕಾಗುತ್ತದೆ.

ಸಿಂಹ: ಭಾರಿ ಕೆಲಸಕ್ಕೆ ಕೈಹಾಕಿದ ಪರಿಣಾಮದಿಂದ ಈ ದಿನ ನಿಮ್ಮ ಪ್ರತಿಭೆ ಬೆಳಕಿಗೆ ಬರಲಿದೆ. ದಾಂಪತ್ಯದಲ್ಲಿ ಹೊಂದಾಣಿಕೆ ಅಗತ್ಯ ಅನಿಸಲಿದೆ. ಊರಿನ ಅಥವಾ ಸುತ್ತಮುತ್ತಲಿನ ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ.

ಕನ್ಯಾ: ಕೈತಪ್ಪಿ ಹೋದ ಕಾರ್ಯಗಳಿಂದ ಆಗುವ ಲಾಭ ನಷ್ಟದ ಮೌಲ್ಯಮಾಪನ ಮಾಡುತ್ತ ಸುಮ್ಮನೆ ಕೂರುವುದರಲ್ಲಿ ಯಾವುದೇ ಪ್ರಯೋಜನ ಇರುವುದಿಲ್ಲ. ಇಂದಿನ ನಿಮ್ಮ ಪ್ರಯಾಣವನ್ನು ಮುಂದೂಡುವುದು ಉತ್ತಮ.

ತುಲಾ: ಶಿಕ್ಷಣ ಮುಂದುವರಿಸಲು ಬಂಧುಗಳಿಂದ ಸಹಾಯ ದೊರಕುವುದು. ಕೆಲಸದಲ್ಲಿ ಬಡ್ತಿ ಅಥವಾ ಬದಲಾವಣೆ ಸಿಗಲಿದೆ. ಹೊಸ ಉದ್ಯೋಗದ ಬಗ್ಗೆ ಭಯ ಬೇಡ. ಕೆಲಸದಲ್ಲಿ ಧನಾತ್ಮಕ ಬದಲಾವಣೆಯಿಂದಾಗಿ ಸಂತಸ.

ವೃಶ್ಚಿಕ: ವಸ್ತ್ರಾಭರಣ ಖರೀದಿಯಲ್ಲಿ ಎಚ್ಚರವಿರಲಿ, ಮೋಸಹೋಗುವ ಸಂಭವ ಇರುವುದು. ಸೋದರರೊಂದಿಗಿರುವ ವಿರಸ ಕಡಿಮೆ ಮಾಡಿಕೊಳ್ಳುವ ಬಗ್ಗೆ ಪ್ರಯತ್ನವಿರಲಿ. ಪತ್ರಕರ್ತರಿಗೆ ಭಯ ಮೂಡುವ ಪ್ರಸಂಗ ನಡೆಯಬಹುದು.

ಧನು: ಉದಾರ ಮನೋಭಾವದಿಂದ ಇತರರಿಗೆ ಸಹಾಯ ಮಾಡಿದ ಫಲ ನಿಮಗೆ ಅನುಭವಕ್ಕೆ ಬರಲಿದೆ. ಕಾರ್ಯಕ್ಷೇತ್ರದಲ್ಲಿನ ಉಂಟಾದ ಸನ್ನಿವೇಶವನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಕೊಳ್ಳುವುದು ಒಳ್ಳೆಯದು.

ಮಕರ: ರಾಸಾಯನಿಕ ವಸ್ತುಗಳ ವ್ಯಾಪಾರ ವ್ಯವಹಾರಗಳಲ್ಲಿ ಲಾಭ ಕಾಣಲಿದ್ದೀರಿ. ನಿಮ್ಮ ಜೀವನದ ಮುಂದಿನ ದಿನಗಳ ಬಗ್ಗೆ ಚಿಂತನೆ ನಡೆಸಿ. ಹತ್ತಾರು ವರ್ಷಗಳ ಸತತ ಪ್ರಯತ್ನದ ಫಲವಾಗಿ ಕಚೇರಿಯಲ್ಲಿನ ಸ್ಥಾನ ಭದ್ರ..

ಕುಂಭ: ಅನವಶ್ಯಕ ಮಾತಿನಿಂದ ಉದ್ವೇಗ ಉಂಟಾಗುವುದು. ಕುಟುಂಬ ನಿರ್ವಹಣೆಯಲ್ಲಿ ವಿಪರೀತ ಖರ್ಚು ಕಾಣಿಸಲಿದೆ. ಆದರೆ, ಆದಾಯಕ್ಕೆ ಕೊರತೆ ಇರದು. ಠೇವಣಿಯಲ್ಲಿ ಅಥವಾ ಆಸ್ತಿ ರೂಪದಲ್ಲಿ ಹಣ ಬೆಳೆಯಲಿದೆ.

ಮೀನ: ಸೋಮಾರಿತನ ದೂರಾಗಿ ಕೈಹಿಡಿದ ಕಾರ್ಯ ಸಾಧನೆ ಅಂತಿಮ ಹಂತವನ್ನು ತಲುಪಲಿದೆ. ದಂತ ವೈದ್ಯರಿಗೆ ಬೇಡಿಕೆ ಹೆಚ್ಚಾಗುತ್ತದೆ. ಸತ್ಯವಾದ ಸಂಗತಿಗಳು ತಿಳಿಯುವುದರಿಂದ ದುಃಖಗಳು ದೂರಾಗಲಿದೆ.

ಪದಬಂಧ 5146

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಪ್ರಾಯಕ್ಕೆ ಬರುತ್ತಿರುವ ಹಸು (3)
6. ತಾರೆಗಳ ಜಗತ್ತು (5)
7. ರಾಜಕೀಯದಲ್ಲಿ ತೀವ್ರಗಾಮಿಗಳ ಪಕ್ಷ (4)
9. ಆಕಳಲ್ಲಿರುವ ಮರ್ಮ ಗೊತ್ತಾಯಿತೇ? (2)
10. ಗುಣಿಸುವ ಸಂಖ್ಯೆ (3)
12. ಪಠಣ ಮಾಡುವಾಗ ಕಟ್ಟಿದ ಬಾಜಿ (2)
14. ಕರದಲ್ಲಿರುವ ಚಿನ್ನ (4)
16. ವಾದವನ್ನು ಮಂಡಿಸುವ ಕ್ರಮ (5)
18. ಗುಡಿಸಲು ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1. ಮಡಿ ಮಡಿ ಎನ್ನುತ್ತಾ ಅಗಸ ಬಂದಿದ್ದಾನಲ್ಲಾ! (4)
2. ಉಲ್ಟಾ ಆಗಿರುವ ಬಹುಮಾನದ ಬಿಲ್ಲೆ (3)
3. ಭಾವನ ಜೊತೆ ನೋಡಿರುವ ಅರಣ್ಯ (2)
4. ನಡುವಣ ಪ್ರದೇಶ (4)
5. ನಡುವೆ ಕರವಿರುವ ಗ್ರಂಥಭಾಗ (4)
8. ಮನ್ನಿಸುವ ಸ್ವಭಾವ (4)
9. ಅನಿರೀಕ್ಷಿತ ಘಟನೆ (4)
11. ಹರಿಯ ಬಳಿ ಇರುವ ಅಗಲವಾದ ತಟ್ಟೆ (4)
12. ಈಕೆ ಬೇರೆಯವರ ಹೆಂಡತಿ (4)
13. ಒಬ್ಬರಿಗೊಬ್ಬರಿಗೆ ಸಂಬಂಧಿಸಿದ್ದು (4)
15. ಸರದೊಡನಿರುವ ಸಾಮಾನು (3)
17. ಆಶ್ರಯ ಸ್ಥಾನವಿಲ್ಲಿ ಉಲ್ಟಾ ಕಾಣುತ್ತಿದೆ (2)



5145ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4. ಪ್ರವರ್ತಕ 5. ಕೋರಿಕೆ
7. ಮಟ್ಟಸ 9. ರಮಣ
10. ಮಾವುತ 11. ತವಂಧಾ
12. ಮಧುರ 14. ಪ್ರಾಕಾರ
15. ಆಲಾಪನೆ

ಮೇಲಿಂದ ಕೆಳಕ್ಕೆ:
1. ನವಸುಮ 2. ಕಾಕ
3. ಪರಿಮಾಣ 6. ತರತಮ
8. ಸಮಾಧಾನ 11. ತರಕಾರಿ
13. ರಕ್ತಾಪತ್ರ 15. ಆಯು

ಸುಡೊಕು 5532

6		4	9		7			8
					6		2	
	7	8	2			4		6
7					8		6	
	8		4			7	3	5
		5		7				
4	9		3	8		6		1
	6					5		
8		7			4			3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5531 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಕಚೇರಿ ಬಾಡಿಗೆ ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಬೆಂಗಳೂರಿನಲ್ಲಿ ಕಚೇರಿ ಬಾಡಿಗೆ ಪ್ರಮಾಣವು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇಕಡ 12.1ರಷ್ಟು ಹೆಚ್ಚಾಗಿದ್ದು, ಇದು ಏಷ್ಯಾ–ಪ್ಯಾಸಿಫಿಕ್ ವಲಯದಲ್ಲಿ ಅತಿಹೆಚ್ಚು ಎಂದು ನೈಟ್ ಫ್ರ್ಯಾಂಕ್ ಇಂಡಿಯಾ ವರದಿಯೊಂದು ಹೇಳಿದೆ.

ವರದಿಯಲ್ಲಿ ಮುಂಬೈ ಮೂರನೆಯ ಸ್ಥಾನದಲ್ಲಿದೆ (ಬಾಡಿಗೆ ಶೇ 7ರಷ್ಟು ಹೆಚ್ಚಳ), ದೆಹಲಿ–ಎನ್‌ಸಿಆರ್ ಪ್ರದೇಶವು 14ನೆಯ ಸ್ಥಾನದಲ್ಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಕೋಕ	11000-26000	ಹೊಸತು	45309-46599
ಬಂಟ್ವಾಳ		ಹೊಸತು	32000-38000	ರಾಶಿ	44899-47759
ಕೋಕ	12500-25000	**ಕುಮಟ**		**ಸಿದ್ದಾಪುರ**	
ಹಳತು	48000-55000	ಚಿಪ್ಪು	24509-32999	ಬಿಳಿಗೋಟು	27199-33099
ಚಿತ್ರದುರ್ಗ		ಕೋಕ	16099-28089	ಚಾಲಿ	35899-38699
ಆಪಿ	45400-45800	ಫ್ಯಾಕ್ಟರಿ	11509-20299	ಕೋಕ	26669-31899
ಬೆಟ್ಟೆ	35839-36279	ಹಳೆಚಾಲಿ	35609-40399	ಕೆಂಪುಗೋಟು	31289-31289
ಕೆಂಪುಗೋಟು	29119-29559	ಹೊಸಚಾಲಿ	28089-32799	ರಾಶಿ	44299-46109
ರಾಶಿ	44929-45369	**ಸಾಗರ**		ತಟ್ಟಿಬೆಟ್ಟೆ	38609-43249
ಕಾರ್ಕಳ		ಬಿಳಿಗೋಟು	10199-30910	**ಯಲ್ಲಾಪುರ**	
ಹೊಸತು	25000-37500	ಚಾಲಿ	30299-37009	ಬಿಳಿಗೋಟು	26612-34169
ಹಳತು	40000-55500	ಕೋಕ	18129-31709	ಚಾಲಿ	33500-40090
ಬೆಳ್ತಂಗಡಿ		ಕೆಂಪುಗೋಟು	22110-35499	ಕೋಕ	16012-28109
ಕೋಕ	24000-26000	ರಾಶಿ	34589-47299	ಕೆಂಪುಗೋಟು	27019-33775
ಹೊಸತು	45000-47000	**ಶಿವಮೊಗ್ಗ**		ರಾಶಿ	39333-49299
ಹಳತು	40000-56000	ಬೆಟ್ಟೆ	48699-51440	ತಟ್ಟಿಬೆಟ್ಟೆ	36038-43819
ಪುತ್ತೂರು		ಗೊರಬಲು	17000-35499		

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,307
ಇಂದಿನ ಅಂತ್ಯ	18,160
▼	147
ದಿನದ ಕನಿಷ್ಠ	18,133

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹545

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹1335 (1335)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೋಲಿನ್	₹950 (950)

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

8ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಮರಿಲಿಂಗಯ್ಯ
ಜನನ: 08-02-1942 ಮರಣ: 22-11-2014
ಸದಾ ನಿಮ್ಮ ನೆನಪಿನಲ್ಲಿರುವ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಹಣ ಕೊಟ್ಟು ಬರೆಸಿದ ರಿವ್ಯೂಗಳ ಬಗ್ಗೆ ಗ್ರಾಹಕರಿಗೆ ನೀಡಬೇಕು ಮಾಹಿತಿ

ಇ–ವಾಣಿಜ್ಯ ವೇದಿಕೆ: ರಿವ್ಯೂಗೆ ನಿಯಮ

ನವದೆಹಲಿ (ಪಿಟಿಐ): ಅಮೆಜಾನ್, ಫ್ಲಿಪ್‌ಕಾರ್ಟ್‌ನಂತಹ ಇ–ವಾಣಿಜ್ಯ ವೇದಿಕೆಗಳು ತಮ್ಮ ಮೂಲಕ ಮಾರಾಟವಾಗುವ ಉತ್ಪನ್ನಗಳಿಗೆ ಹಣ ಕೊಟ್ಟು ಬರೆಸಿರುವ ವಿಮರ್ಶೆಗಳನ್ನು (ರಿವ್ಯೂ) ಗ್ರಾಹಕರಿಗೆ ಸ್ಪಷ್ಟವಾಗಿ, ಸ್ವಯಂಪ್ರೇರಿತವಾಗಿ ತಿಳಿಸಬೇಕಿದೆ.

ನಕಲಿ ರಿವ್ಯೂಗಳ ಹಾವಳಿಯನ್ನು ತಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರವು ಹೊಸ ನಿಯಮಗಳನ್ನು ರೂಪಿಸಿದೆ. ಈ ನಿಯಮಗಳು ಶುಕ್ರವಾರದಿಂದ ಜಾರಿಗೆ ಬರಲಿವೆ. ನಿಯಮಗಳನ್ನು ಪಾಲಿಸುವುದು ಈಗ ಐಚ್ಛಿಕವಾಗಿರಲಿದೆ. ಆದರೆ, ಆನ್‌ಲೈನ್ ವೇದಿಕೆಗಳಲ್ಲಿ ನಕಲಿ ರಿವ್ಯೂ ಹಾವಳಿ ಮುಂದುವರಿದರೆ, ನಿಯಮ ಪಾಲನೆಯನ್ನು ಕಡ್ಡಾಯಗೊಳಿಸುವ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಲಿದೆ.

ಭಾರತೀಯ ಗುಣಮಟ್ಟ ಮಾಪನ ಸಂಸ್ಥೆಯು (ಬಿಐಎಸ್) ಹೊಸ ನಿಯಮಗಳನ್ನು ರೂಪಿಸಿದೆ ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಇ–ವಾಣಿಜ್ಯ ವೇದಿಕೆಗಳು ಹಾಗೂ ಇತರ ಸಂಸ್ಥೆಗಳು ಈ ಮಾನದಂಡಗಳನ್ನು ಅನುಸರಿಸುತ್ತಿವೆಯೇ ಎಂಬುದನ್ನು ಪರಿಶೀಲಿಸಲು ವ್ಯವಸ್ಥೆಯೊಂದನ್ನು 15 ದಿನಗಳಲ್ಲಿ ರೂಪಿಸಲಾಗುವುದು ಎಂದಿದ್ದಾರೆ.

ಇ–ವಾಣಿಜ್ಯ ವೇದಿಕೆಗಳು ತಾವು ಈ ಮಾನದಂಡಗಳನ್ನು ಪಾಲಿಸುತ್ತಿರುವ ಬಗ್ಗೆ ಪ್ರಮಾಣಪತ್ರ ಬೇಕು ಎಂದು ಬಿಐಎಸ್‌ಗೆ ಅರ್ಜಿ ಸಲ್ಲಿಸಬಹುದು.

'ನಾವು ಉದ್ಯಮವನ್ನು ಹಾಳುಮಾಡಲು ಬಯಸುತ್ತಿಲ್ಲ. ಆದರೆ, ಈ ನಿಯಮಗಳನ್ನು ಕಂಪನಿಗಳು ಪಾಲಿಸುತ್ತವೆಯೇ ಎಂಬುದನ್ನು ಮೊದಲು ಪರಿಶೀಲಿಸುತ್ತೇವೆ. ಹಾವಳಿ ಮುಂದುವರಿದಲ್ಲಿ ಭವಿಷ್ಯದಲ್ಲಿ ಈ ನಿಯಮಗಳ ಪಾಲನೆ ಕಡ್ಡಾಯಗೊಳಿಸಬಹುದು' ಎಂದು ತಿಳಿಸಿದ್ದಾರೆ.

ಬಿಐಎಸ್ ಸಂಸ್ಥೆಯು ರಿವ್ಯೂಗಳನ್ನು 'ಬಯಸಿ ಪಡೆದಿರುವ' ಹಾಗೂ 'ಬಯಸದೇ ಬಂದಿರುವ' ಎಂದು ವರ್ಗೀಕರಿಸಿದೆ. 'ರಿವ್ಯೂಗಳು ನಿಖರವಾಗಿರಬೇಕು, ತಪ್ಪುದಾರಿಗೆ ಎಳೆಯುವಂತಿರಬಾರದು. ರಿವ್ಯೂ ಬರೆದಿರುವವರ ಗುರುತನ್ನು ಅವರ ಅನುಮತಿಯಿಲ್ಲದೆ ಬಹಿರಂಗಪಡಿಸಬಾರದು. ರಿವ್ಯೂಗಳ ಸಂಗ್ರಹವು ನಿಷ್ಪಕ್ಷಪಾತವಾಗಿ ಇರಬೇಕು' ಎಂದು ಸಿಂಗ್ ಹೇಳಿದ್ದಾರೆ.

ರಿವ್ಯೂ ಖರೀದಿಸಿದ್ದಾದರೆ, ರಿವ್ಯೂ ಬರೆದವನಿಗೆ ಹಣ ಅಥವಾ ಬಹುಮಾನ ನೀಡುವಂತಿದ್ದರೆ ಅದನ್ನು ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ.

ಯಾರಿಗೆ ಈ ನಿಯಮ?

- ಆನ್‌ಲೈನ್ ವೇದಿಕೆಗಳಲ್ಲಿ ಗ್ರಾಹಕರ ರಿವ್ಯೂ ಪ್ರಕಟಿಸುವ ಯಾವುದೇ ಸಂಸ್ಥೆಗೆ
- ಉತ್ಪನ್ನಗಳು ಹಾಗೂ ಸೇವೆಗಳ ಪೂರೈಕೆದಾರರಾಗಿದ್ದು, ತಮ್ಮದೇ ಗ್ರಾಹಕರಿಂದ ರಿವ್ಯೂ ಪಡೆದುಕೊಳ್ಳುವವರಿಗೆ
- ಪೂರೈಕೆದಾರರಿಂದ ಗುತ್ತಿಗೆ ಪಡೆದಿರುವ ತೃತೀಯ ಸಂಸ್ಥೆ ಅಥವಾ ಸ್ವತಂತ್ರವಾದ ತೃತೀಯ ಸಂಸ್ಥೆ

'ನಿಯಮ ಪಾಲಿಸುವ ಭರವಸೆ'

ಜೊಮಾಟೊ, ಸ್ವಿಗ್ಗಿ, ರಿಲಯನ್ಸ್ ರಿಟೇಲ್, ಟಾಟಾ ಸನ್ಸ್, ಅಮೆಜಾನ್, ಫ್ಲಿಪ್‌ಕಾರ್ಟ್, ಗೂಗಲ್, ಮೆಟಾ, ಮೀಶೊ, ಬ್ಲಿಂಕ್‌ಇಟ್, ಜೆಪ್ಟೊ ಕಂಪನಿಗಳು ತಾವು ನಿಯಮಗಳನ್ನು ಪಾಲಿಸುವುದಾಗಿ ಭರವಸೆ ನೀಡಿವೆ ಎಂದು ಸಿಂಗ್ ಹೇಳಿದ್ದಾರೆ.

ಧರ್ಮಾದಾಯ ಸಂಸ್ಥೆ ನೋಂದಣಿ ಅವಧಿ ವಿಸ್ತರಣೆ

ಬೆಂಗಳೂರು: ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 12ಎಬಿ ಅಡಿಯಲ್ಲಿ ಮಾರ್ಚ್ 31ಕ್ಕೂ ಮೊದಲು ಹೆಸರು ನೋಂದಾಯಿಸಿಕೊಳ್ಳಲು ಆಗದಿದ್ದ ಧರ್ಮಾದಾಯ ಹಾಗೂ ದತ್ತಿ ಸಂಸ್ಥೆಗಳಿಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಶುಕ್ರವಾರದವರೆಗೆ (ನವೆಂಬರ್ 25, 2022) ಅವಕಾಶ ಕಲ್ಪಿಸಲಾಗಿದೆ.

ಆದಾಯ ತೆರಿಗೆ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಅದಾಗಲೇ ನೋಂದಾಯಿಸಿಕೊಂಡಿದ್ದ, ಅನುಮೋದನೆ ಪಡೆದಿದ್ದ ಧರ್ಮಾದಾಯ ಹಾಗೂ ದತ್ತಿ ಸಂಸ್ಥೆಗಳು ಎಲೆಕ್ಟ್ರಾನಿಕ್ ರೂಪದ ಅರ್ಜಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು ಎಂದು 2020 ಮತ್ತು 2021ರ ಹಣಕಾಸು ಕಾಯ್ದೆಯು ಹೇಳಿದೆ. ಸಂಸ್ಥೆಗಳು ಅರ್ಜಿ ನಮೂನೆ 10ಎ ಬಳಸಿ ಈ ಕೆಲಸ ಮಾಡಬೇಕು ಎಂದು ಕಾಯ್ದೆ ಹೇಳಿದೆ. ಈ ಪ್ರಕ್ರಿಯೆಯು ಮಾರ್ಚ್ 31ಕ್ಕೆ ಮೊದಲು ಪೂರ್ಣಗೊಳ್ಳಬೇಕಿತ್ತು.

ಜಾಗತಿಕ ಮಾರುಕಟ್ಟೆ ದರಕ್ಕಿಂತಲೂ ಕಡಿಮೆಗೆ ಭಾರತಕ್ಕೆ ಪೂರೈಕೆ

ಭಾರತಕ್ಕೆ ರಸಗೊಬ್ಬರ: ಮುಂಚೂಣಿಗೆ ರಷ್ಯಾ

ಮುಂಬೈ (ರಾಯಿಟರ್ಸ್): ಭಾರತಕ್ಕೆ ರಸಗೊಬ್ಬರ ಪೂರೈಸುವ ದೇಶಗಳ ಸಾಲಿನಲ್ಲಿ ರಷ್ಯಾವು ಇದೇ ಮೊದಲ ಬಾರಿಗೆ ಪ್ರಥಮ ಸ್ಥಾನ ಪಡೆದುಕೊಂಡಿದೆ ಎಂದು ಸರ್ಕಾರ ಮತ್ತು ಉದ್ಯಮ ವಲಯದ ಮೂಲಗಳು ಹೇಳಿವೆ. ಜಾಗತಿಕ ಮಾರುಕಟ್ಟೆ ದರಕ್ಕಿಂತಲೂ ಕಡಿಮೆಗೆ ರಷ್ಯಾದ ಪೂರೈಕೆದಾರರು ಭಾರತಕ್ಕೆ ರಸಗೊಬ್ಬರ ಮಾರಾಟ ಮಾಡಿದ್ದಾರೆ.

2022–23ನೇ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಭಾರತವು ರಷ್ಯಾದಿಂದ 21.5 ಲಕ್ಷ ಟನ್ ರಸಗೊಬ್ಬರ ಆಮದು ಮಾಡಿಕೊಂಡಿದೆ. 2021–22ರ ಒಟ್ಟು ಹಣಕಾಸು ವರ್ಷಕ್ಕೆ ಹೋಲಿಸಿದರೆ ಆಮದಿನಲ್ಲಿ ಶೇಕಡ 371ರಷ್ಟು ಏರಿಕೆ ಕಂಡುಬಂದಿದೆ ಎಂದು ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಿಂದಿನ ಹಣಕಾಸು ವರ್ಷದಲ್ಲಿ ಭಾರತವು 12.6 ಲಕ್ಷ ಟನ್ ರಸಗೊಬ್ಬರವನ್ನು ರಷ್ಯಾದಿಂದ ಆಮದು ಮಾಡಿಕೊಂಡಿತ್ತು. ಮೌಲ್ಯದ ಲೆಕ್ಕದಲ್ಲಿ ಶೇ 765ರಷ್ಟು ಹೆಚ್ಚಾಗಿದ್ದು, ₹ 10,309 ಕೋಟಿಗೆ ತಲುಪಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ರಷ್ಯಾ–ಉಕ್ರೇನ್ ಸಮರ ಆರಂಭವಾದ ಬಳಿಕ ಭಾರತವು ನ್ಯಾಯಸಮ್ಮತ ಬೆಲೆಗೆ ರಸಗೊಬ್ಬರ ಖರೀದಿಸಲು ಕಷ್ಟಪಡುವಂತಾಯಿತು. ಈ ಸಂದರ್ಭದಲ್ಲಿ ರಷ್ಯಾದ ಪೂರೈಕೆದಾರರು ನ್ಯಾಯಸಮ್ಮತ ಬೆಲೆಗೆ ರಸಗೊಬ್ಬರ ಪೂರೈಕೆ ಮಾಡಲು ಆರಂಭಿಸಿದರು. ಇದು ಸಂಭಾವ್ಯ ಕೊರತೆ ತಪ್ಪಿಸಲು ಭಾರತಕ್ಕೆ ನೆರವಾಯಿತು ಎಂದು ಅವರು ಹೇಳಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ದೇಶವು ಸಮರ ಸಾರಿದ್ದರಿಂದಾಗಿ ರಷ್ಯಾ ಮತ್ತು ಬೆಲಾರುಸ್‌ನಿಂದ ರಸಗೊಬ್ಬರ ಆಮದು ಮಾಡಿಕೊಳ್ಳುವುದಕ್ಕೆ ಪಾಶ್ಚಾತ್ಯ ದೇಶಗಳು ನಿರ್ಬಂಧ ಹೇರಿದವು. ಆ ಬಳಿಕ ಜಾಗತಿಕ ಮಾರುಕಟ್ಟೆಯಲ್ಲಿ ರಸಗೊಬ್ಬರ ಬೆಲೆ ಹೆಚ್ಚಾಯಿತು.

ಭಾರತವು ಕೆಲವೊಮ್ಮೆ ಪ್ರತಿ ಟನ್‌ಗೆ ಜಾಗತಿಕ ಬೆಲೆಗಿಂತ 70 ಡಾಲರ್‌ಗೂ ಹೆಚ್ಚಿನ ರಿಯಾಯಿತಿಗೆ ರಸಗೊಬ್ಬರ ಪಡೆದುಕೊಳ್ಳುತ್ತಿದೆ. ರಷ್ಯಾ ದೇಶವು ಅತಿದೊಡ್ಡ ಖರೀದಿದಾರ ದೇಶವನ್ನು (ಭಾರತ) ಪಡೆದುಕೊಂಡಿದ್ದು, ಅದು ಯುರೋಪ್‌ನ ಖರೀದಿದಾರರ ಸ್ಥಾನವನ್ನು ತುಂಬಬಲ್ಲದು ಎಂದು ಉದ್ಯಮ ವಲಯದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಭಾರತವು ಜೂನ್‌ನಲ್ಲಿ ಪ್ರತಿ ಟನ್ ಡಿಎಪಿಯನ್ನು 920–925 ಡಾಲರ್‌ಗೆ ರಷ್ಯಾದಿಂದ ಖರೀದಿಸಿದೆ. ಇದೇ ವೇಳೆ ಏಷ್ಯಾದ ಇತರ ದೇಶಗಳು ಪ್ರತಿ ಟನ್‌ಗೆ 1 ಸಾವಿರ ಡಾಲರ್‌ಗೂ ಹೆಚ್ಚಿನ ಬೆಲೆ ಪಾವತಿಸಿವೆ ಎಂದು ಉದ್ಯಮದ ಅಧಿಕಾರಿಗಳು ಹೇಳಿದ್ದಾರೆ.

ಭಾರತವು 2021–22ರಲ್ಲಿ ಆಮದು ಮಾಡಿಕೊಂಡ ರಸಗೊಬ್ಬರದಲ್ಲಿ ರಷ್ಯಾದ ಪಾಲು ಶೇ 6ರಷ್ಟು ಇದ್ದರೆ ಚೀನಾ ಶೇ 24ರಷ್ಟು ಪಾಲು ಹೊಂದಿ, ಮೊದಲ ಸ್ಥಾನದಲ್ಲಿತ್ತು. 2022–23ರ ಮೊದಲಾರ್ಧದಲ್ಲಿಯೇ ರಷ್ಯಾದ ರಫ್ತು ಪ್ರಮಾಣವು ಶೇ 21ಕ್ಕೆ ಏರಿಕೆ ಆಗಿದ್ದು, ಚೀನಾವನ್ನು ಹಿಂದಿಕ್ಕಿದೆ.

ಭಾರತಕ್ಕೆ ಆಮದು (2022–23ರ ಮೊದಲಾರ್ಧ) (ಲಕ್ಷ ಟನ್)

ರಷ್ಯಾ	21.5
ಚೀನಾ	17.8

ಒಟ್ಟು ಆಮದು (2022–23ರ ಮೊದಲಾರ್ಧ)

1.02 ಕೋಟಿ ಟನ್ ಆಮದು ಪ್ರಮಾಣ

₹60,532 ಕೋಟಿ ಆಮದು ಮೌಲ್ಯ

ಮುಖ್ಯಾಂಶಗಳು

- ಭಾರತಕ್ಕೆ ರಫ್ತಿನಲ್ಲಿ ಚೀನಾವನ್ನು ಹಿಂದಿಕ್ಕಿದ ರಷ್ಯಾ
- ಏಷ್ಯಾದ ಇತರೆ ದೇಶಗಳಿಗಿಂತ ಭಾರತಕ್ಕೆ ಕಡಿಮೆ ಬೆಲೆಗೆ ಪೂರೈಕೆ
- ಜೋರ್ಡಾನ್, ಯುಎಇ, ಈಜಿಪ್ಟ್‌ನಿಂದಲೂ ಭಾರತಕ್ಕೆ ರಫ್ತು ಇಳಿಕೆ

ಮುಂಬೈ ಧಾರಣೆ

ಶೇಂಗಾ

21–11–2022

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1540)
ಒಂದು ವಾರದ ಡೆಲಿವರಿ	1520 (1535)
ಸೋಯಾ ಕಚ್ಚಾ	1270 (1310)
ಪಾಮ್ ವಾರದ ಡೆಲಿವರಿ	945 (948)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,250 (52,425)
ಬೆಳ್ಳಿ ಕೆ.ಜಿ 60,500 (61,000)

ಆವರಣದಲ್ಲಿ ಶನಿವಾರದ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹137.50
ಗುಡ್ ಲಾಟ್	₹130.50

(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1000-1800

ಏಕಸ್ ಇನ್ನೊವೇಷನ್ ಸೆಂಟರ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಆಟಿಕೆ ಸಾಮಾನುಗಳು ಹಾಗೂ ಗ್ರಾಹಕರ ಬಳಕೆಯ ಉತ್ಪನ್ನಗಳ ಹೊಸ ವಿನ್ಯಾಸ ರೂಪಿಸಲು ಕೆ.ಎಲ್.ಇ ತಾಂತ್ರಿಕ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಏಕಸ್ ಕಂಪನಿಯು ಸೋಮವಾರ ಹುಬ್ಬಳ್ಳಿಯ ಬಿವಿಬಿ ಕಾಲೇಜಿನ ಮೆಕ್ಯಾನಿಕ್ ವಿಭಾಗದಲ್ಲಿ ಏಕಸ್ ಇನ್ನೊವೇಷನ್ ಸೆಂಟರ್ ಸ್ಥಾಪಿಸಿದೆ.

'ಮೆಕ್ಯಾನಿಕಲ್ ಎಂಜಿನಿಯರಿಂಗ್‌ನ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಈ ಕೇಂದ್ರದಲ್ಲಿ 6 ತಿಂಗಳು ತರಬೇತಿ (ಇಂಟರ್ನ್‌ಷಿಪ್) ನೀಡಲು ಎರಡೂ ಸಂಸ್ಥೆಗಳ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಬೇರೆ ವಿಭಾಗದ ಹಾಗೂ ಬೇರೆ ಕಾಲೇಜಿನ ಆಸಕ್ತ ವಿದ್ಯಾರ್ಥಿಗಳೂ ಇಲ್ಲಿ ತರಬೇತಿ ಪಡೆಯಬಹುದು' ಎಂದು ವಿಶ್ವವಿದ್ಯಾಲಯದ ಕುಲಪತಿ ಅಶೋಕ ಶೆಟ್ಟರ್ ಹಾಗೂ ಏಕಸ್ ಕಂಪನಿಯ ಅಧ್ಯಕ್ಷ ಅರವಿಂದ ಮೆಳ್ಳಿಗೇರಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಆಟಿಕೆ ಸಾಮಾನು ತಯಾರಿಕೆಯಲ್ಲಿ ಚೀನಾ ಕಂಪನಿಗಳ ಪಾರಮ್ಯ ಇದೆ. ನಮ್ಮಲ್ಲೂ ಹೊಸ ವಿನ್ಯಾಸಗಳ ಆಟಿಕೆ ತಯಾರಿಸಿದರೆ ಚೀನಾ ಕಂಪನಿಗಳಿಗೆ ಪೈಪೋಟಿ ನೀಡಬಹುದು. ಈ ನಿಟ್ಟಿನಲ್ಲಿ ಏಕಸ್ ಇನ್ನೊವೇಷನ್ ಸೆಂಟರ್ ಸಹಕಾರಿಯಾಗಲಿದೆ ಎಂದು ಅರವಿಂದ ಮೆಳ್ಳಿಗೇರಿ ಹೇಳಿದರು.

ಸಂಕ್ಷಿಪ್ತ ಸುದ್ದಿ

ರಾಜೀವ್ ಹಂತಕರ ಬಿಡುಗಡೆ: ಅರ್ಜಿ ಸಲ್ಲಿಸಲಿದೆ ಕಾಂಗ್ರೆಸ್

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿಯನ್ನು ಹತ್ಯೆ ಮಾಡಿದ ಆರು ಹಂತಕರ ಅವಧಿ ಪೂರ್ವ ಬಿಡುಗಡೆ ಮಾಡಿದ ಸುಪ್ರೀಂ ಕೋರ್ಟ್ ತೀರ್ಪನ್ನು ಮರುಪರಿಶೀಲಿಸುವಂತೆ ಕಾಂಗ್ರೆಸ್ ಕೋರಲಿದೆ ಎಂದು ಪಕ್ಷದ ಹಿರಿಯ ನಾಯಕ ಮತ್ತು ವಕೀಲ ಅಭಿಷೇಕ್ ಮನು ಸಿಂಘ್ವಿ ತಿಳಿಸಿದರು.

ಕೇಂದ್ರ ಸರ್ಕಾರ ಸಲ್ಲಿಸಿರುವ ಮರು ಪರಿಶೀಲನಾ ಅರ್ಜಿಯಲ್ಲಿ ಮಧ್ಯ ಪ್ರವೇಶಿಸಬೇಕಾ ಅಥವಾ ಬೇರೆ ಯಾವ ವಿಧಾನ ಅನುಸರಿಸಬೇಕು ಎಂಬುದರ ಕುರಿತು ಸದ್ಯದಲ್ಲಿಯೇ ಪಕ್ಷ ನಿರ್ಧರಿಸಲಿದೆ ಎಂದು ಹೇಳಿದರು.

ಸುಪ್ರೀಂ ಕೋರ್ಟ್ ತೀರ್ಪನ್ನು ಮರು ಪರಿಶೀಲಿಸಲು ಪಕ್ಷ ತಾತ್ವಿಕವಾಗಿ ನಿರ್ಧರಿಸಿದೆ ಎಂದು ತಿಳಿಸಿದರು. ಕಾಂಗ್ರೆಸ್‌ನಿಂದ ವ್ಯಾಪಕ ಟೀಕೆ ವ್ಯಕ್ತವಾದ ಕಾರಣ, ಕೇಂದ್ರ ಸರ್ಕಾರ ಕಳೆದ ವಾರ ತೀರ್ಪನ್ನು ಮರುಪರಿಶೀಲಿಸುವಂತೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಡೆಪ್ಯುಟಿ ಹೈಕಮಿಷನರ್ ಆಗಿ ಚಂದ್ರು ಅಯ್ಯರ್

ಬೆಂಗಳೂರು: ಚಂದ್ರು ಅಯ್ಯರ್ ಅವರನ್ನು ಕರ್ನಾಟಕ ಮತ್ತು ಕೇರಳದ ಬ್ರಿಟಿಷ್ ಡೆಪ್ಯುಟಿ ಹೈಕಮಿಷನರ್ ಹಾಗೂ ದಕ್ಷಿಣ ಏಷ್ಯಾಕ್ಕೆ ಬ್ರಿಟನ್ನಿನ ಡೆಪ್ಯುಟಿ ಟ್ರೇಡ್ ಕಮಿಷನರ್ (ಹೂಡಿಕೆ) ಆಗಿ ನೇಮಕ ಮಾಡಲಾಗಿದೆ.



ಚಂದ್ರು

ಕರ್ನಾಟಕ ಮತ್ತು ಕೇರಳ ರಾಜ್ಯಗಳ ಜೊತೆ ಬ್ರಿಟನ್ನಿನ ಸಂಬಂಧ ಹೆಚ್ಚಿಸುವುದು, ಈ ರಾಜ್ಯಗಳ ಜೊತೆ ವಾಣಿಜ್ಯೋದ್ಯಮಿಗಳ ಹಾಗೂ ಸಾರ್ವಜನಿಕರ ಒಡನಾಟ ಹೆಚ್ಚಿಸುವುದು ಅವರ ಹೊಣೆಗಾರಿಕೆ ಆಗಿರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಲ್ಲದೆ, ಭಾರತದಿಂದ ಆಗುವ ವಿದೇಶಿ ನೇರ ಬಂಡವಾಳ ಹೂಡಿಕೆಗಳು ಬ್ರಿಟನ್ ಕಡೆ ಸಾಗುವಂತೆ ಮಾಡುವ ಜವಾಬ್ದಾರಿಯೂ ಅವರ ಮೇಲೆ ಇರಲಿದೆ.

ಹಾಲು ದರ: ಹೊರೆಯಾಗದಂತೆ ತೀರ್ಮಾನಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಹಾಲು ಮತ್ತು ಮೊಸರಿನ ದರ ಹೆಚ್ಚಳದ ವಿಚಾರವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಕರೆದಿದ್ದ ಕೆಎಂಎಫ್ ಮತ್ತು ಅಧಿಕಾರಿಗಳ ಸಭೆಯಲ್ಲಿ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ರೈತರಿಗೆ ಸಮಸ್ಯೆ ಆಗಬಾರದು ಮತ್ತು ಗ್ರಾಹಕರಿಗೆ ಹೊರೆಯೂ ಆಗಬಾರದು, ಸಂಸ್ಥೆಯು ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಒಂದು ನಿರ್ಣಯ ತೆಗೆದುಕೊಳ್ಳುವಂತೆ ಕೆಎಂಎಫ್‌ಗೆ ಸೂತ್ರವನ್ನು ನೀಡಿದ್ದೇನೆ' ಎಂದರು.

'ಇದಕ್ಕೆ ಕೆಎಂಎಫ್ ಎರಡು ದಿನಗಳ ಸಮಯ ಕೇಳಿದೆ. ನಾನು ನೀಡಿದ ಸೂತ್ರಕ್ಕೆ ಅನುಗುಣವಾಗಿ ನಿರ್ಣಯ ತೆಗೆದುಕೊಂಡು ಬರಲಿ, ಆ ಬಳಿಕ ಪರಿಶೀಲನೆ ನಡೆಸುತ್ತೇನೆ' ಎಂದರು.

'ಹಾಲಿನ ದರ, ಉತ್ಪಾದನಾ ವೆಚ್ಚದ ಬಗ್ಗೆಯೂ ಸಮಗ್ರ ಮಾಹಿತಿ ಪಡೆದುಕೊಂಡಿದ್ದೇನೆ. ಆದಾಯದಲ್ಲೂ ಸೋರಿಕೆ ಆಗುತ್ತಿದ್ದು, ಅದನ್ನು ತಡೆಯಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ವಿವರವನ್ನೂ ಪಡೆದಿದ್ದೇನೆ. ಲೀಟರ್‌ಗೆ ₹3 ಹೆಚ್ಚಿಸಬೇಕು ಎಂದು ಈ ಹಿಂದೆ ಕೈಗೊಂಡಿದ್ದ ತೀರ್ಮಾನ ಕಾರ್ಯಗತಗೊಳಿಸುವುದು ಬೇಡ ಎಂದಿದ್ದೇನೆ' ಎಂದು ಬೊಮ್ಮಾಯಿ ಹೇಳಿದರು.

'ಕೆಎಂಎಫ್ ಕೂಡ ಸರ್ಕಾರದ ಒಂದು ಅಂಗವಾಗಿದ್ದು, ರೈತರಿಗೆ ಪ್ರೋತ್ಸಾಹ ಧನ, ಶಾಲಾ ಮಕ್ಕಳಿಗೆ ಹಾಲು ನೀಡಲಾಗುತ್ತಿದೆ. ಗ್ರಾಹಕರ ಹಾಗೂ ರೈತರ ಹಿತಚಿಂತನೆ ಮಾಡುವ ಕರ್ತವ್ಯ ಸರ್ಕಾರದ್ದಾಗಿದ್ದು, ಕೆಎಂಎಫ್‌ಗೆ ಮಾರ್ಗದರ್ಶನ ನೀಡಲಾಗಿದೆ. ಹಾಲಿನ ದರ ಕಾಲಕಾಲಕ್ಕೆ ಬದಲಾವಣೆಯಾಗುತ್ತದೆ. ಈ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳೂ ಸ್ಪರ್ಧೆಯಲ್ಲಿವೆ. ಈ ಎಲ್ಲ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳಬೇಕೆಂದು ಸೂಚನೆ ನೀಡಿದ್ದೇನೆ' ಎಂದರು. ಸಭೆಯಲ್ಲಿ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಐಎಸ್‌ಎನ್ ಪ್ರಸಾದ್, ಇತರ ಹಿರಿಯ ಅಧಿಕಾರಿಗಳೂ ಸಭೆಯಲ್ಲಿದ್ದರು.

ಅಗತ್ಯ ಔಷಧಗಳ ಪಟ್ಟಿಗೆ ಕೊರೊನರಿ ಸ್ಟೆಂಟ್ ಸೇರ್ಪಡೆ: ಸಚಿವಾಲಯ

ನವದೆಹಲಿ (ಪಿಟಿಐ): 2022ನೇ ಸಾಲಿನ ಅಗತ್ಯ ಔಷಧಗಳ ಪಟ್ಟಿಗೆ ಪರಿಧಮನಿ (ಕೊರೊನರಿ) ಸ್ಟೆಂಟ್‌ಗಳನ್ನು ಸೇರಿಸಲು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ಸೂಚನೆ ನೀಡಿದೆ.

ಈ ಮೂಲಕ ಕ್ಯಾನ್ಸರ್ ವಿರೋಧಿ ಔಷಧ, ಪ್ರತಿಜೀವಕ ಮತ್ತು ಲಸಿಕೆಗಳನ್ನು ಸೇರಿದಂತೆ ಸೆ.13ರಂದು ಬಿಡುಗಡೆಯಾದ ಅಗತ್ಯ ಔಷಧಗಳ ರಾಷ್ಟ್ರೀಯ ಪಟ್ಟಿಗೆ 34 ಹೊಸ ಸೇರ್ಪಡೆ ಆಗಿದ್ದು, ಒಟ್ಟು 384 ಔಷಧಗಳು ಸೇರಿದಂತಾಗಿದೆ.

ಮೆಟ್ಯಾಲಿಕ್ ಡಿಇಎಸ್ ಮತ್ತು ಬಯೋರೆಸೋರ್ಬಬಲ್ ನಾಳಿಯ ಸ್ಕಾಫೋಲ್ಡ್ (ವಿಬಿಎಸ್) ಅಥವಾ ಬಯೋಡಿಗ್ರೇಡಬಲ್ ಸ್ಟೆಂಟ್‌ಗಳನ್ನು ಒಳಗೊಂಡಂತೆ ಬೇರ್ ಮೆಟಲ್ ಸ್ಟೆಂಟ್ (ಬಿಎಂಎಸ್) ಹಾಗೂ ಡ್ರಗ್ ಎಲುಟಿಂಗ್ ಸ್ಟೆಂಟ್ (ಡಿಇಎಸ್) ಎಂಬ ಎರಡು ಹಂತದ ಕೊರೊನರಿ ಸ್ಟೆಂಟ್‌ಗಳನ್ನು ರಾಷ್ಟ್ರೀಯ ಅಗತ್ಯ ಔಷಧಗಳ ಪಟ್ಟಿಗೆ ಸೇರಿಸಲು ಔಷಧಗಳ ಸ್ಥಾಯಿ ರಾಷ್ಟ್ರೀಯ ಸಮಿತಿಯು (ಎಸ್‌ಎನ್‌ಸಿಎಂ) ನ.6ರಂದು ಶಿಫಾರಸು ಮಾಡಿತ್ತು. ಈಗ ರಾಷ್ಟ್ರೀಯ ಔಷಧೀಯ ಬೆಲೆ ಪ್ರಾಧಿಕಾರ (ಎನ್‌ಪಿಪಿಎ) ಕೊರೊನರಿ ಸ್ಟೆಂಟ್‌ಗಳ ಬೆಲೆಯನ್ನು ನಿಗದಿಪಡಿಸಲಿದೆ.

2023ರ ಸಾರ್ವತ್ರಿಕ ರಜಾ ದಿನದ ಪಟ್ಟಿ ಪ್ರಜಾವಾಣಿ 75

ದಿನಾಂಕ	ರಜಾ ದಿನ		
ಜ.26	ಗಣರಾಜ್ಯೋತ್ಸವ	ಆ.15	ಸ್ವಾತಂತ್ರ್ಯ ದಿನಾಚರಣೆ
ಫೆ.18	ಮಹಾ ಶಿವರಾತ್ರಿ	ಸೆ.18	ವರಸಿದ್ಧಿ ವಿನಾಯಕ ವ್ರತ
ಮಾ.22	ಯುಗಾದಿ	ಸೆ.28	ಈದ್ ಮಿಲಾದ್
ಏ.3	ಮಹಾವೀರ ಜಯಂತಿ	ಅ.2	ಗಾಂಧಿ ಜಯಂತಿ
ಏ.7	ಗುಡ್ ಫ್ರೈಡೇ	ಅ.23	ಆಯುಧ ಪೂಜೆ
ಏ.14	ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ	ಅ.24	ವಿಜಯ ದಶಮಿ
ಮೇ.1	ಕಾರ್ಮಿಕ ದಿನಾಚರಣೆ	ನ.1	ಕನ್ನಡ ರಾಜ್ಯೋತ್ಸವ
ಜೂ.29	ಬಕ್ರೀದ್	ನ.14	ಬಲಿಪಾಡ್ಯಮಿ/ದೀಪಾವಳಿ
ಜು.29	ಮೊಹರಂ ಕಡೇ ದಿನ	ನ.30	ಕನಕದಾಸ ಜಯಂತಿ
		ಡಿ.25	ಕ್ರಿಸ್ಮಸ್

* ಮಕರ ಸಂಕ್ರಾಂತಿ, ಬಸವ ಜಯಂತಿ, ನರಕ ಚತುರ್ದಶಿ, ಮಹಾಲಯ ಅಮಾವಾಸ್ಯೆ, ಖುಬ್–ಎ–ರಂಜಾನ್, ಮಹರ್ಷಿ ವಾಲ್ಮೀಕಿ ಜಯಂತಿ, ಇವು ಭಾನುವಾರ, ಎರಡನೇ ಶನಿವಾರ ಹಾಗೂ ನಾಲ್ಕನೇ ಶನಿವಾರ ಬಂದಿರುವುದರಿಂದ ಪಟ್ಟಿಯಲ್ಲಿ ಸೇರಿಸಿಲ್ಲ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

PUBLIC NOTICE
Public are hereby notified that my client proposes to purchase the below mentioned Property from Smt. MALA, Wife of Manjunath.M, residing at No.1298-B, Krishnareddy Building, 2nd Division, Opp. Ganesha Temple, Attibele, Bangalore, Karnataka, 562107 Persons objecting for the proposed purchase or having any right in the ScheduLe Property may Lodge their objections and/ or claims with the undersigned along with supporting documentary evidence within SEVEN (07) days from the date of this publication and objections and/ or claims received thereafter will not be binding on my client and my client will proceed to purchase the Schedule Property as if there are no claimants/ objections.
SCHEDULE:
Property bearing Survey No 26/4, M. Medahalli village, Attibele Hobli, Anekal Taluk, Bengaluru Urban, Karnataka and Land measuring 26 Guntas and bounded by:
East: Land belongs to Narayanamma;
West : Land belongs to Rajalakshmi;
North: Wood Wheels Layout;
And South: ROAD.
Advocates:
Sri. K.R.LOKESH
Opp.Civil Court, 1st Floor, Shivananjappa Complex, B.M.Road, KUNIGAL-572130, Tumkur Dist.
TEL: 9964645052 / 8310568275.

ಪ್ರವಾಸ
Travel
A/C ರೂಂ ಹಾಗು A/C ಬಸ್ಸಿನಲ್ಲಿ 11.01.2023 15.02.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು 17.01.2023 08.02.2023 ದುಬೈ,ಅಬುಧಾಬಿ 5 ದಿನಗಳು. 13.12.2022 12.01.2023 ಗುಜರಾತ್ 8 ದಿನಗಳು. 13.12.2022 03.01.2023 ರಾಜಸ್ಥಾನ್ 9 ದಿನಗಳು. 17.01.2023 11.02.2023 ಕಾಶಿ,ಗಯಾ,ಅಯೋಧ್ಯ 7 ದಿನಗಳು. 04.12.2022 18.01.2023 ಕುಂಭಕೋಣಂ,ರಾಮೇಶ್ವರ 6 ದಿನಗಳು. 22.12.2022 28.12.2022 ಧರ್ಮಸ್ಥಳ ಹೊರನಾಡು 4 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು.3 9448402248 7022547922

ಭವಿಷ್ಯ
Astrology
ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ 600ವರ್ಷ ಹಳೆಯ 108ಜ್ಯೋತಿಷ್ಯ ತಂತ್ರಗಳಿಂದ ವಶೀಕರಣ, ಪ್ರೇಮವಿಚಾರ, ದಾಂಪತ್ಯ, ಹಣಕಾಸು, ಇನ್ನಾವುದೇ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ. ಪಂಡಿತ್ ಗಣೇಶ್‌ಕುಮಾರ್ 9880444450

ಉದ್ಯೋಗಾವಕಾಶ
Part-Time Jobs
ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

EDUCATION CORNER
ಕೆಂಪೇಗೌಡ IAS ಮತ್ತು KAS ತರಬೇತಿ ಕೇಂದ್ರ, ಬೆಂಗಳೂರು
KAS - PSI New Batch — ಪ್ರವೇಶ ಪ್ರಾರಂಭ 21.11.2022 ತರಗತಿ ಆರಂಭ 01.12.2022
Police-PDO New Batch — ಪ್ರವೇಶ ಪ್ರಾರಂಭ 21.11.2022 ತರಗತಿ ಆರಂಭ 25.11.2022
ಸ್ಥಳ: ಬೆಂಗಳೂರು – ವಿಜಯನಗರ (ಅತ್ತಿಗುಪ್ಪೆ ಮೆಟ್ರೋ ಸ್ಟೇಷನ್ ಹತ್ತಿರ)
Call: 89047 87676

TOYOTA, ಬ್ರಿಟಾನಿಯಾ, ಟಾಟಾಮೋಟಾರ್ಸ್, ಬಿಗ್‌ಬಜಾರ್ಸ್ ಗಳಿಗೆ 5th,10th,PUC, Degree,ITI, Diplomoದವರು ನೇರನೇಮಕಾತಿಯಿದೆ. 18,000-54,000/- ವಸತಿಯೂಟವಿದೆ. 9964634469

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಇರಾನ್ ಮೇಲೆ ಇಂಗ್ಲೆಂಡ್ ಸವಾರಿ

ಬುಕಾಯೊ ಸಾಕಾ ಎರಡು ಗೋಲು; ಮಿಂಚಿದ ಜೂಡ್ ಬೆಲಿಂಗಮ್, ರಹೀಮ್ ಸ್ಟರ್ಲಿಂಗ್

ದೋಹಾ (ರಾಯಿಟರ್ಸ್): ಮರಳುಗಾಡು ದೋಹಾದಲ್ಲಿ ಸೋಮವಾರ ಗೋಲಿನ ಮಳೆಗರೆದ ಇಂಗ್ಲೆಂಡ್ ತಂಡ, ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಆರಂಭ ಪಡೆಯಿತು.

ಖಲೀಫಾ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಇಂಗ್ಲೆಂಡ್ 6–2 ಗೋಲುಗಳಿಂದ ಇರಾನ್ ತಂಡವನ್ನು ಮಣಿಸಿತು.

ಬುಕಾಯೊ ಸಾಕಾ ಎರಡು ಗೋಲುಗಳನ್ನು ತಂದಿತ್ತರೆ, ಜೂಡ್ ಬೆಲಿಂಗಮ್, ರಹೀಮ್ ಸ್ಟರ್ಲಿಂಗ್, ಮಾರ್ಕಸ್ ರಶ್‌ಫೋರ್ಡ್ ಮತ್ತು ಜಾಕ್ ಗ್ರೀಲಿಶ್ ಅವರು ತಲಾ ಒಂದು ಗೋಲು ತಂದಿತ್ತರು.

ಮೊದಲ ಅರ್ಧ ಗಂಟೆಯ ಆಟದಲ್ಲಿ ಎರಡೂ ತಂಡಗಳು ಜಿದ್ದಾಜಿದ್ದಿನ ಪೈಪೋಟಿ ನೀಡಿದವು. ಇದರಿಂದ ಆರಂಭದಲ್ಲಿ ಗೋಲು ಬರಲಿಲ್ಲ. 35ನೇ ನಿಮಿಷದಲ್ಲಿ ಇಂಗ್ಲೆಂಡ್ ಗೋಲಿನ ಖಾತೆ ತೆರೆಯಿತು. ಲೂಕ್ ಶಾ ನೀಡಿದ ನಿಖರ ಪಾಸ್‌ನಲ್ಲಿ ಚೆಂಡನ್ನು ಹೆಡ್ ಮಾಡಿದ ಬೆಲಿಂಗಮ್ ಗುರಿ ಸೇರಿಸಿದರು.

ಮೊದಲ ಗೋಲು ಬಿದ್ದದ್ದೇ ತಡ, ಆಟದ ಚಿತ್ರಣವೇ ಬದಲಾಯಿತು. ಅದುವರೆಗೂ ನಿಧಾನಗತಿಯ ಆಟವಾಡುತ್ತಿದ್ದ ಇಂಗ್ಲೆಂಡ್ ಆಟಗಾರರು ಎದುರಾಳಿ ತಂಡದ ಗೋಲುಪೆಟ್ಟಿಗೆ ಗುರಿಯಾಗಿಸಿ ಮೇಲಿಂದ ಮೇಲೆ ದಾಳಿ ನಡೆಸಿದರು.

ಎಂಟು ನಿಮಿಷಗಳ ಬಳಿಕ ಇಂಗ್ಲೆಂಡ್ ಮುನ್ನಡೆಯನ್ನು ಹೆಚ್ಚಿಸಿತು. ಹ್ಯಾರಿ ಮಗುಯೆರ್ ಅವರು ಹೆಡರ್ ಮೂಲಕ ನೀಡಿದ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ಬುಕಾಯೊ ಸಾಕಾ ಗುರಿ ಸೇರಿಸಿದರು.

ವಿರಾಮಕ್ಕೆ ತೆರಳಲು ಕೆಲವೇ ನಿಮಿಷಗಳಿದ್ದಾಗ ಸ್ಟರ್ಲಿಂಗ್ (45+1) ತಮ್ಮ ತಂಡದ ಮುನ್ನಡೆಯನ್ನು 3–0ಗೆ ಹೆಚ್ಚಿಸಿದರು. ನಾಯಕ ಹ್ಯಾರಿ ಕೇನ್ ನೀಡಿದ ಪಾಸ್‌ನಲ್ಲಿ ಚೆಂಡನ್ನು ಗುರಿ ಸೇರಿಸುವಲ್ಲಿ ಅವರು ಯಾವುದೇ ತಪ್ಪು ಮಾಡಲಿಲ್ಲ.

ಎರಡನೇ ಅವಧಿಯಲ್ಲೂ ಇಂಗ್ಲೆಂಡ್‌ನ ಪ್ರಾಬಲ್ಯ ಮುಂದುವರಿಯಿತು. 62ನೇ ನಿಮಿಷದಲ್ಲಿ ಸಾಕಾ ತಮ್ಮ ಎರಡನೇ ಗೋಲು ಗಳಿಸಿದರು. ಇರಾನ್‌ನ ಡಿಫೆಂಡರ್‌ಗಳನ್ನು ಚಾಣಾಕ್ಷತನದಿಂದ ತಪ್ಪಿಸುವಲ್ಲಿ ಯಶಸ್ವಿಯಾಗಿ ಮುನ್ನಡೆಯನ್ನು 4–0ಗೆ ಹೆಚ್ಚಿಸಿದರು.

ಇದಾದ ಮೂರು ನಿಮಿಷಗಳ ಬಳಿಕ ಮೆಹ್ದಿ ತರೆಮಿ ಅವರು ಗೋಲು ಗಳಿಸಿ ಇರಾನ್‌ನ ಹಿನ್ನಡೆಯನ್ನು 1–4ಕ್ಕೆ ತಗ್ಗಿಸಿದರು. ಆದರೆ ರಶ್‌ಫೋರ್ಡ್ (71ನೇ ನಿ.) ಹಾಗೂ ಗ್ರೀಲಿಶ್ (90ನೇ ನಿ.) ಅವರು ಗೋಲು ಗಳಿಸಿ ಇಂಗ್ಲೆಂಡ್‌ನ ಗೆಲುವಿನ ಅಂತರ ಹಿಗ್ಗಿಸಿದರು. ಪಂದ್ಯ ಕೊನೆಗೊಳ್ಳಲು ಕೆಲವು ಸೆಕೆಂಡುಗಳು ಇರುವಾಗ ತರೆಮಿ ತಮ್ಮ ಹಾಗೂ ತಂಡದ ಎರಡನೇ ಗೋಲು ಗಳಿಸಿದರು.

ಮುಖ್ಯಾಂಶಗಳು

- ಹ್ಯಾರಿ ಕೇನ್ ಬಳಗಕ್ಕೆ 6–2 ಗೋಲುಗಳ ಗೆಲುವು
- ಇರಾನ್‌ನ ಎರಡೂ ಗೋಲು ಗಳಿಸಿದ ಮೆಹ್ದಿ ತರೆಮಿ

ಗೋಲು ಗಳಿಸಿದ ಇಂಗ್ಲೆಂಡ್ ತಂಡದ ಮಾರ್ಕಸ್ ರಶ್‌ಫೋರ್ಡ್ ಸಹ ಆಟಗಾರರ ಜತೆ ಸಂಭ್ರಮಿಸಿದರು –ಎಪಿ ಚಿತ್ರ

ರಾಷ್ಟ್ರಗೀತೆ ಹಾಡದ ಇರಾನ್ ಆಟಗಾರರು

ಪಂದ್ಯಕ್ಕೂ ಮುನ್ನ ರಾಷ್ಟ್ರ ಗೀತೆ ನುಡಿಸುವಾಗ ಇರಾನ್ ತಂಡದ ಆಟಗಾರರು ದನಿಗೂಡಿಸಲಿಲ್ಲ. ಈ ಮೂಲಕ ತಮ್ಮ ದೇಶದಲ್ಲಿ ನಡೆಯುತ್ತಿರುವ ಸರ್ಕಾರಿ ವಿರೋಧಿ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ಧಾರ್ಮಿಕ ವಸ್ತ್ರಸಂಹಿತೆಯ ಕಟ್ಟುಪಾಡು ವಿರೋಧಿಸಿ ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಹಲವರು ಮೃತಪಟ್ಟಿದ್ದಾರೆ. ಇರಾನ್ ತಂಡದ ಕೆಲವು ಆಟಗಾರರು ಪ್ರತಿಭಟನೆಯ ಪರ ಮಾತನಾಡಿದ್ದರು. ಇದೀಗ ರಾಷ್ಟ್ರ ಗೀತೆ ಹಾಡದೆ ಸರ್ಕಾರದ ವಿರುದ್ಧ ತಮ್ಮ ಆಕ್ರೋಶ ಹೊರಹಾಕಿದ್ದಾರೆ.

ಅರ್ಜೆಂಟೀನಾ– ಸೌದಿ ಅರೇಬಿಯಾ ಪೈಪೋಟಿ ಇಂದು

ಎಲ್ಲರ ಚಿತ್ತ ಮೆಸ್ಸಿಯತ್ತ

ದೋಹಾ (ರಾಯಿಟರ್ಸ್): ಲಯೊನೆಲ್ ಮೆಸ್ಸಿ ಒಳಗೊಂಡಂತೆ ಹಲವು ಪ್ರಮುಖ ಆಟಗಾರರನ್ನು ಒಳಗೊಂಡಿರುವ ಅರ್ಜೆಂಟೀನಾ ತಂಡ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವಿನ ಆರಂಭದ ನಿರೀಕ್ಷೆಯಲ್ಲಿದೆ.

ಲುಸೈಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಅರ್ಜೆಂಟೀನಾ, ಸೌದಿ ಅರೇಬಿಯಾವನ್ನು ಎದುರಿಸಲಿದೆ. ಉಭಯ ತಂಡಗಳ ಸಾಧನೆ, ಆಟಗಾರರ ಸಾಮರ್ಥ್ಯವನ್ನು ನೋಡುವಾಗ ಮೆಸ್ಸಿ ಬಳಗ ಗೆಲ್ಲುವ 'ಫೇವರಿಟ್' ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಪಂದ್ಯ ಡ್ರಾದಲ್ಲಿ ಕೊನೆಗೊಂಡರೂ ಅದು ದೊಡ್ಡ ಅಚ್ಚರಿ ಎನಿಸಲಿದೆ.ಮೆಸ್ಸಿ ಅವರಿಗೆ ಇದು ಐದನೇ ವಿಶ್ವಕಪ್ ಆಗಿದ್ದು, ಬಹುತೇಕ ಕೊನೆಯ ಟೂರ್ನಿಯೂ ಹೌದು. ಅರ್ಜೆಂಟೀನಾ ತಂಡ ಕಳೆದ 36 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಸೋಲು ಅನುಭವಿಸಿಲ್ಲ.

ಫಿಫಾ ರ‍್ಯಾಂಕಿಂಗ್‌ನಲ್ಲಿ ಅರ್ಜೆಂಟೀನಾ ತಂಡಕ್ಕಿಂತ 48 ಸ್ಥಾನಗಳಷ್ಟು ಕೆಳಗೆ ಇರುವ ಸೌದಿಗೆ ಇದು ಆರನೇ ವಿಶ್ವಕಪ್ ಟೂರ್ನಿ. ಈ ತಂಡ ಇತ್ತೀಚೆಗೆ ನಡೆದ ಸ್ನೇಹಪರ ಪಂದ್ಯಗಳಲ್ಲಿ ವೆನಿಜುವೆಲಾ, ಕೊಲಂಬಿಯಾ ಮತ್ತು ಕ್ರೊವೇಷ್ಯಾ ಎದುರು ಸೋತಿದೆ.

ವಿಶ್ವಕಪ್ ಟೂರ್ನಿಯ ಆರಂಭಿಕ ಪಂದ್ಯದಲ್ಲಿ ಸೌದಿ ಅರೇಬಿಯಾದ ಸಾಧನೆ ಉತ್ತಮವಾಗಿಲ್ಲ. 2018ರ ಟೂರ್ನಿಯ ಮೊದಲ ಪಂದ್ಯದಲ್ಲಿ ರಷ್ಯಾ ಕೈಯಲ್ಲಿ 0–5 ರಲ್ಲಿ ಹಾಗೂ 2002ರ ಟೂರ್ನಿಯಲ್ಲಿ ಜರ್ಮನಿ ಎದುರು 0–8 ರಲ್ಲಿ ಪರಾಭವಗೊಂಡಿತ್ತು. ಈ ಸಲ ಹೀನಾಯ ಸೋಲಿನಿಂದ ಪಾರಾಗುವ ಸವಾಲು ತಂಡದ ಮುಂದಿದೆ.

1994ರ ಟೂರ್ನಿಯಲ್ಲಿ ಅರೇಬಿಯಾದ ತಂಡ 16ರ ಘಟ್ಟ ಪ್ರವೇಶಿಸಿತ್ತು. ಮಾತ್ರವಲ್ಲ, ಈ ಬಾರಿಯ ಅರ್ಹತಾ ಹಂತದಲ್ಲಿ ತಮ್ಮ ಗುಂಪಿನಲ್ಲಿ ಪ್ರಬಲ ಜಪಾನ್ ತಂಡವನ್ನು ಹಿಂದಿಕ್ಕಿ ವಿಶ್ವಕಪ್‌ನಲ್ಲಿ ಆಡುವ ಅವಕಾಶ ಗಿಟ್ಟಿಸಿಕೊಂಡಿದೆ.

'ನಮ್ಮ ತಂಡ ಪ್ರತಿಭಾನ್ವಿತ ಆಟಗಾರರನ್ನು ಒಳಗೊಂಡಿದ್ದು, ಉತ್ತಮ ಪ್ರದರ್ಶನ ನೀಡಲಿದೆ' ಎಂದು ಕೋಚ್ ಹರ್ವ್ ರೆನಾರ್ಡ್ ಹೇಳಿದ್ದಾರೆ. ಅನುಭವಿ ಮಿಡ್‌ಫೀಲ್ಡರ್ ಸಲ್ಮಾನ್ ಅಲ್ ಫರಾಜ್ ಅವರು ಸೌದಿ ತಂಡದ ಬಲ ಎನಿಸಿಕೊಂಡಿದ್ದಾರೆ.

ಬಲಾಬಲ: ಅರ್ಜೆಂಟೀನಾ ಮತ್ತು ಸೌದಿ ಅರೇಬಿಯಾ ತಂಡಗಳು ಇದುವರೆಗೆ ಒಟ್ಟು ನಾಲ್ಕು ಸಲ ಪರಸ್ಪರ ಪೈಪೋಟಿ ನಡೆಸಿವೆ. 1992 ರ ಕಾನ್ಫೆಡರೇಷನ್ ಕಪ್ ಟೂರ್ನಿಯಲ್ಲಿ ಪೈಪೋಟಿ ನಡೆಸಿದ್ದಾಗ ಅರ್ಜೆಂಟೀನಾ ಗೆದ್ದಿತ್ತು. 2012 ರಲ್ಲಿ ಉಭಯ ತಂಡಗಳು ಕೊನೆಯದಾಗಿ ಆಡಿದ್ದಾಗ ಪಂದ್ಯ 0–0 ರಲ್ಲಿ ಡ್ರಾದಲ್ಲಿ ಕೊನೆಗೊಂಡಿತ್ತು.

ಲಯೊನೆಲ್ ಮೆಸ್ಸಿ (ಎಡ) ಹಾಗೂ ಸಲ್ಮಾನ್ ಅಲ್ ಫರಾಜ್ –ಎಎಫ್‌ಪಿ ಚಿತ್ರ

ಆತ್ಮವಿಶ್ವಾಸದಲ್ಲಿ ಡೆನ್ಮಾರ್ಕ್

ದೋಹಾ: ಡೆನ್ಮಾರ್ಕ್ ಮತ್ತು ಟ್ಯುನೀಷಿಯಾ ತಂಡಗಳು ವಿಶ್ವಕಪ್ ಟೂರ್ನಿಯಲ್ಲಿ ಮಂಗಳವಾರ ಪೈಪೋಟಿ ನಡೆಸಲಿದ್ದು, ತುರುಸಿನ ಹೋರಾಟ ನಿರೀಕ್ಷಿಸಲಾಗಿದೆ.

ಡೆನ್ಮಾರ್ಕ್ ತಂಡ ಅರ್ಹತಾ ಹಂತದಲ್ಲಿ ಆಡಿದ 10 ಪಂದ್ಯಗಳಲ್ಲಿ 9 ರಲ್ಲಿ ಗೆಲುವು ಪಡೆದು ಕತಾರ್‌ಗೆ ಬಂದಿದೆ.

ಟ್ಯುನೀಷಿಯಾ ತಂಡ ಇದುವರೆಗೆ ಐದು ಸಲ ವಿಶ್ವಕಪ್ ಆಡಿದ್ದು, ಒಮ್ಮೆಯೂ ನಾಕೌಟ್ ಹಂತ ಪ್ರವೇಶಿಸಿಲ್ಲ. ಈ ಬಾರಿ ಐತಿಹಾಸಿಕ ಸಾಧನೆ ಮಾಡುವ ವಿಶ್ವಾಸ ಹೊಂದಿದೆ. ಟ್ಯುನೀಷಿಯಾ ತನ್ನ ಕೊನೆಯ ಸ್ನೇಹಪರ ಪಂದ್ಯದಲ್ಲಿ ಇರಾನ್ ವಿರುದ್ಧ 2–0 ಗೋಲುಗಳ ಜಯ ಸಾಧಿಸಿತ್ತು.

ಡೆನ್ಮಾರ್ಕ್ ತಂಡ ಐದು ವಿಶ್ವಕಪ್‌ಗಳಲ್ಲಿ ಆಡಿದ್ದು, ಒಮ್ಮೆ ಮಾತ್ರ ಲೀಗ್ ಹಂತದಲ್ಲಿ ಹೊರಬಿದ್ದಿದೆ. 1998ರ ವಿಶ್ವಕಪ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದು ಈ ತಂಡದ ಅತ್ಯುತ್ತಮ ಸಾಧನೆ ಆಗಿದೆ.

ಇಂದಿನ ಪಂದ್ಯಗಳು

ಅರ್ಜೆಂಟೀನಾ–ಸೌದಿ ಅರೇಬಿಯಾ ಮಧ್ಯಾಹ್ನ **3.30**

ಡೆನ್ಮಾರ್ಕ್–ಟ್ಯುನೀಷಿಯಾ ಸಂಜೆ **6.30**

ಮೆಕ್ಸಿಕೊ–ಪೋಲೆಂಡ್ ರಾತ್ರಿ **9.30**

ಫ್ರಾನ್ಸ್–ಆಸ್ಟ್ರೇಲಿಯಾ ತಡರಾತ್ರಿ **12.30**

ನೇರ ಪ್ರಸಾರ: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ಪ್ರಶಸ್ತಿ ವಿಜೇತ ಕರ್ನಾಟಕ ತಂಡ: ನಿಂತವರು (ಎಡದಿಂದ)– ಶ್ರಾವಣಿ ಎಸ್, ಅನ್ವಿತಾ ಸ್ಯಾನರ್, ಮನಸ್ವಿ ವಾಘ್ಮೋರೆ, ಅಶೋಕ್ ಭಂಡಾ (ಕೋಚ್), ದೀಪಾ ಎಸ್ (ಮ್ಯಾನೇಜರ್), ಅದಿತಿ ಸುಬ್ರಮಣಿಯನ್ (ನಾಯಕಿ), ಮಹೆಕ್ ಶರ್ಮಾ, ದಿವಾ ಅಬಾದ್ ಇರಾನಿ. ಮಂಡಿಯೂರಿದವರು: ಜೇಯಲ್ ಜೈನ್, ಹನೀಶಾ, ಎಸ್ ಶಿಂಧೆ, ದೀಕ್ಷಿತಾ, ಮಾನಸಾ, ರುತ್ ಜೇಕಬ್, ಅದೆಲ್ ಡಿಸೋಜಾ

ಬ್ಯಾಸ್ಕೆಟ್‌ಬಾಲ್: ಕರ್ನಾಟಕಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡವು ರಾಷ್ಟ್ರೀಯ ಸಬ್‌ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದೆ.

ಹಿಮಾಚಲ ಪ್ರದೇಶದ ಕಾಂಗ್ರಾದಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಕರ್ನಾಟಕ ಬಾಲಕಿಯರು 41–39ರಿಂದ ತಮಿಳುನಾಡು ತಂಡವನ್ನು ಸೋಲಿಸಿದರು. ರಾಜ್ಯ ತಂಡಕ್ಕಾಗಿ ಅದಿತಿ ಎಸ್. 18 ಪಾಯಿಂಟ್ಸ್ ಗಳಿಸಿದರು. ಸಬ್‌ಜೂನಿಯರ್ ವಿಭಾಗದಲ್ಲಿ ಇದೇ ಮೊದಲ ಬಾರಿಗೆ ಕರ್ನಾಟಕ ಬಾಲಕಿಯರ ತಂಡವು ಚಾಂಪಿಯನ್ ಆಗಿದೆ.

ಕರ್ನಾಟಕ ಬಾಲಕರ ತಂಡವು ಎಂಟನೇ ಸ್ಥಾನ ಗಳಿಸಿತು.

₹ 5 ಲಕ್ಷ ಬಹುಮಾನ: ಪ್ರಶಸ್ತಿ ಜಯಿಸಿದ ಕರ್ನಾಟಕ ಬಾಲಕಿಯರ ತಂಡಕ್ಕೆ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಗೌರವ ಕಾರ್ಯದರ್ಶಿ ಮತ್ತು ಬಿಎಫ್‌ಐ ಅಧ್ಯಕ್ಷ ಕೆ.ಗೋವಿಂದರಾಜು ₹ 5 ಲಕ್ಷ ಬಹುಮಾನ ಪ್ರಕಟಿಸಿದ್ದಾರೆ.

ನೆದರ್ಲೆಂಡ್ಸ್‌ಗೆ ಜಯ

ದೋಹಾ (ರಾಯಿಟರ್ಸ್): ಕೋಡಿ ಗಾಕ್ಪೊ ಮತ್ತು ಡೇವಿ ಕ್ಲಾಸೆನ್ ಗಳಿಸಿದ ಗೋಲುಗಳ ನೆರವಿನಿಂದ ನೆದರ್ಲೆಂಡ್ಸ್ ತಂಡ ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಅಲ್ ತುಮಾಮಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಡಚ್ ತಂಡ 2–0 ಗೋಲುಗಳಿಂದ ಸೆನೆಗಲ್ ತಂಡವನ್ನು ಮಣಿಸಿತು. ಗಾಕ್ಪೊ ಅವರು 84ನೇ ನಿಮಿಷದಲ್ಲಿ ಹಾಗೂ ಕ್ಲಾಸೆನ್ ಪಂದ್ಯದ ಕೊನೆಯ ನಿಮಿಷದಲ್ಲಿ (90+9) ಗೋಲು ಗಳಿಸಿದರು.

ಸೆನೆಗಲ್ ಕೊನೆಯವರೆಗೂ ವೀರೋಚಿತ ಹೋರಾಟ ನಡೆಸಿತು. ಈ ತಂಡಕ್ಕೆ ಗೋಲು ಗಳಿಸುವ ಹಲವು ಅವಕಾಶಗಳು ದೊರೆತರೂ ಯಶಸ್ಸು ಲಭಿಸಲಿಲ್ಲ.

ವಿಶ್ವಕಪ್ ಪಂದ್ಯ ವೀಕ್ಷಣೆಗೆ ₹23 ಲಕ್ಷದ ಮನೆ ಖರೀದಿ!

ಪಾಲಕ್ಕಾಡ್/ ಕೊಚ್ಚಿ (ಪಿಟಿಐ): ಫಿಫಾ ವಿಶ್ವಕಪ್ ಟೂರ್ನಿಗೆ ಚಾಲನೆ ಲಭಿಸುತ್ತಿದ್ದಂತೆಯೇ ಇತ್ತ ಕೇರಳದಲ್ಲಿ ಫುಟ್‌ಬಾಲ್ ಕಾವು ಹೆಚ್ಚಿದೆ. ಅಭಿಮಾನಿಗಳು ವಿವಿಧ ರೀತಿಯಲ್ಲಿ ಸಂಭ್ರಮದಲ್ಲಿ ತೊಡಗಿದ್ದಾರೆ.

ವಿಶ್ವಕಪ್ ಟೂರ್ನಿಯ ಪಂದ್ಯಗಳನ್ನು ಜತೆಯಾಗಿ ವೀಕ್ಷಿಸಲು ಕೊಚ್ಚಿಯ ಕಂಗರಪ್ಪಾಡಿ ಎಂಬಲ್ಲಿ 17 ಗೆಳೆಯರು ಸೇರಿಕೊಂಡು ₹ 23 ಲಕ್ಷದ ಮನೆಯನ್ನೇ ಖರೀದಿಸಿದ್ದಾರೆ!

'ಮನೆಯನ್ನು ಒಂದು ತಿಂಗಳ ಹಿಂದೆ ಖರೀದಿಸಿದ್ದೇವೆ. ಇದು ಎಲ್ಲರಿಗೂ ತೆರೆದಿರುತ್ತದೆ. ಕೇರಂ ಒಳಗೊಂಡಂತೆ ವಿವಿಧ ಒಳಾಂಗಣ ಆಟ ಆಡಲು ವ್ಯವಸ್ಥೆ ಕಲ್ಪಿಸಿದ್ದೇವೆ. ಮುಂದಿನ ತಲೆಮಾರಿನ ಮಂದಿ ಸ್ಪೋರ್ಟ್ಸ್ ಕ್ಲಬ್ ರೀತಿ ಬಳಸಿಕೊಳ್ಳುವ ಉದ್ದೇಶವನ್ನಿಟ್ಟುಕೊಂಡು ಮನೆ ಖರೀದಿಸಿದ್ದೇವೆ' ಎಂದು ಗೆಳೆಯರ ಬಳಗದ ಸದಸ್ಯರಲ್ಲೊಬ್ಬರಾದ ಹ್ಯಾರಿಸ್ ಕಾಸಿಮ್ ಹೇಳಿದ್ದಾರೆ.

ಲಾಠಿ ಪ್ರಹಾರ: ಪಾಲಕ್ಕಾಡ್‌ನಲ್ಲಿ ಭಾನುವಾರ ವಿವಿಧ ತಂಡಗಳ ಜೆರ್ಸಿಗಳನ್ನು ತೊಟ್ಟ ನೂರಾರು ಫುಟ್‌ಬಾಲ್ ಪ್ರೇಮಿಗಳು ಬೃಹತ್ ಮೆರವಣಿಗೆ ನಡೆಸಿದ್ದಾರೆ. ವಾಹನ ಸಂಚಾರಕ್ಕೆ ಅಡ್ಡಿ ಉಂಟಾದಾಗ ಪೊಲೀಸರು ಮಧ್ಯ ಪ್ರವೇಶಿಸಿದ್ದಾರೆ. ಈ ವೇಳೆ ವಾಗ್ವಾದ ನಡೆದು, ಪೊಲೀಸರು ಜನರನ್ನು ಚದುರಿಸಲು ಲಾಠಿ ಪ್ರಹಾರ ನಡೆಸಿದ್ದಾರೆ.

ಕಬಡ್ಡಿ: ತಲೈವಾಸ್ ಜಯಭೇರಿ

ಹೈದರಾಬಾದ್ (ಪಿಟಿಐ): ನರೇಂದರ್ ಅವರ ಸೊಗಸಾದ ಆಟದ ಬಲದಿಂದ ತಮಿಳ್ ತಲೈವಾಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ 35–30 ರಲ್ಲಿ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಗಚಿಬೌಳಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ನರೇಂದರ್ 13 ಪಾಯಿಂಟ್ಸ್ ತಂದಿತ್ತರು. ಬೆಂಗಾಲ್ ತಂಡದ ಮಣಿಂದರ್ ಸಿಂಗ್ ಅವರು 15 ಪಾಯಿಂಟ್ಸ್ ಗಳಿಸಿ ಸೋಲಿನ ನಡುವೆಯೂ ಮಿಂಚಿದರು.

ಆರಂಭದಿಂದಲೇ ಆಕ್ರಮಣಕಾರಿ ಪ್ರದರ್ಶನ ನೀಡಿದ ತಲೈವಾಸ್ ತಂಡ ಮೊದಲಾರ್ಧ ಕೊನೆಗೊಂಡಾಗ 21–13 ರಲ್ಲಿ ಮುನ್ನಡೆ ಸಾಧಿಸಿತ್ತು.

ದಿನದ ಎರಡನೇ ಪಂದ್ಯದಲ್ಲಿ ಯು.ಪಿ.ಯೋಧಾಸ್ 35–31 ರಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ ಗೆದ್ದಿತು. ಪ್ರದೀಪ್ ನರ್ವಾಲ್ (9) ಅವರು ಯೋಧಾಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇಂದಿನ ಪಂದ್ಯಗಳು
ಯು ಮುಂಬಾ– ತಮಿಳ್ ತಲೈವಾಸ್
ತೆಲುಗು ಟೈಟನ್ಸ್– ಪಟ್ನಾ ಪೈರೇಟ್ಸ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	16	10	4	2	59
ಬೆಂಗಳೂರು	16	10	5	1	57
ಜೈಪುರ	15	10	5	0	53
ಯುಪಿ	16	8	6	2	50
ಡೆಲ್ಲಿ	16	8	8	0	45
ಮುಂಬಾ	15	8	7	0	44

ಹಾಕಿ: ಡೆಲ್ಲಿ ಪಬ್ಲಿಕ್ ಸ್ಕೂಲ್‌ಗೆ ಜಯ

ಬೆಂಗಳೂರು: ಮೊಹಮ್ಮದ್ ಆಶು ಸಿ.ಎಚ್. ಗಳಿಸಿದ ಆರು ಗೋಲುಗಳ ಬಲದಿಂದ ಡೆಲ್ಲಿ ಪಬ್ಲಿಕ್ ಸ್ಕೂಲ್ ಈಸ್ಟ್ ತಂಡವು ರಾಜ್ಯ ಸಿ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ 13–0ಯಿಂದ ನ್ಯೂ ಅಶೋಕ ಹಾಕಿ ಕ್ಲಬ್ ತಂಡವನ್ನು ಸೋಲಿಸಿತು. ಮೊಹಮ್ಮದ್ 6, 14, 22, 31, 45 ಮತ್ತು 48ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ನವಾಜ್ ಇ.ಸಿ. (17, 33ನೇ ನಿ.), ಸಾದಿಕ್ (8, 10ನೇ ನಿ.), ತೇಜಸ್ ರೆಡ್ಡಿ (18ನೇ ನಿ.), ಶಾನೂಲ್ (43ನೇ ನಿ.) ಮತ್ತು ಹರ್ಷಿಕ್ ಶಮಲ್ (44ನೇ ನಿ.) ಗೋಲು ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ಸಹ್ಯಾದ್ರಿ ಹಾಕಿ ಕ್ಲಬ್ 4–0ಯಿಂದ ಜರ್ಮನ್ನೈಟ್ ಅಕಾಡೆಮಿ ಎದುರು ಗೆದ್ದಿತು. ತಂಡದ ಪರ ಸುರೇಶ್ (8, 14ನೇ ನಿ.), ಗಗನ್ (16ನೇ ನಿ.) ಮತ್ತು ಮಧು ಜಿ.ಎಚ್. (27ನೇ ನಿ.) ಗೋಲು ಹೊಡೆದರು.

ಆರ್ಮ್ ಬ್ಯಾಂಡ್ ಧರಿಸದಿರಲು ನಿರ್ಧಾರ

ದೋಹಾ (ರಾಯಿಟರ್ಸ್): ಫಿಫಾ ಒತ್ತಡಕ್ಕೆ ಮಣಿದಿರುವ ಯೂರೋಪ್‌ನ ಏಳು ತಂಡಗಳು, ವಿಶ್ವಕಪ್ ಪಂದ್ಯದ ವೇಳೆ ತಮ್ಮ ತಂಡದ ನಾಯಕರು 'ಒನ್ ಲವ್' ಆರ್ಮ್‌ಬ್ಯಾಂಡ್ ಧರಿಸುವ ನಿರ್ಧಾರ ಕೈಬಿಟ್ಟಿದ್ದಾರೆ.

ಸಲಿಂಗಿಗಳು ಮತ್ತು ಎಲ್‌ಜಿಬಿಟಿ ಸಮುದಾಯಗಳಿಗೆ ಬೆಂಬಲ ಸೂಚಿಸಲು ತಮ್ಮ ತಂಡದ ನಾಯಕರು ಆರ್ಮ್ ಬ್ಯಾಂಡ್ ಧರಿಸಿ ಆಡುವರು ಎಂದು ಇಂಗ್ಲೆಂಡ್, ವೇಲ್ಸ್, ಬೆಲ್ಜಿಯಂ, ನೆದರ್ಲೆಂಡ್ಸ್, ಸ್ವಿಟ್ಜರ್‌ಲೆಂಡ್, ಜರ್ಮನಿ ಮತ್ತು ಡೆನ್ಮಾರ್ಕ್ ತಂಡಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದವು.

ಕತಾರ್‌ನಲ್ಲಿ ಸಲಿಂಗಿಗಳ ಮೇಲೆ ನಿಷೇಧ ಹೇರಿರುವುದು ಮತ್ತು ಎಲ್‌ಜಿಬಿಟಿ ಸಮುದಾಯವನ್ನು ಅಂಗೀಕರಿಸದೇ ಇರುವುದನ್ನು ಪ್ರತಿಭಟಿಸಲು ಈ ತೀರ್ಮಾನ ತೆಗೆದುಕೊಂಡಿದ್ದರು.

ಆದರೆ ಯಾವುದೇ ಆಟಗಾರ ಬಹುವರ್ಣದ ಆರ್ಮ್‌ಬ್ಯಾಂಡ್ ಧರಿಸಿ ಕಣಕ್ಕಿಳಿದರೆ, ಅವರಿಗೆ 'ಹಳದಿ ಕಾರ್ಡ್' ತೋರಿಸಲಾಗುವುದು ಎಂದು ಫಿಫಾ ಎಚ್ಚರಿಕೆ ನೀಡಿರುವ ಕಾರಣ ನಿರ್ಧಾರದಿಂದ ಹಿಂದೆ ಸರಿದಿವೆ.

ಐಒಎ ಮತದಾನ ಹಕ್ಕು: ಲಿಂಗ ಸಮಾನತೆ

ನವದೆಹಲಿ (ಪಿಟಿಐ): ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು, ಕುಸ್ತಿಪಟು ಸಾಕ್ಷಿ ಮಲಿಕ್, ಶೂಟರ್ ಗಗನ್ ನಾರಂಗ್ ಸೇರಿದಂತೆ 77 ಮಂದಿ ಹಾಲಿ ಹಾಗೂ ಮಾಜಿ ಕ್ರೀಡಾಪಟುಗಳು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಚುನಾವಣೆಗೆ ಮತದಾನದ ಹಕ್ಕು ಪಡೆದಿದ್ದಾರೆ.

ಡಿಸೆಂಬರ್ 10ರಂದು ನಡೆಯುವ ಚುನಾವಣೆಗೆ ಒಲಿಂಪಿಕ್ಸ್ ಪದಕ ವಿಜೇತ ಯೋಗೇಶ್ವರ್ ದತ್ ಮತ್ತು ಎಂ. ಎಂ. ಸೋಮಯಾ ಸೇರಿ 38 ಪುರುಷ ಮತ್ತು 39 ಮಹಿಳಾ ಅಥ್ಲೀಟ್‌ಗಳು ಮತದಾನ ಮಾಡಲಿದ್ದಾರೆ.

ಗಾಯಗೊಂಡವರಿಗೆ ಆಸ್ಪತ್ರೆಯ ಹೊರ ಭಾಗದಲ್ಲಿ ಚಿಕಿತ್ಸೆ ನೀಡಲಾಗುತ್ತಿರುವುದು(ಎಡ). ಭೂಕಂಪನದಿಂದಾಗಿ ಮನೆಯೊಂದು ಕುಸಿದಿರುವುದು –ಎಪಿ/ಪಿಟಿಐ ಚಿತ್ರಗಳು

5.6 ತೀವ್ರತೆ, ಹಲವು ಕಟ್ಟಡಗಳಿಗೆ ಹಾನಿ, ನೂರಾರು ಮಂದಿಗೆ ಗಾಯ

ಇಂಡೊನೇಷ್ಯಾ ಭೂಕಂಪ: 162 ಸಾವು

ಜಕಾರ್ತ(ಎಪಿ): ಇಂಡೊನೇಷ್ಯಾದ ಜಾವಾ ದ್ವೀಪದಲ್ಲಿ ಸೋಮವಾರ ಸಂಭವಿಸಿದ ಪ್ರಬಲ ಭೂಕಂಪದಲ್ಲಿ ಕನಿಷ್ಠ 162 ಮಂದಿ ಸಾವಿಗೀಡಾಗಿದ್ದು, ನೂರಾರು ಮಂದಿ ಗಾಯಗೊಂಡಿದ್ದಾರೆ. ಭೂಕಂಪದ ತೀವ್ರತೆ ರಿಕ್ಟರ್ ಮಾಪಕದಲ್ಲಿ 5.6ರಷ್ಟು ದಾಖಲಾಗಿದೆ. ಮೃತರಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿದೆ.

ಹಲವು ಮನೆಗಳು ಮತ್ತು ಕಟ್ಟಡಗಳು ಕುಸಿದು ಬಿದ್ದಿವೆ. ಕೆಲವರು ತಮ್ಮ ಮಕ್ಕಳೊಂದಿಗೆ ಅಳುತ್ತಾ ಮನೆಗಳಿಂದ ಓಡಿ ಬಂದರು. ಕಟ್ಟಡಗಳ ಅವಶೇಷಗಳಡಿ ಸಿಲುಕಿದ್ದವರ ಪೈಕಿ ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸಿಜೆದಿಲ್ ಹಳ್ಳಿಯೊಂದರಲ್ಲೇ ಸುಮಾರು 25ಕ್ಕೂ ಹೆಚ್ಚು ಜನರು ಕಟ್ಟಡಗಳ ಅವಶೇಷಗಳಡಿ ಸಿಲುಕಿಕೊಂಡಿದ್ದಾರೆ. ಹಲವೆಡೆ ಭೂ ಕುಸಿತ ಉಂಟಾಗಿರುವುದರಿಂದ ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸುವುದು ಕಷ್ಟಕರವೆನಿಸಿದೆ.

ರಕ್ಷಣಾ ತಂಡಗಳು, ಕುಸಿದ ಮನೆಗಳ ಅವಶೇಷಗಳಲ್ಲಿ ಹೂತು ಹೋಗಿರುವವರ ಹುಡುಕಾಟ ನಡೆಸಿದ್ದಾರೆ. ರಕ್ಷಣಾ ಕಾರ್ಯ ಕ್ಷಿಪ್ರ ಗತಿಯಲ್ಲಿ ನಡೆಯುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಕ್ಕಳು ಸೇರಿ ಗಾಯಾಳುಗಳಿಗೆ ಆಸ್ಪತ್ರೆಗಳ ಒಳಗೆ, ಹೊರಗೆ ಹಾಗೂ ವಾಹನ ನಿಲುಗಡೆ ಪ್ರದೇಶಗಳಲ್ಲಿ ಚಿಕಿತ್ಸೆ ನೀಡಲಾಗಿದೆ. ಸುಮಾರು 13 ಸಾವಿರಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿದೆ.

ರಾಜಧಾನಿ ಜಕಾರ್ತದಿಂದ 75 ಕಿ.ಮೀ ದೂರದ ಪಶ್ಚಿಮ ಜಾವಾ ಪ್ರಾಂತ್ಯದ ಸಿಯಾಂಜುರ್ ಪ್ರದೇಶದ 10 ಕಿಲೋ ಮೀಟರ್ (6.2 ಮೈಲಿ) ಆಳದಲ್ಲಿ ಭೂಕಂಪನದ ಕೇಂದ್ರ ಬಿಂದು ದಾಖಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮೂರು ಬಾರಿ ಭೂಮಿ ಪ್ರಬಲವಾಗಿ ಕಂಪಿಸಿತು. ಮೊದಲ ಕಂಪನದ ಅವಧಿ 10 ಸೆಕೆಂಡುಗಳು ಇತ್ತು' ಎಂದು ಪ್ರತ್ಯಕ್ಷದರ್ಶಿ, ಅಂಗಡಿಯೊಂದರ ಮಾಲೀಕರಾದ ದೇವಿ ರಿಸ್ಮಾ ತಿಳಿಸಿದ್ದಾರೆ.

'ಅತ್ಯಂತ ಹೆಚ್ಚು ಜನನಿಬಿಡ ಪ್ರದೇಶದಲ್ಲಿ ಕಟ್ಟಡಗಳು ಕುಸಿದ ಪರಿಣಾಮ ಹಲವರು ಗಾಯ ಗೊಂಡಿದ್ದಾರೆ. ಸಾವು-ನೋವು ಮತ್ತು ಹಾನಿಯ ಪ್ರಮಾಣದ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ ಮುಖ್ಯಸ್ಥ ಸುಹಾರ್ಯಾಂಟೊ ಹೇಳಿದ್ದಾರೆ.

'ಭಾರಿ ಕಂಪನದ ಅನುಭವವಾಯಿತು. ಸಹೋದ್ಯೋಗಿಗಳು ಮತ್ತು ನಾನು 9ನೇ ಮಹಡಿಯಲ್ಲಿರುವ ನಮ್ಮ ಕಚೇರಿಯಿಂದ ತುರ್ತು ಮೆಟ್ಟಿಲು ಬಳಸಿಕೊಂಡು ಹೊರ ಬಂದೆವು' ಎಂದು ದಕ್ಷಿಣ ಜಕಾರ್ತಾದ ಉದ್ಯೋಗಿ ವಿದಿ ಪ್ರಿಮಧಾನಿಯಾ ಹೇಳಿದರು.

'ನನ್ನ ಸ್ನೇಹಿತರು ಕಟ್ಟಡದಿಂದ ಹೊರಗೆ ಓಡಿ ಹೋಗುತ್ತಿರುವುದನ್ನು ನೋಡಿದೆ. ಆದರೆ, ನಾನು ಹೊರಗೆ ಬರಲು ತುಂಬಾ ತಡವಾಯಿತು ಮತ್ತು ಗೋಡೆಗೆ ಡಿಕ್ಕಿ ಹೊಡೆದು ಮೂರ್ಛೆ ಹೋದೆ' ಎಂದು ಕಟ್ಟಡ ನಿರ್ಮಾಣ ಕಾರ್ಮಿಕ ಹಸನ್ ಹೇಳಿದರು.

'ಭೂಕಂಪನದಿಂದಾಗಿ ಆಸ್ಪತ್ರೆಯ ಕಟ್ಟಡಕ್ಕೂ ಹಾನಿಯಾಗಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ' ಎಂದು ಅಧಿಕಾರಿ ಹರ್ಮನ್ ಸುಹರ್‌ಮನ್ ಹೇಳಿದ್ದಾರೆ. 'ಗಾಯಗೊಂಡವರ ಪೈಕಿ ಹಲವರಿಗೆ ಆಸ್ಪತ್ರೆ ತಲುಪಲು ಸಾಧ್ಯವಾಗಿಲ್ಲ. ಹೀಗಾಗಿ ಅವರಿದ್ದ ಸ್ಥಳಗಳಲ್ಲೇ ಚಿಕಿತ್ಸೆ ನೀಡಲಾಗಿದೆ. ಮೃತರಲ್ಲಿ ಇಸ್ಲಾಮಿಕ್ ವಸತಿ ಶಾಲೆಯ ವಿದ್ಯಾರ್ಥಿಗಳೇ ಹೆಚ್ಚಿದ್ದಾರೆ' ಎಂದರು.

ಅಪಾಯಕಾರಿ ಜಿಲ್ಲೆ

ಸಿಯಾಂಜುರ್ ಜಿಲ್ಲೆಯು ಆಗಾಗ್ಗೆ ಭೂಕಂಪ, ಜ್ವಾಲಾಮುಖಿ ಸ್ಫೋಟ ಮತ್ತು ಸುನಾಮಿಗಳಿಗೆ ತುತ್ತಾಗುತ್ತಿದೆ. ಇದು ಇಂಡೊನೇಷ್ಯಾದ ಅತ್ಯಂತ ಅಪಾಯಕಾರಿ ಜಿಲ್ಲೆಗಳಲ್ಲಿ ಒಂದು ಎನಿಸಿದೆ. 2009ರ ಸೆಪ್ಟೆಂಬರ್‌ನಲ್ಲೂ ಈ ಜಿಲ್ಲೆಯಲ್ಲಿ ಭೂಕಂಪನ ಉಂಟಾಗಿತ್ತು. ಆಗ ಭೂಕಂಪದ ತೀವ್ರತೆ ರಿಕ್ಟರ್ ಮಾಪಕದಲ್ಲಿ 7.1ರಷ್ಟು ದಾಖಲಾಗಿತ್ತು. ಕನಿಷ್ಠ 57 ಮಂದಿ ಅಸುನೀಗಿದ್ದರು.

ಚಂದ್ರನಲ್ಲಿಗೆ ತಲುಪಿದ ನಾಸಾ ಬಾಹ್ಯಾಕಾಶ ನೌಕೆ

ಕೇಪ್ ಕ್ಯಾನವೆರಾಲ್, ಅಮೆರಿಕ (ಎಪಿ): ನಾಸಾವು ಚಂದ್ರಯಾನದ ಅಂಗವಾಗಿ ಹೋದ ವಾರ ಪರೀಕ್ಷಾರ್ಥವಾಗಿ ಉಡಾವಣೆ ಮಾಡಿದ್ದ ಬಾಹ್ಯಾಕಾಶ ನೌಕೆಯು ಸೋಮವಾರ ಚಂದ್ರನಲ್ಲಿಗೆ ತಲುಪಿದೆ.

ನಾಸಾವು 50 ವರ್ಷಗಳ ಹಿಂದೆ ಅಪೊಲೊ ಕಾರ್ಯಕ್ರಮದ ಭಾಗವಾಗಿ ತನ್ನ ನೌಕೆಯನ್ನು ಚಂದ್ರನಲ್ಲಿಗೆ ಕಳುಹಿಸಿತ್ತು. ಅದಾದ ಬಳಿಕ ನೌಕೆಯೊಂದು ಚಂದ್ರ ಗ್ರಹ ತಲುಪಿರುವುದು ಇದೇ ಮೊದಲು.

ನೌಕೆಯು ಸೋಮವಾರ ಬೆಳಿಗ್ಗೆ ರವಾನಿಸಿದ್ದ ವಿಡಿಯೊದಲ್ಲಿ ಚಂದ್ರನು ಹಿಂದೆಂದಿಗಿಂತಲೂ ಹೆಚ್ಚು ದೊಡ್ಡದಾಗಿ ಕಾಣುತ್ತಿದ್ದ. ನೌಕೆಯು ಚಂದ್ರನ ಹಿಂದಿನಿಂದ ಸಾಗುವಾಗ ನೌಕೆಯಲ್ಲಿನ ಕ್ಯಾಮೆರಾದಲ್ಲಿ ಭೂಮಿಯ ಚಿತ್ರ ಸೆರೆಯಾಗಿದೆ. ನೀಲಿ ಚುಕ್ಕೆಯ ಸುತ್ತಲೂ ಕಪ್ಪು ಬಣ್ಣ ಆವರಿಸಿರುವ ಚಿತ್ರ ಅದಾಗಿದೆ.

ನೌಕೆಯು ಚಂದ್ರನ ಕಕ್ಷೆಯ ಎಡಬದಿ ಪ್ರವೇಶಿಸಲು ಅಗತ್ಯವಿರುವ ವೇಗ ಪಡೆಯಬೇಕಾದರೆ ಚಂದ್ರನ ಸುತ್ತಲೂ ಜೋಲಿ ಹೊಡೆಯಬೇಕಾಗುತ್ತದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ನೌಕೆಯು ತಾನು ಹೊತ್ತೊಯ್ದಿರುವ ಮತ್ತೊಂದು ಎಂಜಿನ್ ಅನ್ನು ಶುಕ್ರವಾರ ಚಂದ್ರನ ಕಕ್ಷೆಗೆ ಸೇರಿಸಲಿದೆ. ಮುಂದಿನ ಸೋಮವಾರದ ವೇಳೆಗೆ ಈ ನೌಕೆಯು ಭೂಮಿಯಿಂದ ಗರಿಷ್ಠ 4 .33 ಲಕ್ಷ ಕಿ.ಮೀ ದೂರ ಕ್ರಮಿಸಲಿದೆ. ಚಂದ್ರನ ಕಕ್ಷೆಯಲ್ಲಿ ಸುಮಾರು ಒಂದು ವಾರ ಇರಲಿರುವ ನೌಕೆಯು ಡಿಸೆಂಬರ್ 11ರಂದು ಮರಳುವ ನಿರೀಕ್ಷೆ ಇದೆ. ಮುಂದಿನ ವರ್ಷ ನಾಸಾ, ನಾಲ್ವರು ಗಗನಯಾತ್ರಿಗಳನ್ನೊಳಗೊಂಡ ನೌಕೆಯನ್ನು ಚಂದ್ರನ ಕಕ್ಷೆಗೆ ಕಳುಹಿಸುವ ಗುರಿ ಹೊಂದಿದೆ.

ರಾಜ್ಯಕ್ಕೆ 'ನಾಡದೇವತೆ': ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರ ಕಲಾವಿದ ಕೆ. ಸೋಮಶೇಖರ್ ಸಿದ್ಧಪಡಿಸಿರುವ ರಾಜ್ಯದ ಸಾಂಪ್ರದಾಯಿಕ ಕಲೆ ಹಾಗೂ ನಾಡಗೀತೆಯಲ್ಲಿರುವ ಕೆಲವು ಅಂಶಗಳನ್ನು ಸಾಂಕೇತಿಕವಾಗಿ ಬಿಂಬಿಸುವ 'ನಾಡದೇವತೆ'ಯ ಚಿತ್ರವನ್ನು ಅಧಿಕೃತವೆಂದು ಪರಿಗಣಿಸುವಂತೆ ಲಲಿತ ಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಡಿ. ಮಹೇಂದ್ರ ಅಧ್ಯಕ್ಷತೆಯ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸಮಿತಿ ಶಿಫಾರಸು ಮಾಡಿರುವ ನಾಡದೇವತೆ ಚಿತ್ರದ ಹಿಂದೆ ಕರ್ನಾಟಕದ ನಕ್ಷೆ ಇದೆ. ಕಾಲಿಗೆ ಆಸರೆಯಾಗಿ ಕೆಳಗೆ ಒಂದು ಹಾಗೂ ಕಾಲಿನ ಇಕ್ಕೆಲಗಳಲ್ಲಿ ಎರಡು ತಾವರೆ(ಕಮಲ) ಹೂವುಗಳಿವೆ.

ಸರ್ಕಾರಿ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಬಳಸುವಂತೆ ಮಾಡಲು ಮತ್ತು ಶಾಲಾ- ಕಾಲೇಜುಗಳ ಗೋಡೆಗಳಲ್ಲಿ ಅಳವಡಿಸಲು ನಾಡದೇವತೆಯ ಪ್ರಮಾಣಿತ ಹಾಗೂ ಅಧಿಕೃತ ಚಿತ್ರವನ್ನು ಆಯ್ಕೆ ಮಾಡಿ ಶಿಫಾರಸು ಮಾಡಲು 2021ರ ಸೆ. 23ರಂದು ಮಹೇಂದ್ರ ನೇತೃತ್ವದಲ್ಲಿ ಚಿತ್ರ ಕಲಾವಿದರ ಸಮಿತಿಯನ್ನು ರಚಿಸಲಾಗಿತ್ತು. ಬೆಂಗಳೂರಿನ ಚೂಡಾಮಣಿ ನಂದಗೋಪಾಲ್, ರಾಯಚೂರಿನ ಎಚ್.ಎಚ್. ಮ್ಯಾದರ್, ಬೆಳಗಾವಿಯ ಬಾಬು ನಡೋಣಿ, ವಿಜಯಪುರದ ವಿ.ಎಸ್. ಕಡೇಮನಿ ಸಮಿತಿಯ ಸದಸ್ಯರಾಗಿದ್ದರು.

ಸಮಿತಿಯ ಸೂಚನೆಯಂತೆ ಸೋಮಶೇಖರ್ ಅವರು ನಾಡದೇವತೆಯ ಚಿತ್ರವನ್ನು ಸಿದ್ಧಪಡಿಸಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ಥಾಪಿಸಲಾಗುವ ನಾಡದೇವತೆಯ ಪ್ರತಿಮೆಯು ಇದೇ ಚಿತ್ರದಂತೆ ಇರಲಿದೆ.

'ಕಾರ್ಯಕ್ರಮಗಳಲ್ಲಿ ರಾಜ್ಯದ ನಾಡದೇವತೆಯ ಬೇರೆ ಬೇರೆ ಚಿತ್ರಗಳನ್ನು ಸದ್ಯ ಬಳಸಲಾಗುತ್ತಿದೆ. ಸರ್ಕಾರದ ಸೂಚನೆಯಂತೆ ಅಧಿಕೃತವಾದ ಚಿತ್ರವನ್ನು ಶಿಫಾರಸು ಮಾಡಿದ್ದೇವೆ. ಸರ್ಕಾರ ಒಪ್ಪಿಗೆ ನೀಡಿದ ಬಳಿಕ ಜಾರಿಗೆ ಬರಲಿದೆ' ಎಂದು ಡಿ. ಮಹೇಂದ್ರ ತಿಳಿಸಿದರು.

ನಾಡದೇವತೆ ಚಿತ್ರ

ಉಕ್ರೇನ್‌ಗೆ ಜಯ: ಝೆಲೆನ್‌ಸ್ಕಿ ಭರವಸೆ

ಕೀವ್/ಮಾಸ್ಕೊ (ರಾಯಿಟರ್ಸ್/ಎಪಿ): ರಷ್ಯಾ ಆಕ್ರಮಣದ ನಂತರ ಉಕ್ರೇನ್ ಜನರು ಮಾಡಿರುವ ತ್ಯಾಗಗಳನ್ನು ಸ್ಮರಿಸುವ ಮೂಲಕ ಉಕ್ರೇನ್‌ನ ಸ್ವಾತಂತ್ರ್ಯ ದಿನವನ್ನು ಸೋಮವಾರ ಆಚರಿಸಲಾಯಿತು.

'ಆಕ್ರಮಣಕಾರರ ದಾಳಿಯನ್ನು ದೇಶವು ಮೆಟ್ಟಿ ನಿಲ್ಲುತ್ತಿದೆ ಮತ್ತು ಮೇಲುಗೈ ಸಾಧಿಸಿದೆ. ದೇಶದ ಪ್ರತಿಭಟನ ದಿನದ ವೇಳೆಗೆ ರಷ್ಯಾ ವಿರುದ್ಧದ ಯುದ್ಧದಲ್ಲಿ ವಿಜಯೋತ್ಸವ ಆಚರಿಸಲಾಗುವುದು' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದರು.

ದೇಶದ ಜನತೆ ಉದ್ದೇಶಿಸಿ ವಿಡಿಯೊ ಮೂಲಕ ಭಾಷಣ ಮಾಡಿದ ಅವರು, ಯೋಧರು, ರೈತರು, ವೈದ್ಯರು, ಶಿಕ್ಷಕರ ತ್ಯಾಗ, ಕೊಡುಗೆಗಳನ್ನು ಶ್ಲಾಘಿಸಿದರು.

2004ರಲ್ಲಿ ನಡೆದಿದ್ದ ಕಿತ್ತಳೆ ಕ್ರಾಂತಿ, ಯುರೋಪ್ ಒಕ್ಕೂಟ ಸೇರುವುದರ ಪರವಾಗಿ 2013, 2014ರಲ್ಲಿ ಪ್ರತಿಭಟನೆಗಳು ನಡೆದಿದ್ದವು. ಇವುಗಳ ನೆನಪಿನಾರ್ಥ ಘನತೆ ಮತ್ತು ಸ್ವಾತಂತ್ರ್ಯ ದಿನವಾಗಿ ಉಕ್ರೇನ್ ಆಚರಿಸುತ್ತದೆ. ಈ ಎರಡು ಕ್ರಾಂತಿಗಳು ಉಕ್ರೇನಿನ ನಾಯಕತ್ವವನ್ನು ಉರುಳಿಸಿದ್ದವು.

ನಾಗರಿಕರ ಸ್ಥಳಾಂತರ: ರಷ್ಯಾ ನಿಯಂತ್ರಣದಿಂದ ಸ್ವತಂತ್ರಗೊಳಿಸಿದ ಕೆರ್ಸಾನ್ ಮತ್ತು ಮೈಕೋಲೈವ್ ನಗರದಿಂದ ನಾಗರಿಕರನ್ನು ಚಳಿಯ ಕಾರಣಕ್ಕೆ ಉಕ್ರೇನ್ ಸರ್ಕಾರ ಸ್ಥಳಾಂತರಿಸುತ್ತಿದೆ.

ತಪ್ಪಿತಸ್ಥರಿಗೆ ಶಿಕ್ಷೆ: ಎಚ್ಚರಿಕೆ

ಉಕ್ರೇನ್‌ನಲ್ಲಿ ರಷ್ಯಾದ ಯೋಧರ ಮೇಲೆ ಅಕ್ರಮವಾಗಿ ಯುದ್ಧಾಪರಾಧ ಹೊರಿಸಿ ಶಿಕ್ಷಿಸಿದವರನ್ನು ನ್ಯಾಯದ ಕಟಕಟೆಗೆ ತರಲಿದ್ದೇವೆ ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ಸೋಮವಾರ ಹೇಳಿದೆ.

'ಈ ಕೃತ್ಯವನ್ನು ಯುದ್ಧ ಅಪರಾಧವಾಗಿ ಪರಿಗಣಿಸಿ ವಿಶ್ವದ ಗಮನ ಸೆಳೆಯಲು ಸಾಧ್ಯವಿರುವ ಎಲ್ಲವನ್ನೂ ಮಾಡಲಿದೆ' ಎಂದು ಅದು ಹೇಳಿದೆ. ಉಕ್ರೇನ್ ಸೈನಿಕರು ಕಳೆದ ವಾರ ರಷ್ಯಾದ 10ಕ್ಕೂ ಹೆಚ್ಚು ಯುದ್ಧಕೈದಿಗಳನ್ನು ಗಲ್ಲಿಗೇರಿಸಿದ್ದಾರೆ. ಉಕ್ರೇನ್ ಸೇನಾಪಡೆ ಯುದ್ಧ ಅಪರಾಧಗಳನ್ನು ನಡೆಸಿದೆ. ಇದನ್ನು ಪಶ್ಚಿಮದ ರಾಷ್ಟ್ರಗಳು ನಿರ್ಲಕ್ಷಿಸಿವೆ ಎಂದು ರಷ್ಯಾ ಆರೋಪಿಸಿದೆ. ಇದಕ್ಕೆ ಉಕ್ರೇನ್‌ನಿಂದ ತಕ್ಷಣದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಕರ್ನಾಟಕಕ್ಕೆ ಮೊದಲ ಜಯ

ಹುಬ್ಬಳ್ಳಿ: ಸ್ಪಿನ್ನರ್‌ಗಳ ಕೈಚಳಕದ ಬಲದಿಂದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಹಿಮಾಚಲ ಪ್ರದೇಶ ವಿರುದ್ಧ ಇನಿಂಗ್ಸ್ ಹಾಗೂ 103 ರನ್‌ಗಳಿಂದ ಗೆದ್ದಿತು.

ರಾಜನಗರ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ನಾಲ್ಕು ದಿನಗಳ ಪಂದ್ಯದ ಮೂರನೇ ದಿನದಾಟದಲ್ಲಿ ಬರೀ 23 ನಿಮಿಷಗಳಲ್ಲಿ ಕರ್ನಾಟಕ ವಿಜಯೋತ್ಸವ ಆಚರಿಸಿತು. ಮೊದಲೆರಡು ಪಂದ್ಯಗಳಲ್ಲಿ ಡ್ರಾ ಸಾಧಿಸಿದ್ದ ಕರ್ನಾಟಕಕ್ಕೆ ಲಭಿಸಿದ ಮೊದಲ ಗೆಲುವು ಇದು. 5 ವಿಕೆಟ್‌ಗೆ 148 ರನ್‌ಗಳಿಂದ ಸೋಮವಾರ ಆಟ ಮುಂದುವರಿಸಿದ ಹಿಮಾಚಲ ಪ್ರದೇಶ ಕೇವಲ 11 ರನ್ ಸೇರಿಸಿ 47.4 ಓವರ್‌ಗಳಲ್ಲಿ 159 ರನ್‌ಗಳಿಗೆ ಆಲೌಟ್ ಆಯಿತು.

ಮೊಹಸಿನ್‌ಗೆ 5 ವಿಕೆಟ್: ಮೊದಲ ಇನಿಂಗ್ಸ್‌ನಲ್ಲಿ 14ಕ್ಕೆ 4 ವಿಕೆಟ್ ಪಡೆದಿದ್ದ ಕರ್ನಾಟಕದ ಮೊಹಸಿನ್ ಖಾನ್, 2ನೇ ಇನಿಂಗ್ಸ್‌ನಲ್ಲಿ 5 ವಿಕೆಟ್ ಪಡೆದರು. ಒಟ್ಟು 61ಕ್ಕೆ 9 ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಹಿಮಾಚಲ ಪ್ರದೇಶ: 59.4 ಓವರ್‌ಗಳಲ್ಲಿ 106; ಕರ್ನಾಟಕ:83 ಓವರ್‌ಗಳಲ್ಲಿ 368. ದ್ವಿತೀಯ ಇನಿಂಗ್ಸ್: ಹಿಮಾಚಲ ಪ್ರದೇಶ: 47.4 ಓವರ್‌ಗಳಲ್ಲಿ 159(ಲೋಕೇಶ ಚೌಹಾಣ್ 47, ಪಿಯೂಶ್ ಶರ್ಮ 36, ಗಂಗಾಸಿಂಗ್ 25, ಮೊಹಸಿನ್ ಖಾನ್ 47ಕ್ಕೆ5, ಹಾರ್ದಿಕ್ ರಾಜ್ 33ಕ್ಕೆ3). ಫಲಿತಾಂಶ: ಕರ್ನಾಟಕಕ್ಕೆ ಇನಿಂಗ್ಸ್ ಹಾಗೂ 103 ರನ್‌ಗಳ ಜಯ.

ವಿಜಯ್ ಹಜಾರೆ ಟ್ರೋಫಿ: ತಮಿಳುನಾಡಿನ ಬ್ಯಾಟರ್ ಸಾಧನೆ

ಜಗದೀಶನ್ 277 ರನ್; ವಿಶ್ವದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಬ್ಯಾಟರ್ ನಾರಾಯಣ ಜಗದೀಶನ್ ಅವರು 'ಲಿಸ್ಟ್ ಎ' ಕ್ರಿಕೆಟ್ ಪಂದ್ಯದಲ್ಲಿ ಅತ್ಯಧಿಕ ರನ್ ಗಳಿಸಿ ವಿಶ್ವದಾಖಲೆ ಮಾಡಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಅರುಣಾಚಲ ಪ್ರದೇಶ ವಿರುದ್ಧ ಅವರು 141 ಎಸೆತಗಳಲ್ಲಿ 277 ರನ್ (25 ಬೌಂಡರಿ, 15 ಸಿಕ್ಸರ್) ಕಲೆಹಾಕಿದರು. ನಿಗದಿತ ಓವರ್‌ಗಳ (ಲಿಸ್ಟ್ ಎ) ಪಂದ್ಯದಲ್ಲಿ ಬ್ಯಾಟರ್‌ವೊಬ್ಬ ಗಳಿಸಿದ ಅತ್ಯಧಿಕ ಮೊತ್ತ ಇದಾಗಿದೆ.

ಇಂಗ್ಲೆಂಡ್‌ನ ದೇಸಿ ಕ್ರಿಕೆಟ್‌ನಲ್ಲಿ 2002ರಲ್ಲಿ ನಡೆದಿದ್ದ ಪಂದ್ಯದಲ್ಲಿ ಸರೆ ತಂಡದ ಆಲಿಸ್ಟರ್ ಬ್ರೌನ್ ಅವರು ಗ್ಲಮಾರ್ಗನ್ ವಿರುದ್ಧ 268 ರನ್ ಗಳಿಸಿದ್ದು ಇದುವರೆಗಿನ ದಾಖಲೆಯಾಗಿತ್ತು. ಭಾರತದ ಬ್ಯಾಟರ್‌ಗಳಲ್ಲಿ ಈ ದಾಖಲೆ ರೋಹಿತ್ ಶರ್ಮಾ ಹೆಸರಿನಲ್ಲಿತ್ತು. ಶ್ರೀಲಂಕಾ ವಿರುದ್ಧದ ಏಕದಿನ ಅಂತರರಾಷ್ಟ್ರೀಯ ಪಂದ್ಯದಲ್ಲಿ ಅವರು 264 ರನ್ ಗಳಿಸಿದ್ದರು.

ತಮಿಳುನಾಡು –ಅರುಣಾಚಲ ಪ್ರದೇಶ ಪಂದ್ಯ ಇನ್ನೂ ಹಲವು ದಾಖಲೆಗಳಿಗೆ ಸಾಕ್ಷಿಯಾದವು.

ದಾಖಲೆ ಅಂತರದ ಗೆಲುವು: ಮೊದಲು ಬ್ಯಾಟ್ ಮಾಡಿದ ತಮಿಳುನಾಡು 50 ಓವರ್‌ಗಳಲ್ಲಿ 2 ವಿಕೆಟ್‌ಗೆ 506 ರನ್ ಗಳಿಸಿತು. ಇದು ತಂಡವೊಂದರ ಗರಿಷ್ಠ ಮೊತ್ತ ಆಗಿದೆ. ಇಂಗ್ಲೆಂಡ್ (498/4) ತಂಡದ ಹೆಸರಿನಲ್ಲಿದ್ದ ದಾಖಲೆ ಮುರಿಯಿತು.

ಅರುಣಾಚಲ ಪ್ರದೇಶ 28.4 ಓವರ್‌ಗಳಲ್ಲಿ 71 ರನ್‌ಗಳಿಗೆ ಆಲೌಟಾಯಿತು. 435 ರನ್‌ಗಳಿಂದ ಗೆದ್ದ ತಮಿಳುನಾಡು, ಅತಿದೊಡ್ಡ ಗೆಲುವಿನ ವಿಶ್ವದಾಖಲೆ ಮಾಡಿತು. 1990 ರಲ್ಲಿ ನಡೆದಿದ್ದ ಪಂದ್ಯದಲ್ಲಿ ಸಮರ್ಸೆಟ್ 346 ರನ್‌ಗಳಿಂದ ಡೆವೊನ್ ತಂಡವನ್ನು ಮಣಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

ಅತಿದೊಡ್ಡ ಜತೆಯಾಟ: ಜಗದೀಶನ್ ಮತ್ತು ಸಾಯ್ ಸುದರ್ಶನ್ (154, 102 ಎ.) ಮೊದಲ ವಿಕೆಟ್‌ಗೆ 416 ರನ್ ಸೇರಿಸಿದ್ದೂ ಹೊಸ ದಾಖಲೆ. 2015 ರಲ್ಲಿ ಜಿಂಬಾಬ್ವೆ ವಿರುದ್ಧ ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಮತ್ತು ಮರ್ಲಾನ್ ಸ್ಯಾಮುಯೆಲ್ಸ್ 2ನೇ ವಿಕೆಟ್‌ಗೆ 372 ರನ್ ಗಳಿಸಿದ್ದು ದಾಖಲೆಯಾಗಿತ್ತು.

ಅತಿವೇಗದ ದ್ವಿಶತಕ: ಜಗದೀಶನ್ ದ್ವಿಶತಕ ಪೂರೈಸಲು 114 ಎಸೆತಗಳನ್ನು ತೆಗೆದುಕೊಂಡು ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಹೆಸರಿನಲ್ಲಿದ್ದ ದಾಖಲೆ ಸರಿಗಟ್ಟಿದ್ದರು. ಕಳೆದ ವರ್ಷ ಮಾರ್ಷ್ ಕಪ್‌ನಲ್ಲಿ ಸೌತ್ ಆಸ್ಟ್ರೇಲಿಯಾ ಪರ ಆಡಿದ್ದ ಟ್ರಾವಿಸ್, ಕ್ವೀನ್ಸ್‌ಲ್ಯಾಂಡ್ ವಿರುದ್ಧ 114 ಎಸೆತಗಳಲ್ಲಿ ದ್ವಿಶತಕ ಗಳಿಸಿದ್ದರು.

ಲಿಸ್ಟ್ ಎ ಪಂದ್ಯದಲ್ಲಿ ಜಗದೀಶನ್ ಅವರ ಸತತ ಐದನೇ ಶತಕ ಇದಾಗಿದೆ. ಈ ಸಾಧನೆ ಮಾಡಿದ ಮೊದಲ ಆಟಗಾರ ಎಂಬ ಗೌರವ ಪಡೆದರು.

ನಾರಾಯಣ ಜಗದೀಶನ್ –ಟ್ವಿಟರ್ ಚಿತ್ರ

ಮುಖ್ಯಾಂಶಗಳು

- 141 ಎಸೆತಗಳಲ್ಲಿ 277 ರನ್
- 25 ಬೌಂಡರಿ, 15 ಸಿಕ್ಸರ್
- ಸತತ ಐದನೇ ಶತಕ ಸಾಧನೆ

'ಲಿಸ್ಟ್ ಎ' ಪಂದ್ಯ: ಅತ್ಯಧಿಕ ರನ್ ಗಳಿಸಿದವರು

ಆಟಗಾರ	ರನ್	ಎಸೆತ	ತಂಡ	ಎದುರಾಳಿ
ನಾರಾಯಣ ಜಗದೀಶನ್	277	141	ತಮಿಳುನಾಡು	ಅರುಣಾಚಲ ಪ್ರದೇಶ
ಆಲಿಸ್ಟರ್ ಬ್ರೌನ್	268	160	ಸರೆ	ಗ್ಲಮಾರ್ಗನ್
ರೋಹಿತ್ ಶರ್ಮ	264	173	ಭಾರತ	ಶ್ರೀಲಂಕಾ
ಜಾನ್ ಮ್ಯಾಥ್ಯೂ ಶಾರ್ಟ್	257	148	ಪಶ್ಚಿಮ ಆಸ್ಟ್ರೇಲಿಯಾ	ಕ್ವೀನ್ಸ್‌ಲ್ಯಾಂಡ್
ಶಿಖರ್ ಧವನ್	248	150	ಭಾರತ 'ಎ'	ದಕ್ಷಿಣ ಆಫ್ರಿಕಾ 'ಎ'

ಭಾರತಕ್ಕೆ ಸರಣಿ ಜಯದ ವಿಶ್ವಾಸ

3ನೇ ಟಿ20 ಇಂದು: ಉಮ್ರನ್, ಸ್ಯಾಮ್ಸನ್‌ಗೆ ಅವಕಾಶ?

ನೇಪಿಯರ್ (ಪಿಟಿಐ): ನ್ಯೂಜಿಲೆಂಡ್ ವಿರುದ್ಧದ ಮೂರನೇ ಹಾಗೂ ಅಂತಿಮ ಟಿ20 ಕ್ರಿಕೆಟ್ ಪಂದ್ಯ ಮಂಗಳವಾರ ಇಲ್ಲಿ ನಡೆಯಲಿದ್ದು, ಭಾರತ ತಂಡ ಕೆಲವು ಪ್ರಯೋಗಗಳಿಗೆ ಮುಂದಾಗುವ ಸಾಧ್ಯತೆಯಿದೆ.

ನೇಪಿಯರ್‌ನಲ್ಲಿ ನಡೆಯುವ ಪಂದ್ಯದಲ್ಲಿ ಗೆದ್ದು ಸರಣಿ ತಮ್ಮದಾಗಿಸಿಕೊಳ್ಳುವುದು ಹಾರ್ದಿಕ್ ಪಾಂಡ್ಯ ಬಳಗದ ಗುರಿ. ಸರಣಿಯ ಮೊದಲ ಪಂದ್ಯ ಮಳೆಯಿಂದ ರದ್ದಾಗಿದ್ದರೆ, ಭಾನುವಾರ ನಡೆದಿದ್ದ ಎರಡನೇ ಪಂದ್ಯದಲ್ಲಿ ಭಾರತ ಗೆದ್ದು 1-0 ರಲ್ಲಿ ಮುನ್ನಡೆ ಸಾಧಿಸಿದೆ. ಸೂರ್ಯಕುಮಾರ್ ಯಾದವ್ ಅವರು ಭರ್ಜರಿ ಶತಕ ಗಳಿಸಿದ್ದರು.

'ಪವರ್ ಪ್ಲೇ' ಅವಧಿಯಲ್ಲಿ ಬಿರುಸಿನ ಆಟವಾಡಲು ಆಗದಿರುವುದು ಭಾರತಕ್ಕೆ ಹಿನ್ನಡೆ ಉಂಟುಮಾಡಿದೆ.

ರಿಷಭ್ ಪಂತ್ –ಎಎಫ್‌ಪಿ ಚಿತ್ರ

ಕಳೆದ ಪಂದ್ಯದಲ್ಲಿ ರಿಷಭ್ ಪಂತ್ ಮತ್ತು ಇಶಾನ್ ಕಿಶನ್ ಅವರು ಇನಿಂಗ್ಸ್ ಆರಂಭಿಸಿದ್ದರೂ ಭರ್ಜರಿ ಆರಂಭ ನೀಡಿರಲಿಲ್ಲ. ಈ ಪಂದ್ಯದಲ್ಲಿ ಸಂಜು ಸ್ಯಾಮ್ಸನ್‌ಗೆ ಇನಿಂಗ್ಸ್ ಆರಂಭಿಸುವ ಅವಕಾಶ ಸಿಗುವುದೇ ಎಂಬುದನ್ನು ನೋಡಬೇಕು.

ಇಲ್ಲಿನ ಪಿಚ್ ವೇಗದ ಬೌಲಿಂಗ್‌ಗೆ ನೆರವು ನೀಡಲಿರುವುದರಿಂದ ಉಮ್ರನ್ ಮಲಿಕ್ ಅವರನ್ನು ಕಣಕ್ಕಿಳಿಸುವ ಚಿಂತನೆಯನ್ನೂ ತಂಡ ಮಾಡಿದೆ. ಈ ವರ್ಷದ ಆರಂಭದಲ್ಲಿ ಮೂರು ಟಿ20 ಪಂದ್ಯಗಳನ್ನು ಆಡಿದ್ದ ಮಲಿಕ್‌ಗೆ ಆ ಬಳಿಕ ಹೆಚ್ಚಿನ ಅವಕಾಶ ಸಿಕ್ಕಿಲ್ಲ.

ವಿಲಿಯಮ್ಸನ್ ಅಲಭ್ಯ: ನ್ಯೂಜಿಲೆಂಡ್ ತಂಡ, ನಾಯಕ ಕೇನ್ ವಿಲಿಯಮ್ಸನ್ ಅವರ ಅನುಪಸ್ಥಿತಿಯಲ್ಲಿ ಕಣಕ್ಕಿಳಿಯಲಿದೆ. ವೈದ್ಯಕೀಯ ಪರೀಕ್ಷೆಗೆ ಒಳಗಾಗಲಿರುವುದರಿಂದ ಅವರು ಆಡುತ್ತಿಲ್ಲ. ಕೇನ್ ಅನುಪಸ್ಥಿತಿಯಲ್ಲಿ ಟಿಮ್ ಸೌಥಿ ತಂಡವನ್ನು ಮುನ್ನಡೆಸಲಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 12
ನೇರ ಪ್ರಸಾರ: ಅಮೆಜಾನ್ ಪ್ರೈಮ್

ಫುಟ್‌ಬಾಲ್: ಕೊಡಗು ಎಫ್‌ಸಿಗೆ ಭರ್ಜರಿ ಜಯ

ಬೆಂಗಳೂರು: ಕೊಡಗು ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಸಾಧಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಕೊಡಗು 8-0ಯಿಂದ ಎಡಿಇ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಸಿಬಿ 5, 66 ಮತ್ತು 88ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಒಂಗ್ಡಾ ಲೆಪ್ಚಾ (10, 45ನೇ ನಿ.), ಅರುಣ್ ಲಾಲ್ (49, 74ನೇ ನಿ.) ಮತ್ತು ನೋರೆಮ್ ಮಿಟೆಯ್ (82ನೇ ನಿ.) ಮಿಂಚಿದರು. ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ 4-1ರಿಂದ ಇಂಡಿಪೆಂಡೆಂಟ್ಸ್ ಎದುರು ಗೆದ್ದಿತು.

ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಅಧಿಕಾರ ಸ್ವೀಕಾರ

ಗ್ರಾಮಾಂತರ, ಕ್ಲಬ್ ಕ್ರಿಕೆಟ್ ಬೆಳವಣಿಗೆಗೆ ಆದ್ಯತೆ

• ಗಿರೀಶ ದೊಡ್ಡಮನಿ

ಬೆಂಗಳೂರು: 'ರಾಜ್ಯದ ಎಲ್ಲ ವಿಭಾಗಗಳ ಕ್ರಿಕೆಟ್ ಕ್ಲಬ್‌ಗಳನ್ನು ಬಲಪಡಿಸುವುದು ಮತ್ತು ಜೂನಿಯರ್ ಕ್ರಿಕೆಟ್ ಬೆಳವಣಿಗೆಗೆ ಆದ್ಯತೆ ನೀಡುವುದು ನಮ್ಮ ಗುರಿ'–

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ನೂತನ ಅಧ್ಯಕ್ಷರಾಗಿ ಸೋಮವಾರ ಅಧಿಕಾರ ಸ್ವೀಕರಿಸಿದ ರಘುರಾಮ್ ಭಟ್ ಅವರ ನುಡಿಗಳಿವು. ಭಾರತ ತಂಡವನ್ನು ಪ್ರತಿನಿಧಿಸಿದ್ದ ಕರ್ನಾಟಕದ ಎಡಗೈ ಸ್ಪಿನ್ನರ್ ಈಗ ಹೊಸ ಇನಿಂಗ್ಸ್ ಆರಂಭಿಸಿದ್ದಾರೆ. ಈ ಸಂದರ್ಭದಲ್ಲಿ 64 ವರ್ಷದ ರಘುರಾಮ್ 'ಪ್ರಜಾವಾಣಿ'ಗೆ ನೀಡಿದ ಸಂದರ್ಶನ ಇಲ್ಲಿದೆ.

• ಹೊಸ ಇನಿಂಗ್ಸ್ ಆರಂಭಿಸಿದ್ದೀರಿ. ನಿಮ್ಮ ಮುಂದಿರುವ ಯೋಜನೆಗಳೇನು?

ಹೌದು. ಇದು ವೃತ್ತಿಜೀವನದ ನೂತನ ಇನಿಂಗ್ಸ್ ಮತ್ತು ಹೊಣೆ. ನಮ್ಮ ಸಮಿತಿಯ ಉದ್ದೇಶ ರಾಜ್ಯ ಕ್ರಿಕೆಟ್ ಅನ್ನು ಮತ್ತಷ್ಟು ಬಲಪಡಿಸುವುದು. ಪ್ರಮುಖವಾಗಿ 14 ಮತ್ತು 16 ವರ್ಷದೊಳಗಿನ ಪ್ರತಿಭೆಗಳಿಗೆ ಹೆಚ್ಚು ಅವಕಾಶ ಕಲ್ಪಿಸುವುದು. ಅದರಲ್ಲೂ ಗ್ರಾಮಾಂತರ ವಿಭಾಗಗಳಿಗೆ ಹೆಚ್ಚು ಒತ್ತು ನೀಡುತ್ತೇವೆ. ಶಾಲಾ ಕ್ರಿಕೆಟ್ ಬೆಳವಣಿಗೆ ಹೆಚ್ಚು ಬಲ ತುಂಬುವುದು. ಇದಕ್ಕಾಗಿ ಈಗಿರುವ ಸೌಲಭ್ಯ ಹಾಗೂ ತರಬೇತಿ ಸೌಕರ್ಯಗಳನ್ನು ಮತ್ತಷ್ಟು ಮೇಲ್ದರ್ಜೆಗೆ ಏರಿಸುವುದು.

• ಭಾರತದ ಕ್ರಿಕೆಟ್‌ನಲ್ಲಿ ಕರ್ನಾಟಕವು ಪ್ರಮುಖ ಕೇಂದ್ರವಾಗಿದೆ. ಅದನ್ನು ಮತ್ತಷ್ಟು ಬಲಾಢ್ಯಗೊಳಿಸಲು ಏನು ಯೋಜನೆ ಇದೆ?

ರಘುರಾಮ್ ಭಟ್

ಪ್ರತಿಭೆಗಳು ಸಿಗುವುದೇ ಗ್ರಾಮಾಂತರ ವಿಭಾಗಗಳಲ್ಲಿ. ಆದ್ದರಿಂದ ಅಲ್ಲಿಯ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು. ಮಹಿಳಾ ಕ್ರಿಕೆಟ್ ಬೆಳವಣಿಗೆಗೂ ವಿಶೇಷ ಆದ್ಯತೆ ನೀಡುತ್ತೇವೆ. ಮಹಿಳೆಯರಿಗೂ ಸಮಾನ ಅವಕಾಶಗಳು ಸಿಗುವಂತಾಗಬೇಕು.

• ರಾಜ್ಯದ ಯಾವುದೇ ಭಾಗದ ಆಟಗಾರ ತನ್ನ ಮೂಲ ಕ್ಲಬ್‌ನಿಂದ ರಾಜ್ಯ ತಂಡಗಳಿಗೆ ಆಯ್ಕೆಯಾಗುವುದು ಕಡಿಮೆ. ಆದರೆ, ಅವರು ಬೆಂಗಳೂರಿನ ಕ್ಲಬ್‌ಗಳಲ್ಲಿ ಪ್ರತಿನಿಧಿಸಿದಾಗ ಮಾತ್ರ ಆಯ್ಕೆಯಾಗ್ತಾರೆಂಬ ದೂರುಗಳಿವೆ. ಇದನ್ನು ನಿವಾರಿಸಲು ಏನು ಕ್ರಮ ಯೋಜಿಸಿದ್ದೀರಿ?

ಗ್ರಾಮಾಂತರ ವಿಭಾಗಗಳಲ್ಲಿನ ಪ್ರತಿಭೆಗಳಿಗೆ ಆದ್ಯತೆ ನೀಡಲು ನಾವು ಬದ್ಧ. ಆಯಾ ಭಾಗಗಳಲ್ಲಿ ಪಂದ್ಯಗಳನ್ನು ಹಾಗೂ ಕೋಚಿಂಗ್ ಕ್ಯಾಂಪ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಯೋಜಿಸುತ್ತೇವೆ. ಅಕಾಡೆಮಿಗಳ ಮೂಲಕ ಉತ್ತಮ ಆಟಗಾರರನ್ನು ಆಯ್ಕೆ ಮಾಡಲಾಗುವುದು. ಸ್ಥಳೀಯ ಲೀಗ್ ಟೂರ್ನಿಗಳಲ್ಲೂ ಪ್ರತಿಭಾಶೋಧ ಮಾಡಲಾಗುವುದು. ಇದೊಂದು ದೀರ್ಘ ಪ್ರಕ್ರಿಯೆಯಾಗಿದೆ. ಯಾವುದೂ ರಾತ್ರಿ ಬೆಳಗಾಗುವುದರೊಳಗೆ ಆಗುವುದಿಲ್ಲ.

ಈ ಮೊದಲೂ ಜಾರಿಯಾಗಿರುವ ಒಳ್ಳೆಯ ಕೆಲಸಗಳನ್ನು ಮತ್ತಷ್ಟು ಉತ್ತಮಪಡಿಸುತ್ತೇವೆ.

• ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ರಾಷ್ಟ್ರೀಯ ಆಯ್ಕೆ ಸಮಿತಿ ವಜಾ ಮಾಡುವ ಮೂಲಕ ಗುಣಮಟ್ಟವೇ ಮುಖ್ಯ ಎಂಬ ಸಂದೇಶ ರವಾನಿಸಿದೆ. ರಾಜ್ಯದಲ್ಲಿಯೂ ಇಂತಹ ಕಟ್ಟುನಿಟ್ಟಿನ ಕ್ರಮಗಳು ಜಾರಿಯಾಗಲಿವೆಯೇ?

ರಾಷ್ಟ್ರೀಯ ಹಂತವೇ ಬೇರೆ. ಇಲ್ಲಿಯ ಕಾರ್ಯವೈಖರಿ ಬೇರೆ. ಆದರೆ ಒಂದಂತೂ ಸ್ಪಷ್ಟ. ಆಯ್ಕೆ ಸಮಿತಿಯವರು ಎಲ್ಲ ಪಂದ್ಯಗಳನ್ನೂ ಖುದ್ದು ವೀಕ್ಷಿಸಬೇಕು. ಪ್ರತಿಯೊಬ್ಬ ಆಟಗಾರನ ಸಾಮರ್ಥ್ಯ ದಾಖಲಿಸಬೇಕು. ಅದು ಶಾಲಾಮಟ್ಟ ಇರಲಿ. ರಾಜ್ಯಮಟ್ಟ ಇರಲಿ. ಪ್ರತಿ ಹಂತದಲ್ಲಿಯೂ ಇದು ರೂಢಿಗತವಾಗಬೇಕು. ನಾನೂ ಒಬ್ಬ ಕ್ರಿಕೆಟಿಗ. ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವ ನನಗಿದೆ. ಆದ್ದರಿಂದ ಯಾವುದೇ ಪ್ರತಿಭೆಗೂ ಅನ್ಯಾಯವಾಗದಂತೆ ನೋಡಿಕೊಳ್ಳಲು ಬದ್ಧನಾಗಿದ್ದೇನೆ.

ಗೆಲುವಿನ ಹಳಿಗೆ ಕರ್ನಾಟಕ

ಕೋಲ್ಕತ್ತ: ಬೌಲರ್‌ಗಳ ಸಂಘಟಿತ ದಾಳಿ, ಮಯಂಕ್ ಅಗರವಾಲ್ ಮತ್ತು ನಿಕಿನ್ ಜೋಸ್ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ಗೆಲುವಿನ ಹಳಿಗೆ ಮರಳಿತು.

ಇಲ್ಲಿಯ ಈಡನ್ ಗಾರ್ಡನ್‌ನಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಮಯಂಕ್ ಪಡೆ ಆರು ವಿಕೆಟ್‌ಗಳಿಂದ ಸಿಕ್ಕಿಂ ತಂಡವನ್ನು ಸೋಲಿಸಿತು.

ಟಾಸ್ ಗೆದ್ದ ಕರ್ನಾಟಕ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕನ ನಿರ್ಧಾರವನ್ನು ಸಮರ್ಥಿಸಿಕೊಂಡ ಬೌಲರ್‌ಗಳಾದ ವಾಸುಕಿ ಕೌಶಿಕ್ (16ಕ್ಕೆ 3), ಶ್ರೇಯಸ್ ಗೋಪಾಲ್ (37ಕ್ಕೆ 3) ಮತ್ತು ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ (24ಕ್ಕೆ 3) ಸಿಕ್ಕಿಂ ತಂಡವನ್ನು 117 ರನ್‌ಗಳಿಗೆ ಕಟ್ಟಿ ಹಾಕಿದರು.

ನೀಲೇಶ್ ಲ್ಯಾಮಿಚಾನೆ (26) ಮತ್ತು ಸುಮಿತ್ ಸಿಂಗ್ (42) ಪ್ರತಿರೋಧ ತೋರದಿದ್ದರೆ ಆ ತಂಡವು 100ರೊಳಗೆ ಕುಸಿಯುವ ಸಾಧ್ಯತೆಯಿತ್ತು.

ಸಾಧಾರಣ ಗುರಿ ಬೆನ್ನತ್ತಿದ ಕರ್ನಾಟಕದ ಪರ ಆರಂಭಿಕ ಬ್ಯಾಟರ್ ಮನೀಷ್ ಪಾಂಡೆ (4) ಮೊದಲ ಓವರ್‌ನಲ್ಲೇ ವಿಕೆಟ್ ಒಪ್ಪಿಸಿದರು. ಬ್ಯಾಟಿಂಗ್‌ನಲ್ಲಿ ಬಡ್ತಿ ಪಡೆದ ಕೃಷ್ಣಪ್ಪ ಗೌತಮ್ ಕೂಡ ಶೂನ್ಯಕ್ಕೆ ಔಟಾದರು. ಮನೋಜ್ ಭಾಂಡಗೆ (6) ಹೆಚ್ಚು ಹೊತ್ತು ನಿಲ್ಲಲಿಲ್ಲ. ಒಂದೆಡೆ ವಿಕೆಟ್ ಉರುಳುತ್ತಿದ್ದರೂ ಕ್ರೀಸ್‌ನಲ್ಲಿ ಗಟ್ಟಿಯಾಗಿ ನಿಂತ ಮಯಂಕ್ (ಔಟಾಗದೆ 54) ಜವಾಬ್ದಾರಿಯ ಆಟವಾಡಿದರು. ಅವರು ಮತ್ತು ನಿಕಿನ್ ಜೋಸ್ (ಔಟಾಗದೆ 46) ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 84 ಸೇರಿಸಿ ತಂಡವನ್ನು ಜಯದ ದಡ ಸೇರಿಸಿದರು. 24.4 ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಕರ್ನಾಟಕ ಗೆದ್ದಿತು.

ಈ ಜಯದೊಂದಿಗೆ ಮಯಂಕ್ ಪಡೆ (20 ಪಾಯಿಂಟ್ಸ್) ಗುಂಪಿನ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಹೋದ ಪಂದ್ಯದಲ್ಲಿ ಕರ್ನಾಟಕ ತಂಡವು ಆರು ವಿಕೆಟ್‌ಗಳಿಂದ ಅಸ್ಸಾಂಗೆ ಸೋತಿತ್ತು.

ಸಂಕ್ಷಿಪ್ತ ಸ್ಕೋರು: ಸಿಕ್ಕಿಂ: 46.2 ಓವರ್‌ಗಳಲ್ಲಿ 117 (ನೀಲೇಶ್ ಲ್ಯಾಮಿಚಾನೆ 26, ಸುಮಿತ್ ಸಿಂಗ್ 42, ಪಾಲ್‌ಜೋರ್ ತಮಾಂಗ್ 13; ವಾಸುಕಿ ಕೌಶಿಕ್ 16ಕ್ಕೆ 3, ಎಂ. ವೆಂಕಟೇಶ್13ಕ್ಕೆ 1, ಶ್ರೇಯಸ್ ಗೋಪಾಲ್ 37ಕ್ಕೆ 3, ಕೃಷ್ಣಪ್ಪ ಗೌತಮ್ 24ಕ್ಕೆ 3). ಕರ್ನಾಟಕ: 24.4 ಓವರ್‌ಗಳಲ್ಲಿ 4ಕ್ಕೆ 121 (ಮಯಂಕ್ ಅಗರವಾಲ್ ಔಟಾಗದೆ 54, ನಿಕಿನ್ ಜೋಸ್ ಔಟಾಗದೆ 46; ಪಾಲ್‌ಜೋರ್ ತಮಾಂಗ್ 24ಕ್ಕೆ 3, ಸುಮಿತ್ ಸಿಂಗ್ 21ಕ್ಕೆ 1). ಫಲಿತಾಂಶ: ಕರ್ನಾಟಕ ತಂಡಕ್ಕೆ ಆರು ವಿಕೆಟ್‌ಗಳ ಜಯ

ರೋಜರ್ ದಾಖಲೆ ಸರಿಗಟ್ಟಿದ ಜೊಕೊವಿಚ್

ಟುರಿನ್, ಇಟಲಿ (ಎಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ದಾಖಲೆಯ ಆರನೇ ಬಾರಿ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯ ಕಿರೀಟ ಧರಿಸಿದರು. ಇದರೊಂದಿಗೆ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಅವರ ಸಾಧನೆ ಸರಿಗಟ್ಟಿದರು.

ಭಾನುವಾರ ರಾತ್ರಿ ಇಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಅವರು 7-5, 6-3ರಿಂದ ನಾರ್ವೆಯ ಕಾಸ್ಪರ್ ರೂಡ್ ಅವರನ್ನು ಪರಾಭವಗೊಳಿಸಿದರು.

ಏಳು ವರ್ಷಗಳ ಬಳಿಕ ಎಟಿಪಿ ಫೈನಲ್ಸ್ ಕಿರೀಟ, 35 ವರ್ಷದ ಜೊಕೊವಿಚ್ ಅವರಿಗೆ ಒಲಿದಿದೆ. 2015ರಲ್ಲಿ ಕೊನೆಯ ಬಾರಿ ಅವರು ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದರು.

ಈ ಪ್ರತಿಷ್ಠಿತ ಟ್ರೋಫಿ ಗೆದ್ದ ಅತಿ ಹಿರಿಯ ಎಂಬ ಶ್ರೇಯವೂ ಅವರದಾಗಿದೆ. ಅಲ್ಲದೆ ಹೊಸ ಮಾದರಿಯಲ್ಲಿ, ಸೋಲಿಲ್ಲದೆ ಚಾಂಪಿಯನ್ ಆಗುವ ಆಟಗಾರನಿಗೆ ನೀಡುವ ₹ 38 ಕೋಟಿ ಬಹುಮಾನವನ್ನು ಜೇಬಿಗಿಳಿಸಿದರು.

*Terms and conditions apply. This offer is available on select models. Please contact nearest Tata Motors Passenger Vehicles dealership for more details. Images and illustrations are indicative and for information purposes only. Festive discount mentioned is at the discretion of Tata Motors Passenger Vehicles Limited. All Features/specifications are not available in all variants and may vary for different variants. Specifications/features are subject to change without prior information. Please consult an authorised Tata Motors dealer for latest information on features/specifications before deciding to place an order. Colours may vary due to printing limitations. Local taxes and Octroi extra. Avail of Tata Motors Finance and get funding benefits on Extended Warranty. All offers are at sole discretion of Tata Motors and can be changed by Tata Motors without any prior notice. Offer available till stocks last. Express finance scheme from Tata Motors Finance/Low DP scheme from select financers. Finance available at sole discretion of financier.

KROPEX AUTO Hosur Road, Koramangala, Sarjapur road, Mahadevapura: 7506024016
PRERANA MOTORS Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334
ADISHAKTI CARS Hebbal: 7506023837; Dasarahalli: 9167982568
KEY MOTORS Kanakapura Road, Mysore Road, Kanakapura City, Bannerghatta Road, Sunkadakatte Magadi Road, Nelamangala: 7506023980
KHT MOTORS Whitefield: 7506023988; Domlur, Kolar: 7506024006
SREE AUTO Tumkur, Tiptur, Kunigal, Chikkaballapur: 7506024318